ಹುಬ್ಬಳ್ಳಿ ಶುಕ್ರವಾರ, 20 ಫೆಬ್ರವರಿ 2026 ಸಂಪುಟ 15, ಸಂಚಿಕೆ 333, ಪುಟಗಳು 14
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ RNI No.KARKAN/2011/64413
hosadigantha.com ₹5
Hosadigantha Digital

ಹೊಸ ದಿಗಂತ


ರಾಷ್ಟ್ರ ಜಾಗೃತಿಯ ದೈನಿಕ
ಲೋಕಹಿತಂ ಮಮ ಕರಣೀಯಂ

ಎಐ ನಮ್ಮ ಕೈಯಲ್ಲಿ ಇರಲಿ
◆ ಪುಟ ೩

ರಾಜಕಾರಣದಲ್ಲಿ 50 ವರ್ಷ ಪೂರೈಸಿದ ಯಡಿಯೂರಪ್ಪಗೆ ಸನ್ಮಾನ

ಬಿಎಸ್‌ವೈ ಸುವರ್ಣ ಸಂಭ್ರಮ

> ಬಿ.ಎಸ್. ಯಡಿಯೂರಪ್ಪ ಕರ್ನಾಟಕ ಬಿಜೆಪಿಯ ಭೀಷ್ಮ, ಪಕ್ಷ ಮುನ್ನಡೆಸುವ ವಿಚಾರದಲ್ಲಿ ಕರ್ನಾಟಕದಲ್ಲಿ ಯಡಿಯೂರಪ್ಪ ಅವರು ದೊಡ್ಡ ಕೊಡುಗೆ ನೀಡಿದ್ದಾರೆ. ಅವರ ಭದ್ರ ಅಡಿಪಾಯದಲ್ಲಿ ಬಿಜೆಪಿ ಇಷ್ಟೊಂದು ಬೆಳೆದುನಿಂತಿದೆ.
> ■ ಗಜೇಂದ್ರ ಸಿಂಗ್ ಶೇಖಾವತ್, ಕೇಂದ್ರ ಸಚಿವ



◆ **ಬೆಂಗಳೂರು:** ಸಕ್ರಿಯ ರಾಜಕಾರಣದಲ್ಲಿ 50 ವರ್ಷಗಳ ಯಾನ ಪೂರೈಸಿದ ಮಾಜಿ ಮುಖ್ಯಮಂತ್ರಿ, ಬಿಜೆಪಿ ಕೇಂದ್ರೀಯ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರಿಗೆ ಅರಮನೆ ಮೈದಾನದಲ್ಲಿ ಗುರುವಾರ ನಡೆದ ರಾಜ್ಯ ಕಾರ್ಯಕಾರಿಣಿಯಲ್ಲಿ ಗೌರವಿಸಲಾಯಿತು.

ಗೌರವ ಸ್ವೀಕರಿಸಿ ಮಾತನಾಡಿದ ಯಡಿಯೂರಪ್ಪ, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ವಂತ ಶಕ್ತಿಯ ಮೇಲೆ ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವ ಹಾಗೂ ಭ್ರಷ್ಟ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆಯುವ ಸಂಕಲ್ಪ ಮಾಡಬೇಕಿದೆ. ಈ ಭ್ರಷ್ಟ ಸರ್ಕಾರವನ್ನು ಕಿತ್ತೊಗೆದು ಅಭಿವೃದ್ಧಿಪರ ಬಿಜೆಪಿ ಸರ್ಕಾರವನ್ನು ಅಧಿಕಾರಕ್ಕೆ ತರಬೇಕು. ರಾಜ್ಯದಲ್ಲಿ ಅಂತಹ ವಾತಾವರಣ ಇದೆ. ಇದಕ್ಕೆ ನೀವೆಲ್ಲರೂ ಸಿದ್ಧರಿದ್ದೀರಿ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಾಧನೆ ಮಾತಾಡಬೇಕು, ಮಾತಾಡುವುದೇ ಸಾಧನೆಯಾಗಬಾರದು. ನಮಗೆ ಪ್ರಧಾನಿ ಮೋದಿ ಅವರು ಆದರ್ಶ, ಅವರ ನಾಯಕತ್ವದಲ್ಲಿ ಭ್ರಷ್ಟ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆಯಲು ಯಾವುದೇ ಕಷ್ಟವಿಲ್ಲ. ಮುಂದಿನ ಐದಾರು ವರ್ಷಗಳ ಕಾಲ ರಾಜ್ಯಾದ್ಯಂತ ಓಡಾಡುವುದಕ್ಕೆ ಸಿದ್ಧನಿದ್ದೇನೆ. ಈ ಸರ್ಕಾರ ಎಸ್‌ಸಿ-ಎಸ್‌ಟಿ ಸಮುದಾಯದ ಜನರಿಗೆ ಸ್ಪಂದಿಸುತ್ತಿಲ್ಲ. ಯಾವುದೇ ಅಭಿವೃದ್ಧಿ ಕೆಲಸ ಮಾಡುತ್ತಿಲ್ಲ. ಎಲ್ಲರೂ ಸೇರಿ ಸರ್ಕಾರದ ವೈಫಲ್ಯಗಳನ್ನು ಜನರಿಗೆ ತಿಳಿಸಬೇಕಿದೆ ಎಂದು ಹೇಳಿದರು. ➡ ಪುಟ ೪

ಕರ್ನಾಟಕದಲ್ಲಿ ಬಿಜೆಪಿ ಉತ್ತುಂಗಕ್ಕೆ ಏರಿಸಿದವರು ಬಿ.ಎಸ್.ಯಡಿಯೂರಪ್ಪ

ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಮಾತನಾಡಿ, ಯಡಿಯೂರಪ್ಪ ಅವರು ನಮ್ಮ ಪಕ್ಷವನ್ನು ಕರ್ನಾಟಕದಲ್ಲಿ ಉತ್ತುಂಗಕ್ಕೆ ಏರಿಸಿದವರು. ದಕ್ಷಿಣ ಭಾರತದಲ್ಲಿ ಕರ್ನಾಟಕವನ್ನು ಪ್ರಥಮ ರಾಜ್ಯವಾಗಿ ಬಿಜೆಪಿ ಆಡಳಿತಕ್ಕೆ ತಂದವರು. ದೂರದೃಷ್ಟಿ ಚಿಂತನೆಯ ಮನೋಭಾವ, ಸಮರ್ಪಕ ಯೋಚನೆ, ಯೋಜನೆ ಅನುಷ್ಠಾನದ ತಾಕತ್ತು, ಜೀವನದ ಒಳಿತು ಕೆಡುಕುಗಳನ್ನು ಸ್ಥಿತಪ್ರಜ್ಞನಂತೆ ಕರ್ತವ್ಯ ನಿರ್ವಹಿಸಿದ ಸಮರ್ಥ ರಾಜಕೀಯ ನಾಯಕ ಯಡಿಯೂರಪ್ಪ ಎಂದು ವಿಶ್ಲೇಷಿಸಿದರು. ಬೂಕನಕೆರೆಯಿಂದ ಹೊರಟು ಶಿಕಾರಿಪುರಕ್ಕೆ ಹೋಗಿ ಅಲ್ಲಿಂದ ಬೆಂಗಳೂರು, ದಿಲ್ಲಿಯವರೆಗೆ ತೆರಳುವ ಎಲ್ಲ ಸಂದರ್ಭದಲ್ಲೂ ದೊಡ್ಡ ಸಂಘರ್ಷವನ್ನು ಅವರು ಎದುರಿಸಿದ್ದರು. ಹೋರಾಟ, ಸಂಘಟನೆಯ ಅದ್ಭುತ ಹಾದಿಯಲ್ಲಿ ಅವರು ನಡೆದು ಬಂದಿದ್ದಾರೆ. ಕಾರ್ಯಕರ್ತರು, ಮುಖಂಡರ ಬೆನ್ನು ತಟ್ಟಿ ಅವರು ಸಂಘಟನೆಯಲ್ಲಿ ತೊಡಗಿಸಿಕೊಳ್ಳುವಂತೆ ನೋಡಿಕೊಳ್ಳುತ್ತಿದ್ದುದನ್ನು ಉದಾಹರಣೆಗಳೊಂದಿಗೆ ತಿಳಿಸಿದರು.

ಕಿರುಸುದ್ದಿ

ಇಂದು ವಿದ್ಯುತ್ ವ್ಯತ್ಯಯ

ಧಾರವಾಡ: ಕಲಘಟಗಿ ಉಪವಿಭಾಗ ವ್ಯಾಪ್ತಿಯ ಕಾಡನಕೊಪ್ಪ 110/11 ಕೆ.ವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ 3ನೇ ತ್ರೈಮಾಸಿಕ ಕಾರ್ಯದ ನಿಮಿತ್ತ ಫೆ.20 ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಬೆಳಗ್ಗೆ 10ರಿಂದ ಸಂಜೆ 6 ರವರೆಗೆ 33 ಕೆವಿ ಮಾರ್ಗಗಳ ದುಮ್ಮವಾಡ ಹಾಗೂ ಕಲಘಟಗಿ, 11 ಕೆ.ವಿ ಮಾರ್ಗಗಳ ಕುರುವಿನಕೊಪ್ಪ, ಉಗ್ನಿಕೇರಿ, ನಾಗನೂರ, ಚಳಮಟ್ಟಿ, ಗುಡಿಹಾಳ, ಗಂಜಿಗಟ್ಟಿ, ಮಿಶ್ರಿ ಕೋಟಿ, ಕಾಡನಕೊಪ್ಪ, ದಾಸನೂರ, ಎಮಿಎಂ, ಎಂಎಲ್‌ಸಿಟಿ, ಬೋಗೆನಾಗರಕೊಪ್ಪ, ದುಮ್ಮವಾಡ, ಜೋಡಳ್ಳಿ ಜಿಮ್ಮಿಹಾಳ, ಗಂಬ್ಯಾಪುರ, ನಿಂಗನಕೊಪ್ಪ, ಎಮ್ಮಟ್ಟಿ, ಮುತ್ತಗಿ, ಬಿ.ಶಿಗಟ್ಟಿ, ಆರೇಬಸವನಕೊಪ್ಪ, ಗಳಗಿ-ಹುಲಕೊಪ್ಪ, ಜಿ.ಬಸವನಕೊಪ್ಪ, ಬಮ್ಮಿಗಟ್ಟಿ ಮತ್ತು ನೀರಸಾಗರ ಹಾಗೂ ಕನ್ನಿನಾಯಕನಕೊಪ್ಪ, ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಹೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ವಾರ್ಷಿಕೋತ್ಸವ ಇಂದು

ಧಾರವಾಡ: ರಾಮಕೃಷ್ಣ ವಿವೇಕಾನಂದ ಆಶ್ರಮದ ಭಗವಾನ್ ಶ್ರೀರಾಮಕೃಷ್ಣ ಮಂದಿರದ 21ನೇ ವಾರ್ಷಿಕೋತ್ಸವ ಫೆ.20ರಿಂದ ಫೆ.22ರವರೆಗೆ ಸರ್ಕಾರಿ ನೌಕರರ ಭವನದಲ್ಲಿ ನಡೆಯಲಿದೆ ಎಂದು ಆಶ್ರಮದ ಅಧ್ಯಕ್ಷ ಸ್ವಾಮಿ ವಿಜಯಾನಂದ ಸರಸ್ವತಿಗಳು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಫೆ.20ರ ಬೆಳಗ್ಗೆ 10ಕ್ಕೆ ಯುವ ಸಮ್ಮೇಳನಕ್ಕೆ ಜಿಲ್ಲಾ ಪೊಲೀಸ್ ಅಧೀಕ್ಷಕ ಗುಂಜನ್ ಆರ್ಯ ಚಾಲನೆ ನೀಡಲಿದ್ದು, ಉದ್ಯಮಿ ಡಾ. ವಿ.ಎಸ್.ವಿ ಪ್ರಸಾದ, ಎಂ.ವಿ.ಕರಮರಿ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು. ಫೆ.21ರ ಬೆಳಗ್ಗೆ 9.30ಕ್ಕೆ ಶಿಕ್ಷಕರ ಸಮ್ಮೇಳನಕ್ಕೆ ಶಾಲಾ ಶಿಕ್ಷಣ ಇಲಾಖೆಯ ಅಪರ ಆಯುಕ್ತ ಡಾ.ಆಕಾಶ್ ಉಳ್ಳಾಗಡ್ಡಿ ಚಾಲನೆ ನೀಡಲಿದ್ದಾರೆ. ಫೆ.21ರ ಸಂಜೆ 5ಕ್ಕೆ ಆಶ್ರಮದ ಆವರಣದಲ್ಲಿ ಭಗವಾನ್ ಶ್ರೀ ರಾಮಕೃಷ್ಣರ ಹಾಗೂ ಶ್ರೀಮಾತೆ ಶಾರದಾದೇವಿ ಸ್ವರಣೋತ್ಸವ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಲಕ್ಷ್ಮೇಶ್ವರ ಹೊಸಳ್ಳಿ ಡಾ.ಚಂದ್ರಶೇಖರ ಶ್ರೀಗಳು ಚಾಲನೆ ನೀಡಲಿದ್ದಾರೆ. ಫೆ.22ರ ಸಂಜೆ 5ಕ್ಕೆ ಆಶ್ರಮದ ವಿವೇಕ ಸ್ವರಣೋತ್ಸವ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಜ್ಯೋತಿಷಿ ಮುರಾರಿ ಹೆಗಡೆ ಚಾಲನೆ ನೀಡಲಿದ್ದಾರೆ, ರಾಮಕೃಷ್ಣ ವಿವೇಕಾನಂದ ಆಶ್ರಮದ ಆವರಣದಲ್ಲಿ ಫೆ.21ಕ್ಕೆ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಖ್ಯಾತ ಹಿಂದುಸ್ತಾನಿ ಗಾಯಕಿ ಸಂಗೀತಾ ಕಟ್ಟಿ (ಕುಲಕರ್ಣಿ) ಗಾಯನ ಪ್ರಸ್ತುತಪಡಿಸುವರು. ಫೆ.22ಕ್ಕೆ ಧಾರವಾಡದ ಸದ್ಯೋಜಾತ ಕಲಾಕೇಂದ್ರದ ವತಿಯಿಂದ ಲವ-ಕುಶ ಯಕ್ಷಗಾನ ಪ್ರಸಂಗ ಪ್ರದರ್ಶನ ನಡೆಯಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಸ್ವಾಮಿ ಬುದ್ಧಿಯೋಗಾನಂದಜಿ, ಅಶೋಕ ಕಾಶೆಣ್ಣವರ, ಚಂದ್ರಶೇಖರ ಪಾಟೀಲ ಇದ್ದರು.

ಗ್ಯಾರಂಟಿಯಿಂದ ಸಬಲೀಕರಣ

ಹುಬ್ಬಳ್ಳಿ: ನಗರದ ಹುಬ್ಬಳ್ಳಿ-ಧಾರವಾಡ ಸೆಂಟ್ರಲ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಳೆದ 15 ದಿನಗಳಿಂದ ನಡೆಯುತ್ತಿರುವ ವಿದ್ಯಾನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಜತ್ ಉಳ್ಳಾಗಡ್ಡಿಮಠ ನೇತೃತ್ವದ ಪಂಚ ಗ್ಯಾರಂಟಿ ಯೋಜನೆಗಳ ಅಭಿನಂದನೆ ಕುರಿತು ನಡಿಗೆ ನಡೆದ ಕಾಂಗ್ರೆಸ್ ಯಾತ್ರೆ ಪಾದಯಾತ್ರೆಗೆ ಅಭೂತಪೂರ್ವ ಜನಬೆಂಬಲ ವ್ಯಕ್ತವಾಯಿತು.

ಗೋಕುಲ ರಸ್ತೆಯ ಅಕ್ಷಯ್ ಪಾರ್ಕ್ ಹತ್ತಿರದ ಪ್ರಿಯದರ್ಶಿನಿ ಉದ್ಯಾನವನದಿಂದ ತುಳಜಾಭವಾನಿ ಮಂದಿರದವರೆಗೆ ಪಾದಯಾತ್ರೆ ನಡೆಯಿತು. ಈ ವೇಳೆ ಮಾತನಾಡಿದ ಕರ್ನಾಟಕ ಸರ್ಕಾರದ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ. ರೇವಣ್ಣ, ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಇಡೀ ರಾಜ್ಯದಲ್ಲೇ ಧಾರವಾಡ ಜಿಲ್ಲೆ ಪ್ರಥಮ ಸ್ಥಾನದಲ್ಲಿದೆ. ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿರುವ ಪಂಚ ಗ್ಯಾರಂಟಿ ಯೋಜನೆಗಳಿಂದ ಬಡವರ ಏಳಿಗೆ ಮತ್ತು ಮಹಿಳೆಯರ ಸಬಲೀಕರಣ ಸಾಧ್ಯವಾಗಿದೆ. ರಜತ್ ಉಳ್ಳಾಗಡ್ಡಿಮಠ ಅವರ ನೇತೃತ್ವದ ವಿದ್ಯಾನಗರ ಹಾಗೂ ಉಣಕಲ್ ಬ್ಲಾಕ್ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಹುಬ್ಬಳ್ಳಿ-ಧಾರವಾಡ ಸೆಂಟ್ರಲ್ ವಿಧಾನಸಭಾ ಕ್ಷೇತ್ರದ ಮನೆ ಮನೆಗೆ ತರಳಿ ಫಲಾನುಭವಿಗಳಿಗೆ ಅಭಿನಂದನೆ ಸಲ್ಲಿಸುತ್ತಿರುವುದು ಶ್ಲಾಘನೀಯ. ಗ್ಯಾರಂಟಿಗಳ ಮೂಲಕ ವಾರ್ಷಿಕವಾಗಿ 51 ಸಾವಿರ ಕೋಟಿ ರೂ.ಜನರಿಗೆ ತಲುಪಿಸಲಾಗುತ್ತಿದೆ. ಕಳೆದ ಎರಡೂವರೆ ವರ್ಷಗಳಲ್ಲಿ ಗ್ಯಾರಂಟಿ ಯೋಜನೆಗಳಿಗಾಗಿ 1.5 ಲಕ್ಷ ಕೋಟಿ ರೂ. ಸರ್ಕಾರ ಭರಿಸಿದೆ. ಮಹಿಳೆಯರು 665 ಕೋಟಿ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಉಚಿತ ಪ್ರಯಾಣಿಸಿದ್ದಾರೆ. 1.24 ಕೋಟಿಗೂ ಅಧಿಕ ಗೃಹಲಕ್ಷ್ಮಿಯರಿಗೆ 26 ಕಂತು ಬಿಡುಗಡೆಯಾಗಿ 52,000 ಅವರ ಬ್ಯಾಂಕ್ ಖಾತೆಗೆ ಜಮೆ ಆಗಿದೆ ಎಂದರು. ಪಾಲಿಕೆ ಸದಸ್ಯರಾದ ಸೆಂಥಿಲ್ ಕುಮಾರ್, ಚೇತನ್ ಹಿರೇಕೆರೂರ, ಕಾಂಗ್ರೆಸ್ ಮುಖಂಡರಾದ ಎಸ್.ಆರ್. ಪಾಟೀಲ್, ಪ್ರಕಾಶ್ ಹಳಿಯಾಳ, ಕುಮಾರ್ ಗೌರಕ್ಷನವರ್, ಪಶೀಧ್ ಗಗರಗ, ಬಾಳಪ್ಪ ಜಂಗಳವರ್, ಮೆಹಬೂಬ ಹಿರೇಮನಿ, ಕರಿಬಸು ದ್ಯಾವಣ್ಣವರ, ಸ್ನೇಹ ಜಾಧವ್, ಪೀರಸಾಬ್ ಕಡಕೋಳಕರ, ಪ್ರೇಮ್ ಜಾಧವ್ ಇದ್ದರು.

ದುಂಡಪ್ಪ ಕುಸುಗಲ್ ನಿಧನ



ಕುಂದಗೋಳ: ಗುಡೇನಕಟ್ಟಿ ಗ್ರಾಮದ ನಿವಾಸಿ ದುಂಡಪ್ಪ ಭೀಮಪ್ಪ ಕುಸುಗಲ್ (57) ಗುರುವಾರ ನಿಧನರಾದರು. ಮೃತರಿಗೆ ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು-ಬಳಗ ಅಗಲಿದ್ದಾರೆ.

ರಾಹುಸಾಹೇಬ ಮೋರೆ



ಧಾರವಾಡ: ಮಾಜಿ ಸಚಿವ ದಿ.ಎಸ್.ಆರ್.ಮೋರೆ ಅವರ ಸಹೋದರ ಬಾಹುಸಾಹೇಬ ರಾಮಚಂದ್ರರಾವ್ ಮೋರೆ(90) ಭಾನುವಾರ ನಿಧನ ಹೊಂದಿದರು. ಇವರಿಗೆ ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಮತ್ತು ಅಪಾರ ಬಳಗವಿದೆ. ಮೃತರ ಅಂತ್ಯಕ್ರಿಯೆ ಫೆ.20ರಂದು ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಹುಬ್ಬಳ್ಳಿ: ವಿದ್ಯಾನಗರದ ಬನಶಂಕರಿ ಬಡಾವಣೆಯಲ್ಲಿರುವ ಹುಬ್ಬಳ್ಳಿ-ಧಾರವಾಡ ಕೊಂಕಣ್ ಮರಾಠ ಸಮಾಜದ ಕಟ್ಟಡದಲ್ಲಿ ಹಿಂದೂ ಸಾಮ್ರಾಟ್ ಛತ್ರಪತಿ ಶಿವಾಜಿ ಮಹಾರಾಜರ 399ನೇ ಜಯಂತಿಯನ್ನು ಸಮಾಜದ ಅಧ್ಯಕ್ಷರವಿ ನಾಯಕ ಭಾವಚಿತ್ರಕ್ಕೆ ಮಾಲಾರ್ಪಣೆಯನ್ನು ಮಾಡಿ ಅರ್ಥಪೂರ್ಣವಾಗಿ ಆಚರಿಸಿದರು. ವಿದ್ಯಾನಗರದಲ್ಲಿರುವ ಶಿವಾಜಿ ಪುತ್ಥಳಿ ಸ್ಥಳಕ್ಕೆ ತೆರಳಿ ಸಮಾಜದ ಮುಖಂಡರು ಮಾಲಾರ್ಪಣೆ ಮಾಡಿದರು.

ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ: ಲಂಬೂನವರ

ನವಲಗುಂದ: ಗ್ರಾಮೀಣ ಪ್ರದೇಶದ ಮಕ್ಕಳಿಗೆ ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಶಿಕ್ಷಣವನ್ನು ನೀಡುವ ಮೂಲಕ 10ವರ್ಷಗಳ ಸಾಧನೆ ಗೈದ ಶಾರದಾ ಶಿಕ್ಷಣ ಸಂಸ್ಥೆಯ ಕಾರ್ಯ ಶ್ಲಾಘನೀಯವಾಗಿದೆ ಎಂದು ಪ್ರಗತಿಪರ ರೈತ ಶೌಕತ್ತಲಿ ಲಂಬೂನವರ ಹೇಳಿದರು.

ತಾಲೂಕಿನ ನಾಗನೂರು ಗ್ರಾಮದ ಶಾರದಾ ಆಂಗ್ಲ ಮಾಧ್ಯಮ ಶಾಲೆಯ 10ನೇ ವಾರ್ಷಿಕೋತ್ಸವ ಹಾಗೂ ಸ್ನೇಹ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶದ ಮಕ್ಕಳು ಶಿಕ್ಷಣವನ್ನು ಅರಸಿ ದೂರದ ಹುಬ್ಬಳ್ಳಿ, ಧಾರವಾಡಕ್ಕೆ ಹೋಗುವಂತಹ ಸಂದರ್ಭದಲ್ಲಿ ಅದ್ಯಕ್ಷರಾದ ಡಾ.ಮಹೇಶ ಹಿರೇಮಠ ಅವರು ಗ್ರಾಮೀಣ ಭಾಗದಲ್ಲಿಯೇ ಗುಣಮಟ್ಟದ ಶಿಕ್ಷಣ ಸಂಸ್ಥೆ ಕಟ್ಟುವ ಮೂಲಕ ಗುಣಮಟ್ಟದ ಶಿಕ್ಷಣದ ಜತೆಗೆ ಹಿಂದುಳಿದ ಹಾಗೂ ಪರಿಶಿಷ್ಟ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡುವ ಮೂಲಕ ಮಕ್ಕಳ ಬೆಳೆಗೆ ಮಾದರಿಯಾಗಿದ್ದಾರೆ ಎಂದರು. ಸಂಸ್ಥೆಯ ಅಧ್ಯಕ್ಷ ಡಾ.ಮಹೇಶ ಹಿರೇಮಠ ಮಾತನಾಡಿ, ನುರಿತ ಶಿಕ್ಷಕವೃಂದವನ್ನು ಹೊಂದಿರುವ ಸಂಸ್ಥೆಯು ಗುಣಮಟ್ಟದ ಶಿಕ್ಷಣ ನೀಡುವಲ್ಲಿ ನಿರಂತರ ಶ್ರಮವಹಿಸುತ್ತಿದ್ದು ಆರಂಭದಿಂದಲೂ ಗ್ರಾಮೀಣ ಭಾಗದ ಹಿಂದುಳಿದ ಹಾಗೂ ಪರಿಶಿಷ್ಟ ಜಾತಿಯ ಆಯ್ದ ಪ್ರತಿಭಾವಂತರನ್ನು ಗುರುತಿಸಿ ಉಚಿತ ಶಿಕ್ಷಣ ನೀಡುತ್ತಿದ್ದು, ಎಲ್ಲ ಪಾಲಕರ ಸಹಕಾರದಿಂದ ಸುಸಜ್ಜಿತ ಶಾಲಾ ಕಟ್ಟಡ ನಿರ್ಮಿಸಲಾಗಿದೆ ಎಂದರು. ಗ್ರಾಮ ಪಂಚಾಯ್ತಿ ಸದಸ್ಯ ಗುಡಸಲಮನಿ, ಅಮೃತರಾವ ಕುಲಕರ್ಣಿ, ಸರೋಜಾ ಹೊಳೆಯಣ್ಣವರ, ಸೌಮ್ಯಾ ಚವಾಣ, ಜಗದೀಶ ಹಿರೇಮಠ, ಶಾಲಾ ಮುಖ್ಯೋಪಾಧ್ಯಾಪಕಿ ಪುಷ್ಪಾ ಹಿರೇಮಠ ಹಾಗೂ ಶಾಲಾ ಸಿಬ್ಬಂದಿ ಉಪಸ್ಥಿತರಿದ್ದರು. ನಂತರ ಶಾಲಾ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.



ನವಲಗುಂದ: ತಾಲೂಕಿನ ನಾಗನೂರು ಗ್ರಾಮದ ಶಾರದಾ ಆಂಗ್ಲ ಮಾಧ್ಯಮ ಶಾಲೆಯ 10ನೇ ವಾರ್ಷಿಕೋತ್ಸವ ಹಾಗೂ ಸ್ನೇಹ ಸಮ್ಮೇಳನ ಉದ್ಘಾಟಿಸಿದ ಪ್ರಗತಿಪರ ರೈತ ಶೌಕತ್ತಲಿ ಲಂಬೂನವರ. ನಂತರ ಶಾಲಾ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಕುಡಿಯುವ ನೀರಿನ ಕೆರೆ ವೀಕ್ಷಣೆ | ಎನ್.ಎಚ್. ಕೋನರಡ್ಡಿ ಹೇಳಿಕೆ

ಗುಡಿಸಾಗರ ಗ್ರಾಮದ ಕೆರೆ ಅಭಿವೃದ್ಧಿ

ನವಲಗುಂದ: ತಾಲೂಕಿನ ಗುಡಿಸಾಗರ ಗ್ರಾಮದ ಕುಡಿಯುವ ನೀರಿನ ಕೆರೆಯ ನೀರು ಕೆಟ್ಟು ಅನೇಕ ಜನರು ನೀರು ಸೇವಿಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಅವರೆಲ್ಲರೂ ಆರೋಗ್ಯ ಕಾಪಾಡಲು ನವಲಗುಂದದಿಂದ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಿ ಕೆರೆ ಅಭಿವೃದ್ಧಿ ಪಡೆಸಲು ಮಾತು ಕೊಟ್ಟಂತೆ ವಿಶೇಷ ಕಾಳಜಿ ವಹಿಸಿ ಕೆರೆ ಅಭಿವೃದ್ಧಿ ಪಡಿಸಲಾಗಿದೆ ಎಂದು ಶಾಸಕ ಎನ್.ಎಚ್. ಕೋನರಡ್ಡಿ ಹೇಳಿದರು.

ಅವರು ಗುಡಿಸಾಗರ ಗ್ರಾಮದ ಕುಡಿಯುವ ನೀರಿನ ಕೆರೆ ವೀಕ್ಷಣೆ ಮಾಡಿ ಮಾತನಾಡಿದ ಅವರು, ಮೊದಲು ಕೆರೆಯ ದಂಡೆಗುಂಟ ಇದ್ದ ಗಿಡಗಂಟೆಗಳನ್ನು ತೆಗೆದು ನೀರಿನಲ್ಲಿ ಬೆಳೆದ ಕಸ ಹಾಗೂ ಆಪ್ ಹುಲ್ಲು ತೆಗೆದು ಹೂಳು ಎತ್ತಿ ಪ್ರತಿ ವರ್ಷ ನೀರು ತುಂಬಿಕೊಳ್ಳಲು ಸ್ವಚ್ಛಗೊಳಿಸಬೇಕಾದರೆ ನೀರು ಹೊರಹಾಕಲು ನೂತನವಾಗಿ ಪೈಪ್ ಲೈನ್ ಹಾಕಿ ಔಟ್ ಲೆಟ್ ಸೀಡಿ ನಿರ್ಮಾಣ ಮಾಡಿ ಕೆರೆಯನ್ನು ಸಂಪೂರ್ಣ ಸ್ವಚ್ಛಗೊಳಿಸಿ ಅಭಿವೃದ್ಧಿ ಪಡಿಸಲಾಗಿದೆ. ಗುಡಿಸಾಗರ ಗ್ರಾಮದಲ್ಲಿನ ಕುಡಿಯುವ ನೀರು ಸರಿ ಇಲ್ಲ ಎಂದು ಸಾರ್ವಜನಿಕರು ಆಸ್ಪತ್ರೆಗೆ ದಾಖಲಾಗಿ ನಂತರ ಗ್ರಾಮದಲ್ಲಿಯೇ ಚಿಕಿತ್ಸೆ ನೀಡಲು ಆಸ್ಪತ್ರೆ ಪ್ರಾರಂಭಿಸಿದ್ದು ದೊಡ್ಡ ಸುದ್ದಿಯಾಗಿ ತಾಲೂಕು ಹಾಗೂ ಜಿಲ್ಲಾ ಸಾರ್ವಜನಿಕರ ಗಮನ ಸೆಳೆಯಲಾಗಿತ್ತು. ಆಗ ಜಿಲ್ಲಾಧಿಕಾರಿಗಳು ಸೇರಿದಂತೆ ಅನೇಕ ಅಧಿಕಾರಿಗಳ ತಂಡ ಭೇಟಿ ನೀಡಿ ಪರಿಹಾರಕ್ಕೆ ಪ್ರಯತ್ನಿಸಲಾಗಿತ್ತು. ಕುಡಿಯುವ ನೀರು ಕೆಟ್ಟು ಜನರ ಆರೋಗ್ಯ ಮುಖ್ಯ ಎಂದು ಅಂದು ಮಾತು ಕೊಟ್ಟಂತೆ ದೊಡ್ಡ ಹಿಟಾಚಿ ಮೂಲಕ ತಿಂಗಳ ಗಟ್ಟಲೆ ಸ್ವಚ್ಛತೆ ಹಾಗೂ ಮಣ್ಣು ತೆಗೆದು ಕುಡಿಯುವ ಕೆರೆ ಅಭಿವೃದ್ಧಿಗೊಳಿಸಿರುವದು ಸಂತಸವಾಗಿದೆ ಎಂದರು.



ರಸ್ತೆ ಅಭಿವೃದ್ಧಿ

ಗುಡಿಸಾಗರ, ನಾಗನೂರ ದಿಂದ ಅರಹಟ್ಟಿ, ತಡಹಾಳ ವರೆಗೆ ಮಳೆಗಾಲದಲ್ಲಿ ರಸ್ತೆ ಸಂಚಾರ ಸ್ಥಗಿತಗೊಂಡು ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿಗಳು ಟ್ರ್ಯಾಕ್ಟರ್ ಮೂಲಕ ಸಂಚರಿಸುತ್ತಿದ್ದು ಬಹಳ ತೊಂದರೆಯಾಗಿದ್ದನ್ನು ಮನಗೊಂಡು ಸಮಸ್ಯೆ ಪರಿಹಾರಕ್ಕಾಗಿ ಮಾತು ಕೊಟ್ಟಂತೆ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು 8 ಕೋಟಿ ಅನುದಾನ ಬಿಡುಗಡೆ ಮಾಡಿದ್ದರಿಂದ ಈಗಾಗಲೇ ರಸ್ತೆ ಅಭಿವೃದ್ಧಿ ಪಡೆಸಿ ಡಾಂಬರೀಕರಣ ಮಾಡಲಾಗುವುದೆಂದು ಕಾಮಗಾರಿ ವೀಕ್ಷಣೆ ಮಾಡಿದ ನಂತರ ಶಾಸಕ ಎನ್. ಎಚ್. ಕೋನರಡ್ಡಿ ಹೇಳಿದರು.



ಗುಡಿಸಾಗರ ಗ್ರಾಮದ ಕುಡಿಯುವ ನೀರಿನ ಕೆರೆ ಅಭಿವೃದ್ಧಿ ಪಡೆಸಿದ್ದಕ್ಕೆ ಗ್ರಾಮಸ್ಥರು ಸೇರಿ ಎನ್.ಹೆಚ್. ಕೋನರಡ್ಡಿ ಅವರಿಗೆ ಶಾಲುಹೊದಿಸಿ ಸನ್ಮಾನಿಸಿದರು ಅಭಿನಂದಿಸಿದರು. ಈ ಸಂದರ್ಭದಲ್ಲಿ ತಹಶೀಲ್ದಾರ್ ಸುಧೀರ ಸಾವಕಾರ, ನೀರಾವರಿ ಇಲಾಖೆಯ ಎಇಇ ಶಂಕರ, ಎಇಇ ಶಶಿಧರ ಇಳಕಲ್ಲ, ಎಇಇ ಮಾರುತಿ ಗೋಕಾಕ, ಪಿಡಬ್ಲ್ಯೂಡಿ ಎಇಇ ಸೋಮನಗೌಡ ಪಾಟೀಲ, ಶಿವು ಗುಡಸಲಮನಿ, ಗಿರೀಶ ದೇವರಡ್ಡಿ ಬಸವರಾಜ ಉಳ್ಳಾಗಡ್ಡಿ, ಶಂಕ್ರಪ್ಪ ಬಾಗೂರ, ಫಕೀರೇಶ ಪಡೇಸೂರ, ಮಲ್ಲಯ್ಯ ಹಿರೇಮಠ, ಕೊಟ್ರಪ್ಪ ಬೆನ್ನೂರ, ಗುರುಸಿದ್ದಪ್ಪ ಪೂಜಾರ, ಶರಣಪ್ಪಗೌಡ ಕಲ್ಲಿ, ವಿರೂಪಾಕ್ಷಪ್ಪ ಬರದ್ವಾಡ, ಬಸವರಾಜ ವಿ. ಬೆನ್ನೂರ, ರವಿ ನಿಂಗಪ್ಪನವರ, ವಿರೂಪಾಕ್ಷಪ್ಪ ಕೋಳಿವಾಡ, ನಿಜಗುಣಿ ಗಾಡದ, ಬಸವರಾಜ ಮರೆಳ್ಳವರ, ಹನಮಂತ ಗಾಡದ, ಗುರುಲಿಂಗಯ್ಯ ಹಿರೇಮಠ, ನೀಲಪ್ಪಗೌಡ ಕುಲಕರ್ಣಿ, ರಾಮಪ್ಪ ಪೂಜಾರ, ನಾರಾಯಣ ದೇವರಡ್ಡಿಯವರ, ಬಸಯ್ಯ ಮಠಪತಿ, ಶಿವಾನಂದ ಖನ್ನೂರ, ಮಂಜುನಾಥ ಖನ್ನೂರ ಇತರರಿದ್ದರು.

ಮಾ.6ರಂದು ಬೃಹತ್ ಪ್ರತಿಭಟನೆ: ಮಂಜುನಾಥ

ಹುಬ್ಬಳ್ಳಿ: ರಾಜ್ಯದ ವಿವಿಧ ಇಲಾಖೆಗಳಲ್ಲಿ ಬಾಕಿ ಇರುವ 37,000 ಕೋಟಿಯನ್ನು ಸರ್ಕಾರ ಏಕಕಂತಿನಲ್ಲಿ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿ ಮಾ.6 ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್. ಮಂಜುನಾಥ ತಿಳಿಸಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಧಾರವಾಡ ಜಿಲ್ಲೆಯೊಂದರಲ್ಲಿ 1400 ಕೋಟಿ ಬಿಲ್ ಬಾಕಿಯಿದೆ. ಮೂರು ವರ್ಷಗಳಿಂದ ಕಾಮಗಾರಿ ನಡೆಸಿದ ಗುತ್ತಿಗೆದಾರರು ಚಿನ್ನಾಭರಣ, ಮನೆ, ಆಸ್ತಿಗಳನ್ನು ಅಡವಿಟ್ಟು ಸಂಕಷ್ಟಕ್ಕೆ ಸಿಲುಕಿದ್ದಾರೆ. ನಮ್ಮ ಹೋರಾಟಕ್ಕೆ ರಾಜ್ಯ ಸರ್ಕಾರ ಸ್ಪಂದಿಸದಿದ್ದರೆ ರಾಜ್ಯಾದ್ಯಾಂತ ಕಾಮಗಾರಿಗಳನ್ನು ಸ್ಥಗಿತಗೊಳಿಸಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಾಗುವುದು ಎಂದರು.

ಜಲ ಸಂಪನ್ಮೂಲ ಇಲಾಖೆಯಿಂದ 13,000 ಕೋಟಿ ರೂ., ಲೋಕೋಪಯೋಗಿ ಇಲಾಖೆ 8,370, ಗ್ರಾಮೀಣ ಅಭಿವೃದ್ಧಿ ಇಲಾಖೆ 3,800, ಸಣ್ಣ ನೀರಾವರಿ ಇಲಾಖೆ 3,000, ನಗರಾಭಿವೃದ್ಧಿ ಇಲಾಖೆ 2,000, ವಸತಿ ಮತ್ತು ವಕ್ಫ್ ಇಲಾಖೆ 2,600, ಬಿಬಿಎಂಪಿ 1,600 ಹಾಗೂ ಕಾರ್ಮಿಕ ಇಲಾಖೆಯಿಂದ 2,000 ಕೋಟಿ ರೂ. ಬಾಕಿಯಿದೆ ಎಂದರು. ಮುಖ್ಯಮಂತ್ರಿ ಅವರನ್ನು ಭೇಟಿಯಾಗಿ ಮನವಿ ಮಾಡಿದರೆ ಅದು ಹಳೇ ಸರ್ಕಾರ ಎಂದು ಹೇಳುತ್ತಿದ್ದಾರೆ. ಹಿಂದಿನ ಸರ್ಕಾರದ ಅವಧಿಯಲ್ಲಿ ಸಿದ್ದರಾಮಯ್ಯ ಅವರು, ನಾವು ಅಧಿಕಾರಕ್ಕೆ ಬಂದರೆ ಪ್ಯಾಕೇಜ್ ಮಾಡಲ್ಲ ಎಂದಿದ್ದರು. ಆದರೆ ಹಿಂದಿನ ಸರ್ಕಾರಕ್ಕಿಂತಲೂ ಈಗ ಹೆಚ್ಚಿನ ಪ್ಯಾಕೇಜ್ ವ್ಯವಸ್ಥೆ ನಡೆಯುತ್ತಿದೆ. ಸಚಿವ ಸಂಪುಟ ಸಭೆಯಲ್ಲೇ ಕಾಮಗಾರಿಗಳ ಟೆಂಡರ್ ಸಂಬಂಧ ಮ್ಯಾಚ್ ಫಿಕ್ಸಿಂಗ್ ಆಗುತ್ತಿದ್ದು, ಹಣ ಇರುವ ಕಾಮಗಾರಿಗಳ ಪ್ಯಾಕೇಜ್ ಅನ್ಯ ರಾಜ್ಯದವರ ಪಾಲಾಗುತ್ತಿವೆ. ಹಣ ಇಲ್ಲದ ಕಾಮಗಾರಿಗಳು ಮಾತ್ರ ನಮಗೆ ಲಭಿಸುತ್ತಿವೆ. ಈ ಬಗ್ಗೆ ಸರ್ಕಾರದ ಗಮನಕ್ಕೂ ತಂದಿದ್ದೇವೆ. ಸಿಎಂ ಮೂರು ಬಾರಿ ಸಭೆ ಕರೆದರೂ ಯಾವುದೇ ಕಾರಣ ಹೇಳದೆ ಅನಿರ್ದಿಷ್ಟವಾಗಿ ಮುಂದೂಡಿದ್ದಾರೆ ಎಂದರು. ನಾವು ಬೆದರಿಕೆ ಅಥವಾ ಬ್ಲಾಕ್ ಮೇಲ್ ಮಾಡುವಷ್ಟು ದೊಡ್ಡವರಲ್ಲ. ರಾಜ್ಯ 1.5 ಲಕ್ಷ ಗುತ್ತಿಗೆದಾರರ ಹಿತ ಕಾಯುವುದೇ ನಮ್ಮ ಧ್ಯೇಯ. ಮಾಡಿದ ಕೆಲಸಕ್ಕೆ ಕೂಲಿ ಕೇಳುವುದು ತಪ್ಪಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರ ಹೇಳಿಕೆಗೆ ಅಧ್ಯಕ್ಷ ಮಂಜುನಾಥ ಪ್ರತಿಕ್ರಿಯೆ ನೀಡಿದರು.

ರಾಜ್ಯ ಗುತ್ತಿಗೆದಾರರ ಸಂಘದ ಉಪಾಧ್ಯಕ್ಷರಾದ ಗುರುಸಿದ್ದಪ್ಪ ಬಿ.ಎಸ್., ಎಂ.ಕೆ. ಮುಲ್ಲಾ, ಕಾರ್ಯಾಧ್ಯಕ್ಷ ಸುರೇಶ ಭೂಮರಡ್ಡಿ, ಬಿ.ಸಿ.ದಿನೇಶ, ಧಾರವಾಡ ಜಿಲ್ಲಾ ಗುತ್ತಿಗೆದಾರರ ಸಂಘದ ಅಧ್ಯಕ್ಷ ಎಂ.ಎಸ್. ಸಂಕಾಗೌಡಶಾನಿ ಇದ್ದರು.



ಛತ್ರಪತಿ ಶಿವಾಜಿ ಸ್ತಬ್ಧಚಿತ್ರದ ಭವ್ಯ ಮೆರವಣಿಗೆ

ಧಾರವಾಡ: ಹಿಂದೂ ಸಾಮ್ರಾಜ್ಯದ ಸ್ಥಾಪಕ ಛತ್ರಪತಿ ಶಿವಾಜಿ ಮಹಾರಾಜರ 399ನೇ ಜಯಂತಿ ಅಂಗವಾಗಿ ಮರಾಠ ವಿದ್ಯಾಪ್ರಸಾರಕ ಮಂಡಳ ಹಮ್ಮಿಕೊಂಡ ಛತ್ರಪತಿ ಶಿವಾಜಿ ಮಹಾರಾಜರ ಸ್ತಬ್ಧಚಿತ್ರದ ಮೆರವಣಿಗೆಗೆ ಸಚಿವ ಸಂತೋಷ ಲಾಡ್ ಚಾಲನೆ ನೀಡಿದರು.

ಶಿವಾಜಿಯ ವರ್ತುಳದಿಂದ ಪ್ರಾರಂಭವಾದ ಮೆರವಣಿಗೆ ರೀಗಲ್ ವೃತ್ತ, ಮಣಿಕಿಲ್ಲಾ, ಹರಿಮಂದಿರ, ಹೆಬ್ಬಳ್ಳಿ ಅಗಸಿ, ಗಾಂಧಿ ಚೌಕ, ಸುಭಾಷ ರಸ್ತೆ, ಸ್ವಾಮಿ ವಿವೇಕಾನಂದ ವೃತ್ತ, ರಾಣಾ ಪ್ರತಾಪ್ ವೃತ್ತ ವಿಜಯ ರಸ್ತೆಯ ಮೂಲಕ ಹಾಯ್ದು ಮಂಡಕ್ಕೆ ಮರಳಿ ಸಂಪನ್ನಗೊಂಡಿತು. ಇದೇ ವೇಳೆ ಕಮಲಾಪುರದ ಕೇಸರಿ ಪಡೆ ಸೇರಿದಂತೆ ವಿವಿಧ ಮರಾಠ ಸಮಾಜದ ಸಂಘಟನೆ ಶಿವಾಜಿ ಸ್ತಬ್ಧಚಿತ್ರದ ಜೊತೆ ಜಗಜ್ಯೋತಿ ಬಸವೇಶ್ವರರ, ಆಂಜನೇಯ, ಸಂಗೊಳ್ಳಿ ರಾಯಣ ಮತ್ತು ಮಹಾರಾಣ ಪ್ರತಾಪ್ ಅವರ ಸ್ತಬ್ಧಚಿತ್ರಗಳ ಮೆರವಣಿಗೆ ಮಾಡಿದರು.



ತೆರೆದ ಅಲಂಕೃತ ಟ್ರ್ಯಾಕ್ಟರ್‌ನಲ್ಲಿ ಮಹಾನ್ ಪುರಷರ ಸ್ತಬ್ಧಚಿತ್ರ ಮೆರವಣಿಗೆಯಲ್ಲಿ ಸುಮಾರು ಹತ್ತಕ್ಕೂ ಅಧಿಕ ಬೃಹದಾಕಾರದ ಡಿಜೆ ಅಬ್ಬರಕ್ಕೆ ಯುವಕರು ಕುಣಿದು ಕುಪ್ಪಳಿಸಿದರು. ಅಲ್ಲದೇ, ಮಹಿಳೆಯರು-ಮಕ್ಕಳು ವಯಸ್ಸಿನ ಬೇಧ ಮರೆತು ಕುಣಿದು ಸಂಭ್ರಮಿಸಿದರು. ಸಮಿತಿಯ ಅಧ್ಯಕ್ಷ ಮೋಹನ ಖೇಮಕರ, ಪದಾಧಿಕಾರಿಗಳಾದ ಎಂ.ಎನ್.ಮೋರೆ, ಯಲ್ಲಪ್ಪ ಚವ್ಹಾಣ, ರಾಜು ಬಿರಜೆನವರ, ಸುನೀಲ ಮೋರೆ, ರಾಜು ಕಾಳೆ, ಸುಭಾಷ ಶಿಂಧೆ, ಶಿವಾಜಿ ಸೂರ್ಯವಂಶಿ, ಪುರುಷೋತ್ತಮ ಜಾಧವ, ಈಶ್ವರ ಪಾಟೀಲ, ಶಂಕರ ಶೇಳಕೆ, ಮರಾಠ ಸಮೂಹ ಶಿಕ್ಷಣ ಸಂಸ್ಥೆಗಳ ಶಿಕ್ಷಕರು ಮತ್ತು ಸಿಬ್ಬಂದಿ ಇದ್ದರು.

ಶಿವಾಜಿ ಮಹಾರಾಜರ ಚರಿತ್ರೆ ಅರಿಯಿರಿ



ಹುಬ್ಬಳ್ಳಿ: ಛತ್ರಪತಿ ಶಿವಾಜಿ ಮಹಾರಾಜರ ಚರಿತ್ರೆ ಹಾಗೂ ಅವರ ವಿಶಿಷ್ಟ ಗುಣಗಳನ್ನು ನಾವೆಲ್ಲರೂ ಅರಿತುಕೊಳ್ಳಬೇಕು. ಮುಂದಿನ ಪೀಳಿಗೆಗೆ ಅವರ ಸಾಹಸ ಮತ್ತು ಸಮಾಜಕ್ಕೆ ನೀಡಿರುವ ಕೊಡುಗೆಗಳನ್ನು ತಿಳಿಸುವ ಕೆಲಸ ಕಾರ್ಯಗಳಾಗಬೇಕು ಎಂದು ಶಹರ ತಹಶೀಲ್ದಾರ್ ಮಹೇಶ ಗಸ್ತೆ ಹೇಳಿದರು.

ತಾಲೂಕು ಆಡಳಿತ ಸೌಧದ ತಹಶೀಲ್ದಾರ್ ಕಾರ್ಯಾಲಯದ ಸಭಾಂಗಣದಲ್ಲಿ ಹುಬ್ಬಳ್ಳಿ ತಾಲೂಕು ಆಡಳಿತದಿಂದ ಆಯೋಜಿಸಿದ್ದ ಛತ್ರಪತಿ ಶಿವಾಜಿ ಜಯಂತಿ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಶಿವಾಜಿ ಮಹಾರಾಜರು ಸಮಾಜದಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತಂದ ಮಹಾನ್ ನಾಯಕರಾಗಿದ್ದಾರೆ. ಅವರ ಹೆಸರು ಇತಿಹಾಸದ ಪುಟಗಳಲ್ಲಿ ಅಜರಾಮರವಾಗಿದೆ ಎಂದರು.

ಛತ್ರಪತಿ ಶಿವಾಜಿ ಮಹಾರಾಜರು ಎಂದ ಕೂಡಲೇ ನಮಗೆ ಅನಿಸುವುದು ದೇಶಭಕ್ತಿ, ಸ್ವಾಭಿಮಾನ, ತ್ಯಾಗ ಮತ್ತು ಧೈರ್ಯ ಎಂಬ ನಾಲ್ಕು ಗುಣಗಳು. ಶಿವಾಜಿ ಮಹಾರಾಜರಲ್ಲಿ ಕಂಡು ಬಂದಂತಹ ಗುಣಗಳು ಬೇರೆ ರಾಜರುಗಳಲ್ಲಿ ಅಷ್ಟಾಗಿ ಕಂಡು ಬಂದಿಲ್ಲ. ಅವರ ಈ ಗುಣಗಳು ಪ್ರಸ್ತುತ ದಿನಗಳಲ್ಲಿಯೂ ಕಾಣಬಹುದು. ಶಿವಾಜಿ ಮಹಾರಾಜರು ಎರಡು ನೂರು ವರ್ಷಗಳ ಹಿಂದೆ ಉತ್ತಮ ಆಡಳಿತವನ್ನು ನೀಡಿದ್ದಾರೆ. ಅವರು ನೀಡಿದ ಉತ್ತಮ ಆಡಳಿತದ ಬಗ್ಗೆ ಮಕ್ಕಳಿಗೆ ತಿಳಿಸಿ ಹೇಳಬೇಕಾಗಿದೆ ಎಂದರು.

ಮುಖಂಡರಾದ ಗುರುನಾಥ್ ಉಳ್ಳಿಕಾಶಿ ಮಾತನಾಡಿ, ಶಿವಾಜಿ ಮಹಾರಾಜರು ಎಲ್ಲಾ ವರ್ಗದ ಜನರ ವಿಶ್ವಾಸ ಗಳಿಸಿದ್ದರು. ಮಕ್ಕಳಿಗೆ ಮೊಬೈಲ್ ಕೊಡುವುದು ಬಿಟ್ಟು ಶಿವಾಜಿ ನಾಯಕರಂತಹ ಇತಿಹಾಸದ ಪುಸ್ತಕಗಳು ಹಾಗೂ ಅವರ ಸಿನಿಮಾಗಳನ್ನು ತೋರಿಸಿದಾಗ ಶಿವಾಜಿಯವರ ತ್ಯಾಗ, ಶೌರ್ಯ, ಸ್ವಾಭಿಮಾನ ಮಕ್ಕಳಿಗೆ ತಿಳಿಯುತ್ತದೆ. ಆಗ ಶಿವಾಜಿಯವರ ಹೆಸರು ಅಜರಾಮರವಾಗಿರುತ್ತದೆ ಎಂದರು.

ಈ ಸಂದರ್ಭದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಗ್ರಾಮೀಣ ತಹಶೀಲ್ದಾರ್ ಜೆ.ಬಿ.ಮಜ್ಜಗಿ, ಗ್ರಾಮೀಣ ಕ್ಷೇತ್ರ ಶಿಕ್ಷಣಾಧಿಕಾರಿ ಉಮೇಶ ಬೊಮ್ಮಕ್ಕನವರ, ಸಮಾಜದ ಮುಖಂಡರಾದ ಸುನೀಲ್ ದಳವಿ, ನಾರಾಯಣ ವೈದ್ಯ, ಅರುಣ ಶಿರ್ಕೆ, ಮಹೇಶ್, ಶೈಲೇಶ ಹೊನ್ನಳ್ಳಿ, ಮಹೇಂದ್ರ ಚವ್ಹಾಣ್, ವಿದ್ಯಾ ಪವಾರ, ಲೀಲಾವತಿ ಕದಂ ಇದ್ದರು.

ಪ್ರೇರಣಾ ಕಾಲೇಜ್‌ನಿಂದ ಉತ್ತಮ ಸಾಧನೆ

ಹುಬ್ಬಳ್ಳಿ: ಕೆ.ಎಲ್.ಇ ಸಂಸ್ಥೆಯ ಪ್ರೇರಣಾ ಪದವಿಪೂರ್ವ ವಿಜ್ಞಾನ ಮಹಾವಿದ್ಯಾಲಯ ವಿದ್ಯಾರ್ಥಿಗಳು ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ (ಜೆಇಇ) ನಡೆಸಿದ ಮುಖ್ಯ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ. ಅಜೀತ ಹರಿಜನ (95.61) ಗಳಿಸಿ ಮಹಾವಿದ್ಯಾಲಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ. ರೋಹನ ಕಂಠಿ(94.7), ಮರಡಾನಾ ಚಿನ್ಮಿತಾ (85.79), ಪೃಥ್ವಿರಾಜ ಚೌಗಲಾ (85.02), ಸಚ್ಚಿದಾನಂದ ನಾಗೂರ (84.65), ವಿನಾಯಕ ಬಾಗಲಕೋಟಿ (82.49) ಹಾಗೂ ವಿನಾಯಕ ಉಳ್ಳೇಗಡ್ಡಿ (82.34) ಅಂಕಗಳನ್ನು ಪಡೆದುಕೊಂಡಿದ್ದಾರೆ.

ಮಹಾವಿದ್ಯಾಲಯದ ಒಟ್ಟು 18 ವಿದ್ಯಾರ್ಥಿಗಳು ಜೆಇಇ ಅಡ್ವಾನ್ಸ್ಡ್ ಪರೀಕ್ಷೆಗೆ ಆಯ್ಕೆ ಆಗುವ ನಿರೀಕ್ಷೆಯಿದೆ. ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಚೇರಮನ್ ಡಾ.ಪ್ರಭಾಕರ ಕೋರೆ, ಪ್ರೇರಣಾ ಮಹಾವಿದ್ಯಾಲಯದ ಮುಖ್ಯ ಮಾರ್ಗದರ್ಶಿ ಡಾ. ಅಶೋಕ ಎಸ್. ಶೆಟ್ಟರ್, ಮಹಾವಿದ್ಯಾಲಯದ ಪ್ರಾಚಾರ್ಯರು ಮತ್ತು ಉಪನ್ಯಾಸಕ ವರ್ಗದವರು ಹರ್ಷವ್ಯಕ್ತಪಡಿಸಿದ್ದಾರೆ.









ನೂತನ ಪದಾಧಿಕಾರಿಗಳ ಆಯ್ಕೆ

ಹುಬ್ಬಳ್ಳಿ: ಇಲ್ಲಿಯ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ದಕ್ಷಿಣ ಭಾರತ ಪ್ರಾದೇಶಿಕ ಮಂಡಳಿಯ ಹುಬ್ಬಳ್ಳಿ ಶಾಖೆಯ ನೂತನ ಪದಾಧಿಕಾರಿಗಳ ಆಯ್ಕೆಯಾಗಿದ್ದಾರೆ. ಅಧ್ಯಕ್ಷರಾಗಿ ರಿಷಭ್ ಉಪಾಧ್ಯಾಯ, ಉಪಾಧ್ಯಕ್ಷ ಮಂಜುನಾಥ ಮೇಟಿ, ಕಾರ್ಯದರ್ಶಿ ಅನಂತ್ ನ್ಯಾಮಣ್ಣವರ, ಖಜಾಂಚಿ ಆದರ್ಶ ಹಿರೇಮಠ, ಎಸ್‌ಸಿಎಎಸ್‌ಎನ್ ಅಧ್ಯಕ್ಷರಾಗಿ ವಿರೂಪಾಕ್ಷ ಹಿಪ್ಪರಗಿ, ಸದಸ್ಯ ಅಕ್ಷಯಕುಮಾರ ಸಿಂಘಿ ಆಯ್ಕೆಯಾಗಿದ್ದಾರೆ.




ವಿದ್ಯಾರ್ಥಿ ಮಂಜುನಾಥಗೆ ಸನ್ಮಾನ



ಧಾರವಾಡ: ನವದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವದ ಪರೇಡ್ ನಲ್ಲಿ ಭಾಗವಹಿಸಿ ಕೀರ್ತಿ ತಂದ ಜನತಾ ಶಿಕ್ಷಣ ಸಮಿತಿ ಬನಶಂಕರಿ ಕಲಾ-ವಿಜ್ಞಾನ, ಶಾಂತಿಕುಮಾರ ಗುಬ್ಬಿ ವಿಜ್ಞಾನ ಕಾಲೇಜಿನ ವಿದ್ಯಾರ್ಥಿ ಮಂಜುನಾಥ ದೇವರಡ್ಡಿ ಅವರನ್ನು ಸನ್ಮಾನಿಸಲಾಯಿತು.

ಜೆಎಸ್‌ಎಸ್ ಸಂಸ್ಥೆಯ ಎಂಸಿಎ ವಿಭಾಗದ ನಿರ್ದೇಶಕ ಡಾ.ಸೂರಜ್ ಜೈನ ಮಾತನಾಡಿ, ಜೇಮವೇ ಪಣಕಿಟ್ಟು, ದೇಶದ ಗಡಿಯಲ್ಲಿ ಪಹರೆ ಕಾಯುವ ಯೋಧರಿಗೆ ಗೌರವ ನೀಡಬೇಕು. ಎನ್‌ಸಿಸಿ ಕೆಡೆಟ್‌ಗಳು ಭವಿಷ್ಯದ ಸೈನಿಕರಾಗಿ ಹೊರಹೊಮ್ಮಬೇಕು ಎಂದರು.

ಹುಬ್ಬಳ್ಳಿಯ ಕರ್ನಾಟಕ 28ನೇ ಎನ್‌ಸಿಸಿ ಬಟಾಲಿಯನ್ ಅಧಿಕಾರಿ ಲೆಫ್ಟಿನೆಂಟ್ ಕರ್ನಲ್ ಜಸದೀಪ್ ಸಿಂಗ್ ಹಾಗೂ ಲೆಫ್ಟಿನೆಂಟ್ ಕರ್ನಲ್ ಕಪಿಲ್ ಕಶ್ಯಪ್ ಅವರಿಗೆ ಸನ್ಮಾನಿಸಲಾಯಿತು. ಪ್ರಾಚಾರ್ಯ ಡಾ. ವೆಂಕಟೇಶ ಮುತಾಲಿಕ್ ಇದ್ದರು. ಐಕ್ಯೂಎಸಿ ಸಂಯೋಜಕ ಡಾ.ಶೌಕತಅಲಿ ಮೇಗಲಮನಿ, ಎನ್‌ಸಿಸಿ ಅಧಿಕಾರಿ ಆನಂದ ಕಟ್ಟೀಮನಿ, ಲೆಫ್ಟಿನೆಂಟ್ ಕವಿತಾ ಭಜಂತ್ರಿ, ಲೆವಿಸ್ಸಾ ಫರನಾಂಡಿಸ್ ಡಾ. ಎಂ.ಎಸ್.ಕೋಟ್ಯಾಳ, ವಿಜಯಕುಮಾರ ದೇಶಭಾಗ ಇತರರಿದ್ದರು.

ಶಿವಾಜಿ ಮಹಾರಾಜರ ಜಯಂತಿ

ಕುಂದಗೋಳ: ತಾಲೂಕಿನ ಚಾಕಲಬ್ಬಿ ಗ್ರಾಮದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ 396ನೇ ಜಯಂತಿಯನ್ನು ಶ್ರೀ ಹರಿ ಮಂದಿರದಲ್ಲಿ ಶಿವಾಜಿ ಮಹಾರಾಜರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ನಿವೃತ್ತ ಶಿಕ್ಷಕ ಎಸ್.ಪಿ. ಹಾನಗಲ್ ಮಾತನಾಡಿ, ಶಿವಾಜಿ ಮಹಾರಾಜರು ಸ್ವರಾಜ್ಯದ ಸಂಕಲ್ಪವನ್ನು ಸಾಕಾರಗೊಳಿಸಿದ ಮಹಾನ್ ನಾಯಕರು. ಅವರ ಧೈರ್ಯ, ದೇಶಭಕ್ತಿ ಮತ್ತು ನ್ಯಾಯನಿಷ್ಠ ಆಡಳಿತ ಯುವಜನತೆಗೆ ಮಾದರಿಯಾಗಿದೆ. ಯುವಕರು ಮೊಬೈಲ್ ವ್ಯಾಮೋಹದಿಂದ ದೂರವಿದ್ದು ಶಿಕ್ಷಣ ಪಡೆಯಬೇಕು ಹಾಗೂ ಮಹಾನ್ ಪುರುಷರ ಆದರ್ಶಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ರಾಮರಡ್ಡಿ ಸಂಶಿ, ನಾರಾಯಣ ಘಾಟಗೆ, ವಿಠ್ಠಲ ಘಾಟಗೆ, ಶಿವಪ್ಪ ದೊಡ್ಡಮನಿ, ರಮೇಶ ಘಾಟಗೆ, ಪಾಂಡುರಂಗ ಘಾಟಗೆ, ರುದ್ರಯ್ಯ ಹಿರೇಮಠ, ಅಶೋಕ ಮೋರೆ, ಗಣೇಶ ಘಾಟಗೆ, ಜ್ಞಾನದೇವ ಘಾಟಗೆ, ಪ್ರಕಾಶ ಹಾನಗಲ್, ಬಸವರಾಜ ಭರದ್ವಾಡ, ಜ್ಯೋತಿಬಾ ಘಾಟಗೆ, ನಾಗಲಿಂಗ ಮಾವಿನಕಾಯಿ, ಈರಪ್ಪ ಓದು ಸೇರಿದಂತೆ ಯುವಕರು, ಗ್ರಾಮಸ್ಥರು ಉಪಸ್ಥಿತರಿದ್ದರು.



ಸಾಮಾಜಿಕ ಸಾಮರಸ್ಯ ಕಾಪಾಡಿ: ದೇಸಾಯಿ



ಧಾರವಾಡ: ಕುಮಾರೇಶ್ವರ ನಗರ ಅಭಿವೃದ್ಧಿ ಸಂಘದಿಂದ ಸ್ಥಳೀಯ ಕುಮಾರೇಶ್ವರ ಇಲ್ಲಿನ ಈಶ್ವರ ದೇವಸ್ಥಾನದಲ್ಲಿ ಹಾನಗಲ್ ಕುಮಾರ ಶಿವಯೋಗಿಗಳ ಮಂಟಪದಲ್ಲಿ ಮಹಾಶಿವರಾತ್ರಿ ಹಾಗೂ ಜಾತ್ರಾ ಮಹೋತ್ಸವ ಕಾರ್ಯಕ್ರಮ ಗುರುವಾರ ಸಂಭ್ರಮದಿಂದ ಜರುಗಿತು.

ಉದ್ಘಾಟಿಸಿದ ಮಾಜಿ ಶಾಸಕ ಅಮೃತದೇಸಾಯಿ ಮಾತನಾಡಿ, ಜಾತ್ರೆ ಮತ್ತು ಉತ್ಸವ ಶ್ರದ್ಧೆ-ಭಕ್ತಿಯಿಂದ ಮಾಡಬೇಕು. ಇಂತಹ ಸತ್ಕಾರ್ಯಗಳಿಗೆ ಗುರು-ಹಿರಿಯರ ಮಾರ್ಗದರ್ಶನ ಅಗತ್ಯವಿದೆ. ನಮ್ಮ ಹೊಸ ತಲೆಮಾರು ಪರಂಪರೆ ಮುನ್ನಡೆಸಬೇಕು ಎಂದರು. ಧಾರ್ಮಿಕ ಕಾರ್ಯಕ್ರಮಗಳು ಸಮಾಜದಲ್ಲಿ ಸಾಮರಸ್ಯ ಕಾಪಾಡುತ್ತವೆ. ಇಂತಹ ಕಾರ್ಯಗಳ ಹೆಚ್ಚೆಚ್ಚು ನಡೆಯಬೇಕು. ಯಾವುದೇ ಜಾತಿ-ಧರ್ಮ ಬೇಧ ಮಾಡದೆ, ನಾವೆಲ್ಲ ಒಂದೆಂಬ ಭಾವನೆಯಿಂದ ಬಾಳುವ ಮೂಲಕ ಸೌಹಾರ್ದತೆ ಕಾಪಾಡುವಂತೆ ಹೇಳಿದರು.

ಸಾನ್ನಿಧ್ಯ ವಹಿಸಿದ್ದ ಅಮ್ಮಿನಬಾವಿ ಪಂಚಗೃಹ ಹಿರೇಮಠದ ಅಭಿನವ ಶಾಂತಲಿಂಗ ಶಿವಾಚಾರ್ಯರು ಮಾತನಾಡಿ, ಭಕ್ತರು ದೇವಸ್ಥಾನ, ಮಠ-ಮಂದಿರಗಳು ಕಟ್ಟಿದರೆ, ಮಠಗಳು ಸಮಾಜ ಕಟ್ಟುವ ಮೂಲಕ ಶಾಂತಿ ಮತ್ತು ನೆಮ್ಮದಿ ಕೇಂದ್ರಗಳಾಗಿ ಮಾರ್ಪಡುತ್ತಿವೆ ಎಂದರು. ಮಹಾನಗರ ಪಾಲಿಕೆ ಸದಸ್ಯೆ ಅನಿತಾ ಚಳ್ಳಗೇರಿ, ಜಿ.ಎಂ.ಹುಲ್ಲೂರ, ಪ್ರಭುಲಿಂಗಸ್ವಾಮಿ ಹಿರೇಮಠ, ಬಸವರಾಜ ಕೊಂಗವಾಡ, ಪ್ರೊ. ಎಂ.ಈಶ್ವರಯ್ಯ, ಜೆ.ವೈ. ತೋಟದ, ಎನ್.ಬಿ.ಪಾಟೀಲ, ಸಿದ್ದಲಿಂಗೇಶ ಹೊಳೆಯಣ್ಣವರ, ನೀಲಕಂಠ ವಾರಿ ಇತರರಿದ್ದರು.

ಶಿವಾಜಿಯ ತೊಟ್ಟಿಲೋತ್ಸವ: ಮೆರವಣಿಗೆ

ಅಳ್ನಾವರ: ತಾಲೂಕಿನಾದ್ಯಂತ ಗುರುವಾರ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿಯನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು.

ಪಟ್ಟಣದ ಲಕ್ಷ್ಮೀ ದುರ್ಗಾ ಮಂದಿರದಲ್ಲಿ ಸೂರ್ಯೋದಯದ ಸಮಯದಲ್ಲಿ ಶಿವಾಜಿಯ ತೊಟ್ಟಿಲೋತ್ಸವ ಹಾಗೂ ಭಾವಚಿತ್ರದ ಪೂಜೆ ಜರುಗಿದರೆ ಸಂಜೆ ಎತ್ತಿನ ಚಕ್ಕಡಿಗಳ ಮೆರವಣಿಗೆ ಅದ್ದೂರಿಯಾಗಿ ನೆರವೇರಿತು.

ಸಮಾಜದ ಮುಖಂಡ ಮಹಾದೇವ ಸಾಗರೇಕರ ಮಾತನಾಡಿ, ಸನಾತನ ಹಿಂದೂ ಧರ್ಮದ ರಕ್ಷಣೆಯ ಜೊತೆಗೆ ಅಖಂಡ ಸಾಮ್ರಾಜ್ಯದ ರಕ್ಷಣೆಗೆ ಹೋರಾಡಿದ ಛತ್ರಪತಿ ಶಿವಾಜಿಯಂತಹ ಮಹನೀಯರ ಸ್ಮರಣೆ ಅಗತ್ಯವಿದ್ದು, ಅವರ ಪರಾಕ್ರಮ ಮತ್ತು ಮುಂದಾಲೋಚನೆ ಕನಸುಗಳು ಇಂದಿನ ಯುವಕರಲ್ಲಿ ಪ್ರಜ್ವಲಿಸಬೇಕು. ಅಂದಾಗ ಮಾತ್ರ ಭವ್ಯ ಭಾರತದ ನಿರ್ಮಾಣ ಸಾಧ್ಯ ಎಂದರು.

ಪಟ್ಟಣ ಪಂಚಾಯತಿಯ ಸಭಾಭವನದಲ್ಲಿ ಆಯೋಜಿಸಿದ್ದ ಶಿವಾಜಿ ಜಯಂತಿಯಲ್ಲಿ ಪ.ಪಂ ಮಾಜಿ ಅಧ್ಯಕ್ಷರಾದ ಮಧು ಬಡಸ್ಕರ, ರೂಪೇಶ ಗುಂದಕಲ್, ಪುಂಡಲೀಕ ಪಾರ್ದಿ, ರಾಜು ಕರ್ಲೆಕರ, ಬಳಿರಾಮ ಅಳೋಣಿ, ನಾರಾಯಣ ಮೋರೆ, ಲಖನ ಬರಗುಂಡಿ, ಶಾಹು ಶಿಂಧೆ, ಶಿರಸ್ತೆದಾರ ಅಜ್ಜಪ್ಪ ಮಂಗಳಗಟ್ಟಿ, ಎಂ.ಎಸ್.ಬಿರಾದಾರ, ಮುಖ್ಯಾಧಿಕಾರಿ ಪ್ರಕಾಶ ಮಗದುಮ್, ಮಾಂತೇಶ ಬೆಂತೂರ, ಕಿರಣ ಗಡಕರ, ನಾಗರಾಜ ಹಂಜಗಿ, ಪ್ರವೀಣ ಪವಾರ ಹಾಗೂ ಇತರರಿದ್ದರು.



ಹುಬ್ಬಳ್ಳಿ
ಶುಕ್ರವಾರ, 20 ಫೆಬ್ರವರಿ 2026
ಸಂಪುಟ 15, ಸಂಚಿಕೆ 333, ಪುಟಗಳು 14
ಹುಬ್ಬಳ್ಳಿ ▪ ಬೆಂಗಳೂರು ▪ ಮಂಗಳೂರು ▪ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಚಾರ್ಲ್ಸ್ ಸಹೋದರ ಆಂಡ್ರ್ಯೂ ಬಂಧನ | ೦೭
2047ಕ್ಕೆ ವಿಕಸಿತ ಭಾರತ: ಶೇಖಾವತ್ ವಿಶ್ವಾಸ | ೦೫
ರಣಜಿ ಫೈನಲ್‌ಗೆ ಕರ್ನಾಟಕ | ೦೮

ಕೃತಕ ಬುದ್ಧಿಮತ್ತೆಗಿರಲಿ ಮುಕ್ತ ಅವಕಾಶ, ಅದು ಭಾರತದ ಭವಿಷ್ಯ ಆದರೆ, ತಂತ್ರಜ್ಞಾನ ಮಾನವ ನಿಯಂತ್ರಿತವಾಗಿರಬೇಕು: ಮೋದಿ

ಎಐ ನಮ್ಮ ಕೈಯಲ್ಲಿರಲಿ



ಹೊಸದಿಲ್ಲಿ: ತಂತ್ರಜ್ಞಾನಗಳು ಮಾನವ ನಿಯಂತ್ರಿತವಾಗಿರಬೇಕು ಎಂದು ಪ್ರತಿಪಾದಿಸಿರುವ ಪ್ರಧಾನಿ ನರೇಂದ್ರ ಮೋದಿ, ಇದೇ ಹಿನ್ನೆಲೆಯಲ್ಲಿ ಮಾನವ್ ವಿಷನ್ ಅನ್ನು ಗುರುವಾರ ಅನಾವರಣಗೊಳಿಸಿದ್ದಾರೆ. ಸಾರ್ವಭೌಮತೆ ಮತ್ತು ಅಂತರ್ಗತತೆಗೆ ಪ್ರಾಧಾನ್ಯತೆಯಿರುವಂತೆ ಅತ್ಯಾಧುನಿಕ ತಂತ್ರಜ್ಞಾನಗಳ ಬಳಕೆಯಾಗಬೇಕೆಂದು ಪ್ರಧಾನಿ ಸಲಹೆ ನೀಡಿದ್ದಾರೆ. ಕೃತಕ ಬುದ್ಧಿಮತ್ತೆಯ ಕೋಡ್‌ಗಳು ಮುಕ್ತವಾದಲ್ಲಿ ಮತ್ತು ಎಐ ಜ್ಞಾನ ಪರಸ್ಪರ ಹಂಚಿಕೆಯಾದಲ್ಲಿ ಜಗತ್ತಿಗೇ ಒಳಿತಾಗಲು ಸಾಧ್ಯವೆಂಬುದು ನನ್ನ ನಂಬಿಕೆ. ರಾಷ್ಟ್ರವು ಎಐ ಬಗ್ಗೆ ಆತಂಕಪಟ್ಟಿಲ್ಲ, ಬದಲಾಗಿ ಅದರಲ್ಲೇ ಅದೃಷ್ಟ ಮತ್ತು ನಾಳೆಯ ಭವಿಷ್ಯವನ್ನು ಮನಗಂಡಿದೆ ಎಂದು ಪ್ರಧಾನಿ ಮೋದಿ ಅರ್ಥಗರ್ಭಿತವಾಗಿ ನುಡಿದರು. ಎಐ ಇಂಪ್ಯಾಕ್ಟ್ ಸಮ್ಮಿಟ್‌ಗೆ ಚಾಲನೆ ನೀಡಿ ಅವರು ಮಾತನಾಡಿದರು.

ಜನರಾಗಕೂಡದು ಎಐ ಕಚ್ಚಾವಸ್ತು: ಎಐನಿಂದ ಸಮಸ್ತರಿಗೆ ನೆಮ್ಮದಿ ಸಿಗಬೇಕು, ಸಮಸ್ತರ ಪ್ರಗತಿಯಾಗಬೇಕು. ಏಕಕಾಲಕ್ಕೆ ಜನರು ಆಧುನಿಕ ತಂತ್ರಜ್ಞಾನಗಳ ಡಾಟಾ ಪಾಯಿಂಟ್ ಅಥವಾ ಕಚ್ಚಾವಸ್ತುಗಳಾಗಕೂಡದು ಎಂದು ಮೋದಿ ಎಚ್ಚರಿಸಿದರು.

ಎಐ ಬಳಕೆಯ ರೀತಿ ಮುಖ್ಯ: ಎಐಗೆ ಮುಕ್ತಾವಕಾಶವಿರಬೇಕು ಖಂಡಿತ. ಆದರೆ ಇದರ ಹಿಡಿತ ಮಾತ್ರ ಮಾನವರ ಕೈಗಳಲ್ಲೇ ಇರಬೇಕು. ಈ ನಿಟ್ಟಿನಲ್ಲಿ ಜಿಪಿಎಸ್ ನಿದರ್ಶನವಿತ್ತ ಪ್ರಧಾನಿ ಮೋದಿ, ನೌಕಾಯಾನದ ಪರಿಕರಗಳು ನೌಕೆ ಸಾಗಬೇಕಾದ ದಿಕ್ಕಿನ ಬಗ್ಗೆ ಮಾಹಿತಿ ನೀಡಬಲ್ಲುವು. ➡ಪುಟ ೪

ಏನಿದು ಮಾನವ್ ವಿಷನ್

ಭಾರತದ ಎಐಗಾಗಿ ಪ್ರಧಾನಿ ಮೋದಿ 'M.A.N.A.V.' (ಮಾನವ್) ದೃಷ್ಟಿಕೋನವನ್ನು ಮಂಡಿಸಿದರು. 'M.A.N.A.V.' ಎಂದರೆ:

- **M-ನೈತಿಕ ಮತ್ತು ನೀತಿಬದ್ಧ ವ್ಯವಸ್ಥೆಗಳು:** ಎಐ ನೈತಿಕ ಮಾರ್ಗಸೂಚಿಗಳನ್ನು ಆಧರಿಸಿರಬೇಕು.
- **A-ಹೊಣೆಗಾರಿಕೆಯ ಆಡಳಿತ:** ಪಾರದರ್ಶಕ ನಿಯಮಗಳು ಮತ್ತು ದೃಢವಾದ ಮೇಲ್ವಿಚಾರಣೆ.
- **N-ರಾಷ್ಟ್ರೀಯ ಸಾರ್ವಭೌಮತ್ವ:** ದತ್ತಾಂಶವು ಅದರ ಹಕ್ಕುದಾರರಿಗೆ ಸೇರಿದ್ದು.
- **A -ಸುಲಭ ಲಭ್ಯತೆ ಮತ್ತು ಒಳಗೊಳ್ಳುವಿಕೆ:** ಎಐ ಏಕಸ್ವಾಮ್ಯವಾಗಬಾರದು, ಬದಲಾಗಿ ಗುಣಕವಾಗಬೇಕು.
- **V-ಮಾನ್ಯತೆ ಮತ್ತು ಕಾನೂನುಬದ್ಧತೆ:** ಎಐ ಕಾನೂನುಬದ್ಧ ಮತ್ತು ಪರಿಶೀಲಿಸುವಂತಿರಬೇಕು.

ಭಾರತದ ಮಾನವ ದೃಷ್ಟಿಕೋನವು 21ನೇ ಶತಮಾನದ ಎಐ ಚಾಲಿತ ಜಗತ್ತಿನಲ್ಲಿ ಮನುಕುಲದ ಕಲ್ಯಾಣಕ್ಕಾಗಿ ನಿರ್ಣಾಯಕ ಸೇತುವಾಗಲಿದೆ ಎಂದು ಮೋದಿ ಪ್ರತಿಪಾದಿಸಿದರು.



ಮೋದಿ ಭಾಷಣ 11 ಭಾಷೆಗೆ ಡಬ್

ಎಐ ಶೃಂಗದಲ್ಲಿ ಪ್ರಧಾನಿ ಮೋದಿಯವರ ಭಾಷಣದ ವೇಳೆ ಭಾರತದ ಕೃತಕ ಬುದ್ಧಿಮತ್ತೆ ಕ್ಷೇತ್ರದ ಸಾಧನೆಗಳು ಪ್ರದರ್ಶಿತವಾದವು. ಅವರ ಭಾಷಣವನ್ನು 11 ಭಾಷೆಗಳಿಗೆ ನೇರವಾಗಿ ಮಾರ್ಪಡಿಸುವುದರ ಜತೆಗೆ ಎಐ ಆಧಾರಿತ ಸಂಜ್ಞಾ ಭಾಷೆ ಅನುವಾದವೂ ಒದಗಿಸಲಾಯಿತು. ಭಾರತ ಮಂಡಪಂ ಸಭಾಂಗಣದಲ್ಲಿ ಮೋದಿಯವರ ಹಿಂದಿನ ದೊಡ್ಡ ಪರದೆ ಮೇಲೆ ಎಐ ಆಧಾರಿತ ಸಂಜ್ಞಾ ಭಾಷೆ ಅನುವಾದವನ್ನು ಪ್ರದರ್ಶಿಸಲಾಯಿತು. ಇದರಿಂದ ಭಾಷಣ ಎಲ್ಲರಿಗೂ ಸುಲಭವಾಗಿ ಅರ್ಥವಾಗುವಂತೆ ಮಾಡಲಾಯಿತು. ➡ಪುಟ ೪

ಸರ್ಕಾರಕ್ಕೆ ಯೋಜನಾ ಆಯೋಗ ಶಿಫಾರಸು

ಗುತ್ತಿಗೆ, ಹೊರಗುತ್ತಿಗೆ ಕಾರ್ಮಿಕ ಪದ್ಧತಿ ರದ್ದು



ಬೆಂಗಳೂರು: ಸರ್ಕಾರಿ ಇಲಾಖೆಗಳಲ್ಲಿನ ಹೊರಗುತ್ತಿಗೆ/ಗುತ್ತಿಗೆ ಕಾರ್ಮಿಕ ಪದ್ಧತಿಯನ್ನು ರದ್ದುಗೊಳಿಸಿ, ಹೊರಗುತ್ತಿಗೆ ಮೂಲಕ ಮಾಡಲಾಗು ತ್ತಿರುವ ಎಲ್ಲಾ ಕೆಲಸಗಳನ್ನು ನೇರ ಪಾವತಿ ವ್ಯವಸ್ಥೆಯಲ್ಲಿ ತರಬೇಕು ಹಾಗೂ ಆ ಮೂಲಕ ಎಲ್ಲ ಕಾರ್ಮಿಕರಿಗೆ ನೇರ ವೇತನ ಪಾವತಿ ವ್ಯವಸ್ಥೆ ಮಾಡಬೇಕು ಎಂದು ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗ ಸರ್ಕಾರಕ್ಕೆ ಶಿಫಾರಸು ಮಾಡಿದೆ.



ಗುರುವಾರ ಆಯೋಗದ ಉಪಾಧ್ಯಕ್ಷ ಬಿ.ಆರ್.ಪಾಟೀಲ್ ಅವರು ಗೃಹ ಕಚೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಆಯೋಗದ ವರದಿಯನ್ನು ಸಲ್ಲಿಸಿದರು. ಈ ವರದಿಯಲ್ಲಿ ಹಲವಾರು ಅಂಶಗಳನ್ನು ಸರ್ಕಾರಕ್ಕೆ ಶಿಫಾರಸು ಮಾಡಿದ್ದಾರೆ. ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು ಸೇರಿದಂತೆ ಸಮಾನ ಸ್ವರೂಪದ ಸೇವೆ ನಿರ್ವಹಿಸುವ ಕಾರ್ಮಿಕರನ್ನು ಗೌರವಧನ ಆಧಾರಿತ ವ್ಯವಸ್ಥೆಯಿಂದ ಹೊರತಂದು, ನ್ಯಾಯಸಮ್ಮತ ವೇತನದೊಂದಿಗೆ ಖಾಯಂ ಕಾರ್ಮಿಕರಾಗಿ ಪರಿಗಣಿಸಬೇಕು. ಇವರಿಗೆ ಕನಿಷ್ಠ 24,000 ರೂ. ಮಾಸಿಕ ವೇತನ ನಿಗದಿಪಡಿಸಬೇಕು ಅಥವಾ ಇತರ ಕಾರ್ಮಿಕರಿಗೆ ಸಮಾನವಾಗಿ ಅನ್ವಯಿಸುವ ಕನಿಷ್ಠ ವೇತನವನ್ನು ಅಧಿಸೂಚನೆಯ ಮೂಲಕ ನಿಗದಿಗೊಳಿಸಬೇಕು ಎಂದು ಶಿಫಾರಸು ಮಾಡಿದೆ. ➡ಪುಟ ೪

ಇತರೇ ಶಿಫಾರಸುಗಳು

- 3 ರಿಂದ 16 ವರ್ಷದ ಮಕ್ಕಳನ್ನು ಆರ್‌ಟಿಇನಲ್ಲಿ ಸೇರಿಸಲು ವ್ಯಾಪ್ತಿಯನ್ನು ವಿಸ್ತರಿಸಿ
- ಅತಿಥಿ ಶಿಕ್ಷಕರನ್ನು ಕೊನೆಗೊಳಿಸಿ ಆದ್ಯತೆಯ ಮೇಲೆ ಎಲ್ಲಾ ಮಂಜೂರಾದ ಖಾಲಿ ಹುದ್ದೆಗಳನ್ನು ಆದಷ್ಟು ಬೇಗ ಭರ್ತಿ ಮಾಡುವುದು
- ಶಿಕ್ಷಣದಲ್ಲಿ ತಂತ್ರಜ್ಞಾನದ ನಿಯಂತ್ರಣ ಮತ್ತು ನೈತಿಕ ಬಳಕೆಗಾಗಿ ಉನ್ನತ ಅಧ್ಯಯನ ಸಮಿತಿ
- ಸರ್ಕಾರಿ ಶಾಲೆಗಳ ದೃಢವಾದ ಮೇಲ್ವಿಚಾರಣೆ ಮತ್ತು ಅಭಿವೃದ್ಧಿಗಾಗಿ ಸರ್ಕಾರಿ ಶಾಲಾ ಅಭಿವೃದ್ಧಿ ಪ್ರಾಧಿಕಾರ ಸ್ಥಾಪಿಸುವುದು

ಬಾಲಕಿಯರಿಗೆ ಬೈಸಿಕಲ್ ಯೋಜನೆ ಜಾರಿಗೆ ತನ್ನಿ

ಈ ಹಿಂದೆ ಬಿ.ಎಸ್. ಯಡಿಯೂರಪ್ಪ ಸಿಎಂ ಆಗಿದ್ದ ಸಂದರ್ಭದಲ್ಲಿ ಜಾರಿಗೆ ತಂದಿದ್ದ ವಿದ್ಯಾರ್ಥಿನಿಯರಿಗೆ ಉಚಿತ ಬೈಸಿಕಲ್ ಯೋಜನೆಯನ್ನು ಪುನಃ ಸ್ಥಾಪಿಸಲು ಆಯೋಗ ಶಿಫಾರಸು ಮಾಡಿದೆ. ಇದರಿಂದ ಪರೀಕ್ಷೆಯಲ್ಲಿ ದಾಖಲಾತಿ ಹೆಚ್ಚಿಸಲು ಅನುಕೂಲವಾಗಲಿದೆ ಎಂದು ತಿಳಿಸಿದೆ.

ಸ್ಲಂಗಳ ಮೂಲಭೂತ ಸೌಕರ್ಯಕ್ಕೆ 1 ಸಾವಿರ ಕೋಟಿ ರೂ. ನೀಡಿ

ಪುಟ ೪

ಶುಭ ದಿನ

ಕಲಿಯುಗಾಬ್ಧ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಉತ್ತರಭಾದ್ರ

ದಿನದ ಮಾತು

ಬೇರೆಯವರ ಮನಸ್ಸನ್ನು ಅರಿತು ವರ್ತಿಸುವುದು ಒಂದು ಅದ್ಭುತ ಕಲೆ.
▲ ಲೋಕೋಕ್ತಿ

ಎರಡು ಹೊತ್ತಗೆ- ಎರಡು ನಾಲಗೆ! ಏನಿದು ತಮಾಷೆ?

ಉಫೇ ವೀರ ಭೂಮಿಗೆ
ಸಂತೋಷ್ ತಮ್ಮಯ್ಯ

ಪುಟ ೬

ಕಿರುಸುದ್ದಿ

ಷೇರುಪೇಟೆಗೆ ಯುದ್ಧ ಭೀತಿ

ಮುಂಬೈ: ಅಮೆರಿಕ ಮತ್ತು ಇರಾನ್ ನಡುವೆ ಯುದ್ಧ ನಡೆಯುವ ಸಂಭವ ಹೆಚ್ಚಾಗಿದ್ದು, ಇದರ ಪರಿಣಾಮ ಭಾರತೀಯ ಷೇರುಮಾರುಕಟ್ಟೆಗಳ ಮೇಲೂ ಬೀರಿತು. ಗುರುವಾರ ಬಿಎಸ್‌ಇ ಸೆನ್ಸೆಕ್ಸ್ 1,236.11 ಅಂಕಗಳು (ಶೇ.1.48) ಇಳಿದು 82,498.14ಕ್ಕೆ ಮುಕ್ತಾಯಗೊಂಡರೆ, ಎನ್‌ಎಸ್‌ಇ ನಿಫ್ಟಿ 365 ಅಂಕಗಳು (ಶೇ.1.41) ಕುಸಿದು 25,454.35ಕ್ಕೆ ತಲುಪಿತು.

ಪುಟ ೭

ನಕ್ಸಲಿಸಂ ವಿರುದ್ಧ ಕಾರ್ಯಾಚರಣೆ ಯಶ

ಗುವಾಹಟಿ: ನಕ್ಸಲಿಸಂ ವಿರುದ್ಧದ ಹೋರಾಟ ಕೊನೆ ಹಂತದಲ್ಲಿದ್ದು, ಗೃಹ ಸಚಿವ ಅಮಿತ್ ಶಾ ಘೋಷಿಸಿದಂತೆ ಮಾರ್ಚ್ ವೇಳೆಗೆ ದೇಶದಿಂದ ಈ ಪಿಡುಗನ್ನು ನಿರ್ಮೂಲನೆ ಮಾಡಲಾಗುವುದು ಎಂದು ಸಿಆರ್‌ಪಿಎಫ್ ಮಹಾನಿರ್ದೇಶಕ ಜಿ. ಪಿ. ಸಿಂಗ್ ಗುರುವಾರ ಹೇಳಿದ್ದಾರೆ.

ಪುಟ ೭

ಸರ್ಕಾರಿ ಆಸ್ಪತ್ರೆಯಲ್ಲಿ ತಾಯಿ-ಮಗು ಸಾವು

ಪುಟ ೫

ಅಮೆರಿಕ-ಇರಾನ್ ಯುದ್ಧ ನಿಶ್ಚಿತ?

ಪುಟ ೭

ದೇಶದ ಪ್ರಗತಿ ಯುಗಕ್ಕೆ ಕೃತಕ ಬುದ್ಧಿಮತ್ತೆ ನಾಂದಿ ಖಚಿತ

ಪುಟ ೭

ಭ್ರಷ್ಟಾಚಾರ: ಬಾಲುಗೆ ಅಣ್ಣಾಮಲೈ ಸವಾಲು

ಪುಟ ೭

ನಕ್ಸಲ್ ಪೀಡಿತ ಜಿಲ್ಲೆಗಳ ಸಂಖ್ಯೆ 7ಕ್ಕೆ ಇಳಿಕೆ

ಪುಟ ೭

ಕರಾಚಿ ಸಿಲಿಂಡರ್ ಸ್ಫೋಟ: 16 ಸಾವು

ಪುಟ ೭

ಶಿವಾಜಿ ಒಂದು ಧರ್ಮಕ್ಕೆ ಸೀಮಿತವಲ್ಲ: ತಂಗಡಗಿ

ಪುಟ ೪

41.3 ಲಕ್ಷ ಯೂನಿಟ್ ಉತ್ಪಾದನೆ, ₹2.61 ಕೋಟಿ ಉಳಿತಾಯ

ಸೌರ ಬಳಕೆ, ನೈಋತ್ಯ ರೈಲ್ವೆ ಮುಂದು

ಅನುಪಾ ಕೆ.

ದಿಗಂತ ವಿಶೇಷ

ಬೆಂಗಳೂರು: ಭಾರತೀಯ ರೈಲ್ವೆಯಲ್ಲಿ ನವೀಕರಿಸಬಹುದಾದ ಇಂಧನ ಅಳವಡಿಸಿಕೊಳ್ಳುವಲ್ಲಿ ನೈಋತ್ಯ ರೈಲ್ವೆ ಪ್ರಮುಖ ವಲಯಗಳಲ್ಲಿ ಒಂದಾಗಿ ಹೊರಹೊಮ್ಮಿದೆ. ಅದರಲ್ಲೂ 2025ರಲ್ಲಿ ಸುಮಾರು 41.3 ಲಕ್ಷ ಯೂನಿಟ್ ಸೌರಶಕ್ತಿ ಉತ್ಪಾದಿಸಿದ್ದು, ಇದರಿಂದ ನೈಋತ್ಯ ರೈಲ್ವೆಗೆ ಸುಮಾರು 2.61 ಕೋಟಿ ರೂ. ಉಳಿತಾಯವಾಗಿದೆ.

2030ರ ವೇಳೆಗೆ ನಿವ್ವಳ-ಶೂನ್ಯ ಇಂಗಾಲದ ಹೊರಸೂಸುವಿಕೆ ಸಾಧಿಸುವ ರಾಷ್ಟ್ರೀಯ ಗುರಿ ತಲುಪುವುದಕ್ಕೆ ನೈಋತ್ಯ ರೈಲ್ವೆ ಕಾರ್ಯ ನಿರತವಾಗಿದೆ. ತನ್ನ ಕಾರ್ಯಾಚರಣೆ ಮತ್ತು ವಸತಿ ಮೂಲಸೌಕರ್ಯಗಳಲ್ಲಿ ಮೇಲ್ಛಾವಣಿ ಸೌರಶಕ್ತಿ ವ್ಯವಸ್ಥೆಯನ್ನು ದೊಡ್ಡ ಪ್ರಮಾಣದಲ್ಲಿ ನಿಯೋಜಿಸುವ ಮೂಲಕ, ನೈಋತ್ಯ ರೈಲ್ವೆಯು ಹಸಿರು ಇಂಧನ ಉತ್ತೇಜಿಸುವುದರೊಂದಿಗೆ ಇಲಾಖೆಯ ವಾರ್ಷಿಕ ವಿದ್ಯುತ್ ಶುಲ್ಕದಲ್ಲಿ ಗಣನೀಯ ಉಳಿತಾಯ ಕಂಡಿದೆ. ➡ಪುಟ ೪



ಕಳೆದ 4 ವರ್ಷದಲ್ಲಿ ಸೌರಶಕ್ತಿ ಉತ್ಪಾದನೆ, ಉಳಿತಾಯ ವಿವರ

ವರ್ಷ	ಸೌರಶಕ್ತಿ ಉತ್ಪಾದನೆ (ಯುನಿಟ್‌ಗಳಲ್ಲಿ)	ವಿದ್ಯುತ್ ಬಿಲ್ ಉಳಿತಾಯ
2022-23	4.90 ಲಕ್ಷ	2.06 ಕೋಟಿ
2023-24	5.69 ಲಕ್ಷ	2.81 ಕೋಟಿ
2024-25	6.86 ಲಕ್ಷ	4.07 ಕೋಟಿ
2025-26	4.13 ಲಕ್ಷ	2.61 ಕೋಟಿ

ರೂ.ಗಳಲ್ಲಿ

ತ.ನಾಡಲ್ಲಿ ಎಲ್ಲರಿಗೂ ಫ್ರೀ ವಿದ್ಯುತ್ ಉಡುಗೊರೆ ಬಗ್ಗೆ ಸುಪ್ರೀಂ ಕಿಡಿ

ದೇಶದ ಪ್ರಗತಿಗೆ ಉಚಿತ ಕೊಡುಗೆ ಅಡ್ಡಿ

ಹೊಸದಿಲ್ಲಿ: ದೇಶದಲ್ಲಿ ಹೆಚ್ಚುತ್ತಿರುವ 'ಉಚಿತ ಕೊಡುಗೆ' (ಫ್ರೀಬೀಸ್ ಕಲ್ಚರ್) ಭಾರತದ ಆರ್ಥಿಕ ಅಭಿವೃದ್ಧಿಗೆ ಅಡ್ಡಿಯಾಗುತ್ತಿದೆ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ. ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹಾಗೂ ನ್ಯಾಯಮೂರ್ತಿಗಳಾದ ಜೊಯ್ಮಾಲ್ಯ ಬಾಗ್ಚಿ ಮತ್ತು ವಿಪುಲ್ ಎಂ. ಪಂಚೋಲಿ ನೇತೃತ್ವದ ಪೀಠವು ಈ ಕುರಿತು ಮಹತ್ವದ ಟೀಕೆಗಳನ್ನು ಮಾಡಿದೆ. ಅಂತೆಯೇ ಈ ಸಂಬಂಧ ಕೇಂದ್ರ ಸರ್ಕಾರ ಸೇರಿದಂತೆ ಇತರರಿಗೆ ನೋಟಿಸ್ ಜಾರಿಗೊಳಿಸಿದೆ.



ದೇಶದ ಬಹುತೇಕ ರಾಜ್ಯಗಳು ಆದಾಯ ಕೊರತೆ ಸ್ಥಿತಿಯಲ್ಲಿ ಇರುವುದರ ನಡುವೆಯೇ ಉಚಿತ ಯೋಜನೆಗಳನ್ನು ಘೋಷಿಸುತ್ತಿರುವುದು ಚಿಂತಾಜನಕ ಎಂದು ಪೀಠ ಹೇಳಿದೆ. ಅಭಿವೃದ್ಧಿ ಕಾರ್ಯಗಳಿಗೆ ಆದ್ಯತೆ ನೀಡುವ ಬದಲು ರಾಜ್ಯಗಳು ವೇತನ ಪಾವತಿ, ಉಚಿತ ವಿತರಣೆಗಳಿಗೆ ಹೆಚ್ಚು ವೆಚ್ಚ ಮಾಡುತ್ತಿವೆ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ. ➡ಪುಟ ೪

ಇದು ಓಲೈಕೆ ಅಲ್ಲವೇ?

ರಾಜ್ಯ ಸರ್ಕಾರಗಳು ಗ್ಯಾರಂಟಿ ಯೋಜನೆಗಳಲ್ಲಿ ಅನೇಕ ಸೌಲಭ್ಯಗಳನ್ನು ಉಚಿತವಾಗಿ ನೀಡುತ್ತಿರುವುದು ಸಮಂಜಸವೇ? ಇದು ಜನೋಪಯೋಗಿ ಕಲ್ಯಾಣ ನೀತಿಯೇ ಅಥವಾ ರಾಜಕೀಯ ಓಲೈಕೆಯ ರೂಪವೇ? ಆರ್ಥಿಕವಾಗಿ ಬಲಹೀನರನ್ನು ನೆರವಾಗುವುದು ಅಗತ್ಯವೇ ಸರಿ; ಆದರೆ, ಆರ್ಥಿಕ ಸ್ಥಿತಿಯನ್ನು ಪರಿಗಣಿಸದೆ ಎಲ್ಲ ವರ್ಗದ ಜನರಿಗೆ ಉಚಿತ ಸೌಲಭ್ಯಗಳನ್ನು ನೀಡುವುದರಿಂದ ರಾಜ್ಯದ ಆರ್ಥಿಕ ಸ್ಥಿರತೆಗೆ ಹೊಡೆತ ಬೀಳುವುದಿಲ್ಲವೇ? ಇದರಿಂದ ಜನರ ದುಡಿವ ಮನೋಭಾವ ಹಾಗೂ ಸ್ವಾವಲಂಬನೆಯ ಮನಸ್ಥಿತಿ ಕುಗ್ಗುವ ಸಾಧ್ಯತೆಯಿಲ್ಲವೇ? ಎಂದು ನ್ಯಾಯಪೀಠ ಪ್ರಶ್ನಿಸಿದೆ.

ಸಾರಿಗೆ ಮುಷ್ಕರ ತಾತ್ಕಾಲಿಕ ವಾಪಸ್

ಬೆಂಗಳೂರು: 38 ತಿಂಗಳ ಹಿಂಬಾಕಿ ಹಾಗೂ ವೇತನ ಪರಿಷ್ಕರಣೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ ನಡೆಸುತ್ತಿದ್ದ ಸಾರಿಗೆ ನೌಕರರು ಸರ್ಕಾರದ ಮನವೊಲಿಕೆಗೆ ಒಪ್ಪಿ, ಮುಷ್ಕರದ ನಿರ್ಧಾರವನ್ನು ತಾತ್ಕಾಲಿಕವಾಗಿ ಹಿಂಪಡೆದಿದ್ದಾರೆ.



ಅಂತೆಯೇ ಬೇಡಿಕೆಗಳನ್ನು ಈಡೇರಿಸಲು ಮಾ.2ರವರೆಗೆ ಸರ್ಕಾರಕ್ಕೆ ಗಡುವು ನೀಡಿದ್ದಾರೆ. ದೀರ್ಘಕಾಲದ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ನಾಲ್ಕು ನಿಗಮದ ಸಾವಿರಾರು ನೌಕರರು ಗುರುವಾರ ಬೆಳಗ್ಗೆಯಿಂದಲೇ ಸ್ವಾತಂತ್ರ್ಯ ಉದ್ಯಾನವನದಲ್ಲಿ ಜಮಾಯಿಸಿದ್ದರು. ರಾಜ್ಯದ ವಿವಿಧ ಮೂಲೆಗಳಿಂದ ಬಂದಿದ್ದ ನೌಕರರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುವ ಮೂಲಕ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ಮುಷ್ಕರದ ತೀವ್ರತೆ ಅರಿತು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷಾ ನೌಕರರೊಂದಿಗೆ ಸುದೀರ್ಘ ಚರ್ಚೆ ನಡೆಸಿದರು. ➡ಪುಟ ೪

ರಾಜ್ಯದಲ್ಲಿ ಏಪ್ರಿಲ್‌ಗೆ ಎಸ್‌ಐಆರ್ ಸಾಧ್ಯತೆ



ಹೊಸದಿಲ್ಲಿ: ಕರ್ನಾಟಕ ಸೇರಿದಂತೆ ಉಳಿದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯನ್ನು ಏಪ್ರಿಲ್‌ನಿಂದ ಆರಂಭಿಸುವ ಬಗ್ಗೆ ಚುನಾವಣಾ ಆಯೋಗ(ಇಸಿ) ಮುನ್ಸೂಚನೆ ನೀಡಿದೆ.

ವಿವರ ಪುಟ ೪

ರಾಜ್ಯದಲ್ಲಿ ಏಪ್ರಿಲ್‌ಗೆ ಎಸ್‌ಐಆರ್ ಸಾಧ್ಯತೆ

ಹೊಸದಿಲ್ಲಿ: ಕರ್ನಾಟಕ ಸೇರಿದಂತೆ ಉಳಿದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯನ್ನು ಏಪ್ರಿಲ್‌ನಿಂದ ಆರಂಭಿಸುವ ಬಗ್ಗೆ ಚುನಾವಣಾ ಆಯೋಗ(ಇಸಿ) ಮುನ್ಸೂಚನೆ ನೀಡಿದೆ.

ಈ ಕುರಿತು ಮುಖ್ಯ ಚುನಾವಣಾಧಿಕಾರಿಗಳಿಗೆ(ಸಿಇಒಗಳು) ಕಳುಹಿಸಿರುವ ಪತ್ರದಲ್ಲಿ, ಎಸ್‌ಐಆರ್‌ಗೆ ಸಂಬಂಧಿಸಿದ ಪೂರ್ವ ಸಿದ್ಧತಾ ಕಾರ್ಯಗಳನ್ನು ಶೀಘ್ರ ಪೂರ್ಣಗೊಳಿಸಲು ಸೂಚಿಸಲಾಗಿದೆ ಎಂದು ಇಸಿ ಕಾರ್ಯದರ್ಶಿ ಪವನ್ ದಿವಾನ್ ತಿಳಿಸಿದ್ದಾರೆ. ದೇಶವ್ಯಾಪಿ ಎಸ್‌ಐಆರ್ ಕೈಗೊಳ್ಳುವ ಬಗ್ಗೆ ಕಳೆದ ವರ್ಷದ ಜೂ.24ರಂದು ನೀಡಿದ್ದ ಆದೇಶವನ್ನು ಆಯೋಗ ಪತ್ರದಲ್ಲಿ ಸ್ಮರಿಸಿದೆ. 2025ರ ಜೂನ್‌ನಲ್ಲಿ ಪ್ರಕ್ರಿಯೆ ಆರಂಭಗೊಂಡಿದ್ದ ಬಿಹಾರವನ್ನು ಹೊರತುಪಡಿಸಿ, ಉಳಿದ ರಾಜ್ಯಗಳಲ್ಲಿ ಪೂರ್ವ-ಪರಿಷ್ಕರಣೆ ಚಟುವಟಿಕೆಗಳನ್ನು ಕೈಗೊಳ್ಳುವಂತೆ ಈಗಾಗಲೇ ನಿರ್ದೇಶಿಸಲಾಗಿತ್ತು.

ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ ಜನಗಣತಿಯ ಮೊದಲ ಹಂತ ನಡೆಯಲಿದೆ. ಆದರೂ, ಈ ಎರಡು ಪ್ರಕ್ರಿಯೆಗಳ ನಡುವೆ ಘರ್ಷಣೆಯಾಗುವುದಿಲ್ಲ ಎಂದು ಇಸಿ ಅಧಿಕಾರಿಗಳು ಹೇಳಿದ್ದಾರೆ. ಬಿಹಾರ ಬಳಿಕ, ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ ಸೇರಿದಂತೆ 12 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿ ಎಸ್‌ಐಆರ್ ಘೋಷಿಸಲಾಗಿತ್ತು. ಗುಜರಾತ್, ಪುದುಚೇರಿ ಮತ್ತು ಲಕ್ಷದ್ವೀಪದಲ್ಲಿ ಪ್ರಕ್ರಿಯೆ ಪೂರ್ಣಗೊಂಡಿದ್ದು, ಅಸ್ಸಾಂ ಸೇರಿದಂತೆ ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿದೆ. ಇತರ ರಾಜ್ಯಗಳಲ್ಲಿ ಪರಿಷ್ಕರಣೆ ವಿವಿಧ ಹಂತಗಳಲ್ಲಿ ಮುಂದುವರಿದಿದೆ. ಈಗ ಆಂಧ್ರ ಪ್ರದೇಶ, ಕರ್ನಾಟಕ, ಮಹಾರಾಷ್ಟ್ರ, ದಿಲ್ಲಿ ಸೇರಿದಂತೆ ಉಳಿದ ರಾಜ್ಯಗಳಲ್ಲಿ ಪ್ರಕ್ರಿಯೆ ಕೈಗೆತ್ತಿಕೊಳ್ಳಲಾಗುತ್ತಿದೆ. ಪೂರ್ವ ಸಿದ್ಧತಾ ಕಾರ್ಯಗಳಲ್ಲಿ 2002-2004ರ ಚುನಾವಣಾ ಪಟ್ಟಿಗಳೊಂದಿಗೆ ಪ್ರಸ್ತುತ ಮತದಾರರ ಪಟ್ಟಿಯನ್ನು ಮ್ಯಾಪಿಂಗ್ ಮಾಡುವುದೂ ಸೇರಿದೆ. ಈ ಕಾರ್ಯಕ್ಕಾಗಿ ಬೂತ್ ಮಟ್ಟದ ಅಧಿಕಾರಿಗಳಿಗೆ (ಬಿಎಲ್‌ಒಗಳು) ವ್ಯಾಪಕ ತರಬೇತಿ ನೀಡಲಾಗುತ್ತದೆ ಎಂದು ಆಯೋಗ ತಿಳಿಸಿದೆ.

ಯಾವ ರಾಜ್ಯಗಳಲ್ಲಿ ಬಾಕಿ?

ಆಂಧ್ರ ಪ್ರದೇಶ, ಅರುಣಾಚಲ ಪ್ರದೇಶ, ಚಂಡೀಗಡ, ದಾದ್ರಾ, ನಗರ ಹವೇಲಿ, ದಮನ್ ಮತ್ತು ದಿಯು, ಹರ್ಯಾಣ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಜಾರ್ಖಂಡ್, ಕರ್ನಾಟಕ, ಲಡಾಖ್, ಮಹಾರಾಷ್ಟ್ರ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ದಿಲ್ಲಿ, ಒಡಿಶಾ, ಪಂಜಾಬ್, ಸಿಕ್ಕಿಂ, ತ್ರಿಪುರ, ತೆಲಂಗಾಣ ಮತ್ತು ಉತ್ತರಾಖಂಡ.

- ಪೂರ್ವ ಸಿದ್ಧತಾ ಕೆಲಸ ಮುಗಿಸಿಕೊಳ್ಳಲು ಸೂಚನೆ
- ಕರ್ನಾಟಕ ಸೇರಿ ಇನ್ನೂ 22 ರಾಜ್ಯಗಳಲ್ಲಿ ಬಾಕಿ

ಛತ್ರಪತಿ ಶಿವಾಜಿ ಒಂದು ಧರ್ಮಕ್ಕೆ ಸೀಮಿತ ಅಲ್ಲ: ತಂಗಡಗಿ



ಬೆಂಗಳೂರು: ಛತ್ರಪತಿ ಶಿವಾಜಿ ಮಹಾರಾಜರು ಒಂದು ಧರ್ಮಕ್ಕೆ ಮಾತ್ರ ಸೀಮಿತರಲ್ಲ, ಅವರ ಹೆಸರಿನಲ್ಲಿ ರಾಜಕಾರಣ ಮಾಡುತ್ತಿರುವುದು ಸರಿಯಲ್ಲ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ಎಸ್.ತಂಗಡಗಿ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದ ವತಿಯಿಂದ ರವೀಂದ್ರ ಕಲಾಕ್ಷೇತ್ರದಲ್ಲಿ ಗುರುವಾರ ಆಯೋಜಿಸಿದ್ದ, ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿ, ಶಿವಾಜಿ ಮಹಾರಾಜ ಅವರ ಆಡಳಿತ ಅವಧಿಯಲ್ಲಿ ಎಲ್ಲಾ ಧರ್ಮದವರಿಗೂ ಧಾರ್ಮಿಕ ಸ್ವಾತಂತ್ರ್ಯ ಇತ್ತು. ರಾಜರಾಗಿ ಅವರು ಎಲ್ಲಾ ಧರ್ಮಗಳ ಪರ ನಿಂತಿದ್ದರು. ಸರ್ವ - ಧರ್ಮ ಸಹಿಷ್ಣುತೆಗೆ ಶಿವಾಜಿಯ ಆಡಳಿತ ಮಾದರಿಯಾಗಿತ್ತು. ಎಲ್ಲಾ ಸಮುದಾಯದ ಗೌರವಾನ್ವಿತ ವ್ಯಕ್ತಿಗಳಿಗೆ ಅವರು ತಮ್ಮ ಆಡಳಿತ ವ್ಯವಸ್ಥೆಯಲ್ಲಿ ತೊಡಗಿಸಿದ್ದರು. ಇಂದು ಅವರ ಹೆಸರನ್ನು ರಾಜಕೀಯಕ್ಕೆ ಬಳಕೆ ಆಗುತ್ತಿರುವುದು ಸರಿಯಲ್ಲ ಎಂದರು.

ಪ್ರತಿಯೊಬ್ಬರು ಶಿವಾಜಿ ಅವರ ಇತಿಹಾಸವನ್ನು ಸರಿಯಾಗಿ ತಿಳಿದುಕೊಳ್ಳಬೇಕು. ಇಡೀ ದೇಶದಲ್ಲಿ ಶಿವಾಜಿ ಮಹಾರಾಜರು ತನ್ನದೇ ಆದ ಇತಿಹಾಸವನ್ನು ಸೃಷ್ಟಿ ಮಾಡಿದ್ದರು. ಕರ್ನಾಟಕ ಭಾಷೆ ಹಾಗೂ ರಾಜ್ಯದ ಮೇಲೆ ಅಪಾರವಾದ ಪ್ರೇಮವನ್ನಿರಿಸಿಕೊಂಡಿದ್ದರು. ವಿಜಯನಗರ ಸಾಮ್ರಾಜ್ಯ ಪತನವೇಳೆ ಅದರ ಅವಶೇಷಗಳನ್ನು ಕಂಡು, ಔರಂಗಜೇಬನ ವಿರುದ್ಧ ಧಿಕ್ಕಾರ ಕೂಗಿದ್ದರು ಎಂದು ನೆನೆದರು.

ಮೊದಲ ಬಾರಿಗೆ ಮೀಸಲಾತಿ ಪರಿಚಯಿಸಿದ್ದು ಸಾಹು ಮಹಾರಾಜರು. ಇನ್ನು ಇಂತಹ ಸಂದರ್ಭದಲ್ಲಿ ಸಾಹು ಮಹಾರಾಜರನ್ನು ನಾವು ನೆನೆಯುವ ಅಗತ್ಯವಿದೆ. ದೇಶದಲ್ಲಿ ಮೊದಲ ಬಾರಿಗೆ ಮೀಸಲಾತಿಯನ್ನು ಜಾರಿಗೆ ತಂದವರು ಸಾಹು ಮಹಾರಾಜರು. ತುಳಿತಕ್ಕೆ ಒಳಗಾದ ಸಮಾಜವನ್ನು ಮೇಲೆತ್ತಿದ್ದ ಮೊಟ್ಟ ಮೊದಲ ರಾಜ ಸಾಹು ಮಹಾರಾಜರು. ಸಂವಿಧಾನಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ವಿದೇಶಿ ವ್ಯಾಸಂಗ ಮಾಡಲು ನೆರವು ನೀಡಿದ್ದರು. ಹೀಗಾಗಿ ಬಡವರ ಮಕ್ಕಳು ವಿದೇಶಿ ವ್ಯಾಸಂಗಕ್ಕೆ ಮಾಡಲು ನೀಡಲಾಗುತ್ತಿದ್ದ ಮೊತ್ತವನ್ನು 25 ಲಕ್ಷ ರೂ.ದಿಂದ 50 ರೂ. ಲಕ್ಷಕ್ಕೆ ಹೆಚ್ಚಳ ಮಾಡಲಾಗಿದೆ ಎಂದು ತಿಳಿಸಿದರು. ಮರಾಠ ಕಲ್ಯಾಣ ನಿಗಮದ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶ್ ಪಾಗೋಜಿ ಇತರರಿದ್ದರು.

> ಸಾಂಬಾಜಿ ಅವರ ಸಮಾಧಿ ನಾನು ಪ್ರತಿನಿಧಿಸುವ ಕನಕಗಿರಿ ಕ್ಷೇತ್ರದಲ್ಲಿಯೆ ಎಂಬುದನ್ನು ನನ್ನ ಗಮನಕ್ಕೆ ಬಂದಿದೆ. ಖಾಸಗಿ ಸ್ಥಳದಲ್ಲಿ ಸಾಂಬಾಜಿ ಅವರ ಸಮಾಧಿ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಾನೂನು ತೊಡಕನ್ನು ಬಗೆಹರಿಸಿಕೊಂಡು ಸಮಾಧಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುವುದು.
> ■ **ಶಿವರಾಜ್ ಎಸ್.ತಂಗಡಗಿ,** ಕನ್ನಡ ಮತ್ತು ಸಂಸ್ಕೃತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ

ಕಿಡಿ ನುಡಿ

ವಾಸುದೇವರಾವ್ ಕಕ್ಕೇನೇಜಿ

ಹಿಂದುಗಳು ಯಾರ ಮೇಲೂ ಆಕ್ರಮಣ ಮಾಡುವುದಿಲ್ಲ, ಆದರೆ ತಮ್ಮ ಮೇಲೆ ಆಕ್ರಮಣವಾದರೆ ಬಿಡುವುದೂ ಇಲ್ಲ
- ಗೋಪಾಲ ನಾಗರಕಟ್ಟೆ

- ಆಕ್ರಮಣ ಮಾಡುವುದಿಲ್ಲ ಅಂತ ಕುಳಿತರೆ ಕೆಲವರು ಹೇಡಿಗಳು ಅಂತ ಭಾವಿಸುತ್ತಾರೆ, ಆಕ್ರಮಣಕ್ಕೆ ಪ್ರತ್ಯಾಕ್ರಮಣ ಮಾಡಿದರೆ ಕೇಡಿಗಳು ಅಂತ ಅದೇ ಮಂದಿ ಪ್ರಚಾರ ಮಾಡುತ್ತಾರೆ!

ದಿನ ಭವಿಷ್ಯ

ಮೇಷ
ನಿಮ್ಮ ಸುತ್ತ ನಯವಂಚಕರಿದ್ದಾರೆ, ಎಚ್ಚರವಿರಿ. ಅಧಿಕ ಒತ್ತಡದ ಕಾರಣ ಮಾನಸಿಕ ಬಳಲಿಕೆ. ಇದು ದೇಹದ ಮೇಲೂ ಪರಿಣಾಮ ಬೀರಲಿದೆ.

ವೃಷಭ
ಕೆಲಸದ ಮೇಲೆ ಏಕಾಗ್ರತೆ ಮೂಡದು. ಹೊಸ ಸಮಸ್ಯೆಯೇ ತಲೆ ಕೊರೆಯುವುದು. ಕಾದು ನೋಡಿ, ಪರಿಹಾರ ಗೋಚರಿಸಲಿದೆ.

ಮಿಥುನ
ಮುಂಜಾನೆ ಉದ್ವಿಗ್ನ ಮನಸ್ಥಿತಿ. ಅಪರಾಹ್ನದ ವೇಳೆ ಎಲ್ಲವೂ ನಿರಾಳ. ಚಿಂತೆಗೆ ಕಾರಣವಾದ ವಿಷಯ ಇತ್ಯರ್ಥ. ಭಾವನಾತ್ಮಕ ಏರುಪೇರು.

ಕಟಕ
ನಿಮ್ಮ ಕಾರ್ಯಶೈಲಿ ಇತರರಿಗೆ ಮಾದರಿ. ಆದರೂ ವೃತ್ತಿಕ್ಷೇತ್ರದಲ್ಲಿ ಪ್ರತಿಕೂಲ ಪರಿಸ್ಥಿತಿ. ತಪ್ಪಿಗೆ ಅವಕಾಶ ಕೊಡಬೇಡಿ. ಎಚ್ಚರದಿಂದಿರಿ.

ಸಿಂಹ
ವೃತ್ತಿಯಲ್ಲಿ ನಿಮ್ಮ ಕಾರ್ಯಕ್ಕೆ ಶ್ಲಾಘನೆ. ಕಠಿಣ ಕಾರ್ಯವೂ ನಿಮ್ಮಿಂದ ಸುಲಭವಾಗಲಿದೆ. ಮನೆಯಲ್ಲೂ ಹರ್ಷದ ವಾತಾವರಣ.

ಕನ್ಯಾ
ಸ್ಪರ್ಧಾತ್ಮಕ ವಾತಾವರಣದಲ್ಲಿ ಚಡಪಡಿಸುವಿರಿ. ಸವಾಲಿಗೆ ಮುದುಡದಿರಿ. ಸೂಕ್ತ ಸಹಕಾರ, ನೆರವು ನಿಮಗೆ ಸಿಕ್ಕಿಯೇ ಸಿಗುವುದು.

ತುಲಾ
ಅನುಚಿತ ಮಾತಿನಿಂದ ಬಿಕ್ಕಟ್ಟಿಗೆ ಸಿಲುಕುವಿರಿ. ನಿಯಂತ್ರಣ ಇರಲಿ. ವೃತ್ತಿಯಲ್ಲಿ ಪ್ರತಿಕೂಲ ಪರಿಸ್ಥಿತಿ. ಒತ್ತಡ, ಹೊಣೆ ಅಧಿಕ.

ವೃಶ್ಚಿಕ
ನಿಮ್ಮ ಕಾರ್ಯಶೈಲಿ ಬದಲಿಸಬೇಕು. ಇಲ್ಲವಾದರೆ ಪ್ರಗತಿ ಕುಂಠಿತ. ಆತ್ಮೀಯರೆ ನಿಮ್ಮ ವಿರುದ್ಧ ತಿರುಗಿ ಬಿದ್ದಾರು. ದೃಢ ಮನಸ್ಕರಾಗಿರಿ.

ಧನು
ಎಂದಿನಂತಿಲ್ಲ ಇಂದು. ಕೆಲಸದಲ್ಲಿ ಮನಸ್ಸು ನಿಲ್ಲದು. ಏನೇನೋ ಚಿಂತೆಗಳು. ಮೋಸ ಮಾಡುವ ವ್ಯಕ್ತಿಗಳ ಬಗ್ಗೆ ಎಚ್ಚರವಿರಲಿ.

ಮಕರ
ಹೊಸ ವ್ಯವಹಾರಕ್ಕೆ ಕೈಹಾಕಲು ಯೋಜಿಸಿದ್ದರೆ ಇನ್ನೊಮ್ಮೆ ಯೋಚಿಸಿ. ಅಡ್ಡಿ ನಿವಾರಿಸಿಕೊಳ್ಳಿ. ಆತ್ಮೀಯರೇ ವಿರೋಧ ಸೂಚಿಸಬಹುದು.

ಕುಂಭ
ಆರೋಗ್ಯ ಸಮಸ್ಯೆ, ಮನಸ್ಸಿಗೆ ಉದಾಸ ಭಾವ. ಆಹಾರದಲ್ಲಿ ಎಚ್ಚರ ವಹಿಸಿ. ಅಜೀರ್ಣ ಸಮಸ್ಯೆ ಬಾಧಿಸಬಹುದು. ವೃತ್ತಿಯಲ್ಲಿ ಒತ್ತಡ ಹೆಚ್ಚು.

ಮೀನ
ಸಂವಹನ ಕೊರತೆ, ಬಾಂಧವ್ಯದಲ್ಲಿ ಬಿಕ್ಕಟ್ಟು. ಕಾರ್ಯ ವಿಳಂಬ. ತಪ್ಪಿನಿಂದ ಪಾಠ ಕಲಿಯಿರಿ, ಅದನ್ನೆ ಪುನರಾವರ್ತನೆ ಮಾಡಬೇಡಿ.

ರಾಹುಕಾಲ: 10.30-12.00
ಗುಳಿಕಕಾಲ: 7.30-9.00

ಅದೃಷ್ಟ ಸಂಖ್ಯೆ : 0,7,4,2

ಭರವಸೆ ಬಳಿಕ ಬೆಳ್ಳಹಳ್ಳಿ ಗ್ರಾಮಸ್ಥರಿಂದ ಪ್ರತಿಭಟನೆ ವಾಪಸ್

₹90 ಕೋಟಿ ಅನುದಾನ



ಬೆಂಗಳೂರು: ಸರ್ಕಾರ ಬಾಕಿ ಮಾಡಿದ್ದ ಗ್ರಾಮಾಭಿವೃದ್ಧಿ ನಿಧಿ 90 ಕೋಟಿ ರೂ.ಅನುದಾನ ಬಿಡುಗಡೆ ಮಾಡುವುದಾಗಿ ಅಧಿಕಾರಿಗಳು ಭರವಸೆ ನೀಡಿದ ಹಿನ್ನೆಲೆಯಲ್ಲಿ ಕಸದ ಲಾರಿಗಳನ್ನು ತಡೆದು ಪ್ರತಿಭಟನೆ ನಡೆಸುತ್ತಿದ್ದ ಬೆಳ್ಳಹಳ್ಳಿ ಗ್ರಾಮಸ್ಥರು, ಪ್ರತಿಭಟನೆಯನ್ನು ವಾಪಸ್ ಪಡೆದಿದ್ದಾರೆ.

ಕಳೆದ ಎರಡು ವರ್ಷಗಳಿಂದ ಬೆಳ್ಳಹಳ್ಳಿ ಗ್ರಾಮದ ಅಭಿವೃದ್ಧಿ ಹಣ ಸರ್ಕಾರ ಬಿಡುಗಡೆ ಮಾಡಿಲ್ಲ ಎಂದು ಗ್ರಾಮಸ್ಥರು ಎರಡು ದಿನಗಳಿಂದ ಪಟ್ಟುಹಿಡಿದಿದ್ದರು. ರಾಜಧಾನಿಯಿಂದ ತಂದ ಕಸಗಳನ್ನು ವಿಲೇವಾರಿ ಮಾಡದಂತೆ ಕಸದ ಲಾರಿಗಳನ್ನು ತಡೆಗಟ್ಟಿ ಪ್ರತಿಭಟಿಸಿದ್ದರು. ಇದರಿಂದ ಕಸ ವಿಲೇವಾರಿ ಸಮಸ್ಯೆ ಎದುರಾಗಿತ್ತು. ನಗರದ ವಿವಿಧೆಡೆ ಗುರುವಾರ, ಶುಕ್ರವಾರ ಕಸದ ರಾಶಿಗಳು ಕಂಡುಬಂದಿದೆ. ಗಾಡಿಗಳಲ್ಲಿ ಕಸ ತುಂಬಿಕೊಂಡು ವಿಲೇವಾರಿ ಮಾಡಲು ದಿಕ್ಕಿಲ್ಲದೆ ಸ್ಥಗಿತವಾಗಿತ್ತು.

ಸಂಧಾನ ಯಶಸ್ವಿ: ನಗರದ ಕಸದ ಲಾರಿ ತಡೆದು ಪ್ರತಿಭಟನೆ ನಡೆಸಿದ ಬೆಳ್ಳಹಳ್ಳಿ ಗ್ರಾಮಸ್ಥರು ಅನುದಾನ ಬಿಡುಗಡೆ ಮಾಡುವವರೆಗೆ ಯಾವುದೇ ಕಾರಣಕ್ಕೂ ಕಸ ವಿಲೇವಾರಿಗೆ ಅನುಮತಿ ನೀಡುವುದಿಲ್ಲ ಎಂದು ಪಟ್ಟು ಹಿಡಿದಿದ್ದರು. ಹದಗೆಟ್ಟ ಪರಿಸ್ಥಿತಿ ಅವಲೋಕಿಸಿ ಸರ್ಕಾರ ಬುಧವಾರ ರಾತ್ರಿ ಘನತ್ಯಾಜ್ಯ ಘಟಕದ ಅಧಿಕಾರಿಗಳನ್ನು ಸಂಧಾನಕ್ಕೆ ಕಳುಹಿಸಿದ್ದರು. ಅಧಿಕಾರಿಗಳು ಸ್ಥಳೀಯ ಜನಪ್ರತಿನಿಧಿ ಹಾಗೂ ಗ್ರಾಮಸ್ಥರ ಜತೆ ಸಭೆ ನಡೆಸಿ 90 ಕೋಟಿ ರೂ. ಅನುದಾನ ಬಿಡುಗಡೆ ಮಾಡುವುದಾಗಿ ಭರವಸೆ ನೀಡಿದ್ದಾರೆ. ಹಾಗಾಗಿ ಭರವಸೆ ನೀಡಿದ ಬಳಿಕ ಗ್ರಾಮಸ್ಥರು ಪ್ರತಿಭಟನೆ ವಾಪಸ್ ಪಡೆದರು.

ಜಿಬಿಎ ಅಧಿಕಾರಿಗಳು ಶಾಸಕಿ ಮಂಜುಳಾ ಲಿಂಬಾವಳಿ ಹಾಗೂ ಸ್ಥಳೀಯರೊಂದಿಗೆ ಮಾತುಕತೆ ನಡೆಸಿ ಸಂಧಾನವಾಗಿದ್ದು, ಕಸ ವಿಲೇವಾರಿ ಘಟಕ ಪುನಃ ಆರಂಭಗೊಂಡಿದೆ. ಮಿಟ್ಟಗಾನಹಳ್ಳಿ ತ್ಯಾಜ್ಯ ಸಂಸ್ಕರಣೆ ಘಟಕ ಬಳಿ ಸ್ಥಳೀಯರು ಕಸ ವಿಲೇವಾರಿಗೆ ಅಡ್ಡಿಪಡಿಸಿದ್ದರಿಂದ 70ಕ್ಕೂ ಹೆಚ್ಚು ಕಸದ (ಲಾರಿ) ಕಂಪೆಕ್ಟರ್‌ಗಳು ನಿಂತಲ್ಲೇ ನಿಂತಿದ್ದರಿಂದ ಕಸದ ರಾಶಿ ಬಿದ್ದು ದುರ್ನಾತ ಬೀರುತ್ತಿತ್ತು. ಗುರುವಾರದಂದು ಬೆಳಗ್ಗೆಯಿಂದ 450ಕ್ಕೂ ಹೆಚ್ಚು ಲಾರಿಗಳು ತ್ಯಾಜ್ಯವನ್ನು ವಿಲೇವಾರಿ ಮಾಡಿವೆ. ಪ್ರತಿದಿನ 300 ಲಾರಿಗಳು ಮಾತ್ರ ಕಸ ವಿಲೇವಾರಿ ಮಾಡುತ್ತಿದ್ದವು. ಈಗ ಕಸ ಸಂಗ್ರಹಣೆ ಹೆಚ್ಚಾಗಿರುವುದರಿಂದ ಹೆಚ್ಚುವರಿಯಾಗಿ 150ಕ್ಕೂ ಹೆಚ್ಚು ಲಾರಿ ಕಸ ವಿಲೇವಾರಿ ಮಾಡಿವೆ. 2 ದಿನಗಳೊಳಗಾಗಿ ನಗರದಲ್ಲಿ ಸಂಗ್ರಹಣೆಗೊಂಡಿದ್ದ ಕಸವನ್ನು ವಿಲೇವಾರಿ ಮಾಡಲು ಹೆಚ್ಚುವರಿ ಕೆಲಸದಲ್ಲಿ ನಿರತರಾಗಿವೆ.

ನಾವು ಅಭಿವೃದ್ಧಿಗೆ ಹಣ ಕೊಟ್ಟಿದ್ದೇವೆ: ಡಿಕೆಶಿ

ನಾವು ಅಭಿವೃದ್ಧಿಗೆ ಹಣ ಕೊಟ್ಟಿದ್ದೇವೆ. ಸಾವಿರಾರು ಕೋಟಿಯನ್ನು ಎಷ್ಟು ಎಂದು ಕೊಡಲು ಆಗುತ್ತದೆ. 20, 30 ಕೋಟಿ ಸೇರಿದಂತೆ 50-100 ಕೋಟಿ ಹಣವನ್ನು ಅಭಿವೃದ್ಧಿಗೆ ಕೊಡುತ್ತಾ ಬಂದಿದ್ದೇವೆ. ನಾವು ಕೊಡುತ್ತೇವೆ. ಅವರು ಅರ್ಥ ಮಾಡಿಕೊಳ್ಳಬೇಕು. ಮಹದೇವಪುರದಲ್ಲಿ ಕಸ ವಿಲೇವಾರಿ ನಿಲ್ಲಿಸಲಾಗಿದೆ. ನಾವು ಸಹ ಅಲ್ಲಿನ ಕಸ ಮೂರು ದಿನ ತೆಗೆಯಬೇಡಿ ಎಂದರೆ ಏನಾಗಬಹುದು. ಕಸ ವಿಲೇವಾರಿಗೆ ನಾಲ್ಕು ಕಡೆ ಜಮೀನುಗಳನ್ನು ನೋಡಿದ್ದೆವು. ಭೂಮಿ ಸಮಸ್ಯೆ ಬಂದ ಕಾರಣಕ್ಕೆ ಎರಡು ಕಡೆ ಅಂತಿಮ ಮಾಡಿದ್ದೇವೆ. ಟೆಂಡರ್ ಕೂಡ ಕರೆಯಲಾಗಿದೆ. ನಮ್ಮ ಕೆಲಸವನ್ನು ನಾವು ಮಾಡುತ್ತಿದ್ದೇವೆ ಎಂದರು.

ಗ್ರಾಮಗಳ ಅಭಿವೃದ್ಧಿ ಕಾರ್ಯ ನಡೆಯುತ್ತಿದೆ: ಮಹೇಶ್ವರ ರಾವ್

ಸ್ಥಳೀಯ ಶಾಸಕರೊಂದಿಗೆ ಮಾತುಕತೆ ನಡೆಸುತ್ತಿದ್ದೇವೆ. ಅವರನ್ನು ಮನವೊಲಿಸುವ ಕಾರ್ಯ ನಡೆಯುತ್ತಿದೆ. ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸಲಾಗುತ್ತದೆ. ಗ್ರಾಮಗಳ ಅಭಿವೃದ್ಧಿ ಕಾರ್ಯ ನಡೆಯುತ್ತಿದೆ. ಇನ್ನೂ ಹೆಚ್ಚಿನ ಕೆಲಸ ಆಗಬೇಕೆಂಬ ಬೇಡಿಕೆ ಇದೆ. ಅದನ್ನು ಪರಿಶೀಲಿಸಲಾಗುತ್ತಿದೆ. ನಗರದಲ್ಲಿ ಎಲ್ಲ ಜನರೂ ತ್ಯಾಜ್ಯವನ್ನು ವಿಂಗಡಿಸಿ ಕೊಟ್ಟರೆ ಭೂಭರ್ತಿಗೆ ಹೋಗುವ ಪ್ರಮಾಣ ಬಹುತೇಕ ನಿಲ್ಲುತ್ತದೆ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ ರಾವ್ ತಿಳಿಸಿದ್ದಾರೆ.

ಸಾರಿಗೆ ಮುಷ್ಕರ ತಾತ್ಕಾಲಿಕ ವಾಪಸ್



ಪುಟ ೧➔ ಬಳಿಕ ಮಾತನಾಡಿದ ಅವರು, ಸರ್ಕಾರವು 38 ತಿಂಗಳ ಬಾಕಿ ಪೈಕಿ 26 ತಿಂಗಳ ಹಿಂಬಾಕಿ(ಸುಮಾರು 1,271 ಕೋಟಿ ರೂ.) ನೀಡಲು ಒಪ್ಪಿಕೊಂಡಿದೆ ಹಾಗೂ ವೇತನ ಪರಿಷ್ಕರಣೆಗೂ ಸಕಾರಾತ್ಮಕವಾಗಿ ಸ್ಪಂದಿಸಿದೆ, ಹೀಗಾಗಿ ನೌಕರರು ಪ್ರತಿಭಟನೆಯನ್ನು ವಾಪಸ್ ಪಡೆಯಬೇಕೆಂದು ಮನವಿ ಮಾಡಿದರು.

ಸಾರಿಗೆ ನೌಕರರ ಆಕ್ಷೇಪ: ನಮಗೆ ಪೂರ್ಣ 38 ತಿಂಗಳ ಬಾಕಿ ಸಿಗುವವರೆಗೂ ಹೋರಾಟ ನಿಲ್ಲಿಸಬಾರದು ಎಂದು ನೌಕರರು ಘೋಷಣೆ ಕೂಗಿದರು. ಆಗ ಸ್ಥಳದಲ್ಲಿ ಸ್ವಲ್ಪ ಮಟ್ಟಿನ ಬಿಗುವಿನ ವಾತಾವರಣ ನಿರ್ಮಾಣವಾಯಿತು. ನೌಕರರ ಸಂಘದ ಮುಖಂಡರು ಮತ್ತು ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆಯಿತು. ಬಳಿಕ ಪೊಲೀಸರು ಮಧ್ಯಪ್ರವೇಶಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿದರು. ಅಂತಿಮವಾಗಿ ವಿದ್ಯಾರ್ಥಿಗಳ ಪರೀಕ್ಷೆಯನ್ನು ಗಮನದಲ್ಲಿಟ್ಟುಕೊಂಡು, ಮಾ.2ರೊಳಗೆ ಬೇಡಿಕೆ ಈಡೇರದಿದ್ದರೆ ಉಪವಾಸ ಸತ್ಯಾಗ್ರಹ ನಡೆಸುವುದಾಗಿ ಎಚ್ಚರಿಕೆ ನೀಡಿ ಪ್ರತಿಭಟನೆ ಕೊನೆಗೊಳಿಸಲಾಯಿತು.

ಎಂದಿನಂತೆ ಬಸ್ ಸಂಚಾರ: ಗುರುವಾರ ದಿನವಿಡಿ ಎಲ್ಲಿಯೂ ಬಸ್ ಸೇವೆ ಇಲ್ಲದೇ ಪ್ರಯಾಣಿಕರಿಗೆ ಯಾವುದೇ ತೊಂದರೆ ಆಗಲಿಲ್ಲ, ಆದರೆ ಕೆಲವೆಡೆ ಪ್ರಯಾಣಿಕರ ಸಂಖ್ಯೆ ತೀವ್ರವಾಗಿ ಕಡಿಮೆಯಾಗಿರುವುದು ಕಂಡುಬಂದಿತ್ತು.

ಬೇಡಿಕೆಗಳ ಈಡೇರಿಕೆಗೆ ಮಾ.2ರವರೆಗೆ ಗಡುವು: ಪ್ರತಿಭಟನೆಯ ಸ್ಥಳದಲ್ಲಿಯೇ ಸಂಜೆ ಜಂಟಿ ಕ್ರಿಯಾ ಸಮಿತಿಯ ಪದಾಧಿಕಾರಿಗಳೆಲ್ಲರೂ ಒಟ್ಟಾಗಿ ಸಭೆ ನಡೆಸಿ ಮಾ.2ರವರೆಗೆ ಅಂತಿಮ ಗಡುವು ನೀಡಲು ತೀರ್ಮಾನ ಕೈಗೊಂಡರು. ಬಳಿಕ ಮಾತನಾಡಿದ ಜಂಟಿ ಕ್ರಿಯಾ ಸಮಿತಿ ಸಂಚಾಲಕ ಬಿ.ಜಯದೇವರಾಜೇ ಅರಸು, ತಾತ್ಕಾಲಿಕವಾಗಿ ನಮ್ಮ ಮುಷ್ಕರವನ್ನು ವಾಪಸ್ ಪಡೆಯುವ ನಿರ್ಧಾರವನ್ನು ಮಾಡಿದ್ದೇವೆ. ಸರ್ಕಾರದ ನಿರ್ಧಾರಗಳು ನಮಗೆ ಸಂಪೂರ್ಣವಾಗಿ ಸಮ್ಮತವಿಲ್ಲದಿದ್ದರೂ ಸಹ, ಮಾತುಕತೆಗೆ ಮತ್ತೊಂದು ಅವಕಾಶ ನೀಡುವ ಉದ್ದೇಶದಿಂದ ಈ ತೀರ್ಮಾನಕ್ಕೆ ಬರಲಾಗಿದೆ. ಆದರೆ, ನಮ್ಮ ಹೋರಾಟ ಇಲ್ಲಿಗೆ ನಿಂತಿಲ್ಲ, ಇದರ ಮುಂದುವರಿದ ಭಾಗವಾಗಿ ಮಾ.2ರಿಂದ ಉಪವಾಸ ಸತ್ಯಾಗ್ರಹವನ್ನು ನಡೆಸಲಾಗುವುದು ಎಂದರು.

> ಸಾರಿಗೆ ನೌಕರರ ಬೇಡಿಕೆಗಿಂತ ಕಡಿಮೆ ಹಿಂಬಾಕಿ ನೀಡಲು ಸರ್ಕಾರ ಒಪ್ಪಿಕೊಂಡಿದ್ದು, ಸದ್ಯ ಅಷ್ಟು ಕೊಟ್ಟಿರುವುದಕ್ಕೆ ಸಂತೋಷ ಪಡಬೇಕು. ಸರ್ಕಾರದ ಪರಿಸ್ಥಿತಿಯನ್ನು ಅವರು ಅರ್ಥ ಮಾಡಿಕೊಳ್ಳಬೇಕು.
> ■ **ಡಿ.ಕೆ.ಶಿವಕುಮಾರ್,** ಡಿಸಿಎಂ

> ಸರ್ಕಾರದಿಂದ ಏನು ಸಾಧ್ಯವೋ ಆ ಪ್ರಯತ್ನವನ್ನು ಮಾಡಲಾಗಿದೆ. ವೇತನ ಪರಿಷ್ಕರಣೆ 2025 ಏ.1ರಿಂದ ಜಾರಿಗೆ ಬರುವಂತೆ ನೀಡಬೇಕೆಂದು ಹೇಳಿದ್ದೇವೆ, ಅದರಲ್ಲಿ ಎಷ್ಟು ಮೊತ್ತವನ್ನು ನೀಡಬೇಕೆನ್ನುವುದರ ಬಗ್ಗೆ ಸಂಘಟನೆಯೊಂದಿಗೆ ಮಾತನಾಡಿ ತೀರ್ಮಾನ ಮಾಡಲಾಗುವುದು ಎನ್ನುವ ಆಯ್ಕೆಯನ್ನು ನೀಡಿದ್ದೇವೆ.
> ■ **ರಾಮಲಿಂಗಾ ರೆಡ್ಡಿ,** ಸಾರಿಗೆ ಸಚಿವ

ಸೌರ ಬಳಕೆ, ನೈಋತ್ಯ ರೈಲ್ವೆ ಮುಂದು

ಪುಟ ೧➔ ನೈಋತ್ಯ ರೈಲ್ವೆ ಸಂಬಂಧಿಸಿದ ರೈಲ್ವೆ ನಿಲ್ದಾಣ, ಸೇವಾ, ಆಡಳಿತ ಕಟ್ಟಡ, ಕಾರ್ಯಾಗಾರ, ಲೆವೆಲ್ ಕ್ರಾಸಿಂಗ್ ಗೇಟ್ ಮತ್ತು ನೀರು ಪಂಪಿಂಗ್ ವ್ಯವಸ್ಥೆಗಳಲ್ಲಿ ಸೌರ ವಿದ್ಯುತ್ ವ್ಯವಸ್ಥೆ ಹೊಂದಿದೆ.

148 ನಿಲ್ದಾಣಗಳ ಛಾವಣಿಯಲ್ಲಿ ಸೌರ ಸ್ಥಾವರ: ಕೆಎಸ್‌ಆರ್ ಬೆಂಗಳೂರು, ಹುಬ್ಬಳ್ಳಿ, ಮೈಸೂರು, ಧಾರವಾಡ, ಬೆಳಗಾವಿ, ಹೊಸಪೇಟೆ, ಗದಗ ಮತ್ತು ಬಳ್ಳಾರಿ ಸೇರಿದಂತೆ 148 ರೈಲು ನಿಲ್ದಾಣಗಳಲ್ಲಿ ಮೇಲ್ಛಾವಣಿಯ ಸೌರ ಸ್ಥಾವರಗಳನ್ನು ನಿಯೋಜಿಸಲಾಗಿದೆ. ಇದರ ಜತೆಗೆ ರೈಲ್ ಸೌಧ, ವಿಭಾಗೀಯ ಕಚೇರಿ, ರೈಲ್ವೆ ಆಸ್ಪತ್ರೆ ಮತ್ತು ತರಬೇತಿ ಸಂಸ್ಥೆಗಳಂತಹ 38 ಸೇವಾ ಕಟ್ಟಡಗಳಲ್ಲಿ ಸೌರಶಕ್ತಿ ಹೊಂದಿವೆ.

ಪ್ರಸ್ತುತ ರೈಲ್ವೆ ನಿಲ್ದಾಣಗಳಲ್ಲಿ ಹೊಂದಿದ ಸೌರಶಕ್ತಿ ಸಾಮರ್ಥ್ಯವು 2,351.13 ಕೆಡಬ್ಲ್ಯುಪಿ, ಸೇವಾ ಕಟ್ಟಡಗಳಲ್ಲಿ 4,877.25 ಕೆಡಬ್ಲ್ಯುಪಿ, ಲೆವೆಲ್ ಕ್ರಾಸಿಂಗ್ ಗೇಟ್‌ಗಳಲ್ಲಿ 138.24 ಕೆಡಬ್ಲ್ಯುಪಿ ಮತ್ತು ಸೌರ ಪಂಪ್‌ಗಳ ಮೂಲಕ 125 ಕೆಡಬ್ಲ್ಯುಪಿ ಸಾಮರ್ಥ್ಯವನ್ನು ಹೊಂದಿದೆ.

ಇದರ ಜತೆಗೆ ಒಟ್ಟು 13,187.65 ಕೆಡಬ್ಲ್ಯುಪಿ ಸಾಮರ್ಥ್ಯವಿರುವ ಮೇಲ್ಛಾವಣಿಯ ಸೌರಶಕ್ತಿ ಯೋಜನೆಗಳು ಪ್ರಸ್ತುತ ಕಾರ್ಯಗತಗೊಳ್ಳುತ್ತಿವೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದರು.

ವಾರ್ಷಿಕವಾಗಿ 105 ಕೋಟಿ ರೂ. ಉಳಿತಾಯ ನಿರೀಕ್ಷೆ: ನೈಋತ್ಯ ರೈಲ್ವೆಯು 500 ಮೆಗಾ ವ್ಯಾಟ್ ಸೌರ ವಿದ್ಯುತ್ ಸ್ಥಾವರದಿಂದ 25 ವರ್ಷಗಳ ಅವಧಿಗೆ ದೀರ್ಘಾವಧಿಯ ಸೌರ ವಿದ್ಯುತ್ ಖರೀದಿ ವ್ಯವಸ್ಥೆಗಳನ್ನು ಐರ್‌ಕಾನ್ ನವೀಕರಿಸಬಹುದಾದ ವಿದ್ಯುತ್ ಲಿಮಿಟೆಡ್‌ನಿಂದ ಪಡೆದುಕೊಂಡಿದೆ. ಮೊದಲಿಗೆ 50 ಮೆಗಾ ವ್ಯಾಟ್‌ನ ಆರಂಭಿಕ ಕಾರ್ಯಾರಂಭವಾಗಿದೆ. ಪ್ರತಿ ಕೆಡಬ್ಲ್ಯುಎಚ್‌ಗೆ 1.93 ರೂ. ದರದಲ್ಲಿ ಸಂಪೂರ್ಣ 500 ಮೆಗಾ ವ್ಯಾಟ್ ಸಾಮರ್ಥ್ಯದ ಕಾರ್ಯಾರಂಭ ಪೂರ್ಣಗೊಂಡ ನಂತರ, ಯೋಜನೆಯ ಕಾರ್ಯಾರಂಭದಿಂದ 25 ವರ್ಷಗಳವರೆಗೆ ಸೌರಶಕ್ತಿಯನ್ನು ಪ್ರತಿ ಕೆಡಬ್ಲ್ಯುಎಚ್‌ಗೆ 2.57 ರೂ.ದರದಲ್ಲಿ ಖರೀದಿಸಲಾಗುತ್ತದೆ.

ಈ ಯೋಜನೆ ವಾರ್ಷಿಕ ಸುಮಾರು 105 ಕೋಟಿ ರೂ. ಉಳಿತಾಯ ಮಾಡುವ ನಿರೀಕ್ಷೆಯಿದೆ, ಯೋಜನೆಯು ಪ್ರಸ್ತುತ ಅನುಷ್ಠಾನದ ಅಂತಿಮ ಹಂತದಲ್ಲಿದೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದರು.

ಗುತ್ತಿಗೆ, ಹೊರಗುತ್ತಿಗೆ ಕಾರ್ಮಿಕ ಪದ್ಧತಿ ರದ್ದು

ಪುಟ ೧➔ ಮ್ಯಾನುಯಲ್ ಸ್ಕ್ಯಾವೆಂಜರ್ಸ್‌ಗಳನ್ನು ಸಮಗ್ರ ಸಮೀಕ್ಷೆ ನಡೆಸಿ, ಅವರಿಗೆ ಸಮಗ್ರ ಪುನರ್ವಸತಿ ಯೋಜನೆಯನ್ನು ರೂಪಿಸಬೇಕು. ಈ ಯೋಜನೆ ಪರ್ಯಾಯ ಉದ್ಯೋಗ, ಶಿಕ್ಷಣ, ಗೌರವಯುತ ವಸತಿ, ಜೀವನೋಪಾಯ ಮತ್ತು ಕೌಶಲ ತರಬೇತಿ, ಸಾಮಾಜಿಕ ಭದ್ರತೆ ಹಾಗೂ ಕುಟುಂಬಗಳ ನಿರಂತರ ನೆರವನ್ನು ಒಳಗೊಂಡಿರಬೇಕು ಎಂದು ಶಿಫಾರಸು ಮಾಡಿದೆ. ಅಲ್ಲದೇ, ಎಲ್ಲಾ ಸ್ಥಳೀಯ ಸಂಸ್ಥೆಗಳು ಅಗತ್ಯ ಪ್ರಮಾಣದಲ್ಲಿ ಜೆಟ್ಟಿಂಗ್ ಯಂತ್ರಗಳನ್ನು ಖರೀದಿಸುವಂತೆ ಹಾಗೂ ಯಾವುದೇ ಸಂದರ್ಭದಲ್ಲಿಯೂ ಕೈಯಾರೆ ಮಲಮೂತ್ರ ಸ್ವಚ್ಛತೆ ನಡೆಯದಂತೆ ಖಾತರಿಪಡಿಸಬೇಕು ಎಂದು ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಸ್ಲಂಗಳ ಮೂಲ ಸೌಕರ್ಯಕ್ಕೆ ₹1 ಸಾವಿರ ಕೋಟಿ ನೀಡಿ

ಎಲ್ಲಾ ಸ್ಲಂಗಳಲ್ಲಿ ಶುದ್ಧ ಕುಡಿಯುವ ನೀರು, ಶೌಚಾಲಯ ಮತ್ತು ಸ್ವಚ್ಛತಾ ಸೌಲಭ್ಯಗಳು, ಒಳಚರಂಡಿ ವ್ಯವಸ್ಥೆ, ಪಕ್ಕಾ ರಸ್ತೆ ಮತ್ತು ಇತರ ಮೂಲಭೂತ ಸೌಲಭ್ಯಗಳನ್ನು ಸಮಗ್ರವಾಗಿ ಒದಗಿಸುವ ಉದ್ದೇಶದಿಂದ 1000 ಕೋಟಿ ರೂ. ಮೊತ್ತದ ಏಕಕಾಲಿಕ ವಿಶೇಷ ಅನುದಾನವನ್ನು ಮಂಜೂರು ಮಾಡಬೇಕು. ಅಲ್ಲದೇ, ಭೂ ರಹಿತ ಸ್ಲಂ ನಿವಾಸಿಗಳ ವಸತಿ, ಪುನರ್ವಸತಿ ಹಾಗೂ ದೀರ್ಘಾವಧಿ ಭದ್ರತೆಯನ್ನು ಖಚಿತಪಡಿಸುವ ಉದ್ದೇಶದಿಂದ ಭೂಮಿಯನ್ನು ಮೀಸಲಿಟ್ಟು ಹಂಚಿಕೆ ಮಾಡಲು ಸ್ಲಂ ಭೂಮಿ ಬ್ಯಾಂಕ್ ಯೋಜನೆಯನ್ನು ಸ್ಥಾಪಿಸಬೇಕು ಎಂದು ವರದಿಯಲ್ಲಿ ಹೇಳಿದ್ದಾರೆ. ಅತ್ಯಾಚಾರಗಳನ್ನು ತಡೆಗಟ್ಟುವ ಉದ್ದೇಶದಿಂದ, ಅಗತ್ಯ ಮೂಲಸೌಕರ್ಯ, ಸಿಬ್ಬಂದಿ ಹಾಗೂ ಲಾಜಿಸ್ಟಿಕ್ ಬೆಂಬಲವನ್ನು ಒದಗಿಸಿ ವಿಶೇಷ ಪೊಲೀಸ್ ಠಾಣೆಗಳನ್ನು ಬಲಪಡಿಸಬೇಕು ಎಂದು ವರದಿಯಲ್ಲಿ ಶಿಫಾರಸು ಮಾಡಿದ್ದಾರೆ.

ಬಿ.ಎಸ್. ಯಡಿಯೂರಪ್ಪ ಸುವರ್ಣ ಸಂಭ್ರಮ

ಪುಟ ೧➔ **ಆರ್‌ಎಸ್‌ಎಸ್‌ನ ಮಾರ್ಗದರ್ಶನ:** ತಮ್ಮ ರಾಜಕೀಯ ಬದುಕಿನ ನೆನಪುಗಳನ್ನು ಮೆಲುಕು ಹಾಕಿದ ಅವರು, 1974ರಲ್ಲಿ ಶಿವಮೊಗ್ಗದಿಂದ ಬೆಂಗಳೂರಿಗೆ ಪಾದಯಾತ್ರೆ ಹಮ್ಮಿಕೊಂಡಿದ್ದು, 1980ರಲ್ಲಿ ಜೀತಮುಕ್ತ ಸಮಾಜಕ್ಕಾಗಿ ಒಂದು ತಿಂಗಳು ಧರಣಿ ನಡೆಸಿದ್ದು ಹಾಗೂ ಶಿಕಾರಿಪುರದಾದ್ಯಂತ 1987ರಲ್ಲಿ ಸೈಕಲ್ ಜಾಥಾ ಮಾಡಿದ್ದನ್ನು ಸ್ಮರಿಸಿದರು.

ಬಗರ್‌ಹುಕುಂಗಾಗಿ ಶಿಕಾರಿಪುರದಿಂದ ಬೆಂಗಳೂರಿಗೆ ಪಾದಯಾತ್ರೆ, ಕರ್ನಾಟಕ ಪರಿವರ್ತನಾ ಯಾತ್ರೆ, ಇತ್ಯಾದಿ ತಮ್ಮ ಹೋರಾಟದ ಬದುಕನ್ನು ನೆನಪಿಸಿಕೊಂಡರು. ಶಿಕಾರಿಪುರ ಪುರಸಭೆ ಸದಸ್ಯನಾಗಿ ಈ ಹಂತದವರೆಗೆ ಬಂದಿದ್ದೇನೆ. ಇವೆಲ್ಲದಕ್ಕೂ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ದ ಮಾರ್ಗದರ್ಶನ ಮಹತ್ವದ್ದಾಗಿದೆ. ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೇರಲು ಅನಂತಕುಮಾರ್ ಅವರ ಸಹಕಾರವನ್ನೂ ಯಡಿಯೂರಪ್ಪ ನೆನೆದರು.

ಇದೇವೇಳೆ ಯಡಿಯೂರಪ್ಪ ಅವರು ನಡೆದುಬಂದ ದಾರಿಯ ಕುರಿತ ವಿಡಿಯೋ ಪ್ರದರ್ಶಿಸಲಾಯಿತು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಕೇಂದ್ರ ಸಚಿವರಾದ ಗಜೇಂದ್ರ ಸಿಂಗ್ ಶೇಖಾವತ್, ಪ್ರಲ್ಹಾದ್ ಜೋಶಿ, ಶೋಭಾ ಕರಂದ್ಲಾಜೆ, ವಿ. ಸೋಮಣ್ಣ, ಪ್ರತಿಪಕ್ಷದ ನಾಯಕರಾದ ಆರ್. ಅಶೋಕ, ಛಲವಾದಿ ನಾರಾಯಣಸ್ವಾಮಿ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮತ್ತು ಕರ್ನಾಟಕ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗ್ರವಾಲ್, ರಾಜ್ಯ ಸಹ ಉಸ್ತುವಾರಿ ಪಿ.ಸುಧಾಕರ್ ರೆಡ್ಡಿ ಮುಂತಾದವರಿದ್ದರು.

ಎಐ ನಮ್ಮ ಕೈಯಲ್ಲಿರಲಿ

ಪುಟ ೧➔ ಆದರೆ ಯಾವ ದಿಕ್ಕಿಗೆ ತೆರಳಬೇಕೆಂಬ ಅಂತಿಮ ನಿರ್ಧಾರ ಕೈಗೊಳ್ಳಬೇಕಾದ್ದು ನೌಕೆಯ ಬಳಕೆದಾರ. ಇದೇ ರೀತಿ ಎಐಯನ್ನು ಮಾನವ ಸಮುದಾಯ ಯಾವ ರೀತಿ ಬಳಸುತ್ತೆ ಎಂಬುದರ ಮೇಲೆ ನಮ್ಮ ಭವಿಷ್ಯ ನಿರ್ಧಾರವಾಗುವುದು ಎಂದು ಪ್ರಧಾನಿ ಮೋದಿ ಎಚ್ಚರಿಸಿದರು.

ಎಐಯಲ್ಲಿ ಕಾಣುತ್ತಿದ್ದಾರೆ ಅದೃಷ್ಟ ಮತ್ತು ಭವಿಷ್ಯ: ಎಐ ಬಳಕೆಯಲ್ಲಿ ಮಕ್ಕಳ ಸುರಕ್ಷೆಗೆ ಪ್ರಾಧಾನ್ಯತೆಯಿರಬೇಕು. ಶಾಲಾ ಪಠ್ಯಕ್ರಮಗಳ ಕ್ರಮಬದ್ಧಗೊಳಿಸುವಂತೆ ಎಐ ಬಳಕೆ ವಿಚಾರದಲ್ಲೂ ಮಕ್ಕಳ ಸುರಕ್ಷೆಗೆ ಪ್ರಾಧಾನ್ಯತೆ ನೀಡಬೇಕು ಮತ್ತು ಕುಟುಂಬಗಳ ಹಿತರಕ್ಷಣೆಗೆ ಎಐ ಪೂರಕವಾಗಿರಬೇಕು. ಇಂದಿಲ್ಲಿ ಎರಡು ಬಗೆಯ ಜನರಿದ್ದಾರೆ. ಎಐ ಅಂದರೆ ಹೆದರುವವರು ಮತ್ತು ಎಐಯಲ್ಲೇ ಅದೃಷ್ಟ ಕಾಣುವವರು. ಭಾರತವು ಪ್ರತಿಭೆ, ಶಕ್ತಿ ಸಾಮರ್ಥ್ಯ ಮತ್ತು ಸ್ಪಷ್ಟ ನೀತಿಗಳ ಬೆಂಬಲದೊಂದಿಗೆ ಎಐಯಲ್ಲಿ ಅದೃಷ್ಟ ಮತ್ತು ಭವಿಷ್ಯ ಎರಡನ್ನೂ ಕಾಣುತ್ತಿದೆ ಎಂದು ಪ್ರಧಾನಿ ಮೋದಿ ಹೇಳಿದರು.

ಮೋದಿ ಭಾಷಣ 11 ಭಾಷೆಗೆ ಡಬ್

ಪುಟ ೧➔ ಅವರ ಭಾಷಣದ ವೇಳೆ ಎಐ ತಂತ್ರಜ್ಞಾನ ಬಳಸಿ ನೇರ ಸಮಯದಲ್ಲಿ ಸಂಜ್ಞಾ ಭಾಷೆಗೆ ಅನುವಾದ ವ್ಯವಸ್ಥೆ ಕಲ್ಪಿಸಲಾಯಿತು. ಇದರಿಂದ ವಿಶಿಷ್ಟಚೇತನರು ಕಾರ್ಯಕ್ರಮದ ಎಲ್ಲ ಅಂಶಗಳಲ್ಲಿ ಸಂಪೂರ್ಣವಾಗಿ ಪಾಲ್ಗೊಳ್ಳಲು ಸಾಧ್ಯವಾಯಿತು. ಈ ಭಾಷಣವನ್ನು ಅಸ್ಸಾಮಿ, ಬೆಂಗಾಲಿ, ಇಂಗ್ಲಿಷ್, ಗುಜರಾತಿ, ಕನ್ನಡ, ಮಲಯಾಳಂ, ಮರಾಠಿ, ಒಡಿಯಾ, ಪಂಜಾಬಿ, ತಮಿಳು ಮತ್ತು ತೆಲುಗು ಸೇರಿದಂತೆ ಒಟ್ಟು 11 ಭಾಷೆಗಳಿಗೆ ನೇರವಾಗಿ ಮಾರ್ಪಡಿಸಲಾಯಿತು. ಬಹುಭಾಷಾ ಮತ್ತು ಸಂಜ್ಞಾ ಭಾಷೆಯ ಅನುವಾದಗಳ ವಿಡಿಯೋಗಳನ್ನು ಪ್ರಧಾನಮಂತ್ರಿಯವರ ಸಾಮಾಜಿಕ ಮಾಧ್ಯಮ ಖಾತೆಗಳಲ್ಲಿ ಹಂಚಿಕೊಳ್ಳಲಾಯಿತು. ಎಐ ಶೃಂಗದಲ್ಲಿ ನನ್ನ ಭಾಷಣವನ್ನು ಎಐ ಬಳಸಿ ನೇರ ಸಮಯದಲ್ಲಿ ಸಂಜ್ಞಾ ಭಾಷೆಗೆ ಅನುವಾದಿಸಲಾಯಿತು. ಇದು ಎಐ ಕ್ಷೇತ್ರದಲ್ಲಿ ಸುಲಭ ಪ್ರಾಪ್ಯತೆ ಮತ್ತು ಸಮಾವೇಶದತ್ತ ನಮ್ಮ ಬದ್ಧತೆಯನ್ನು ತೋರಿಸುತ್ತದೆ. ತಂತ್ರಜ್ಞಾನ ಮತ್ತು ಸಾರ್ವಜನಿಕ ಸಂವಾದವು ವಿಶಿಷ್ಟಚೇತನರಿಗೆ ಸದಾ ಸುಲಭವಾಗಿ ಲಭ್ಯವಾಗುವಂತೆ ನಾವು ಕೆಲಸ ಮಾಡುತ್ತೇವೆ ಎಂದು ಅವರು ಎಕ್ಸ್‌ನಲ್ಲಿ ತಿಳಿಸಿದ್ದಾರೆ.

ಯುವಶಕ್ತಿಯ ಪ್ರತಿಭೆ ವ್ಯಕ್ತ

ಶೃಂಗಸಭೆಯಲ್ಲಿ ಮೂರು ಭಾರತೀಯ ಕಂಪನಿಗಳು ತಮ್ಮ ಎಐ ಮಾದರಿಗಳು ಮತ್ತು ಆ್ಯಪ್‌ಗಳನ್ನು ಅನಾವರಣಗೊಳಿಸಿವೆ. ಇವು ದೇಶದ ಯುವಶಕ್ತಿಯ ಪ್ರತಿಭೆಯನ್ನು ಪ್ರತಿಬಿಂಬಿಸಿದೆ ಹಾಗೂ ಜಾಗತಿಕ ಎಐ ಜಾಲಕ್ಕೆ ಭಾರತ ಕೊಡುಗೆಯಾಗಿ ನೀಡುತ್ತಿರುವ ಪರಿಹಾರಗಳ ಗಹನತೆ ಮತ್ತು ವೈವಿಧ್ಯತೆಗಳನ್ನು ಪ್ರತಿಫಲಿಸಿವೆ. ಎಐಯು ನಮ್ಮ ವ್ಯವಸ್ಥೆಗಳ ಕ್ರಿಯಾಶೀಲಗೊಳಿಸಲಿವೆ ಹಾಗೂ ಇವನ್ನು ಹೆಚ್ಚು ದಕ್ಷ ಮತ್ತು ಪ್ರಭಾವಿಯಾಗಿ ಪರಿವರ್ತಿಸಲಿವೆ. ಕ್ರಿಯಾತ್ಮಕ ಪಾತ್ರಗಳ ವಹಿಸುವಲ್ಲಿ ಜನರಿಗೆ ತುಂಬು ಅವಕಾಶಗಳ ಸೃಜಿಸಲಿವೆ. ಆವಿಷ್ಕಾರಗಳು, ಉದ್ಯಮಶೀಲತೆ ಮತ್ತು ಹೊಸ ಉದ್ಯಮಗಳ ಸೃಜನೆಗೆ ಇದೊಂದು ಮಹತ್ತ್ವದ ಅವಕಾಶ ಕೂಡ ಎಂದು ಪ್ರಧಾನಿ ಮೋದಿ ಗಮನ ಸೆಳೆದರು.

ಜ್ಞಾನ ಹಂಚಿಕೆಯಿಂದ ಜಗತ್ತಿಗೆ ಒಳಿತಾಗಲಿದೆ

ಎಐಯನ್ನು ಬಲು ರಹಸ್ಯವಾಗಿ ಅಭಿವೃದ್ಧಿಪಡಿಸಬೇಕೆಂಬುದು ಕೆಲವು ರಾಷ್ಟ್ರಗಳ ಅಭಿಮತ. ಆದರೆ ಈ ವಿಚಾರದಲ್ಲಿ ಭಾರತದ ನಿಲುವು ವಿಭಿನ್ನ. ಎಐ ಜ್ಞಾನ ಹಂಚಿಕೆಯಾದಾಗ, ಅದರ ಕೋಡ್‌ಗಳು ಮುಕ್ತವಾದಲ್ಲಿ ಇಡೀ ಜಗತ್ತಿಗೇ ಒಳಿತಾಗಲಿದೆ ಎಂಬುದು ಭಾರತದ ನಂಬುಗೆ. ಹೀಗಾದರೆ ಮಾತ್ರ ಮಿಲಿಯಂತರ ಯುವ ಮನಸ್ಸುಗಳು ಈ ಅತ್ಯಾಧುನಿಕ ತಂತ್ರಜ್ಞಾನದಲ್ಲಿ ಮತ್ತಷ್ಟು ಸುಧಾರಣೆಗಳ ದಾಖಲಿಸಲು ಸಾಧ್ಯವಾಗುವುದು ಎಂದು ಪ್ರಧಾನಿ ಮೋದಿ ನುಡಿದರು.

ಭಾರತದ ನೇತೃತ್ವ

ಮಾನವ ಸಮುದಾಯದ ಆರನೇ ಒಂದರಷ್ಟು ಜನಸಂಖ್ಯೆಯನ್ನು ಪ್ರತಿನಿಧಿಸುವ, ಜಗತ್ತಿನಲ್ಲೇ ಅತ್ಯಧಿಕ ಯುವಶಕ್ತಿ ಸಂಪನ್ನ ಮತ್ತು ಬೃಹತ್ ಪ್ರಮಾಣದಲ್ಲಿ ತಂತ್ರಜ್ಞಾನ ಪ್ರತಿಭೆಗಳ ಆಗರವಾಗಿರುವ ಭಾರತದಲ್ಲಿ ಎಐ ಶೃಂಗಸಭೆ ನಡೆಯುತ್ತಿರುವುದು ತೀರಾ ಹೆಮ್ಮೆಯ ವಿಚಾರ. ಮಾನವ ಚರಿತ್ರೆಯಲ್ಲಿ ಪರಿವರ್ತನಾತ್ಮಕ ಅಧ್ಯಾಯವನ್ನು ಎಐ ದಾಖಲಿಸಿದೆ. ಭಾರತವು ಎಐ ಕ್ರಾಂತಿಯ ಭಾಗವಷ್ಟೇ ಅಲ್ಲ, ಕ್ರಾಂತಿಯ ನೇತೃತ್ವ ವಹಿಸಿಕೊಂಡು ಎಐಗೆ ನಿರ್ದಿಷ್ಟ ರೂಪುರೇಷೆ ನೀಡುತ್ತಿದೆ. ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವ ಮಾತ್ರವಲ್ಲ, ಇದನ್ನು ಅಭೂತಪೂರ್ವ ರೀತಿಯಲ್ಲಿ ಬಳಸುತ್ತಿರುವುದು ಕೂಡ ಭಾರತದ ಹೆಗ್ಗಳಿಕೆ ಎಂದು ಪ್ರಧಾನಿ ಮೋದಿ ಹೆಮ್ಮೆ ವ್ಯಕ್ತಪಡಿಸಿದರು.

ಯುವಪೀಳಿಗೆಯ ಕುತೂಹಲ ಅದ್ಭುತ

ಹೊಸ ತಂತ್ರಜ್ಞಾನ ಬಗ್ಗೆ ಕೆಲವರಿಗೆ ಅನುಮಾನಗಳಿವೆ. ಆದರೆ, ಯುವಪೀಳಿಗೆ ಎಐಯನ್ನು ಅಪ್ಪಿಕೊಳ್ಳುತ್ತಿರುವ ಪರಿ ಮಾತ್ರ ಅಭೂತಪೂರ್ವ. ಎಐ ಶೃಂಗಸಭೆ ಪ್ರದರ್ಶನ ಬಗ್ಗೆ ಇಲ್ಲೀಗ ಸಾಕಷ್ಟು ಜನರು ಕುತೂಹಲಭರಿತರಿದ್ದಾರೆ. ಮಾನವ ಇತಿಹಾಸದ ವಿವಿಧ ಘಟ್ಟಗಳಲ್ಲಿ ಎದುರಾದ ನಿರ್ದಿಷ್ಟ ತಿರುವುಗಳು ಸಮಗ್ರ ಶತಮಾನಗಳಿಗೆ ಆಯಾಮ ನೀಡಿವೆ. ಈ ತಿರುವುಗಳು ನಾಗರಿಕತೆಯ ದಿಕ್ಕನ್ನು ನಿರ್ಧರಿಸಿದವು ಮತ್ತು ಅಭಿವೃದ್ಧಿಯ ಗತಿಯನ್ನು ಪರಿವರ್ತಿಸಿದವು. ಚರಿತ್ರೆಯಲ್ಲಿ ಕೃತಕ ಬುದ್ಧಿಮತ್ತೆ ಕೂಡ ಇದೇ ತೆರನಾದ ಒಂದು ಪರಿವರ್ತನೆಯಾಗಿದೆ ಎಂದು ಪ್ರಧಾನಿ ಮೋದಿ ಗಮನಸೆಳೆದರು.

ದೇಶದ ಪ್ರಗತಿಗೆ ಉಚಿತ ಕೊಡುಗೆ ಅಡ್ಡಿ

ಪುಟ ೧➔ ತಮಿಳುನಾಡು ಪವರ್ ಡಿಸ್ಟ್ರಿಬ್ಯೂಷನ್ ಕಾರ್ಪೊರೇಷನ್ ಲಿಮಿಟೆಡ್ ಸಲ್ಲಿಸಿದ ಮನವಿಯನ್ನು ಪರಿಗಣಿಸುತ್ತಿದ್ದ ವೇಳೆ ನ್ಯಾಯಾಲಯ ಈ ಅಭಿಪ್ರಾಯ ವ್ಯಕ್ತಪಡಿಸಿದೆ. ಎಲ್ಲ ಗ್ರಾಹಕರಿಗೂ ಅವರ ಆರ್ಥಿಕ ಸ್ಥಿತಿ ಪರಿಗಣಿಸದೆ ಉಚಿತ ವಿದ್ಯುತ್ ನೀಡುವ ಪ್ರಸ್ತಾವನೆ ಕುರಿತು ನ್ಯಾಯಪೀಠ ಪ್ರಶ್ನಿಸಿದೆ. ವಿದ್ಯುತ್ ಶುಲ್ಕ ಅಧಿಸೂಚನೆ ಹೊರಬಂದ ತಕ್ಷಣವೇ ಈ ರೀತಿಯ ನಿರ್ಧಾರ ಕೈಗೊಳ್ಳಲು ಕಾರಣವೇನು ಎಂದು ನ್ಯಾಯಾಲಯ ಕೇಳಿದೆ.

ರಾಜ್ಯಗಳು ಉದ್ಯೋಗಾವಕಾಶಗಳನ್ನು ಸೃಷ್ಟಿಸುವತ್ತ ಗಮನ ಹರಿಸಬೇಕಾದರೆ, ಉಚಿತ ಆಹಾರ, ಸೈಕಲ್, ವಿದ್ಯುತ್ ಹಂಚುವ ಮೂಲಕ ಕೆಲಸದ ಸಂಸ್ಕೃತಿಗೆ ಧಕ್ಕೆಯುಂಟಾಗುವ ಸಾಧ್ಯತೆ ಇದೆ ಎಂದು ಮುಖ್ಯ ನ್ಯಾಯಮೂರ್ತಿ ಹೇಳಿದ್ದಾರೆ. ಬೆಳಗ್ಗೆಯಿಂದ ಸಂಜೆವರೆಗೆ ಉಚಿತ ಆಹಾರ, ನಂತರ ಉಚಿತ ಸೈಕಲ್, ನಂತರ ಉಚಿತ ವಿದ್ಯುತ್ ನೀಡಿದರೆ, ಜನರು ಕೆಲಸ ಮಾಡಲು ಪ್ರೇರಣೆಯನ್ನು ಕಳೆದುಕೊಳ್ಳುವುದಿಲ್ಲವೇ? ಎಂದು ಪೀಠವು ಪ್ರಶ್ನಿಸಿದೆ. ಆದಾಗ್ಯೂ, ಆರ್ಥಿಕವಾಗಿ ಹಿಂದುಳಿದ ಮತ್ತು ವಿದ್ಯುತ್ ಶುಲ್ಕ ಪಾವತಿಸಲು ಅಸಮರ್ಥರಾದವರಿಗೆ ಕಲ್ಯಾಣ ಕ್ರಮಗಳಲ್ಲಿ ನೆರವು ನೀಡುವುದು ಸಮಂಜಸವೇ ಸರಿ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ. ಆದರೆ, ಪಾವತಿಸಲು ಸಾಮರ್ಥ್ಯವಿರುವವರಿಗೂ ಯಾವುದೇ ಭೇದವಿಲ್ಲದೆ ಉಚಿತ ವಿತರಣೆ ಮಾಡುವುದು ಸಮಂಜಸವಲ್ಲ ಮತ್ತು ಅದು ಸಮಾಧಾನ ನೀತಿಯಂತಾಗುವುದಿಲ್ಲವೇ? ಎಂಬುದರ ಬಗ್ಗೆ ನ್ಯಾಯಾಲಯ ಆತಂಕ ವ್ಯಕ್ತಪಡಿಸಿದೆ.

ಮುಂದೆ ದುಡಿಯುವ ಸಂಸ್ಕೃತಿ ಕುಗ್ಗಲ್ಲವೇ?

ರಾಜ್ಯಗಳ ವೆಚ್ಚದಲ್ಲಿ ದೊಡ್ಡ ಭಾಗ ನೌಕರರ ಸಂಬಳ ಹಾಗೂ ಉಚಿತ ಯೋಜನೆಗಳಿಗೆ ಹೋಗುತ್ತಿರುವಾಗ, ಮೂಲಸೌಕರ್ಯ ಮತ್ತು ಅಭಿವೃದ್ಧಿ ಹೂಡಿಕೆಗಳಿಗೆ ಕಡಿಮೆ ಅವಕಾಶ ಸಿಗುವುದಿಲ್ಲವೇ? ಎಲ್ಲವೂ ಉಚಿತವಾಗಿ ದೊರೆಯುವ ಪರಿಸ್ಥಿತಿ ನಿರ್ಮಾಣವಾದರೆ, ಮುಂದಿನ ಪೀಳಿಗೆಯಲ್ಲಿ ದುಡಿಯುವ ಸಂಸ್ಕೃತಿಯೇ ಕುಗ್ಗುವ ಅಪಾಯವಿಲ್ಲವೇ? ಎಂದು ಕೋರ್ಟ್ ಪ್ರಶ್ನಿಸಿದೆ.

ತಂತ್ರಜ್ಞಾನ ಯುಗದಲ್ಲಿ ವಿಪುಲ ಅವಕಾಶ: ವಿಜ್ಞಾನಿ ಶ್ರೀನಿವಾಸ್

ಚಿಕ್ಕಮಗಳೂರು: ಗಗನ್‌ಯಾನ್ ಮಿಷನ್ ಭಾರತ ದೇಶದ ಭವಿಷ್ಯದ ಅಂತರಿಕ್ಷ ಕೇಂದ್ರದ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಯಾಗಿದೆ ಎಂದು ಇಸ್ರೋ ಕೇಂದ್ರದ ವಿಜ್ಞಾನಿ ಎಚ್. ಎಲ್. ಶ್ರೀನಿವಾಸ್ ತಿಳಿಸಿದರು.

ನಗರದ ಸಹ್ಯಾದ್ರಿ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್‌ನ ಬಿಸಿಎ ವಿದ್ಯಾರ್ಥಿಗಳಿಗಾಗಿ ಸಂಸ್ಥೆ ಸೆಮಿನಾರ್ ಹಾಲ್‌ನಲ್ಲಿ ಏರ್ಪಡಿಸಲಾಗಿದ್ದ ಆರ್ಬಿಟ್ ಟಾಕ್ಸ್–ಅಂತರಿಕ್ಷ ತಂತ್ರಜ್ಞಾನ, ವೃತ್ತಿ ಅವಕಾಶಗಳು ಎಂಬ ಜ್ಞಾನವರ್ಧಕ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಇಸ್ರೋ ಸ್ಪೇಸ್ ಸ್ಟೇಷನ್ ಪರಿಕಲ್ಪನೆ ಹಾಗೂ ಭವಿಷ್ಯದ ಯೋಜನೆಗಳನ್ನು ವಿವರಿಸಿದರು. ಇಂದಿನ ತಂತ್ರಜ್ಞಾನ ಯುಗದಲ್ಲಿ ವಿದ್ಯಾರ್ಥಿಗಳಿಗೆ ಲಭ್ಯವಿರುವ ಅವಕಾಶಗಳು, ಅಂತರಿಕ್ಷ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ವೃತ್ತಿ ನಿರ್ಮಾಣಕ್ಕೆ ಅಗತ್ಯವಾದ ಕೌಶಲ್ಯಗಳ ಬಗ್ಗೆ ವಿವರಿಸಿ, ಇಸ್ರೋ ಉಪಗ್ರಹಗಳ ವಿಭಿನ್ನ ವಿಧಗಳು, ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಅವುಗಳು ಮಹತ್ವದ್ದಾಗಿದೆ ಎಂದು ತಿಳಿಸಿದರು. ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಪ್ರಾಂಶುಪಾಲ ಇ.ಜಿ.ಉಲ್ಲಾಸ್ ತಂತ್ರಜ್ಞಾನದ ಮಹತ್ವ, ಉದ್ಯಮಕ್ಕೆ ಅಗತ್ಯವಾದ ಕೌಶಲ್ಯಾಭಿವೃದ್ಧಿ ಹಾಗೂ ಭವಿಷ್ಯದ ಸಿದ್ಧತೆಯ ಕುರಿತು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

ಸ್ಪಷ್ಟ ಮಾರ್ಗದರ್ಶನ

ಅಂತರಿಕ್ಷದ ತಾಪಮಾನ ಪರಿಸ್ಥಿತಿ ಮತ್ತು ಉಪಗ್ರಹ ಉಡಾವಣೆಯ ಸಮಯದಲ್ಲಿ ಕಾಪಾಡಬೇಕಾದ ತಾಪಮಾನ ನಿಯಂತ್ರಣದ ಬಗ್ಗೆ ವೈಬ್ರೇಶನ್ ಟೆಸ್ಟ್ ಸೇರಿದಂತೆ ಉಡಾವಣೆಗೆ ಮುನ್ನ ನಡೆಯುವ ವಿವಿಧ ಪರೀಕ್ಷೆಗಳ ಹಾಗೂ ಚಂದ್ರಯಾನ್–3 ಸಾಧನೆಗಳ ದೃಶ್ಯಾವಳಿಗಳ ವಿಡಿಯೋ ಪ್ರದರ್ಶನವನ್ನು ನೀಡಿದರು. ಮುಂದಿನ ಎರಡು ವರ್ಷಗಳಲ್ಲಿ ಇಸ್ರೋದಲ್ಲಿ ಹೆಚ್ಚಾಗುವ ಉದ್ಯೋಗಾವಕಾಶಗಳು ಹಾಗೂ ಇಸ್ರೋ ಉದ್ಯೋಗಗಳಿಗೆ ಅರ್ಜಿ ಸಲ್ಲಿಸುವ ವಿಧಾನಗಳ ಕುರಿತು ಸ್ಪಷ್ಟ ಮಾರ್ಗದರ್ಶನ ನೀಡಿದರು.

ದೇಗುಲಕ್ಕೆ ಭೇಟಿ



ಅಸ್ಸಾಂನ ಗುವಾಹಟಿಯ ಕಾಮಾಕ್ಯ ದೇಗುಲದಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ, ಸಂಸದೆ ಪ್ರಿಯಾಂಕಾ ವಾದ್ರಾ ಅವರ ಜತೆ ಡಿಸಿಎಂ ಡಿ. ಕೆ. ಶಿವಕುಮಾರ್ ಅವರು ಗುರುವಾರ ಪೂಜೆ ಸಲ್ಲಿಸಿದರು.

ನಂದಿನಿ ಹಾಲಿನ ಉತ್ಪನ್ನಗಳ ಕುರಿತು ಅಪಪ್ರಚಾರ
ವೈದ್ಯೆಯೊಬ್ಬರ ವಿರುದ್ಧ ದೂರು

ಬೆಂಗಳೂರು: ಕರ್ನಾಟಕದ ಹೆಮ್ಮೆಯ ನಂದಿನಿ ಹಾಲಿನ ಉತ್ಪನ್ನಗಳ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಮಾಹಿತಿ ಹಾಗೂ ಅಪಪ್ರಚಾರ ಮಾಡಿದ ಆರೋಪದ ಮೇಲೆ ಮಲ್ಲೇಶ್ವರದ ಖಾಸಗಿ ಆಸ್ಪತ್ರೆಯ ವೈದ್ಯೆಯೊಬ್ಬರ ವಿರುದ್ಧ ಮಲ್ಲೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಲ್ಲೇಶ್ವರದಲ್ಲಿರುವ ಖಾಸಗಿ ಆಸ್ಪತ್ರೆ ಹಾಗೂ ಮಾಲೂರು ಬಾಲಾಜಿ ಕ್ಲಿನಿಕ್‌ನಲ್ಲಿ ಚರ್ಮರೋಗ ತಜ್ಞರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಶರಣ್ಯ ಎಂಬವರು ತಮ್ಮ ಸಾಮಾಜಿಕ ಜಾಲತಾಣ ಖಾತೆಗಳಲ್ಲಿ ನಂದಿನಿ ಉತ್ಪನ್ನಗಳ ಬಗ್ಗೆ ವಿಡಿಯೋ ಒಂದನ್ನು ಹಂಚಿಕೊಂಡಿದ್ದರು. ಈ ವಿಡಿಯೋದಲ್ಲಿ ನಂದಿನಿ ಕ್ರೀಮ್ ಬನ್, ಸ್ಟ್ರಾಬೆರಿ ಫ್ಲೇವರ್ಡ್ ಮಿಲ್ಕ್ ಹಾಗೂ ಸ್ಲಾಶ್ ಪಾನೀಯಗಳು ವಿಷಕಾರಿ ಅಂಶಗಳಿಂದ ಕೂಡಿದ್ದು, ಇವುಗಳ ಸೇವನೆಯಿಂದ ಕ್ಯಾನ್ಸರ್ ಹಾಗೂ ಆಟೋಇಮ್ಯೂನ್ ಕಾಯಿಲೆಗಳು ಬರುತ್ತವೆ ಎಂದು ಆಧಾರರಹಿತವಾಗಿ ಆರೋಪಿಸಿದ್ದರು.

ಅಲ್ಲದೆ, ಈ ಉತ್ಪನ್ನಗಳಿಗೆ ಎಫ್‌ಎಸ್‌ಎಸ್‌ಎಐ ಅನುಮತಿ ನೀಡಿರುವುದರ ಬಗ್ಗೆಯೂ ಅವರು ಆಕ್ಷೇಪ ವ್ಯಕ್ತಪಡಿಸಿದ್ದರು. ಅವರು ಮಾಡಿದ್ದ ವಿಡಿಯೋ ನಂದಿನಿ ಬ್ರಾಂಡ್‌ನ ವಿಶ್ವಾಸಾರ್ಹತೆಗೆ ಧಕ್ಕೆ ತರುವಂತಿದೆ ಎಂದು ಕರ್ನಾಟಕ ಹಾಲು ಮಹಾಮಂಡಳಿ ಗಂಭೀರವಾಗಿ ಪರಿಗಣಿಸಿದೆ.

ಈ ಕುರಿತು ಕೆಎಂಎಫ್‌ನ ಆಡಳಿತ ನಿರ್ದೇಶಕಿ ಪದ್ಮಾವತಿ ಆರ್. ಅವರು ಮಲ್ಲೇಶ್ವರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ನಂದಿನಿ ಉತ್ಪನ್ನಗಳು ಎಫ್‌ಎಸ್‌ಎಸ್‌ಎಐ ನಿಯಮಾವಳಿಗಳ ಪ್ರಕಾರವೇ ತಯಾರಾಗುತ್ತಿದ್ದು, ಅತ್ಯಂತ ಸುರಕ್ಷಿತವಾಗಿವೆ. ಸಾರ್ವಜನಿಕರಲ್ಲಿ ಗೊಂದಲ ಮೂಡಿಸಿ, ಬ್ರಾಂಡ್ ಹೆಸರಿಗೆ ಕಪ್ಪುಚುಕ್ಕೆ ತರುವ ಉದ್ದೇಶದಿಂದಲೇ ಈ ರೀತಿ ಮಾಡಲಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ದೂರಿನ ಅನ್ವಯ ಪೊಲೀಸರು ಡಾ. ಶರಣ್ಯ ವಿರುದ್ಧ ಬಿಎನ್‌ಎಸ್‌ಎಸ್ ಕಾಯ್ದೆಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

ಕಿರುಸುದ್ದಿ

ದರೋಡೆ ಪ್ರಕರಣ: ಆರೋಪಿಗಳಿಬ್ಬರ ಬಂಧನ



ವಿಜಯಪುರ: ಹಲಸಂಗಿ ಗ್ರಾಮದ ಚಿನ್ನಾಭರಣ ಅಂಗಡಿ ಮಾಲೀಕರಿಗೆ ಪಿಸ್ತೂಲ್ ತೋರಿಸಿ, 205 ಗ್ರಾಂ ಚಿನ್ನಾಭರಣ, 22 ಲಕ್ಷ ರೂ.ಗಳ 1 ಕೆಜಿ ಬೆಳ್ಳಿ ದರೋಡೆ ಮಾಡಿದ ಇಬ್ಬರು ಅಂತರ್ ರಾಜ್ಯ ಆರೋಪಿಗಳನ್ನು ಬಂಧಿಸಿದ್ದು, 205 ಗ್ರಾಂ ಚಿನ್ನಾಭರಣ, 1 ಕೆಜಿ ಬೆಳ್ಳಿ ಜಪ್ತಿ ಮಾಡಲಾಗಿದೆ ಎಂದು ಎಸ್ಪಿ ಲಕ್ಷ್ಮಣ ನಿಂಬರಗಿ ಹೇಳಿದರು.ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಂಧಿತ ಆರೋಪಿಗಳು ಮೂಲತಃ ಸಂಖ ಗ್ರಾಮಕ್ಕೆ ಸೇರಿದರೂ ಹಾಲಿ ಜತ್ತ ನಿವಾಸಿ ಹಣಮಂತ ಮಲ್ಲಪ್ಪ ವಾಘೋಲೆ (28), ಪುಣೆಯಲ್ಲಿ ನೆಲೆಸಿದ್ದ ಶಿವರಾಜ್ ಉರ್ಫ್ ಗೌಡಪ್ಪ ರಾವುಸಾಹೇಬ ನಾವಿ (28) ಎಂದು ಹೇಳಿದರು. ಆರೋಪಿಗಳಿಂದ 205 ಗ್ರಾಂ ಚಿನ್ನಾಭರಣ, 1 ಕೆಜಿ ಬೆಳ್ಳಿ ಸೇರಿದಂತೆ 22 ಲಕ್ಷ ರೂ. ಮೌಲ್ಯದ ಚಿನ್ನಾಭರಣ, ಕೃತ್ಯದ ವೇಳೆ ಬಳಸಿದ ಕಂಟ್ರಿ ಪಿಸ್ತೂಲ್ ಸೇರಿದಂತೆ 3 ಕಂಟ್ರಿ ಪಿಸ್ತೂಲ್, 26 ಜೀವಂತ ಗುಂಡು, ಒಂದು ಏರ್‌ಗನ್, ಮೋಟಾರ್ ಸೈಕಲ್ ಜಪ್ತು ಮಾಡಿಕೊಳ್ಳಲಾಗಿದೆ ಎಂದರು. ಕಳೆದ ಜ.26ರಂದು ಹಲಸಂಗಿ ಗ್ರಾಮದಲ್ಲಿ ಈ ಘಟನೆ ನಡೆದಿತ್ತು. ಸಾಲಬಾಧೆ ಹಾಗೂ ಷೋಕಿ ಆಸೆ, ದುಬಾರಿ ಲೈಫ್ ಸ್ಟೈಲ್ ಮೋಹದಿಂದಾಗಿ ಆರೋಪಿಗಳು ಈ ಕೃತ್ಯ ಎಸಗಿದ್ದಾರೆ. ಮೊದಲು ಸೊಲ್ಲಾಪುರದ ಬಂಗಾರ ಅಂಗಡಿ ದೋಚುವ ಕಾರ್ಯಯೋಜನೆ ರೂಪಿಸಿದ್ದು, ನಂತರ ಅಲ್ಲಿ ಜನಸಂದಣಿ ಅಧಿಕವಾಗಿರುವುದರಿಂದ ಗಡಿ ಭಾಗದ ಹಲಸಂಗಿಯನ್ನು ಆಯ್ಕೆ ಮಾಡಿ ದರೋಡೆ ಮಾಡಿದ್ದಾರೆ ಎನ್ನುವುದು ತಿಳಿದು ಬಂದಿದೆ ಎಂದರು. ಆರೋಪಿಗಳು ಉತ್ತರ ಪ್ರದೇಶದ ಗೋರಖಪುರ್‌ದಿಂದ ಪಿಸ್ತೂಲ್ ತಂದಿರುವ ಮಾಹಿತಿ ವಿಚಾರಣೆ ವೇಳೆ ತಿಳಿದು ಬಂದಿದೆ ಎಂದರು. ಎಎಸ್‌ಪಿ ರಾಮಗೌಡ ಹಟ್ಟಿ ಸೇರಿದಂತೆ ಪೊಲೀಸ್ ಅಧಿಕಾರಿಗಳು ಪತ್ರಿಕಾಗೋಷ್ಠಿಯಲ್ಲಿ ಇದ್ದರು.

ಇಸ್ಪೀಟ್ ಜೂಜಾಟ: ಇಬ್ಬರ ಪೊಲೀಸರ ಅಮಾನತು

ಕಲಬುರಗಿ: ಜಿಲ್ಲೆಯ ಚಿತ್ತಾಪುರ ತಾಲೂಕಿನ ದಿಗ್ಗಾಂವ ಗ್ರಾಮದ ಹೊರವಲಯದಲ್ಲಿ ಜೂಜಾಟವಾಡುತ್ತಿದ್ದ ವೇಳೆ ಪೋಲಿಸರ ದಾಳಿ ವೇಳೆ ಪರಾರಿಯಾದ ಇಬ್ಬರು ಕಾನ್ಸ್‌ಟೇಬಲ್‌ಗಳಾದ ನಗರದ ಎಂ.ಬಿ ನಗರ ಪೊಲೀಸ್ ಠಾಣೆ ಸಿಬ್ಬಂದಿ ಗುರುನಾಥ ಸಿಪಿಸಿ 76 ಹಾಗೂ ಸಿಎಆರ್ ಘಟಕದ ಸಿಬ್ಬಂದಿ ಮಡಿವಾಳಪ್ಪ ಎಪಿಸಿ 297 ಇಬ್ಬರನ್ನು ಸೇವೆಯಿಂದ ಅಮಾನತು ಮಾಡಿ ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ. ಗುರುವಾರ ಆದೇಶ ಹೊರಡಿಸಿದ್ದಾರೆ. ಚಿತ್ತಾಪುರ ಪೊಲೀಸ್ ಠಾಣಾ ವ್ಯಾಪ್ತಿಯ ದಿಗ್ಗಾಂವ್ ಗ್ರಾಮದಿಂದ ಬೆನಕನಹಳ್ಳಿ ಕಡೆಗೆ ಹೋಗುವ ರಸ್ತೆಯ ಪಕ್ಕದಲ್ಲಿರುವ ಸಾರ್ವಜನಿಕ ಸ್ಥಳದಲ್ಲಿ ಇಸ್ಪೀಟ್ ಜೂಜಾಟ ಆಡುತ್ತಿದ್ದಾರೆ ಎಂಬ ಮಾಹಿತಿಯ ಮೇರೆಗೆ ಪಿಎಸ್‌ಐ ದಾಳಿ ನಡೆಸಿ ಸಿಬ್ಬಂದಿಯನ್ನು ವಶಕ್ಕೆ ಪಡೆದುಕೊಂಡಿದ್ದು, ಪೊಲೀಸ್ ಅಧೀಕ್ಷಕರ ವರದಿಯ ಅನ್ವಯ ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್ ಡಿ ಇಲಾಖಾ ಶಿಸ್ತಿನ ಕ್ರಮ ಬಾಕಿಯಿರಿಸಿ ಸಿಬ್ಬಂದಿಯನ್ನು ಅಮಾನತ್ತಿನಲ್ಲಿರಿಸಿ ಆದೇಶ ಹೊರಡಿಸಿದ್ದಾರೆ.

ಏನಿದು ಪ್ರಕರಣ? ಜಿಲ್ಲೆಯ ಚಿತ್ತಾಪುರ ತಾಲೂಕಿನ ದಿಗ್ಗಾಂವ ಗ್ರಾಮದ ಹಳ್ಳದ ಪಕ್ಕದಲ್ಲಿ ಹಣವಿಟ್ಟು ಜೂಜಾಟ ನಡೆಯುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ಚಿತ್ತಾಪುರ ಪಿಎಸ್‌ಐ ಮಂಜುನಾಥ ರೆಡ್ಡಿ ನೇತೃತ್ವದ ತಂಡ ಮಂಗಳವಾರ ಸಂಜೆ 5 ಗಂಟೆ ಸುಮಾರಿಗೆ ಅನಿರೀಕ್ಷಿತ ದಾಳಿ ನಡೆಸಿತು.

ಕೇಂದ್ರ ಸಚಿವ ಗಜೇಂದ್ರಸಿಂಗ್ ಶೇಖಾವತ್ ವಿಶ್ವಾಸ
2047ಕ್ಕೆ ವಿಕಸಿತ ಭಾರತ

ಬೆಂಗಳೂರು: ನಮ್ಮ ದೇಶವು 2047ರಲ್ಲಿ ವಿಕಸಿತ ಭಾರತ ಆಗಬೇಕಿದೆ, ಇದಕ್ಕಾಗಿ 2028ರಲ್ಲಿ ಕರ್ನಾಟಕದಲ್ಲಿ ಬಹುಮತದೊಂದಿಗೆ ಬಿಜೆಪಿ ಅಧಿಕಾರ ಪಡೆಯಬೇಕು ಎಂದು ಕೇಂದ್ರ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಹೇಳಿದರು.

ನಗರದ ಅರಮನೆ ಮೈದಾನದಲ್ಲಿ ಗುರುವಾರ ನಡೆದ ರಾಜ್ಯ ಕಾರ್ಯಕಾರಿಣಿಯನ್ನು ಉದ್ಘಾಟಿಸಿದ ಅವರು, ಭಾರತದ ಗೌರವ ಮತ್ತು ಸಂಸ್ಕೃತಿಯು ಈ ಮಣ್ಣಿನಲ್ಲಿ ಬೆರೆತುಹೋಗಿದೆ. ಅದನ್ನು ಕಾಪಾಡುವುದಕ್ಕಾಗಿ ಇಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದು ಅಗತ್ಯವಾಗಿದೆ ಎಂದರು.

ಇದು ಕೇವಲ ಸಂಘಟನಾತ್ಮಕ ಸಭೆಯಲ್ಲ; ಆತ್ಮ ಮಂಥನದ ಸಭೆಯೂ ಆಗಿದೆ. ಪಕ್ಷ ಸಂಘಟನೆ ಹಾಗೂ ಭ್ರಷ್ಟ ಸರ್ಕಾರವನ್ನು ಅಧಿಕಾರದಿಂದ ತೊಲಗಿಸಿ ಅಧಿಕಾರ ಮರಳಿ ಪಡೆಯುವ ಸಂಕಲ್ಪದ ಸಭೆ ಇದಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರ ವಿಕಸಿತ ಭಾರತದ ವಿಚಾರಧಾರೆಯ ಮನನ ಮಾಡುವ ಸಭೆ ಇದು ಎಂದು ತಿಳಿಸಿದರು.

ತಮ್ಮ ಮತಗಳ ಧ್ರುವೀಕರಣಕ್ಕಾಗಿ ಕಾಂಗ್ರೆಸ್ ಪಕ್ಷ ಮುಸ್ಲಿಮರ ತುಷ್ಟೀಕರಣ ಮಾಡುತ್ತಿದೆ. ಹಿಂದುಗಳಿಗೆ ಅಪಮಾನ ಮಾಡಲಾಗುತ್ತಿದೆ. ರಾತ್ರೋ ರಾತ್ರಿ ಆರ್‌ಟಿಸಿಗಳಲ್ಲಿ ರೈತರ ಭೂಮಿಯನ್ನು ವಕ್ಫ್ ಆಸ್ತಿ ಎಂದು ನಮೂದಿಸಲಾಯಿತು. ಆದರೆ, ರೈತರ ಒಂದಿಂಚು ಭೂಮಿ ಕೂಡ ವಕ್ಫ್‌ಗೆ ಹೋಗುವುದಕ್ಕೆ ನಾವು ಬಿಡುವುದಿಲ್ಲ. ಈ ಬಾರಿ ರಾಜ್ಯಕ್ಕೆ ಹೆಚ್ಚುವರಿ ಅನುದಾನ ಬಂದಿದೆ. ಅದನ್ನು ಭ್ರಷ್ಟಾಚಾರಕ್ಕೆ ಬಳಕೆಯಾಗುವುದಕ್ಕೆ ಬಿಡಬಾರದು, ಅದಕ್ಕಾಗಿ ಜಾಗರೂಕರಾಗಿರಬೇಕು ಎಂದು ಹೇಳಿದರು.

ಮುಂಬರುವ ಸ್ಥಳೀಯ ಸಂಸ್ಥೆಗಳ ಹಾಗೂ ಜಿಬಿಎ ಚುನಾವಣೆಯಲ್ಲಿ ಬಿಜೆಪಿಯನ್ನು ಗೆಲ್ಲಿಸುವ ಸಂಕಲ್ಪ ನಮ್ಮದಾಗಬೇಕು. ಬಿಜೆಪಿಯನ್ನು ತಳಮಟ್ಟದಲ್ಲಿ ಬಲಪಡಿಸಬೇಕು. ಇದು ಪರೀಕ್ಷೆಯ ಕಾಲ; ಕಾರ್ಯಕರ್ತರು ಜನರ ಮನೆ ಮನೆಗೆ ತೆರಳಿ ಕಾಂಗ್ರೆಸ್ಸಿನ ವೈಫಲ್ಯಗಳನ್ನು ತಿಳಿಸಬೇಕು ಎಂದು ಕರೆ ನೀಡಿದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅಧ್ಯಕ್ಷತೆ ವಹಿಸಿದ್ದರು. ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮತ್ತು ಕರ್ನಾಟಕ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗ್ರವಾಲ್, ರಾಜ್ಯ ಸಹ ಉಸ್ತುವಾರಿ ಪಿ.ಸುಧಾಕರ್ ರೆಡ್ಡಿ, ಕೇಂದ್ರ ಸಚಿವರಾದ ಪ್ರಲ್ಹಾದ್ ಜೋಶಿ, ಶೋಭಾ ಕರಂದ್ಲಾಜೆ, ವಿ. ಸೋಮಣ್ಣ, ಪ್ರತಿಪಕ್ಷದ ನಾಯಕರಾದ ಆರ್. ಅಶೋಕ, ಛಲವಾದಿ ನಾರಾಯಣಸ್ವಾಮಿ, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಡಿ.ವಿ.ಸದಾನಂದ ಗೌಡ, ಜಗದೀಶ್ ಶೆಟ್ಟರ್, ಸಂಸದರು, ಶಾಸಕರು, ವಿಧಾನಪರಿಷತ್ ಸದಸ್ಯರು, ಮಾಜಿ ಸಚಿವರು ಮತ್ತು ಕಾರ್ಯಕಾರಿಣಿಯ ಅಪೇಕ್ಷಿತರು ಉಪಸ್ಥಿತರಿದ್ದರು.



ಮುಂಬರುವ ಚುನಾವಣೆಯಲ್ಲಿ ಬಿಜೆಪಿ ಗೆಲುವು ಖಚಿತ

ಇದೊಂದು ಭ್ರಷ್ಟ ಸರ್ಕಾರ, ಮೊಕದ್ದಮೆಗಳ ನೇತಾರರ ಸರ್ಕಾರವಾಗಿದೆ. 2028ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸುವುದು ಖಚಿತ ಎಂದು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮತ್ತು ಕರ್ನಾಟಕ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗ್ರವಾಲ್ ವಿಶ್ವಾಸ ವ್ಯಕ್ತಪಡಿಸಿದರು. ಸಮಾಜದಲ್ಲಿರುವ ಪ್ರತಿಯೊಂದು ಸಮುದಾಯದವರನ್ನು ಒಳಗೊಂಡು ಸಂಘಟನೆ ಮಾಡಿ ಮುಂದಿನ ಚುನಾವಣೆಯಲ್ಲಿ ಹೋರಾಡಿ ವಿಜಯಶಾಲಿಗಳಾಗಬೇಕು ಎಂದರು. ವಕ್ಫ್ ಅತಿಕ್ರಮಣ ವಿರುದ್ಧ ಹೋರಾಟವೂ ಸೇರಿದಂತೆ ಬಿಜೆಪಿ ನಿರಂತರ ಹೋರಾಟದಲ್ಲಿ ತೊಡಗಿಸಿಕೊಂಡ ಕುರಿತು ಅವರು ಮೆಚ್ಚುಗೆ ಸೂಚಿಸಿದರು. ಬಿ.ವೈ. ವಿಜಯೇಂದ್ರ, ಆರ್. ಅಶೋಕ, ಛಲವಾದಿ ನಾರಾಯಣಸ್ವಾಮಿ ಅವರ ನೇತೃತ್ವದಲ್ಲಿ ಮುಂದಿನ ಚುನಾವಣೆಯಲ್ಲಿ ಬಹುಮತದೊಂದಿಗೆ ನಾವು ಅಧಿಕಾರಕ್ಕೆ ಬರುತ್ತೇವೆ ಎಂದು ಅಗ್ರವಾಲ್ ಹೇಳಿದರು.

> ರಾಜ್ಯ ಸರ್ಕಾರದ ಚಳಿ ಬಿಡಿಸುವ ಕೆಲಸವನ್ನು ಪ್ರತಿಪಕ್ಷವಾದ ಬಿಜೆಪಿ ರಾಜ್ಯ ಘಟಕ ಮಾಡುತ್ತಲೇ ಬಂದಿದೆ. ಮುಂದಿನ ದಿನಗಳಲ್ಲು ಅನೇಕ ಚುನಾವಣೆಗಳ ದಿನಗಳು. ಕಾರ್ಯಕರ್ತರ ಚುನಾವಣೆ ಮುಂದೆ ಬರಲಿದೆ. ಗ್ರಾ.ಪಂ., ತಾ.ಪಂ., ಜಿ.ಪಂ. ಚುನಾವಣೆಗಳಲ್ಲಿ ನಮ್ಮ ಕಾರ್ಯಕರ್ತರನ್ನು ಗೆಲ್ಲಿಸಬೇಕು.
> ■ ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಏಳು–ಬೀಳು ನಡುವೆ ಯಶಸ್ಸು: ಸತೀಶ್

ಬೆಂಗಳೂರು: ರಾಜಕೀಯದಲ್ಲಿ ಹಲವಾರು ಏಳು–ಬೀಳುಗಳನ್ನು ಕಂಡು ಇಂದು ಯಶಸ್ವಿಯಾಗಿದ್ದೇವೆ. ಯಾವತ್ತೂ ಜನರನ್ನು ಸರಿ ದಾರಿಗೆ ತರಲು ಹೆಚ್ಚು ಒತ್ತು ನೀಡಿದ್ದೇವೆ ಎಂದು ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಗುರುವಾರ ಪ್ರೆಸ್‌ಕ್ಲಬ್‌ನಲ್ಲಿ ಆಯೋಜಿಸಿದ್ದ ಪ್ರೆಸ್‌ಕ್ಲಬ್ ಆಫ್ ಬೆಂಗಳೂರು ವಾರ್ಷಿಕ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, ನಾವು ರಾಜಕೀಯಕ್ಕಿಂತ ಹೆಚ್ಚಿನ ಸಮಯವನ್ನು ಸಾಮಾಜಿಕ ಕಾರ್ಯಗಳಿಗೆ ನೀಡುತ್ತೇವೆ ಎಂದರು. 30 ವರ್ಷಗಳ ಸಮಾಜ ಸೇವೆ ಮತ್ತು ರಾಜಕೀಯ ಹಿನ್ನೆಲೆಯಲ್ಲಿ ಪ್ರೆಸ್ ಕ್ಲಬ್ ಪ್ರಶಸ್ತಿ ನೀಡಲಾಗಿದೆ. ಸುಮಾರು ಪ್ರಶಸ್ತಿಗಳು ಬಂದಿದ್ದರೂ ಸ್ವೀಕರಿಸಿಲ್ಲ, ಆದರೆ ಈ ಪ್ರಶಸ್ತಿಯನ್ನು ಸ್ವೀಕರಿಸಿದ್ದೇನೆ. ಈ ಬಾರಿ ನನ್ನನ್ನು ಆಯ್ಕೆ ಮಾಡಿದಕ್ಕೆ ಧನ್ಯವಾದಗಳು ಎಂದು ಹೇಳಿದರು.

ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ ಪ್ರಭಾಕರ್ ಮಾತನಾಡಿ, ಸತೀಶ್ ಜಾರಕಿಹೊಳಿ ಅವರು, ಮೌನಿಯಾಗಿದ್ದರೂ ಪರವಾಗಿಲ್ಲ, ನನ್ನ ಕೆಲಸ ಮಾತನಾಡಬೇಕು ಎನ್ನುವರು, ಕೆಲಸದಲ್ಲಿ ತಮ್ಮ ಶಕ್ತಿ ಸಾಮರ್ಥ್ಯ ತೋರಿಸುವರು. ಜನರಿಗೆ ಹೇಳಬೇಕಾದನ್ನು ಸ್ಪಷ್ಟವಾಗಿ ಹೇಳುತ್ತಾರೆ. ಅವರಲ್ಲಿ ಸ್ಪಷ್ಟತೆ ಖಚಿತತೆ ಕಾಣಬಹುದಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಾಜಿ ಅಡ್ವೋಕೇಟ್ ಜನರಲ್ ರವಿವರ್ಮಕುಮಾರ್, ಶಾಸಕ ರಿಜ್ವಾನ್ ಅರ್ಷದ್, ಪ್ರೆಸ್‌ಕ್ಲಬ್ ಅಧ್ಯಕ್ಷ ಆರ್.ಶ್ರೀಧರ್, ಉಪಾಧ್ಯಕ್ಷ ಮೋಹನ್ ಕುಮಾರ್ ಬಿ.ಎನ್. ಕಾರ್ಯದರ್ಶಿ ಶಿವಕುಮಾರ್ ಬೆಳ್ಳಿತಟ್ಟೆ ಸೇರಿದಂತೆ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಅಧಿಕಾರ ಬರುತ್ತೆ ಹೋಗುತ್ತೆ

ಜೀವನದಲ್ಲಿ ಹಣ, ಅಧಿಕಾರ ಬರುತ್ತೆ ಹೋಗುತ್ತೆ ಆದರೆ, ಮಾಡಿದ ಕಾರ್ಯಗಳನ್ನು ಅಳಿಸಲು ಸಾಧ್ಯವಿಲ್ಲ. ಯಾವ ಕೆಲಸ ಅಸಾಧ್ಯ ಎನ್ನುತ್ತಾರೆಯೋ ಅಂತಹ ಕೆಲಸಗಳನ್ನು ಮಾಡುವ ಹವ್ಯಾಸ ಇದೆ. ಬಂಗಾರಪ್ಪ ಅವರು ಕ್ಷೇತ್ರಕ್ಕೆ ಹೋಗದೆ ಗೆದ್ದಿದ್ದರು, ಅದೇ ರೀತಿ ನಾನು ಒಂದು ಚುನಾವಣೆಯಲ್ಲಿ ಕ್ಷೇತ್ರಕ್ಕೆ ಹೋಗದೆ ಗೆಲುವು ಸಾಧಿಸಿದ್ದೆ ಎಂದರು. ನಮಗೆ ಯಾರು ಯಾವುದೇ ಕೆಲಸಕ್ಕೆ ಅರ್ಜಿ ಕೊಟ್ಟು ಪದೇ ಪದೇ ಅಲೆಯಬೇಕಿಲ್ಲ, ಇದು ಜನಪರ ಕೆಲಸ ಎಂದರೆ ನಾವೇ ಕಾರ್ಯ ಕೈಗೊಳ್ಳುತ್ತೇವೆ. ಕನಿಷ್ಠ 10 ವರ್ಷ ರಾಜಕಾರಣದಲ್ಲಿ ಇರುತ್ತೇನೆ. ಅಲ್ಲಿಯವರೆಗೂ ರಾಜ್ಯದ ಜನರ ಅಭಿವೃದ್ಧಿಗೆ ಪೂರಕವಾಗಿ ಖಂಡಿತವಾಗಿ ಕೆಲಸ ಮಾಡುತ್ತೇನೆ ಎಂದು ಹೇಳಿದರು.

ಪ್ರಮುಖ ಜಿಲ್ಲೆಗಳಲ್ಲಿ ವಾಯುಗುಣ ಮಟ್ಟ

ಬೆಂಗಳೂರು	ಬೆಳಗಾವಿ	ಚಾ.ನಗರ	ಬಳ್ಳಾರಿ	ಉಡುಪಿ
157	277	45	146	185
ಮಂಗಳೂರು	**ಮೈಸೂರು**	**ಶಿವಮೊಗ್ಗ**	**ಹುಬ್ಬಳ್ಳಿ**	**ವಿಜಯಪುರ**
178	85	187	160	144

ಬೆಳಗಾವಿಯಲ್ಲಿ ವಾಯು ಗುಣಮಟ್ಟ ಕಳಪೆ
ಗಾಳಿ ಮಟ್ಟ 277 ದಾಖಲು: ಆತಂಕ

ಬೆಳಗಾವಿ: ಕರ್ನಾಟಕದ ಪ್ರಮುಖ ನಗರಗಳಲ್ಲಿ ವಾಯು ಗುಣಮಟ್ಟವು ಹದಗೆಟ್ಟಿದ್ದು, ಅದರಲ್ಲೂ ಬೆಂಗಳೂರು ಮತ್ತು ಬೆಳಗಾವಿಯಲ್ಲಿ ಆತಂಕಕಾರಿ ಮಟ್ಟಕ್ಕೆ ತಲುಪಿದೆ.

ನಗರದ ಸರಾಸರಿ ಗಾಳಿಯ ಮಟ್ಟ 117ರಿಂದ 157ರ ನಡುವೆ ದಾಖಲಾಗಿದ್ದು, ಇದು ಕಳಪೆ ಮತ್ತು ಕೆಲವು ಭಾಗಗಳಲ್ಲಿ ಅನಾರೋಗ್ಯಕರ ಮಟ್ಟಕ್ಕೆ ತಲುಪಿದೆ. ಸಿಲ್ಕ್ ಬೋರ್ಡ್, ವೈಟ್‌ಫೀಲ್ಡ್ ಮತ್ತು ಬಿಟಿಎಂ ಲೇಔಟ್‌ನಂತಹ ಪ್ರದೇಶಗಳಲ್ಲಿ ಮಾಲಿನ್ಯದ ಮಟ್ಟ ಹೆಚ್ಚಿದೆ.

ಉತ್ತರ ಕರ್ನಾಟಕದ ಬೆಳಗಾವಿಯಲ್ಲಿ ವಾಯು ಗುಣಮಟ್ಟ ಕಳಪೆಯಾಗಿದ್ದು, ಗಾಳಿಯ ಮಟ್ಟ 277 ದಾಖಲಾಗಿದೆ. ಇದು ಅನಾರೋಗ್ಯಕರ ಹಂತ ಎಂದು ಹೇಳಲಾಗಿದೆ. ಹಾಗಾಗಿ ಶ್ವಾಸಕೋಶದ ಸಮಸ್ಯೆ ಇರುವವರಿಗೆ ಹಾನಿಕಾರಕವಾಗಿದೆ. ಕರಾವಳಿ ಭಾಗದಲ್ಲೂ ವಾಯು ಗುಣಮಟ್ಟ ಕುಸಿತ ಕಂಡಿದ್ದು, ವಾಹನ ದಟ್ಟಣೆ, ಒಣ ಹವೆಯಿಂದಾಗಿ ಗಾಳಿಯಲ್ಲಿ ಧೂಳಿನ ಪ್ರಮಾಣ ಹೆಚ್ಚಾಗಿದೆ.

ರಾಜ್ಯದಲ್ಲಿ ತಾಪಮಾನದ ಏರಿಳಿತ (ಬೆಳಗ್ಗೆ ಚಳಿ, ಮಧ್ಯಾಹ್ನ ಬಿಸಿಲು) ಮತ್ತು ವಾಯು ಮಾಲಿನ್ಯದ ಕಾರಣದಿಂದಾಗಿ ಕೆಮ್ಮು, ನೆಗಡಿ ಮತ್ತು ಉಸಿರಾಟದ ತೊಂದರೆಗಳು ಹೆಚ್ಚಾಗುತ್ತಿವೆ ಎಂದು ವೈದ್ಯರು ಎಚ್ಚರಿಕೆ ನೀಡಿದ್ದಾರೆ.

ಮಾಲಿನ್ಯ ಹೆಚ್ಚಿರುವ ಪ್ರದೇಶಗಳಲ್ಲಿ ಸಂಚರಿಸುವಾಗ ಎನ್‌95 ಮಾಸ್ಕ್ ಬಳಸುವುದು ಉತ್ತಮ. ಉಸಿರಾಟದ ತೊಂದರೆ ಇರುವವರು ಮತ್ತು ಮಕ್ಕಳು ಬೆಳಗ್ಗೆ ಅಥವಾ ಸಂಜೆ ಹೊರಗೆ ಹೋಗುವುದನ್ನು ಕಡಿಮೆ ಮಾಡುವುದು ಸೂಕ್ತ ಹಾಗೂ ಒಣ ಹವೆಯಿರುವುದರಿಂದ ಸಾಕಷ್ಟು ನೀರು ಕುಡಿಯಿರಿ ಎಂದು ಸಲಹೆ ನೀಡಿದ್ದಾರೆ.

ಇನ್ನು ಈ ಗಾಳಿ ಗುಣಮಟ್ಟ ಮಧ್ಯಾಹ್ನ ಅಥವಾ ಸಂಜೆ ಹೊತ್ತಿಗೆ ಬದಲಾಗಬಹುದು ಎಂದು ಹೇಳಲಾಗಿದೆ. ಗಾಳಿಯಲ್ಲಿ ಪ್ರಮುಖವಾಗಿ ಪಿಎಂ 2.5 ಮತ್ತು ಪಿಎಂ 10 ಕಣಗಳ ಪ್ರಮಾಣ ಹೆಚ್ಚಾಗಿದೆ. ಇದು ಒಣ ಹವೆಯಿಂದಾಗಿ ಗಾಳಿಯಲ್ಲಿ ಧೂಳು ಸುಲಭವಾಗಿ ಹರಡುತ್ತದೆ.

ಪೂರ್ವ ಸಿದ್ಧತಾ ಪರೀಕ್ಷೆ: ಸಮಯ ಬದಲಾವಣೆ

ಬೆಂಗಳೂರು: ಫೆ.28ಕ್ಕೆ ನಿಗದಿಯಾಗಿರುವ ಎಸ್‌ಎಸ್‌ಎಲ್‌ಸಿ ಮೂರನೇ ಪೂರ್ವ ಸಿದ್ಧತಾ ಪರೀಕ್ಷೆಯ ಒಂದು ವಿಷಯದ ಸಮಯವನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಬದಲಾವಣೆ ಮಾಡಿದೆ.

ಫೆ. 28ರ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ರವರೆಗೆ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಪರೀಕ್ಷೆ ಇರುವುದರಿಂದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ನಿಗದಿಯಾಗಿದ್ದ ಸಮಾಜ ವಿಜ್ಞಾನ ಪರೀಕ್ಷೆಯನ್ನು ಬೆಳಗ್ಗೆ 10 ರ ಬದಲು ಮಧ್ಯಾಹ್ನ 2 ಗಂಟೆಗೆ ಪ್ರಾರಂಭಿಸುವಂತೆ ಸೂಚನೆ ನೀಡಿದೆ. ಅಂದು ಮಧ್ಯಾಹ್ನ 12.30ರ ಬಳಿಕ ಪ್ರಶ್ನೆ ಪತ್ರಿಕೆಯನ್ನು ಶಾಲಾ ಲಾಗಿನ್‌ನಿಂದ ಡೌನ್ ಲೋಡ್ ಮಾಡಿಕೊಂಡು ಪರೀಕ್ಷೆ ನಡೆಸುವಂತೆ ಪ್ರೌಢ ಶಾಲಾ ಮುಖ್ಯ ಶಿಕ್ಷಕರಿಗೆ ಪರೀಕ್ಷಾ ಮಂಡಳಿ ಸೂಚಿಸಿದೆ.

ಸರ್ಕಾರಿ ಆಸ್ಪತ್ರೆಯಲ್ಲಿ ಬಾಣಂತಿ–ಮಗು ಸಾವು

ಸಿಂದಗಿ: ಸರ್ಕಾರಿ ಆಸ್ಪತ್ರೆಯಲ್ಲಿ ಬಾಣಂತಿ ಹಾಗೂ ಮಗು ಮೃತಪಟ್ಟಿದ್ದು, ಮಹಿಳೆ ಮತ್ತು ಮಗುವಿನ ಸಾವಿಗೆ ವೈದ್ಯರ ನಿರ್ಲಕ್ಷ್ಯವೇ ಕಾರಣ ಎಂದು ಕುಟುಂಬದವರು ಆರೋಪಿಸುತ್ತಿದ್ದಾರೆ.

ಸಿಂದಗಿಯ ವಿದ್ಯಾ ನಗರದ 4ನೇ ಕ್ರಾಸ್ ನಿವಾಸಿ ಮೈತ್ರಾ ರವಿಚಂದ್ರ ಸುಂಗಠಾಣ (26) ಮೃತಪಟ್ಟವರು. ಮೈತ್ರಾ ಫೆ.18ರಂದು ಸಿಂದಗಿ ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ದಾಖಲಾಗಿದ್ದು, ಫೆ.18ರಂದು ಮಗುವಿಗೆ ಜನ್ಮ ನೀಡಿದ್ದರು. ಅತೀ ರಕ್ತಸ್ರಾವದಿಂದ ಬಳಲುತ್ತಿದ್ದರು ಚಿಕಿತ್ಸೆ ನೀಡದೇ ಇದ್ದುದ್ದರಿಂದ ಮೃತಪಟ್ಟಿದ್ದಾರೆ ಎಂದು ಹೇಳಲಾಗುತ್ತಿದೆ.



ಬಾಣಂತಿ ಸಾವಿಗೆ ಸಿಂದಗಿ ತಾಲೂಕು ಸಾರ್ವಜನಿಕ ಆಸ್ಪತ್ರೆಯ ಸಿಬ್ಬಂದಿಗಳ ನಿರ್ಲಕ್ಷ್ಯವೇ ಕಾರಣ ಎಂದು ಮೃತರ ತಾಯಿ ಶೀತಮ್ಮ ಆರೋಪಿಸಿ, ತಾಯಿ ಮತ್ತು ಮಗುವಿನ ಸಾವಿನ ಸತ್ಯಾಂಶ ತಿಳಿದುಕೊಳ್ಳಲು ಕಾರಣರಾದ ವೈದ್ಯ ಮತ್ತು ಸಿಬ್ಬಂದಿ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ. ಈ ಕುರಿತು ಸಿಂದಗಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

ಜಿಲ್ಲಾ ಆರ್‌ಸಿಎಚ್‌ಒ ಡಾ.ಪರಶುರಾಮ ಹಿಟ್ನಾಳ ಸುದ್ದಿ ಮಾಧ್ಯಮದವರೊಂದಿಗೆ ಮಾತನಾಡಿ, ಆಸ್ಪತ್ರೆಯಲ್ಲಿ ಕರ್ತವ್ಯದ ವೈದ್ಯರು ಇರಲಿಲ್ಲ, ನೋವು ಹೆಚ್ಚಾದ ಕಾರಣ ಸ್ಟಾಫ್ ನರ್ಸ್‌ಗಳು ಹೆರಿಗೆ ಮಾಡಿಕೊಂಡಿದ್ದಾರೆ. ಈ ವೇಳೆ ತೀವ್ರ ರಕ್ತಸ್ರಾವ ಉಂಟಾಗಿದೆ. ಹೆಚ್ಚಿನ ಚಿಕಿತ್ಸೆಗೆ ವಿಜಯಪುರ ಆಸ್ಪತ್ರೆಗೆ ಕರೆದುಕೊಂಡು ಹೋಗಲು ತಿಳಿಸಿದ್ದಾರೆ. ರಕ್ತಸ್ರಾವ ಹೆಚ್ಚಾದ ಕಾರಣ ತಾಯಿ ಮತ್ತು ಮಗು ಮೃತಪಟ್ಟಿದೆ. ಇಲ್ಲಿರುವ ವೈದ್ಯರ ಕೊರತೆಯ ಸಮಸ್ಯೆಯ ಕುರಿತಾಗಿ ಮೇಲಾಧಿಕಾರಿಗಳ ಗಮನಕ್ಕೆ ತರಲಾಗುವುದು ಎಂದರು.



> ಬಾಣಂತಿ ಹಾಗೂ ಮಗು ಮೃತಪಟ್ಟಿದ್ದು, ಖೇದಕರ ಸಂಗತಿ. ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿ ಅಲ್ಲಿರುವ ನ್ಯೂನ್ಯತೆಗಳ ಬಗ್ಗೆ ಪರಿಶೀಲಿಸುತ್ತೇನೆ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಮೇಲಾಧಿಕಾರಿಗಳಿಗೆ ಶಿಫಾರಸು ಮಾಡುತ್ತೇನೆ.
> ■ ಅಶೋಕ ಮನಗೂಳಿ, ಶಾಸಕ

ಅಕ್ಕ ಕೆಫೆಗಳ ಸ್ಥಾಪನೆಗೆ 25 ಕೋಟಿ ರೂಪಾಯಿ ಮಂಜೂರು
ಮಹಿಳಾ ಸ್ವಾವಲಂಬನೆಗೆ ಕಾಫಿ ಉದ್ಯಮ ಸಹಕಾರಿ

ಮಡಿಕೇರಿ: ರಾಜ್ಯದಲ್ಲಿ ಕಾಫಿಯನ್ನು ಜನಪ್ರಿಯಗೊಳಿಸುವುದರೊಂದಿಗೆ ಮಹಿಳೆಯರಿಗೆ ಜೀವನೋಪಾಯದ ಅವಕಾಶಗಳನ್ನು ಸೃಷ್ಟಿಸುವ ನಿಟ್ಟಿನಲ್ಲಿ ರಾಜ್ಯಾದ್ಯಂತ 200ಕ್ಕೂ ಅಧಿಕ 'ಅಕ್ಕ ಕೆಫೆ'ಗಳನ್ನು ಆರಂಭಿಸಲು ರಾಜ್ಯ ಸರಕಾರ 25 ಕೋಟಿ ರೂ.ಗಳನ್ನು ಮಂಜೂರು ಮಾಡಿದೆ.

ರಾಜ್ಯ ಸರಕಾರ 2024–25ನೇ ಸಾಲಿನ ಬಜೆಟ್'ನಲ್ಲೇ ಇದನ್ನು ಘೋಷಿಸಿದ್ದರೂ, ಮಹಿಳೆಯರಿಂದ ಅಥವಾ ಮಹಿಳಾ ಸ್ವಸಹಾಯ ಗುಂಪುಗಳಿಂದ ಇದಕ್ಕೆ ಪೂರಕ ಸ್ಪಂದನ ದೊರಕಿಲ್ಲ ಎನ್ನಲಾಗಿದೆ. ಈ ಯೋಜನೆ ಸಫಲತೆ ಕಾಣದಿರಲು ಪ್ರಚಾರದ ಕೊರತೆಯೂ ಕಾರಣ ಎಂದು ಹೇಳಲಾಗುತ್ತಿದೆ. ಇತ್ತೀಚೆಗೆ (ಫೆ.12) ಬೆಂಗಳೂರಿನಲ್ಲಿ ನಡೆದ ಅಂತಾರಾಷ್ಟ್ರೀಯ ಕಾಫಿ ಉತ್ಸವದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದ ದೊಡ್ಡ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಅವರು ಇದನ್ನು ಪುನರುಚ್ಚರಿಸಿದ್ದು, ಈ ಯೋಜನೆಯು ಕರ್ನಾಟಕದ ಬಲಿಷ್ಠ ಕಾಫಿ ಪರಿಸರ ವ್ಯವಸ್ಥೆಯೊಂದಿಗೆ ತಳಮಟ್ಟದ ಉದ್ಯಮಿಗಳನ್ನು ಸಂಪರ್ಕಿಸುವ ಗುರಿಯನ್ನು ಹೊಂದಿದೆ ಎಂದು ಹೇಳಿದ್ದಾರೆ.

'ಅಕ್ಕ ಕೆಫೆ' ಕರ್ನಾಟಕ ಸರ್ಕಾರವು ಮಹಿಳಾ ಸಬಲೀಕರಣಕ್ಕಾಗಿ, ವಿಶೇಷವಾಗಿ ಸ್ವಸಹಾಯ ಗುಂಪುಗಳ ಮಹಿಳೆಯರಿಗಾಗಿ ಪ್ರಾರಂಭಿಸಿರುವ ಒಂದು ಅನನ್ಯ ಕೆಫೆ ಉಪಕ್ರಮವಾಗಿದೆ. ಸಂಪೂರ್ಣವಾಗಿ ಮಹಿಳೆಯರಿಂದಲೇ ನಿರ್ವಹಿಸಲ್ಪಡುವ ಈ ಕೆಫೆಗಳು, ಕೈಗೆಟುಕುವ ದರದಲ್ಲಿ ಉತ್ತಮ ಗುಣಮಟ್ಟದ ಕಾಫಿ ಮತ್ತು ಆಹಾರವನ್ನು ಒದಗಿಸಲಿವೆ.



ರಾಜ್ಯದ ಧಾರವಾಡ ಹಾಗೂ ಬೆಳಗಾವಿ ಸೇರಿದಂತೆ ವಿವಿಧ ಭಾಗಗಳಲ್ಲಿ ಈಗಾಗಲೇ ಅಕ್ಕ ಕೆಫೆಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳನ್ನು ರಾಜ್ಯಾದ್ಯಂತ ವಿಸ್ತರಿಸಲು ಅವಕಾಶಗಳಿವೆ. ಮಹಿಳೆಯರಿಗೆ ಆರ್ಥಿಕ ಸ್ವಾವಲಂಬನೆ ಮತ್ತು ಕೌಶಲ್ಯಾಭಿವೃದ್ಧಿ ಅವಕಾಶಗಳನ್ನು ಒದಗಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದ್ದು, ರಾಜ್ಯ ಸರಕಾರದ ಕೌಶಲ್ಯ ಅಭಿವೃದ್ಧಿ ಇಲಾಖೆಯಡಿ ಕಾರ್ಯನಿರ್ವಹಿಸುವ ಸ್ವಾಯತ್ತ ಸಂಸ್ಥೆಯಾದ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಪ್ರಮೋಷನ್ ಸೊಸೈಟಿ ಅಥವಾ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ / ಸಂಜೀವಿನಿ ಅಡಿಯಲ್ಲಿ ಸ್ವಸಹಾಯ ಸಂಘಗಳ ಮಹಿಳಾ ಸದಸ್ಯರಿಂದ ಸಂಪೂರ್ಣ ನಿರ್ವಹಿಸಲ್ಪಡಲಿದೆ. ಸರ್ಕಾರವು ಪ್ರತಿ ಕೆಫೆ ಸ್ಥಾಪನೆಗೆ ಅಗತ್ಯವಿರುವ ಮೂಲಸೌಕರ್ಯ ಮತ್ತು ಅನುದಾನವನ್ನು ಒದಗಿಸಲಿದ್ದು, ಅಕ್ಕ ಕೆಫೆ ಸ್ಥಾಪನೆಗೆ ಆಯ್ಕೆಯಾಗುವ ಸ್ಥಳದ ಒಡೆತನ ಹಾಗೂ ಸ್ವಸಹಾಯ ಸಂಘಗಳ ನಡುವೆ ಒಡಂಬಡಿಕೆ ಮಾಡಿಕೊಳ್ಳಬೇಕಿದೆ.

ಈ ಯೋಜನೆಯು ಮಹಿಳೆಯರನ್ನು ಬಾಣಸಿಗರಿಂದ ಉದ್ಯಮಿಗಳನ್ನಾಗಿ ಪರಿವರ್ತಿಸುವ ಗುರಿಯನ್ನು ಹೊಂದಿದೆ.

ಕರ್ನಾಟಕವು 2.2 ಲಕ್ಷ ಹೆಕ್ಟೇರ್‌ಗಳಲ್ಲಿ ಹರಡಿರುವ ತೋಟಗಳೊಂದಿಗೆ ಕಾಫಿ ಕೃಷಿಯಲ್ಲಿ ದೇಶವನ್ನು ಮುನ್ನಡೆಸುತ್ತಿದೆ. ಭಾರತದ ಉತ್ಪಾದನೆಯ ಶೇ. 75ರಷ್ಟು ಕಾಫಿಯನ್ನು ಹಾಸನ, ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಗಳು ಬೆಳೆಯುತ್ತಿವೆ. ಆದರೆ ರಾಜ್ಯದಲ್ಲಿ ಬೆಳೆಯುವ ಕಾಫಿಗೆ ಆಂತರಿಕ ಮಾರುಕಟ್ಟೆಯ ಕೊರತೆಯಿದ್ದು, ಬೆಳೆಗಾರರು ಅಂತರರಾಷ್ಟ್ರೀಯ ಮಾರುಕಟ್ಟೆಯನ್ನೇ ಅವಲಂಬಿಸಬೇಕಿದೆ.

ಗ್ರಾಮ ಪಂಚಾಯಿತಿ ತೆರಿಗೆ ಸಂಗ್ರಹ ಶೇ.71.39 ಪ್ರಗತಿ
ಕರ ವಸೂಲಾತಿಗೆ ಕ್ರಮ: ಖರ್ಗೆ

ಬೆಂಗಳೂರು: ರಾಜ್ಯದ ಗ್ರಾಮ ಪಂಚಾಯ್ತಿಗಳಲ್ಲಿ 2025–26ನೇ ಸಾಲಿನಲ್ಲಿ ಫೆ.18 ರವರೆಗೆ ಶೇ.71.39ರಷ್ಟು ತೆರಿಗೆ ಸಂಗ್ರಹವಾಗಿದ್ದು, ಈ ವರ್ಷಾಂತ್ಯಕ್ಕೆ ಗುರಿ ತಲುಪುವ ಸಾಧ್ಯತೆಗಳು ನಿಚ್ಚಳವಾಗಿವೆ ಎಂದು ಗ್ರಾಮೀಣಾಭಿವೃದ್ಧಿ ಇಲಾಖೆ ತಿಳಿಸಿದ್ದು, ಕಳೆದ ವರ್ಷಗಳಲ್ಲಿ ಉಳಿದಿರುವ ಬಾಕಿ ಕರ ಸಂಗ್ರಹಣೆಗೂ ತೀವ್ರ ಕ್ರಮ ಕೈಗೊಳ್ಳಲಾಗಿದೆ ಎಂದು ಇಲಾಖೆ ತಿಳಿಸಿದೆ.



ಹಿಂದಿನ ಸಾಲುಗಳ ತೆರಿಗೆ ಬಾಕಿ 3352.4 ಕೋಟಿಗಳಿದ್ದು ಆಸ್ತಿ ವರ್ಗೀಕರಣವಾರು ತೆರಿಗೆ ಬಾಕಿ ಪ್ರತ್ಯೇಕಿಸಿ ಸಂಗ್ರಹಿಸಲಾಗುತ್ತಿದೆ. ಕಳೆದ 5 ವರ್ಷಗಳಲ್ಲಿ ತೆರಿಗೆ ಬೇಡಿಕೆ ದ್ವಿಗುಣವಾಗಿದ್ದು, ತೆರಿಗೆ ವಸೂಲಾತಿಯ ಮೊತ್ತ ಕೂಡ ಹೆಚ್ಚಳವಾಗಿದೆ. ಆದ್ದರಿಂದ 2024–25ನೇ ಸಾಲಿನಲ್ಲಿ ಕರ್ನಾಟಕ ರಾಜ್ಯವು ದೇಶದಲ್ಲಿಯೇ ಅತಿ ಹೆಚ್ಚು ತೆರಿಗೆ ವಸೂಲಾತಿ ಮಾಡಿದ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಪ್ರಸಕ್ತ ಸಾಲಿನ ಬಾಕಿಯನ್ನು ಮಾರ್ಚ್ 2026ರ ಅಂತ್ಯದೊಳಗೆ ವಸೂಲಾತಿ ಮಾಡಿ ಪ್ರಗತಿ ಸಾಧಿಸಲಾಗುವುದು. ಸಾರ್ವಜನಿಕರು ತಾವಿರುವಲ್ಲಿಯೇ ತಮ್ಮ ಆಸ್ತಿಗೆ ಸಂಬಂಧಿಸಿದಂತೆ ತೆರಿಗೆ ಪಾವತಿಗಾಗಿ ಕ್ಯೂಆರ್‌ನಿಂದ ಬಾಪೂಜಿ ಸೇವಾ ಕೇಂದ್ರಗಳ ಮೂಲಕ ತೆರಿಗೆ ಪಾವತಿ ಬಗ್ಗೆ ಅವಕಾಶ ಕಲ್ಪಿಸಲಾಗಿದೆ ಹಾಗೂ ಆಸ್ತಿ ತೆರಿಗೆ ಸಂಬಂಧ ಪಾವತಿಸಬೇಕಾದ ತೆರಿಗೆಯ ವಿವರಗಳನ್ನು ವೀಕ್ಷಿಸಲು ಪಂಚಮಿತ್ರ ತಂತ್ರಾಂಶದಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ ಎಂದೂ ಸಚಿವರು ವಿವರಿಸಿದ್ದಾರೆ.

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯ್ತಿ ಸಿಇಒಗಳು ತೆರಿಗೆ ವಸೂಲಾತಿ ಆಂದೋಲನಗಳನ್ನು ವಿನೂತನವಾಗಿ ಹಮ್ಮಿಕೊಂಡು ಸಾಮಾಜಿಕ ಜಾಲತಾಣ ಮತ್ತು ವೃತ್ತ ಪತ್ರಿಕೆಗಳು ಸೇರಿ ಇತರೆ ಮಾಧ್ಯಮಗಳ ಮೂಲಕ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ತೆರಿಗೆ ಪಾವತಿ ಬಗ್ಗೆ, ವಿನಾಯಿತಿಗಳ ಬಗ್ಗೆ ಸಾಕಷ್ಟು ಪ್ರಚಾರಗಳನ್ನು ಮಾಡಿ, ತೆರಿಗೆ ವಸೂಲಾತಿ ಹೆಚ್ಚಳಕ್ಕೆ ಕ್ರಮವಹಿಸುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ತೆರಿಗೆ ವಸೂಲಾತಿ ವಿವರ

ವರ್ಷ	ಬೇಡಿಕೆ	ವಸೂಲಾತಿ	ಬಾಕಿ	ಶೇಕಡಾ
2023-24	1377.10	764.20	612.90	55.49
2024-25	1582.50	1270.50	312.00	80.28
2025-26	1623.40	1159.10	464.34	71.39

ಸಂಪಾದಕೀಯ

ದೇಶ ಮೊದಲು ಎಂಬುದು ಶ್ರೇಷ್ಠ ಧ್ಯೇಯ

ರಾಜಕಾರಣದಲ್ಲಿ ಪಕ್ಷಗಳ ವೈಖರಿ, ನಡವಳಿಕೆಗಳು, ನಿರ್ಧಾರಗಳು ಟೀಕೆಯ ವಸ್ತುಗಳಾಗಬೇಕೇ ಹೊರತು ಟೀಕೆಯ ಭರದಲ್ಲಿ ದೇಶದ ಹೆಸರಿಗೆ ಭಂಗ ತರುವಂಥ ಕೆಲಸ ಆಗಬಾರದು. ದುರಂತವೆಂದರೆ, ಸಾಮಾಜಿಕ ಜಾಲತಾಣಗಳ ಯುಗದಲ್ಲಿ ನಾವು ಯಾರಿಗೆ ಏಕೆ ಬಯ್ಯುತ್ತಿದ್ದೇವೆ ಎಂಬುದರ ಸ್ಪಷ್ಟ ಕಲ್ಪನೆಯೇ ಮರೆಯಾಗುತ್ತಿದೆ. ಸದ್ಯ ದಿಲ್ಲಿಯಲ್ಲಿ ಅಂತಾರಾಷ್ಟ್ರೀಯ ಮಟ್ಟದ ಎಐ ಇಂಪ್ಯಾಕ್ಟ್ ಸಮಾವೇಶ ನಡೆಯುತ್ತಿದೆ. ಸುಮಾರು 20ಕ್ಕೂ ಹೆಚ್ಚು ದೇಶಗಳ ಅಧ್ಯಕ್ಷರು, ಪ್ರಧಾನಿಗಳು, 80ಕ್ಕೂ ಹೆಚ್ಚು ಸರ್ಕಾರದಲ್ಲಿನ



ವಿವಿಧ ಸಚಿವರು, ಅಧಿಕಾರಿಗಳು, ನೂರಾರು ಎಐಗೆ ಸಂಬಂಧಿಸಿದ ತಾಂತ್ರಿಕ ಕಂಪನಿಗಳ ಮುಖ್ಯಸ್ಥರು, ಹಿರಿಯ ಅಧಿಕಾರಿಗಳು, ಸಾವಿರಾರು ಪ್ರತಿನಿಧಿಗಳು ಇದರಲ್ಲಿ ಭಾಗಿಯಾಗಿದ್ದಾರೆ. ಕಳೆದ ವರ್ಷ ಇದೇ ಶೃಂಗಸಭೆ ಫ್ರಾನ್ಸ್‌ನಲ್ಲಿ ನಡೆದಿದ್ದು, ಇದು ಎರಡನೇ ಚರಣವಾಗಿದ್ದು ಭಾರತ ಆತಿಥ್ಯ ವಹಿಸಿಕೊಂಡಿದೆ.

ಎಐ ಅನ್ನು ಸರಿದಾರಿಗೆ ತರುವ ವಿಚಾರದಲ್ಲಿ ಇಂಥ ಶೃಂಗಸಭೆಗಳು ಮಹತ್ವದ್ದಾಗಿವೆ. ಹಾಗೆಯೇ, ನಮ್ಮ ಜನಜೀವನದಲ್ಲಿ ಹೇಗೆ ಎಐ ಅನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು, ಅಪಾಯಕ್ಕೆ ದಾರಿ ಮಾಡಿಕೊಡದೇ ಅದನ್ನು ನಿಯಂತ್ರಿಸುವ ಬಗ್ಗೆಯೂ ಚರ್ಚೆಗಳಾಗುತ್ತಿವೆ. ಕೆಲವೊಮ್ಮೆ ದೊಡ್ಡ ಕಾರ್ಯಕ್ರಮಗಳಾಗುವ ವೇಳೆ ಸಣ್ಣ ಪುಟ್ಟ ತಪ್ಪುಗಳಾಗುವುದು ಸಹಜ. ಹಾಗೆಯೇ, ಈ ಶೃಂಗಕ್ಕೆ ಬಂದದ್ದ ನೋಯ್ಡಾ ಮೂಲದ ವಿಶ್ವವಿದ್ಯಾನಿಲಯವೊಂದು ತಪ್ಪು ಮಾಡಿದೆ. ಚೀನಾ ನಿರ್ಮಿತ ರೋಬೋ ನಾಯಿಯೊಂದನ್ನು ಇಲ್ಲಿ ಪ್ರದರ್ಶಿಸಿ, ಅತೀವ ಹುಮ್ಮಸ್ಸಿನಲ್ಲಿ ತನ್ನದು ಎಂದು ಹೇಳಿ ವಿವಾದ ಮೈಮೇಲೆ ಎಳೆದುಕೊಂಡಿದೆ. ಇಂಥ ವಿಚಾರಗಳನ್ನು ಶೃಂಗಸಭೆ ಆರಂಭವಾಗುವ ಮುನ್ನವೇ ನಿರೀಕ್ಷಿಸಲು ಸಾಧ್ಯವಿಲ್ಲ. ಇವರು ತಮ್ಮ ಮಳಿಗೆಯಲ್ಲಿ ಈ ರೋಬೋ ನಾಯಿಯನ್ನು ಪ್ರದರ್ಶಿಸಿದ್ದು, ಜನರೇ ಅವರ ತಪ್ಪು ತೋರಿಸಿದ್ದಾರೆ. ಇದಾದ ಮೇಲೆ ಸಂಘಟಕರು, ಇಡೀ ವಿವಿಯ ಮಳಿಗೆಯನ್ನೇ ಅಲ್ಲಿಂದ ಖಾಲಿ ಮಾಡಿಸಿದೆ.

ಆದರೆ, ಇದೇ ಸಂಗತಿಯನ್ನು ಮುಂದಿಟ್ಟುಕೊಂಡು ಕೆಲವರು ಸಾಮಾಜಿಕ ಜಾಲತಾಣದಲ್ಲಿ ಭಾರತದ ವರ್ಚಸ್ಸಿಗೇ ಭಂಗ ಉಂಟು ಮಾಡುವ ಯತ್ನ ನಡೆಸುತ್ತಿದ್ದಾರೆ. ಇದು ಒಂದು ವಿವಿಯ ತಪ್ಪೇ ವಿನಃ ಅದು ಸಂಪೂರ್ಣವಾಗಿ ಭಾರತದ್ದಲ್ಲ. ಹಾಗೆಯೇ, ಎಐ ಎಂಬುದೇ ಈಗ ಎಲ್ಲ ಕಡೆಗಳಲ್ಲೂ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ವೇದಿಕೆ. ಈಗಷ್ಟೇ ಜನರಿಗೆ ಇದು ಏನು ಮಾಡಬಲ್ಲದು ಎಂಬ ಬಗ್ಗೆ ಒಂದು ರೀತಿಯ ಕುತೂಹಲ, ಆತಂಕಗಳ ಜತೆಗೆ ತಿಳಿವಳಿಕೆಯಾಗುತ್ತಿದೆ. ಇಂಥ ಹೊತ್ತಲ್ಲಿ, ಒಂದು ವಿವಿಯ ಅಧ್ಯಾಪಕರು ಮಾಡಿದ ತಪ್ಪಿಗೆ ದೇಶವನ್ನೇ ಹೊಣೆ ಮಾಡುವುದು ಎಷ್ಟರ ಮಟ್ಟಿಗೆ ಸರಿ? ಅಲ್ಲದೆ, ಇದೇ ಘಟನೆಯನ್ನು ಇರಿಸಿಕೊಂಡು ಟ್ರೋಲ್ ಮಾಡಲು ಯತ್ನಿಸುವುದು, ಸರ್ಕಾರದ ಸಚಿವರು, ಪ್ರಧಾನಿಗಳನ್ನೇ ಅಪಹಾಸ್ಯಕ್ಕೆ ಗುರಿಮಾಡುವುದು ಸಭ್ಯತೆಯ ಲಕ್ಷಣವೇ ಎಂಬ ಪ್ರಶ್ನೆಗಳನ್ನೂ ಕೇಳಬೇಕಾಗುತ್ತದೆ.

ಪಶ್ಚಾತ್ತಾಪ ಪಡುವವರು ಯಾರು?

ಸತಾಂ ಮತಮತಿಕ್ರಮ್ಯ ಯೋಧಿಸತಾಂ ವರ್ತತೇ ಮತೇ ।
ಕಾಲೇನ ವ್ಯಸನಂ ಪ್ರಾಪ್ಯ ಪಶ್ಚಾತ್ತಾಪಂ ಸ ಗಚ್ಛತಿ ॥ –ಪಂಚತಂತ್ರ

ಸಜ್ಜನರ ಅಭಿಪ್ರಾಯವನ್ನು ಮೀರಿ ದುಷ್ಟರ ಅಭಿಪ್ರಾಯದಲ್ಲಿರುವವರು ಕಾಲಕ್ರಮವಾಗಿ ದುಃಖವನ್ನು ಹೊಂದಿ ಪಶ್ಚಾತ್ತಾಪವನ್ನೂ ಹೊಂದುತ್ತಾರೆ– ಎಂಬುದು ಶ್ಲೋಕಾರ್ಥ.



ಲೋಕ ವ್ಯವಹಾರ ಚೆನ್ನಾಗಿ ನಡೆಯಬೇಕು, ಜನಜೀವನ ಸುಗಮವಾಗಿ ಸಾಗಬೇಕು. ಎಲ್ಲರ ಬದುಕು ಸುಖಮಯವಾಗಬೇಕು ಎಂದು ಆಶಿಸುವುದು ಸುಲಭ. ಕೇವಲ ಆಶಯವನ್ನು ಇಟ್ಟುಕೊಂಡ ಮಾತ್ರಕ್ಕೆ ಯಾವುದು ಸಾಧಿತವಾಗುವುದಿಲ್ಲ. ಆ ನಿಟ್ಟಿನಲ್ಲಿ ಅನ್ವೇಷಣೆ ಹಾಗೂ ಪ್ರಯತ್ನವಿರಬೇಕು. ಇದಕ್ಕಾಗಿ ನಮಗೆ ತೋರಿಸುವುದು ಸಜ್ಜನರನ್ನು, ಸಾಧುಸಂತರನ್ನು. ಬೋಧಿಸುವುದು ಮಹಾತ್ಮರ ಜೀವನವನ್ನು ಹಾಗೂ ಸತ್ವಪೂರ್ಣ ಬೋಧನೆಯನ್ನು. ಅವರು ನಡೆಯುವುದು ಉತ್ತಮ ಮಾರ್ಗದಲ್ಲಿ, ನಡೆಸುವುದು ಉತ್ತಮ ಚಿಂತನೆಯನ್ನು. ಕಾಯೇನ ವಾಚಾ ಮನಸಾ ಜೀವನ ನಡೆಸುವುದು ಲೋಕಹಿತಕ್ಕಾಗಿ. ಇದೆಂದೂ ಲೋಕ ಮೆಚ್ಚಿಸುವುದಕ್ಕಲ್ಲ.

ಈ ಕಾರಣಕ್ಕಾಗಿಯೇ ಸಜ್ಜನರ ಸಹವಾಸಕ್ಕೆ ಹೆಚ್ಚು ಒತ್ತು ಕೊಡಲಾಗಿದೆ. ಅವರ ಸಂಘವೇ ಅತ್ಯಂತ ಪವಿತ್ರ. 'ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ' ಎಂದಿದ್ದಾರೆ. ತಾವು ಒಪ್ಪಿ ಆಯ್ದುಕೊಂಡ ಕೆಲಸವನ್ನು ಕರ್ತವ್ಯಬುದ್ಧಿಯಿಂದ ಸರಿಯಾಗಿ ಪೂರೈಸುವುದು ಅವರ ಬದ್ಧತೆ. 'ಸಜ್ಜನಾನಾಂ ಹಿ ಶ್ರೈಲೀಯಂ ಸಕ್ರಮಾರಂಭಶಾಲಿತಾ'– ಈ ಸೂಕ್ತಿಯು ಮೇಲಿನ ಅರ್ಥವನ್ನೇ ಧ್ವನಿಸುತ್ತದೆ. ಯಾವುದೇ ಕೆಲಸವನ್ನು ಆರಂಭಿಸುವಾಗ ಸರಿಯಾಗಿ ಯೋಚಿಸಿ ಸರಿಯಾದ ಕ್ರಮದಲ್ಲಿ ಆರಂಭಿಸಿ ಸರಿಯಾದ ಫಲವನ್ನೇ ಕಾಣುತ್ತಾರೆ. ಈ ಕಾರಣಕ್ಕಾಗಿ ಸಜ್ಜನರು ನಮಗೆ ಆದರ್ಶಪ್ರಾಯರು. ಅವರಂತೆ ಬದುಕಬೇಕೆಂದು ಹಂಬಲಿಸುತ್ತೇವೆ ಹಾಗೂ ಇತರರಿಗೂ ಬೋಧಿಸುತ್ತೇವೆ. ಅವರ ಅಭಿಪ್ರಾಯವನ್ನು ಮೀರಿ ನಡೆಯುವುದನ್ನು ಬಯಸುವುದಿಲ್ಲ. ಒಂದೊಮ್ಮೆ ಮೀರಿ ನಡೆದರೆ ದುಃಖ ಕಟ್ಟಿಟ್ಟ ಬುತ್ತಿ. ಅದರಲ್ಲೂ ಸಜ್ಜನರ ಮಾತನ್ನು ಮೀರುವುದರ ಜೊತೆಗೆ ದುಷ್ಟರ ಅಭಿಪ್ರಾಯ ಸ್ವೀಕರಿಸಿದರೆ ಕಥೆ ಮುಗಿದಂತೆ. ಅದಕ್ಕೆ ದೊಡ್ಡ ಬೆಲೆಯನ್ನು ತೆರಬೇಕಾಗುತ್ತದೆ. ಪಶ್ಚಾತಾಪ ಪಡಬೇಕಾಗುತ್ತದೆ. ದುಃಖವನ್ನು ಪಡಬೇಕಾಗಿ ಬರುತ್ತದೆ.

ಇಂತಹ ಅನುಭವ ನಮಗೂ ಇರಬಹುದು ಅಥವಾ ಇನ್ನೊಬ್ಬರನ್ನು ನೋಡಿ ತಿಳಿದಿರಲೂಬಹುದು. ಒಟ್ಟಿನಲ್ಲಿ ಸಜ್ಜನರ ಮಾತನ್ನು ಮೀರಿ ವ್ಯವಹರಿಸಬಾರದು. ಸೀತೆಯು ಲಕ್ಷ್ಮಣನ ಮಾತನ್ನು ಮೀರಿ, ಕಪಟ ಸನ್ಯಾಸಿಯ ಮಾತನ್ನು ನಂಬಿ ಅವನು ಬರೆದ ಲಕ್ಷ್ಮಣ ರೇಖೆಯನ್ನು ಮೀರಿ ನಡೆದಳು. ಅನಂತರ ಅವಳು ಅನುಭವಿಸಿದ ಕಷ್ಟ ಪರಂಪರೆ ನಮಗೆಲ್ಲಾ ಗೊತ್ತು. ಧರ್ಮದ ಪ್ರತಿಮೂರ್ತಿಯಾದ ಧರ್ಮರಾಜ ಇತರರ ಮಾತನ್ನು ಮೀರಿ ದ್ಯೂತವಾಡಿದ ಪರಿಣಾಮವಾಗಿ ತಾನಷ್ಟೇ ಅಲ್ಲ, ಇಡೀ ಕುಟುಂಬದ ದುಃಖಕ್ಕೆ ಕಾರಣನಾದ. ಭಾರತ ವಿಭಜನೆಯ ಸಂದರ್ಭದಲ್ಲಿ ಮುಸ್ಲಿಮರಿಗಾಗಿ ಪ್ರತ್ಯೇಕ ರಾಷ್ಟ್ರವನ್ನು ನೀಡಿದ ಮೇಲೆ ಇಲ್ಲಿರುವ ಮುಸ್ಲಿಮರನ್ನು ಅಲ್ಲಿಗೇ ಕಳುಹಿಸಬೇಕು. ಅವರೊಂದಿಗೆ ಹೊಂದಿಕೊಂಡು ಬದುಕುವುದು ಹಿಂದೂಗಳಿಗೆ ಸಾಧ್ಯವಿಲ್ಲ ಎಂದು ಡಾ। ಅಂಬೇಡ್ಕರರು ಬಲವಾಗಿ ಪ್ರತಿಪಾದಿಸಿದರೂ, ಗಾಂಧಿ, ನೆಹರು ಮೊದಲಾದ ಮಹಾ ಪ್ರಭೃತಿಗಳು ಸುತಾರಂ ಒಪ್ಪಲಿಲ್ಲ. ಅದು ದೇಶದ ಮೇಲೆ ಬೀರಿದ ದುಷ್ಪರಿಣಾಮ ಈಗ ಎಲ್ಲರಿಗೂ ಅರಿವಾಗಿದೆ.

ಎರಡು ಹೊತ್ತಗೆ–ಎರಡು ನಾಲಗೆ! ಏನಿದು ತಮಾಷೆ?

ಉಫ್ ವೀರಭೂಮಿಗೆ

• ಸಂತೋಷ್ ತಮ್ಮಯ್ಯ
santoshthammaiah@gmail.com





ತಿಳಿಯದವರಿಗೆ ತಿಳಿಯುವಂತೆ ಆಡುವುದು ದರ್ಶನಭಾಷೆ. ಒಗಟುಗಳನ್ನಿಟ್ಟು ಆಡುವುದು ಗುಹ್ಯಭಾಷೆ. ಭಾವಸಮಾಧಿಯಲ್ಲಿದ್ದಾಗ ಆಡುವುದು ಸಮಾಧಿ ಭಾಷೆ–ಹೀಗೆ ತತ್ತ್ವಶಾಸ್ತ್ರದಲ್ಲಿ ಬಗೆಬಗೆಯ ಭಾಷಿಕ ಚರ್ಯೆಗಳನ್ನು ಬಳಸಲಾಗುತ್ತದಂತೆ! ಸಮಾಜವನ್ನು ಪ್ರೇರೇಪಿಸಲು ಇವು ಕೆಲವು ತಂತ್ರಗಳು. ಈ ಗುಟ್ಟನ್ನು ನಾವು ತತ್ತ್ವಶಾಸ್ತ್ರದ ನೆಲೆಗಟ್ಟಿನಲ್ಲಿ ಮಾತ್ರ ನೋಡಬೇಕೇ ಹೊರತು, ತಮ್ಮನ್ನು ತಾವು ಸಮಾಜವನ್ನು ಉದ್ಧರಿಸಲು ಬಂದವರು ಎನ್ನುವ ಎಲ್ಲರ ಮಾತುಗಳಿಗೆ ಆರೋಪಿಸಿದರೆ ಕೆಟ್ಟೆವು. ಸಮಾಜವೂ ಕೆಡುವುದು. ಅಂದರೆ ಒಂದು ಕಾಲದಲ್ಲಿ ಅನುಭಾವಿಗಳು, ದಾರ್ಶನಿಕರು ಆಡುತ್ತಿದ್ದ ಮಾತುಗಳೀಗ ಚಾಲಾಕಿಗಳು ಬಳಸುವ ಮಾತುಗಳಾಗಿ ಬದಲಾಗಿವೆ. ಜೊತೆಗೆ ದಿಕ್ಕು ತಪ್ಪಿಸುವವರು ಬಳಸುವ ತಂತ್ರವೂ ಆಗಿದೆ. ಮಾತಿನ ಆಕರ್ಷಣೆಗಳೇ ಒಮ್ಮೊಮ್ಮೆ ಸತ್ಯವಾಗಿ ಕಾಣುವ ಅಪಾಯವೂ ಆಗಿರುತ್ತದೆ.

ಕಳೆದ ವಾರ ಸಂಸತ್ ಅಧಿವೇಶನದುದ್ದಕ್ಕೂ ವಿರೋಧಪಕ್ಷದ ನಾಯಕರು ಬಳಸಿದ್ದು ಇಂಥದ್ದೇ ಮಾತುಗಳು! ಅದರಲ್ಲೂ ಮಾಜಿ ಸೇನಾ ಮುಖ್ಯಸ್ಥ ಜ. ಎಂ.ಎಂ ನರವಣೆಯವರ ಪುಸ್ತಕದ ಕುರಿತು ವಿರೋಧಪಕ್ಷಗಳಾಡಿದ್ದು ಚಾಲಾಕಿತನದ ಮಾತುಗಳನ್ನೇ ಆದರೂ ಕೆಲವರಿಗದು ದರ್ಶನಭಾಷೆ, ಗುಹ್ಯಭಾಷೆ, ಸಮಾಧಿಭಾಷೆಗಳಂತೆ ಕಂಡಿದೆ! "ನರವಣೆಯವರ ಪುಸ್ತಕದ ಪರಿಚಯ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಆದರೆ ಪೆಂಗ್ವಿನ್, ಪುಸ್ತಕದ ಒಂದೇ ಒಂದು ಪ್ರತಿ ಪ್ರಕಟವಾಗಿಲ್ಲ ಎಂದು ಹೇಳಿದೆ. ಒಂದೋ ಪೆಂಗ್ವಿನ್ ಸುಳ್ಳು ಹೇಳುತ್ತಿದೆ. ಇಲ್ಲವೇ ನರವಣೆ ಸುಳ್ಳು ಹೇಳುತ್ತಿದ್ದಾರೆ. ಆದರೆ ನಾನು ಮಾಜಿ ಸೇನಾಮುಖ್ಯಸ್ಥರು ಸುಳ್ಳು ಹೇಳಲಾರರೆಂದು ಭಾವಿಸುತ್ತೇನೆ" ಎಂದು ರಾಹುಲ್ ಗಾಂಧಿಯವರು ವಿಚಿತ್ರವಾದ ಹೇಳಿಕೆ ನೀಡಿದ್ದಾರೆ. ಈ ಹೇಳಿಕೆಯ ಮೂಲಕ ಪುಸ್ತಕದಲ್ಲಿ ಉಲ್ಲೇಖವಾಗಿದೆ ಎನ್ನಲಾದ ವಿಷಯ, ಪ್ರಕಾಶಕರ ಪ್ರತಿಕ್ರಿಯೆ, ಅದರಿಂದ ಉಂಟಾದ ರಾಜಕೀಯ ಕೆಸರೆರಚಾಟಗಳಿಗೆ ಹೊಸ ವ್ಯಾಖ್ಯಾನ ಹುಟ್ಟಿಸುವುದರಲ್ಲಿ ರಾಹುಲ್ ಗಾಂಧಿ ಯಶಸ್ವಿಯಾಗಿದ್ದಾರೆ. ಭಾಷೆಯ ಮೂಲಕವೇ ಅವರು ಮಾಜಿ ಸೇನಾ ಮುಖ್ಯಸ್ಥರ ಹೆಗಲಿಗೆ ಬಂದೂಕಿಟ್ಟಿದ್ದಾರೆ. ಆ ಮೂಲಕ ವಿವಾದವನ್ನು ಮತ್ತೊಂದು ಸ್ತರಕ್ಕೆ ಕೊಂಡೊಯ್ಯುವ ತಂತ್ರ ಹೆಣೆದಿದ್ದಾರೆ. ಅಧಿವೇಶನ ಮುಗಿದರೂ, ಹೇಳಿಕೆ ಹಳಸಿದರೂ ಸಾಮಾನ್ಯ ಜನರ ಮನಸಿನಲ್ಲಿನ್ನೂ ಹುಳವೊಂದು ಗುಂಯಿಗುಡುತ್ತಿದೆ. ನರವಣೆ ಹಾಗೆಲ್ಲಾ ಬರೆದಿರುವುದು ನಿಜವಿರಬಹುದೇ? ಪುಸ್ತಕ ವಿವಾದದ ಸ್ವರೂಪ ಪಡೆಯುತ್ತಿರುವುದನ್ನು ಕಂಡು ಲೇಖಕ–ಪ್ರಕಾಶಕರು ಹೆದರಿರಬಹುದೇ? ಒಂದೆಡೆ ಪುಸ್ತಕ ಬಿಡುಗಡೆಯ ಪ್ರಕಟಣೆ ಮಾಡಿದ ನರವಣೆ, ಇನ್ನೊಂದೆಡೆ ಪುಸ್ತಕ ಅಚ್ಚಾಗಿಲ್ಲ ಎಂದ ಪ್ರಕಾಶಕರು! ಇಲ್ಲಿ ವಿರೋಧಾಭಾಸಗಳಿವೆಯಲ್ಲಾ? ಮುಂತಾದ ಪ್ರಶ್ನೆಗಳು ಕೆಲವರ ತಲೆ ಹಾಳುಮಾಡಿದೆ. ಪತ್ರಿಕೆಗಳಲ್ಲಿ ಪ್ರಕಟವಾದ ಭಾಗಗಳನ್ನೇ ಅಧಿಕೃತ ಎಂದು ನಂಬಿಸುವಲ್ಲಿ ಭಾಗಶಃ ಯಶಸ್ವಿಯಾಗಿರುವ ರಾಹುಲ್ ಚೀನಾ ಸಂಘರ್ಷದ ಸಮಯದಲ್ಲಿ ಕೇಂದ್ರ ಸರಿಯಾಗಿ ಸ್ಪಂದಿಸಲಿಲ್ಲ ಎನ್ನುವುದಕ್ಕೆ ಪುಸ್ತಕಪರಿಚಯವೇ ಸಾಕ್ಷಿ ಎಂದು ಸಂತೋಷ ಪಡುತಿದ್ದಾರೆ. ಅದೇ ಭ್ರಮೆಯಲ್ಲಿ ನರವಣೆಯವರನ್ನು ನಾನು ನಂಬುವೆ ಎಂದಿದ್ದಾರೆ. ಬಿಡುಗಡೆಯಾಗಲಿರುವ ಪುಸ್ತಕದಲ್ಲಿ ಮುಂದೆ ವಾಸ್ತವ ತಿಳಿದರೂ 'ತಿದ್ದಲಾಗಿದೆ' ಎನ್ನುವ ಪಲಾಯನಕಿಂಡಿಯನ್ನೂ ರಾಹುಲ್ ಈಗಾಗಲೇ ನಿರ್ಮಿಸಿಕೊಂಡಿದ್ದಾರೆ.

ಸತ್ಯ ಮುಂದೊಂದು ದಿನ ಹೊರಬಂದೇ ಬರುತ್ತದೆ. ಆದರೆ ಸರ್ಕಾರವನ್ನು ಟೀಕಿಸಲು ಕಾರಣವನ್ನು ಹುಡುಕುತ್ತಾ ರಾಹುಲ್ ಗಾಂಧಿ ಕಾಂಗ್ರೆಸಿನ ಪರಂಪರೆಯೊಂದನ್ನೇ ಅಲ್ಲಗಳೆದಿದ್ದಾರೆ ಎಂಬುದು ಇಲ್ಲಿ ಗಮನಿಸಬಹುದಾದ ಪ್ರಮುಖ ಸಂಗತಿ!

ಸ್ವಾತಂತ್ರ್ಯಾನಂತರ ಕಾಂಗ್ರೆಸ್ ಎಂದೂ ಯಾವುದೇ ಸೇನಾಮುಖ್ಯಸ್ಥರ, ಯಾವುದೇ ಸೇನಾಧಿಕಾರಿಗಳ ಅಥವಾ ಸಾಮಾನ್ಯ ಸೈನಿಕನ ಮಾತನ್ನು ನಂಬಿದ ಉದಾಹರಣೆ ಇಲ್ಲ. ಸೇನಾಧಿಕಾರಿಗಳ ಅಭಿಪ್ರಾಯಗಳಿಗೆ ಮನ್ನಣೆ ನೀಡಿದ, ಸೇನಾಧಿಕಾರಿಗಳ ಪುಸ್ತಕಕ್ಕೆ ಗೌರವ ಕೊಟ್ಟ ಸಾಕ್ಷಿಗಳು ಇತಿಹಾಸದಲ್ಲಿಲ್ಲ. ನರವಣೆ ಪ್ರಕರಣದಲ್ಲಿ, ಸೇನಾಧಿಕಾರಿಗಳ ಮಾತನ್ನು ನಂಬುತ್ತೇವೆ ಎಂದವರು ಹಿಂದೆಂದೂ ಸೇನಾಧಿಕಾರಿಗಳ ಮಾತನ್ನು ನಂಬಿಲ್ಲ ಮಾತ್ರವಲ್ಲ, ಲೆಕ್ಕಿಸಲೂ ಇಲ್ಲ. ಕೆಲ ವರ್ಷಗಳ ಹಿಂದೆ ಜನರಲ್





ವಿ.ಕೆ ಸಿಂಗ್ ಮತ್ತು ಸರ್ಕಾರಕ್ಕೂ ಭಿನ್ನಾಭಿಪ್ರಾಯವಿದೆ, ಸೇನೆ ಸರ್ಕಾರದ ವಿರುದ್ಧವಿದೆ, ಸಿಂಗ್ ಸೇನೆಯನ್ನು ದೇಶದ ವಿರುದ್ಧ ಎತ್ತಿಕಟ್ಟುತ್ತಿದ್ದಾರೆ ಎಂದು ಇದೇ ಕಾಂಗ್ರೆಸಿಗರು ಮುಗಿಬಿದ್ದಿದ್ದರು. ಜ. ವಿ.ಕೆ ಸಿಂಗ್ ನೇರವಾಗಿ ಸೇನಾಭವನದಿಂದ ಸಮವಸ್ತ್ರದಲ್ಲಿ ಧಾವಿಸಿ ಮಧ್ಯಮಗಳ ಮುಂದೆ ನಿಂತು, "ಸೈನ್ಯ ಬಲಿಷ್ಠವಾಗಿದೆ, ಸನ್ನದ್ಧ ಸ್ಥಿತಿಯಲ್ಲಿದೆ" ಎಂದಾಗಲೂ ಕಾಂಗ್ರೆಸಿಗರು ಸೇನಾಮುಖ್ಯಸ್ಥರ ಮಾತನ್ನು ನಂಬದೆ, ತಮ್ಮ ಪೂರ್ವಗ್ರಹಕ್ಕೇ ಬುದ್ಧಿ ಒಪ್ಪಿಸಿದ್ದರು. ಕಾಂಗ್ರೆಸಿನ ಟೀಕೆಗಳನ್ನು ಸುಳ್ಳೆಂದ ವಿ.ಕೆ ಸಿಂಗರನ್ನು ಮೋದಿ ಗುಲಾಮ ಎಂದು ಜರೆದಿದ್ದರು. ಆಗ ರಾಹುಲ್ ಮತ್ತವರ ಪಕ್ಷಕ್ಕೆ ಸೇನಾ ಮುಖ್ಯಸ್ಥರ ಮಾತುಗಳಿಗೆ ಗೌರವ ಕೊಡಬೇಕೆನಿಸಲಿಲ್ಲ. ಮುಂದೆ ಜನರಲ್ ಬಿಪಿನ್ ರಾವತ್ ಅವರನ್ನು ಸರ್ಕಾರ ಸೇನಾಮುಖ್ಯಸ್ಥರನ್ನಾಗಿ ನೇಮಿಸಿದಾಗ, "ಈ ಸೂಪರ್ ಸೀಡ್ ರಾಜಕೀಯ ಪ್ರೇರಿತವಾದದ್ದು, ಅಲ್ಪಸಂಖ್ಯಾತರು ಸೇನಾಮುಖ್ಯಸ್ಥರಾಗಬಾರದೆಂದು ಮಾಡಿದ ಹುನ್ನಾರ" ಎಂದು ಟೀಕಿಸಿದ್ದರು. ರಾವತ್ ಕಾಲದಲ್ಲಿ ಗಡಿಗಳು ಭದ್ರವಾಗುತ್ತಿದ್ದಾಗ, ಸೇನಾ ಬಜೆಟ್ ಹೆಚ್ಚಿಸಲು ಒತ್ತಾಯಿಸಿದಾಗ, "ಬಿಪಿನ್ ರಾವತ್ ಒಬ್ಬ ವಾರ್ ಜಂಕಿ (ಯುದ್ಧ ವ್ಯಸನಿ)" ಎಂದು ವೈಯಕ್ತಿಕ ಟೀಕಾಪ್ರಹಾರ ನಡೆಸಿದ್ದರು. ಅಧಿಕಾರ ಇರಲಿ, ಇಲ್ಲದಿರಲಿ ಕಾಂಗ್ರೆಸ್ ಯಾವಾಗಲೂ ಸೇನಾಧಿಕಾರಿಗಳನ್ನು ಟೀಕಿಸುತ್ತಲೇ ಬಂದಿದೆ. ಸೇನೆಯ ಎಲ್ಲಾ ಅಭಿಪ್ರಾಯಗಳಿಗೆ ಕಾಂಗ್ರೆಸಿನ ನಿಲುವು ಯಾವತ್ತೂ ವಿರುದ್ಧವಾಗಿಯೇ ಇರುತ್ತಿತ್ತು. ಅಂಥಲ್ಲಿ ಜನರಲ್ ನರವಣೆಯವರ ಮೇಲೆ ಏಕಾಏಕಿ ಪ್ರೀತಿ ಹುಟ್ಟುವುದೆಂದರೇನು?

ಜನರಲ್ ನರವಣೆಯವರ ಪುಸ್ತಕದಲ್ಲಿ ಸರ್ಕಾರವನ್ನು ಟೀಕಿಸಿದ ಸಂಗತಿಗಳಿವೆ ಎಂಬ ಊಹೆಯಿಂದ ಸೇನಾ ಸ್ವಾತಂತ್ರ್ಯ, ಭದ್ರತೆಯ ಚಿಂತೆ ಮತ್ತು ಅಭಿವ್ಯಕ್ತಿಯ ಆತಂಕ ಪಡುತ್ತಿರುವ ಕಾಂಗ್ರೆಸಿಗೆ ಬಹುಶ ತಮ್ಮ ಅಧಿಕಾರಾವಧಿಯಲ್ಲಿ ಜಿದ್ದಿಗೆ ಬಿದ್ದು ನಿಷೇಧ ಮಾಡಿದ ಬ್ರಿ. ಜಾನ್.ವಿ. ದಳವಿಯವರ The Himalayan Blunder: The Angry Truth About India's Most Crushing Military Disaster ಪುಸ್ತಕ ನೆನಪಾಗಲಿಲ್ಲ! 1962ರ ಚೀನಾ ಯುದ್ಧದಲ್ಲಿ ಕೈದಿಯಾಗಿದ್ದ ದಳವಿ ಪುಸ್ತಕ ದೇಶದಲ್ಲಿ ಸಂಚಲನ ಸೃಷ್ಟಿಸಿತ್ತೆಂದು ಜನ ನಂಬಿದ್ದಾರೆ. ಆದರೆ ಪ್ರಕಟಣೆಯಾಗಿ ಅನೇಕ ದಶಕಗಳು ಕಳೆದರೂ ಪುಸ್ತಕ ಅಜ್ಞಾತವಾಗಿತ್ತು ಎಂಬ ಸಂಗತಿ ದೇಶಕ್ಕೆ ತಿಳಿದಿಲ್ಲ. ಮೊನ್ನೆ ನರವಣೆಯವರ ಪುಸ್ತಕ ಸಂಸತ್ತಿನಲ್ಲಿ ಚರ್ಚೆಯಾದಂತೆ 1969ರಲ್ಲೂ ದಳವಿಯವರ ಪುಸ್ತಕ ಚರ್ಚೆಯಾಗಿತ್ತು. ವಿಚಿತ್ರವೆಂದರೆ ಇಂದು ಸೇನಾಧಿಕಾರಿಗಳ ಮಾತು ಮುಖ್ಯ ಅಂದವರೇ ಅಂದು ಸೇನಾಧಿಕಾರಿಯೊಬ್ಬರನ್ನು ಕಟಕಟೆಯಲ್ಲಿ ನಿಲ್ಲಿಸಿದ್ದರು. ವಿರೋಧಪಕ್ಷಗಳ ನಾಯಕರು ದಳವಿಯವರ ಪುಸ್ತಕದ ಅಂಶಗಳನ್ನು ಸದನದಲ್ಲಿ ಮಂಡಿಸಲು ಒತ್ತಾಯಿಸಿದಾಗ ಕಾಂಗ್ರೆಸ್, "ದಳವಿ ಒಬ್ಬ ಯುದ್ಧಕೈದಿ, ಚೀನಾ ಆತನ ಮನಪರಿವರ್ತನೆ ಮಾಡಿಲ್ಲವೆಂದು ನಂಬುವುದು ಹೇಗೆ?" ಎಂದು ಕೀಳಾಗಿ ಆರೋಪಿಸಿತ್ತು. ಅದಕ್ಕೆ ವಿರೋಧಪಕ್ಷಗಳು, "ನಾವು ಚೀನಾಕ್ಕಿಂತಲೂ ನಮ್ಮ ಸೈನಿಕನನ್ನು ನಂಬುತ್ತೇವೆ" ಎಂದಿದ್ದವು. ಆದರೆ ಕಾಂಗ್ರೆಸ್ ಯೋಧನ ನಿಷ್ಠೆಯನ್ನೇ ಪ್ರಶ್ನಿಸಿತ್ತು. ಏಳು ತಿಂಗಳು ಚೀನಾ ಜೈಲಿನಲ್ಲಿ ಕಳೆದು ಮರಳಿದ ಮೊದಲ ದಿನದಿಂದಲೇ ಜಾನ್ ದಳವಿ ಮತ್ತು ತಂಡ ಮಾನಸಿಕ ಹಿಂಸೆಯನ್ನು ಎದುರಿಸಿದರು. ರಾಜಕಾರಣಿಗಳು ಅಲ್ಲಲ್ಲಿ ಕೈದಿಗಳು ಚೀನಾ ಪರ ವಾಲಿರುವ ಶಂಕೆಯನ್ನು ವ್ಯಕ್ತಪಡಿಸಲಾರಂಭಿಸಿದ್ದರು. ರಕ್ಷಣಾಸಚಿವಾಲಯದ ನೀರವ ಮೌನ ಅವರನ್ನು ಮತ್ತಷ್ಟು ಹತಾಶರನ್ನಾಗಿ ಮಾಡಿತ್ತು. ಆ ದಿನಗಳಲ್ಲೇ ದಳವಿ ಯುದ್ಧಕ್ಕೆ ಕಾರಣ ಮತ್ತು ಸೋಲಿನ ಪರಾಮರ್ಶೆ ಮಾಡಲಾರಂಭಿಸಿದರು. ಇವೆಲ್ಲಕ್ಕೆ ದಳವಿಯವರಿಗೆ ಗಾಢ ಅಧ್ಯಯನದ ಅವಶ್ಯಕತೆಯೇನೂ ಬೇಕಾಗಿರಲಿಲ್ಲ. ನೆಹರು ಎಡವಟ್ಟುಗಳಿಗೆ ಪ್ರತ್ಯಕ್ಷ ಸಾಕ್ಷಿಯಾಗಿ ಮನಸ್ಸು ಕೆಡಿಸಿಕೊಂಡ ತಿಮ್ಮಯ್ಯನವರಿದ್ದರು. ದಿನೇದಿನೇ ದಳವಿಯವರಿಗೆ ಸೋಲಿನ ನೋವು ಎಷ್ಟು ಕಾಡತೊಡಗಿತ್ತೆಂದರೆ ಅವೆಲ್ಲವನ್ನೂ ಪುಸ್ತಕದಲ್ಲಿ ದಾಖಲಿಸಿದರು. ನಿವೃತ್ತಿಯ ಕೆಲವೇ ದಿನಗಳಲ್ಲಿ ಪುಸ್ತಕ ಪ್ರಕಟಣೆಗೆ ಪ್ರಯತ್ನಿಸಿದರು. ಆದರೆ ಯಾವ ಪ್ರಕಾಶಕರೂ ಮುಂದೆಬರಲಿಲ್ಲ. ಕೊನೆಗೆ ಈಸ್ಟ್ ಇಂಡಿಯಾ ಕಂಪನಿ ಕಾಲದ Thacker & Co. Ltd. ಪ್ರಕಟಣೆಗೆ ಮುಂದೆ ಬಂತು. ಅದೂ ಕೂಡ ಸರ್ಕಾರದ ಅಡ್ಡಿಗಳನ್ನೆದುರಿಸಕಾಯಿತು. ಕಾಂಗ್ರೆಸ್ ಬೆದರಿಕೆಯ ತರುವಾಯ Thacker & Co ಪುಸ್ತಕ ಬಿಡುಗಡೆ ಮಾಡಿತಾದರೂ ಪುಸ್ತಕ ಮಾರುಕಟ್ಟೆಗೆ ಬರಲಿಲ್ಲ. ನಂತರ Hind Pocket Books ಮತ್ತು Natraj Publishers ಪುಸ್ತಕವನ್ನು ಮರುಮುದ್ರಣ ಮಾಡಿದವು. ಆಗಲೂ ಪುಸ್ತಕ ಜನರಿಗೆ ಮುಟ್ಟಲಿಲ್ಲ. ಪುಸ್ತಕಗಳು ಮಳಿಗೆಗಳಲ್ಲಿ ಲಭ್ಯವಾಗದಂತೆ ನೋಡಿಕೊಳ್ಳಲಾಯಿತು. ಕೊನೆಗೆ ವಿರೋಧಪಕ್ಷಗಳ ಒತ್ತಡದಿಂದ ಸಂಸತ್ತಿನಲ್ಲಿ ಪುಸ್ತಕದ ಬಗ್ಗೆ ಚರ್ಚೆ ನಡೆಯಿತು. ಅಲ್ಲೂ ಕಾಂಗ್ರೆಸ್ ಕುಟಿಲ ತಂತ್ರಗಾರಿಕೆ ಮಾಡಿತು. ಚರ್ಚೆಯ ದಿಕ್ಕು ತಪ್ಪಿಸಲು ಸ್ವತಃ ಸರ್ಕಾರವೇ Summary of the main causes of the NEFA reverses as mentioned in Brigadier J. P. Dalvi's book Himalayan Blunder ಎಂಬ ವರದಿಯನ್ನು ಮಂಡಿಸಿ ಪುಸ್ತಕ ನಿಷೇಧಕ್ಕೆ ಯೋಜನೆ ಹಾಕಿತು. ಈ ವರದಿಯನ್ವಯ ಲೇಖಕರು ಚೀನಾವನ್ನು, 'first class land power' ಎಂದು ಬಣ್ಣಿಸಿದ್ದಾರೆ, ಹಿರಿಯ ಸೇನಾಧಿಕಾರಿಗಳಾದ ಜನರಲ್ ಥಾಪರ್, ಲೆ. ಜನರಲ್ ಕೌಲ್ ಮುಂತಾದವರನ್ನು ತಕ್ಕ ಸಿದ್ಧತೆಯಿಲ್ಲದೆ ಯುದ್ಧಕ್ಕೆ ನೂಕಿದವರೆಂದು ಜರೆಯಲಾಗಿದೆ, ಸೋಲನ್ನು "National Failure' ಎನ್ನಲಾಗಿದೆ, 62ರ ಸೋಲು ಸೇನೆ, ನಾಗರಿಕರು ಮತ್ತು ಮಾಧ್ಯಮಗಳ ಸೋಲು ಎನ್ನಲಾಗಿದೆ (1969 ಜುಲೈ 23ರ ಲೋಕಸಭೆ) ಎಂದು ಆರೋಪಿಸಲಾಯಿತು. ಪುಸ್ತಕವನ್ನು ನಿಷೇಧಿಸಲು ಇವಿಷ್ಟು ಕಾರಣಗಳೇ ಸಾಕು ಎಂದು ಸದನ ತೀರ್ಮಾನಿಸಿದೆ ಎಂದು ಸರ್ಕಾರ ಪುಸ್ತಕದ ಪ್ರಕಟಣೆ ಮತ್ತು ಮಾರಾಟವನ್ನು ಸಂಪೂರ್ಣ ನಿಷೇಧಿಸಿತು. ಅಂದರೆ ಓರ್ವ ಸೇನಾಧಿಕಾರಿ ತಾನು ಭಾಗವಹಿಸಿದ ಯುದ್ಧದಲ್ಲಿ ಏನನ್ನು ಅನುಭವಿಸಿದ್ದನೋ ಅದನ್ನು ದೇಶದ ಮುಂದೆ ಹೇಳಿಕೊಳ್ಳಬಾರದು ಎಂಬ ನಿರ್ಣಯಕ್ಕೆ ಸರ್ಕಾರ ಬಂತು. ಯುದ್ಧಕ್ಕೆ ಕಾರಣಗಳನ್ನು ಹುಡುಕುವುದನ್ನು ದೇಶದ್ರೋಹ ಎಂದು ಭಾವಿಸಿತು. ಆಗಲೂ ಕಾಂಗ್ರೆಸ್ ಇದೇ ರಾಹುಲ್ ಗಾಂಧಿ ಕುಟುಂಬದ ಕೈಯಲ್ಲೇ ಇತ್ತು. ಅವರ ಕುಟುಂಬಕ್ಕೆ ನಿಷ್ಠನಾಗಿದ್ದ, ಯುದ್ಧದ ಸೋಲಿಗೆ ಪ್ರಮುಖ ಕಾರಣನಾಗಿದ್ದ ಕೃಷ್ಣ ಮೆನನ್ ಸದನದಲ್ಲಿ ದಳವಿ ವಿರುದ್ಧ ರೋಷಾವೇಶದ ಭಾಷಣ ಮಾಡಿ ನಿಷೇಧವನ್ನು ಸಮರ್ಥಿಸಿಕೊಂಡರು. ಇವೆಲ್ಲದರ ತರುವಾಯ ಕೂಡ ಕಾಂಗ್ರೆಸ್ ನಾಯಕರು ನಾವು ಸೇನಾಧಿಕಾರಿಗಳ ಮಾತನ್ನು ನಂಬುತ್ತೇವೆ ಎನ್ನುತ್ತಿದ್ದಾರೆ! ಅದೂ ನರವಣೆಯವರು ಪುಸ್ತಕದಲ್ಲಿ ಏನು ಬರೆದಿದ್ದಾರೆಂಬ ಸುಳಿವಿಲ್ಲದಿದ್ದರೂ ನಂಬುತ್ತೇವೆ ಎನ್ನುತ್ತಿದ್ದಾರೆ! ಬಿಡುಗಡೆಯ ನಂತರ ಕೂಡ ಕಾಂಗ್ರೆಸಿನ ನಿಲುವು ಹೀಗೆಯೇ ಇರಲಿ.

ಪ್ರಧಾನಿ ವಿರುದ್ಧ ಮಹಿಳಾಸ್ತ್ರ: ಪಂಚ ರಾಜ್ಯ ಚುನಾವಣೆಯ ಸಂಚೇ?

• ಗೋವಿಂದ ಎನ್. ಎಸ್/ ಸುಪ್ರೀತಾ ಹೆಬ್ಬಾರ್

2025ರಲ್ಲಿ ಬಹುತೇಕ ಎಲ್ಲ ವಿಧಾನಸಭಾ ಚುನಾವಣೆಗಳಲ್ಲಿ ಹೀನಾಯವಾಗಿ ಸೋತು ಪಾತಾಳಕ್ಕೆ ಕುಸಿದಿರುವ ಕಾಂಗ್ರೆಸ್ ನೇತೃತ್ವದ ಇಂಡಿಯಾ ಮೈತ್ರಿಕೂಟದ ಹತಾಶೆ ಸಂಸತ್‌ನ ಬಜೆಟ್ ಅಧಿವೇಶನದಲ್ಲಿ ಢಾಳಾಗಿ ಗೋಚರಿಸಿತು. ಮುಂಬರುವ ಪಂಚ ರಾಜ್ಯ ಚುನಾವಣೆಗೆ ಮುನ್ನ ಪ್ರಧಾನಿ ನರೇಂದ್ರ ಮೋದಿ ವರ್ಚಸ್ಸಿಗೆ ಮಸಿ ಬಳಿಯುವ ಷಡ್ಯಂತ್ರಕ್ಕೆ ಮುಂಚೂಣಿಯಲ್ಲಿ ನಿಲ್ಲಿಸಿದ್ದು ಮಹಿಳೆಯರನ್ನೇ!

ಬಜೆಟ್ ಅಧಿವೇಶನದ ಮುನ್ನಾ ರಾಷ್ಟ್ರಪತಿಯವರು ಉಭಯ ಸದನವನ್ನು ಉದ್ದೇಶಿಸಿ ಮಾತನಾಡುವುದು, ಅದರ ವಂದನಾ ನಿರ್ಣಯದ ಕುರಿತು ಸಂಸದರು ಚರ್ಚಿಸುವುದು ಮತ್ತು ಕೊನೆಯಲ್ಲಿ ಸದನದ ನಾಯಕರಾದ ಪ್ರಧಾನಿ ಚರ್ಚೆಗೆ ಉತ್ತರಿಸುವುದು ಮೊದಲಿನಿಂದಲೂ ನಡೆದು ಬಂದಿರುವ ಸಂಪ್ರದಾಯ. ಆದರೆ, ಫೆ. 5 ರಂದು ಲೋಕಸಭೆಯು ಈ ದಶಕಗಳ ಸಂಪ್ರದಾಯಕ್ಕೆ ವ್ಯತಿರಿಕ್ತವಾದ ಪದ್ಧತಿಗೆ ಸಾಕ್ಷಿಯಾಯಿತು.

ರಾಷ್ಟ್ರಪತಿಗಳ ವಂದನಾ ನಿರ್ಣಯದ ಕುರಿತ ಚರ್ಚೆಯು ಆರಂಭದಲ್ಲೇ ದಿಕ್ಕಾಪಾಲಾಗಿ, ಕೇವಲ ಗದ್ದಲದಲ್ಲೇ ಕೊನೆಗೊಂಡಿದ್ದರೂ, ಕೊನೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಸದನವನ್ನು ಉದ್ದೇಶಿಸಿ ಮಾತನಾಡುವ ನಿರೀಕ್ಷೆಯಿತ್ತು. ಅದಕ್ಕಾಗಿ ಫೆ.5ರ ಸಂಜೆ 5 ಗಂಟೆಯ ಸಮಯವೂ ನಿಗದಿಯಾಗಿತ್ತು. ಪ್ರಧಾನಿ ಸಂಸತ್ತಿಗೆ ಆಗಮಿಸಿಯೂ ಇದ್ದರು. ಆದರೆ, ಸದನದೊಳಗೆ ಬಂದು ಭಾಷಣ ಮಾಡದೆ ಹಿಂದಿರುಗಬೇಕಾಯಿತು. ಇದು ಸಂಸತ್ತಿನ ಇತಿಹಾಸದಲ್ಲೇ ಒಂದು ಕಪ್ಪುಚುಕ್ಕೆ. ಸದನದಲ್ಲಿ ಸುಮಾರು 8 ಮಹಿಳಾ ಸದಸ್ಯರು ಪ್ರಧಾನಿ ಆಸನವನ್ನು ಸುತ್ತುವರಿದು ಪ್ರತಿಭಟನೆಗೆ ಮುಂದಾಗಿದ್ದರಿಂದ ಸುರಕ್ಷತಾ ದೃಷ್ಟಿಯಿಂದ ಪ್ರಧಾನಿಗೆ ಸದನಕ್ಕೆ ಬರದಂತೆ ಸಲಹೆ ನೀಡಬೇಕಾಯಿತು ಎಂದು ಸ್ಪೀಕರ್ ಸದನದಲ್ಲಿ ಸ್ಪಷ್ಟೀಕರಣ ನೀಡಿದ್ದಾರೆ. ಈ ಸನ್ನಿವೇಶಗಳು ದೇಶದ ಪ್ರಧಾನ ಮಂತ್ರಿಯ ಸುರಕ್ಷತೆಯ ಪ್ರಶ್ನೆಯನ್ನು ಮುಂದಿಟ್ಟಿವೆ.

ವಿಪಕ್ಷ ಕಾಂಗ್ರೆಸ್ ಈಗ ಪ್ರಧಾನಿಯ ವಿರುದ್ಧ 'ಮಹಿಳಾಸ್ತ್ರ' ಬಳಸಲು ಮುಂದಾಗಿರುವುದು ಇಲ್ಲಿ ಜಗಜ್ಜಾಹೀರಾಗಿದೆ. ವಿಪಕ್ಷಗಳಿಗೆ ಸರ್ಕಾರದ ವಿರುದ್ಧ ಸದನದ ಒಳಗೆ ಹಾಗೂ ಹೊರಗೆ ಪ್ರಶ್ನಿಸುವ ಹಾಗೂ ಪ್ರತಿಭಟಿಸುವ ಅಧಿಕಾರವಿದೆ. ಸದನದಲ್ಲಿ ವಿರೋಧ ಪಕ್ಷದ ನಾಯಕರಿಗೆ ಮಾತನಾಡಲು ಅವಕಾಶ ಸಿಗದಿರುವುದನ್ನು ಪ್ರಶ್ನಿಸುವುದು ಸಂಸದರ ಸಾಂವಿಧಾನಿಕ ಹಕ್ಕು. ಆದರೆ, ತಮ್ಮ ಅಸಮಾಧಾನ, ಆಕ್ರೋಶ ವ್ಯಕ್ತಪಡಿಸಲು ವಿಪಕ್ಷಗಳು ಆಯ್ಕೆ ಮಾಡಿಕೊಂಡ ಮಾರ್ಗ ಮಾತ್ರ ಆಕ್ಷೇಪಾರ್ಹವಾಗಿದೆ. ಮಹಿಳಾ ಸಂಸದರನ್ನು ಬಳಸಿಕೊಂಡು ದೇಶದ ಪ್ರಧಾನಿಗೆ ಅವಮಾನಿಸಲು ಮುಂದಾಗಿರುವುದು ಸಂಸತ್ತಿನ ಇತಿಹಾಸದಲ್ಲೇ ಒಂದು ನಾಚಿಕೆಗೇಡಿನ ಸಂಗತಿಯಾಗಿ ದಾಖಲಾಗಲಿದೆ. ಈ ಘಟನೆಯ ಬೆನ್ನಲ್ಲೇ ವಿಪಕ್ಷ ಸದಸ್ಯರು ಸಂಸತ್ತಿನಲ್ಲಿನ ಸ್ಪೀಕರ್ ಕಚೇರಿಗೆ ನುಗ್ಗಿ ಗದ್ದಲ ಎಬ್ಬಿಸಿದ್ದಾರೆ. ಈ ವಿಡಿಯೋವನ್ನು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ. ಇದರಲ್ಲಿ ಕೂಡ ಮಹಿಳೆಯರೇ ಮುನ್ನೆಲೆಯಲ್ಲಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಇಲ್ಲಿ ಪ್ರತಿಭಟನೆಗೆ ಮುಂದಾಗಿರುವ ಮಹಿಳಾ ಸದಸ್ಯರು ಪರಾಮರ್ಶಿಸಬೇಕಾಗಿರುವುದೇನೆಂದರೆ, ಅವರು ವ್ಯವಸ್ಥೆಯ ವಿರುದ್ಧ ನಿಂತಿದ್ದಾರೆಯೇ ಅಥವಾ ದೊಡ್ಡದೊಂದು ಸಂಚಿನ ಆಟದ ದಾಳಗಳಾಗಿದ್ದಾರೆಯೇ ಎಂಬುದನ್ನು.

ಓರ್ವ ನಾಯಕ ಸಬಲನಾಗಿದ್ದಾಗ ಆತನನ್ನು ಹತ್ತಿಕ್ಕಲು ಮಹಿಳಾಸ್ತ್ರ ಬಳಸುವುದು ಇದೇನು ಹೊಸದಲ್ಲ. ಹಿಂದೆ ಇದೇ ತಂತ್ರವನ್ನು ಮಹಿಳಾ ಜನಪ್ರತಿನಿಧಿಗಳ ವಿರುದ್ಧ ಪುರುಷ ಜನಪ್ರತಿನಿಧಿಗಳು ಬಳಸಿದ ಉದಾಹರಣೆಗಳಿವೆ. 1959ರಲ್ಲಿ ತಮಿಳುನಾಡು ವಿಧಾನಸಭೆಯಲ್ಲಿ ವಿಪಕ್ಷದಲ್ಲಿದ್ದ ಕುಮಾರಿ ಜಯಲಲಿತಾ ಅವರ ಮೇಲೆ ಹಲ್ಲೆ ನಡೆಸಲಾಗಿತ್ತು. ಉತ್ತರಪ್ರದೇಶದಲ್ಲಿ ವಿಪಕ್ಷ ನಾಯಕಿ ಮಾಯಾವತಿ ಅವರನ್ನು 1995ರಲ್ಲಿ ದಿಗ್ಬಂಧನದಲ್ಲಿ ಇರಿಸಲಾಗಿತ್ತು. ಆಗ ಸದನದಲ್ಲಿ ಮಹಿಳಾ ಸುರಕ್ಷತೆಯ ಪ್ರಶ್ನೆ ಎದ್ದಿತ್ತು. ಈಗ ಲೋಕಸಭೆಯಲ್ಲೇ ಮಹಿಳಾ ಸಂಸದರ ವರ್ತನೆಯು ದೇಶದ ಪ್ರಧಾನಿಯ ಸುರಕ್ಷತೆಯ ಬಗೆಗಷ್ಟೇ ಅಲ್ಲದೆ, ಪ್ರಜಾತಂತ್ರದ ದೇಗುಲದ ಪಾವಿತ್ರ್ಯಕ್ಕೇ ಧಕ್ಕೆ ತರುವಂತಹ ಘಟನೆಯಾಗಿದೆ.

ಕೆಲ ಸಮಯದ ಹಿಂದೆ ಪಶ್ಚಿಮ ಬಂಗಾಳದ ಸಂಸದೆ ಮೊಹುವಾ ಮೈತ್ರಿ ಅವರು 'ಧೈರ್ಯ ಮತ್ತು ಹೇಡಿತನ'ದ ಕಥನವನ್ನು ಸಂಸತ್ತಿನಲ್ಲಿ ಹುಟ್ಟುಹಾಕಿ ಪ್ರಧಾನಿಗೆ ನೇರ ಸವಾಲು ಒಡ್ಡಿದ್ದರು. ತಮ್ಮ ನಾಯಕಿ ಮಮತಾ ಬ್ಯಾನರ್ಜಿ ಅವರನ್ನು ಧೈರ್ಯಶಾಲಿ ಎಂದು ಬಿಂಬಿಸುವ ಮೂಲಕ ಪರೋಕ್ಷವಾಗಿ ಹೇಡಿತನವನ್ನು ಟೀಕಿಸಿದ್ದರು. ವಿಪಕ್ಷ ನಾಯಕ ರಾಹುಲ್ ಗಾಂಧಿ ಇದನ್ನೇ ಮುಂದುವರಿಸಿ, ಸದನಕ್ಕೆ ಆಗಮಿಸದ ಪ್ರಧಾನಿಯ ನಡೆಯನ್ನು ಹೇಡಿತನ ಎಂದು ಬಣ್ಣಿಸಿರುವುದು ಕೂಡ ಒಂದು ಹೊಸ ನಿರೂಪಣೆಯನ್ನು ಸೃಷ್ಟಿಸಲು ಪ್ರಯತ್ನಿಸುತ್ತಿರುವುದು ಮೇಲ್ನೋಟಕ್ಕೆ ಕಾಣಿಸುವಂತಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ಸುರಕ್ಷತೆಗೆ ಧಕ್ಕೆ ಉಂಟಾಗಿರುವುದು ಇದೇ ಮೊದಲೇನಲ್ಲ. ಈ ಹಿಂದೆ ಮೂರು ಕೃಷಿ ಕಾಯ್ದೆ ವಿವಾದದ ಸಂದರ್ಭದಲ್ಲಿ ಪಂಜಾಬ್‌ಗೆ ಭೇಟಿ ನೀಡಿದ್ದ ಮೋದಿ ಅವರ ಬೆಂಗಾವಲು ಪಡೆಯನ್ನು ಅಡ್ಡಗಟ್ಟಲಾಗಿತ್ತು. ಇತ್ತೀಚೆಗೆ ಜೆಎನ್‌ಯು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಮೋದಿಗೆ ಸಮಾಧಿ ತೋಡುವ ಘೋಷಣೆ ಕೂಗಿದ್ದರು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೂಡ ಒಮ್ಮೆ ಪ್ರಧಾನಿಯ ಮೇಲೆ ಹಲ್ಲೆ ಪ್ರಯತ್ನ ನಡೆದಿರುವುದು ಸುದ್ದಿಯಾಗಿತ್ತು. ಈಗ ದೇಶದ ವಿಪಕ್ಷಗಳು ಅದರಲ್ಲೂ ದಶಕಗಳ ಕಾಲ ದೇಶವನ್ನಾಳಿದ ಕಾಂಗ್ರೆಸ್ ಈ ತಂತ್ರಕ್ಕೆ ಇಳಿದಿರುವುದು ವ್ಯಾಪಕ ಚರ್ಚೆಗೆ ಕಾರಣವಾಗಿದೆ. ಇದೆಲ್ಲದರ ನಡುವೆ, ಬಿಜೆಪಿ ಸಂಸದ ನಿಶಿಕಾಂತ ದುಬೆ ಅವರು ವಿಪಕ್ಷ ನಾಯಕ ರಾಹುಲ್ ಗಾಂಧಿ ವಿರುದ್ಧ ವಸ್ತು ನಿಷ್ಠತೆಯ ಗೊತ್ತುವಳಿ ನೋಟಿಸ್ ನೀಡಿರುವುದು ಮತ್ತೊಂದು ವಿವಾದಕ್ಕೆ ನಾಂದಿ ಹಾಡಿದೆ. ಸದನದಿಂದ ದೂರವುಳಿಯುವ ಸ್ಪೀಕರ್ ನಿರ್ಧಾರ ಮತ್ತು ಗೊತ್ತುವಳಿ ನೋಟಿಸ್ ಎರಡೂ ಮಾ.9ರಿಂದ ಆರಂಭವಾಗಲಿರುವ ಎರಡನೇ ಹಂತದ ಬಜೆಟ್ ಅಧಿವೇಶನಕ್ಕೆ ರಂಗತಾಲೀಮಿನಂತಿವೆ.

ನೋಟಿಸ್‌ನಲ್ಲಿ ರಾಹುಲ್ ಗಾಂಧಿ ವಿರುದ್ಧ 'ರಾಷ್ಟ್ರ ವಿರೋಧಿ' ಚಟುವಟಿಕೆಯ ಗಂಭೀರ ಆರೋಪ ಮಾಡಲಾಗಿದೆ. ಈ ಹಿಂದೆ 2005ರಲ್ಲಿ ಪ್ರಶ್ನೆಗಾಗಿ ಕಾಸು ಆರೋಪಕ್ಕೆ ಸಂಬಂಧಿಸಿದಂತೆ ಸಂಸದರ ವಿರುದ್ಧ ವಸ್ತು ನಿಷ್ಠತೆಯ ಗೊತ್ತುವಳಿ ಮಂಡಿಸಲಾಗಿತ್ತು. ಆಗ ಆರೋಪಗಳ ಸತ್ಯಾಸತ್ಯತೆ ಪರಿಶೀಲನೆಗಾಗಿ ರಚನೆಯಾಗಿದ್ದ ತನಿಖಾ ಸಮಿತಿಯ ವರದಿಯ ಆಧಾರದ ಮೇಲೆ 10 ಸಂಸದರನ್ನು ವಜಾಗೊಳಿಸಲಾಗಿತ್ತು. ಇದೇ ರೀತಿ ಹಲವು ಸಂಸದರ ವಿರುದ್ಧ ವಸ್ತು ನಿಷ್ಠತೆಯ ಗೊತ್ತುವಳಿ ಮಂಡನೆಯಾಗಿದ್ದು, ಹಲವು ಶಿಸ್ತುಕ್ರಮಗಳನ್ನು ಕೂಡ ಕೈಗೊಳ್ಳಲಾಗಿದೆ. ಈಗ ವಿಪಕ್ಷ ನಾಯಕ ರಾಹುಲ್ ಗಾಂಧಿ ವಿರುದ್ಧ ಮಂಡಿಸಿರುವ ಗೊತ್ತುವಳಿಯಲ್ಲಿ ನಿಯಮ 342ರ ಅಡಿಯಲ್ಲಿನ ಆರೋಪಗಳಲ್ಲಿ ಸತ್ಯಾಂಶ ಕಂಡುಬಂದಲ್ಲಿ ಸದಸ್ಯತ್ವಕ್ಕೆ ಕುಂದು ಬರುವ ಸಾಧ್ಯತೆಯಿದೆ. ಆದರೆ ಇದು ಯಾವ ತಿರುವು ಪಡೆದುಕೊಳ್ಳುತ್ತದೆ ಮತ್ತು ಪ್ರಧಾನಿ ಆಸನವನ್ನು ಸುತ್ತುವರಿದು ಭದ್ರತೆಯ ಅಪಾಯ ಉಂಟುಮಾಡಿರುವ ಮಹಿಳೆಯರ ವಿರುದ್ಧ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬ ಪ್ರಶ್ನೆಗಳಿಗೆ ಮುಂದಿನ ಭಾಗದ ಬಜೆಟ್ ಅಧಿವೇಶನದಲ್ಲಿ ಉತ್ತರ ದೊರೆಯಲಿದೆಯೇ ಎಂಬುದನ್ನು ಕಾದು ನೋಡಬೇಕಿದೆ.

ಈ ಗೊಂದಲ, ಗದ್ದಲಗಳು ಇಡೀ ಸದನದ ಕಲಾಪಗಳನ್ನು ನುಂಗಿ ನೀರು ಕುಡಿದ ನಡುವೆ ಮರುಭೂಮಿಯಲ್ಲಿ ಮಳೆ ಸುರಿದಂತೆ ಎರಡು ದಿನಗಳ ಕಾಲ ಬಜೆಟ್ ಕುರಿತು ಚರ್ಚೆ ನಡೆಯಿತು. ಪ್ರತಿಪಕ್ಷಗಳು ಬಜೆಟ್ ವಿರುದ್ಧ ಟೀಕಾ ಪ್ರಹಾರ ಮಾಡಿದವು. ಕಳೆದ ವರ್ಷ ದೇಶದ ಬಜೆಟ್ ಅನ್ನು ಬ್ರೇಕ್ ಹಾಳಾಗಿರುವ ಬೈಕಿಗೆ ಹೋಲಿಸಿದ್ದ ಕಾಂಗ್ರೆಸ್ ಸದಸ್ಯ ಶಶಿ ತರೂರು ಅವರು ಮೆಕ್ಯಾನಿಕ್ ಬೈಕ್‌ನ ಬ್ರೇಕ್ ಬದಲಿಸುವ ಬದಲು, ದೊಡ್ಡ ಧ್ವನಿಯ ಹಾರ್ನ್ ನೀಡಿದ್ದಾನೆ ಎಂಬ ಉಪಮೆಯನ್ನು ಬಳಸಿದ್ದರು. ಈಗ ಅದನ್ನೇ ಮುಂದುವರಿಸಿ, ದೊಡ್ಡ ಧ್ವನಿಯ ಹಾರ್ನ್ ದೊರೆತರೂ ಕೂಡ ಆ ಬೈಕ್ ಇನ್ನೂ ಮುಂದಕ್ಕೆ ಸಾಗಿಲ್ಲ ಎಂದು ವ್ಯಂಗ್ಯವಾಡಿದರು. ಇದು ಅಮೆರಿಕಕ್ಕೆ ಭಾರತ ಶರಣಾಗಿದೆ ಎಂಬುದನ್ನು ಸೂಚಿಸುವ ಬಜೆಟ್ ಎಂದು ಕೂಡ ಹಲವು ಸಂಸದರು ಬಣ್ಣಿಸಿದರು. ಒಟ್ಟಿನಲ್ಲಿ ದೇಶದ ವಾರ್ಷಿಕ ಬಜೆಟ್ ಕುರಿತ ಚರ್ಚೆಯೇ ಕೇಂದ್ರಬಿಂದುವಾಗಬೇಕಿದ್ದ ಅಧಿವೇಶನದಲ್ಲಿ ಇತರ ವಿಷಯಗಳೇ ಮೇಲ್ಪಂಕ್ತಿ ಪಡೆದುಕೊಂಡಿದ್ದು ಒಂದು ದುರದೃಷ್ಟಕರ ಬೆಳವಣಿಗೆಯಾಗಿತ್ತು.

ಸೇವಾತೀರ್ಥ: ಆಧುನಿಕ ಭಾರತದ ಸಾಂಸ್ಕೃತಿಕ ಪುನರುಜ್ಜೀವನ

• ಓಂಕಾರ್ ಯಾದವ್

2014ರ ಮೇ ತಿಂಗಳು ಭಾರತೀಯ ರಾಜಕೀಯ ಇತಿಹಾಸದಲ್ಲಿ ಒಂದು ತಿರುವಿನ ಕ್ಷಣ. ಆ ಸಂದರ್ಭದಲ್ಲಿ ಪ್ರಧಾನಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ನರೇಂದ್ರ ಮೋದಿಯವರು ದೇಶಕ್ಕೆ ನೀಡಿದ ಮೊದಲ ಸಂದೇಶ ಕೇವಲ ಆಡಳಿತ ಬದಲಾವಣೆಯ ಘೋಷಣೆಯಲ್ಲ; ಅದು ಮನೋಭಾವದ ಪರಿವರ್ತನೆಯ ಘೋಷಣೆಯಾಗಿತ್ತು. ರಾಜಕೀಯ ಸ್ವಾತಂತ್ರ್ಯವು 1947ರಲ್ಲಿ ದೊರಕಿದ್ದರೂ, ಮಾನಸಿಕ ಮತ್ತು ಸಾಂಸ್ಕೃತಿಕ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಸಾಧಿಸಬೇಕಾದ ಅವಶ್ಯಕತೆ ಇಂದಿಗೂ ಇದೆ ಎಂಬ ಅವರ ಅಭಿಪ್ರಾಯವು ಚರ್ಚೆಗೆ ಹೊಸ ದಿಕ್ಕು ನೀಡಿತು.

ಮಾನಸಿಕ ದಾಸ್ಯದಿಂದ ಆತ್ಮಗೌರವದತ್ತ

ಕಲೋನಿಯಲ್ ಆಡಳಿತದ ಪರಿಣಾಮವಾಗಿ ಭಾರತೀಯ ಸಮಾಜದಲ್ಲಿ ಒಂದು ರೀತಿಯ ಮನೋವೈಜ್ಞಾನಿಕ ದಾಸ್ಯ ನೆಲೆಸಿತ್ತು ಎಂಬ ವಾದವನ್ನು ಮೋದಿ ಅವರು ಪದೇಪದೇ ಉಲ್ಲೇಖಿಸಿದ್ದಾರೆ. ಬ್ರಿಟಿಷ್ ಆಳ್ವಿಕೆ ಕೇವಲ ರಾಜಕೀಯ ವ್ಯವಸ್ಥೆಯನ್ನು ಮಾತ್ರವಲ್ಲ, ಆಡಳಿತದ ಶೈಲಿ, ಶಿಕ್ಷಣದ ಧೋರಣೆ ಮತ್ತು ಇತಿಹಾಸದ ವ್ಯಾಖ್ಯಾನವನ್ನೂ ರೂಪಿಸಿತು. ಈ ಪ್ರಭಾವದಿಂದ ಹೊರಬಂದು ಸ್ವದೇಶಿ ಮೌಲ್ಯಗಳ ಆಧಾರದ ಮೇಲೆ ಹೊಸ ಭಾರತವನ್ನು ನಿರ್ಮಿಸುವ ಸಂಕಲ್ಪವೇ 'ಪರಂಪರೆ ಮತ್ತು ಅಭಿವೃದ್ಧಿ' ಎಂಬ ತತ್ವದಲ್ಲಿ ವ್ಯಕ್ತವಾಯಿತು. ಅಭಿವೃದ್ಧಿ ಎಂದರೆ ಕೇವಲ ಹೆದ್ದಾರಿಗಳು, ಭವನಗಳು, ಡಿಜಿಟಲ್ ಮೂಲಸೌಕರ್ಯಗಳ ನಿರ್ಮಾಣವಲ್ಲ; ಅದು ರಾಷ್ಟ್ರದ ಆತ್ಮಸಮ್ಮಾನವನ್ನು ಪುನರುಜ್ಜೀವಗೊಳಿಸುವ ಆಂತರಿಕ ಪ್ರಕ್ರಿಯೆ. ಈ ತತ್ವದ ಭೌತಿಕ ರೂಪವೇ 'ಸೇವಾ ತೀರ್ಥ'.



ಸೇವಾ ತೀರ್ಥ: ಕಟ್ಟಡವಲ್ಲ, ದರ್ಶನ

ರಾಜಧಾನಿ ನವದೆಹಲಿಯ ಹೃದಯಭಾಗದಲ್ಲಿ ನಿರ್ಮಿತವಾದ ಸೇವಾ ತೀರ್ಥ ಸಂಕೀರ್ಣವು ಐದು ಎಕರೆ ಪ್ರದೇಶದಲ್ಲಿ ವಿಸ್ತರಿಸಿದೆ. ಇಲ್ಲಿ ಕಾರ್ಯಾಲಯ ಭವನ, ಪ್ರಧಾನಮಂತ್ರಿಯ ಅಧಿಕೃತ ನಿವಾಸವಾದ 7 Lok Kalyan Marg, ರಾಷ್ಟ್ರೀಯ ಭದ್ರತಾ ಸಲಹೆಗಾರರ ಕಚೇರಿ, ಕೃಷಿ ಹಾಗೂ ಹಣಕಾಸು ಇಲಾಖೆಗಳ ಪ್ರಮುಖ ಕಚೇರಿಗಳು all in one integrated ecosystem ಕಲ್ಪನೆಯಡಿಯಲ್ಲಿ ಒಂದೇ ವಲಯದಲ್ಲಿ ಕಾರ್ಯನಿರ್ವಹಿಸುವಂತೆ ವಿನ್ಯಾಸಗೊಳಿಸಲಾಗಿದೆ. ಹಿಂದಿನ ದಶಕಗಳಲ್ಲಿ ಸರ್ಕಾರವು ವಿವಿಧ ಖಾಸಗಿ ಕಟ್ಟಡಗಳಲ್ಲಿ ಕಚೇರಿಗಳನ್ನು ಬಾಡಿಗೆಗೆ ಪಡೆದು ಕಾರ್ಯನಿರ್ವಹಿಸುತ್ತಿತ್ತು. ಪ್ರತಿ ವರ್ಷ ಸಾವಿರಾರು ಕೋಟಿಗಳ ವ್ಯಯವಾಗುತ್ತಿತ್ತು. ಸುಮಾರು 1200 ಕೋಟಿ ರೂಪಾಯಿಗಳವರೆಗೆ ಸರ್ಕಾರದ ಮೇಲೆ ಹೊರೆಯಾಗುತ್ತಿತ್ತು ಎಂಬ ಅಂಕಿ–ಅಂಶಗಳು ಚರ್ಚೆಗೆ ಬಂದಿದ್ದವು. ಆರ್ಥಿಕ ಶಿಸ್ತಿನೊಂದಿಗೆ ಆಡಳಿತದ ಸಮನ್ವಯತೆ ಮತ್ತು ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಈ ಸಮಗ್ರ ಸಂಕೀರ್ಣ ರೂಪುಗೊಂಡಿದೆ. ಇದು ಕೇವಲ ಹಣ ಉಳಿಸುವ ಯೋಜನೆಯಲ್ಲ; ಅದು ರಾಷ್ಟ್ರೀಯ ಗೌರವದ ಪ್ರಶ್ನೆಯೂ ಹೌದು. ಸ್ವತಂತ್ರ ರಾಷ್ಟ್ರದ ಆಡಳಿತವು ಇನ್ನೂ ಬಾಡಿಗೆ ಕಟ್ಟಡಗಳಲ್ಲಿ ಸೀಮಿತವಾಗಿರಬೇಕೆ ಎಂಬ ಪ್ರಶ್ನೆಗೆ ಸೇವಾ ತೀರ್ಥವು ಉತ್ತರ ನೀಡುತ್ತದೆ.

ಸವಾಲುಗಳು ಮತ್ತು ವಿವಾದಗಳು

ಕೋವಿಡ್ ಮಹಾಮಾರಿಯ ನಡುವೆಯೇ ಕಾಮಗಾರಿ ಮುಂದುವರಿಯಿತು. ಲಾಕ್‌ಡೌನ್, ಕಾನೂನು ಸವಾಲುಗಳು, ಪರಿಸರ ಸಂಬಂಧಿತ ಚರ್ಚೆಗಳು–ಇವೆಲ್ಲವೂ ಈ ಯೋಜನೆಗೆ ತಡೆಗಳಾಗಿದ್ದವು. ಉದ್ಘಾಟನೆಯ ಸಂದರ್ಭದಲ್ಲಿ ಬಳಸಲಾದ ಪ್ರತೀಕಾತ್ಮಕ ಅಂಶಗಳ ಬಗ್ಗೆ ರಾಜಕೀಯ ಚರ್ಚೆಗಳು ಉಂಟಾದವು. ಆದರೆ ವಿರೋಧದ ನಡುವೆ ಯೋಜನೆ ಪೂರ್ಣಗೊಂಡಿತು. ಇದರಿಂದ ಸ್ಪಷ್ಟವಾಗುವುದು ಏನೆಂದರೆ, ಸೇವಾ ತೀರ್ಥವು ಕೇವಲ ನಿರ್ಮಾಣ ಕಾರ್ಯವಲ್ಲ; ಅದು ಚಿಂತನೆಗಳ ಸಂಘರ್ಷದ ವೇದಿಕೆಯೂ ಆಗಿತ್ತು.

ಇತಿಹಾಸದ ವ್ಯಾಖ್ಯಾನ ಮತ್ತು ಹೊಸ ಪಥ

ಸ್ವಾತಂತ್ರ್ಯಾನಂತರದ ಆಡಳಿತ ಮಾದರಿಯ ಕುರಿತು ನಡೆದ ಚರ್ಚೆಗಳಲ್ಲಿ, ವಿಶೇಷವಾಗಿ ನೆಹರು ಕಾಲಘಟ್ಟದಿಂದ ಮುಂದುವರಿದ ವ್ಯವಸ್ಥೆಯು ಬ್ರಿಟಿಷ್ ಆಡಳಿತದ ಕೆಲವು ಚೌಕಟ್ಟುಗಳನ್ನು ಉಳಿಸಿಕೊಂಡಿತೆಂಬ ಅಭಿಪ್ರಾಯ ಕೇಳಿಬರುತ್ತದೆ. ಇದು ಇತಿಹಾಸದ ವಿಮರ್ಶಾತ್ಮಕ ಅಧ್ಯಯನಕ್ಕೆ ಒಳಪಟ್ಟ ವಿಚಾರ. ಆದರೆ ಮೋದಿ ಅವರ ದೃಷ್ಟಿಯಲ್ಲಿ, ಆಡಳಿತವನ್ನು ಭಾರತೀಯ ಮೌಲ್ಯಗಳ ಆಧಾರದ ಮೇಲೆ ಮರುಸಂರಚಿಸುವ ಪ್ರಯತ್ನವೇ ಮುಖ್ಯ. ಸೇವಾ ತೀರ್ಥವು ಈ ಪ್ರಯತ್ನದ ಭೌತಿಕ ಸಂಕೇತವಾಗಿದೆ.

ಸಾಂಸ್ಕೃತಿಕ ಪುನರುಜ್ಜೀವನದ ಸಂಕೇತ

ಸೇವಾ ತೀರ್ಥವು ಕೇವಲ ಆಡಳಿತದ ಕೇಂದ್ರವಲ್ಲ; ಅದು ಭಾರತೀಯ ನಾಗರಿಕತೆಯ ವೈಭವವನ್ನು ಪ್ರತಿಬಿಂಬಿಸುವ ಸಂಕೇತ. ಸಾವಿರಾರು ವರ್ಷಗಳ ಇತಿಹಾಸ, ಆಧ್ಯಾತ್ಮಿಕ ಪರಂಪರೆ, ಸ್ಥಳೀಯ ಜ್ಞಾನ–ಇವುಗಳನ್ನೆಲ್ಲ ಒಳಗೊಂಡ ಸಂಸ್ಕೃತಿ ಭಾರತದ್ದು. ಇತ್ತೀಚಿನ ವರ್ಷಗಳಲ್ಲಿ ಭಾರತೀಯ ಸಂಸ್ಕೃತಿ, ಪರಂಪರೆ, ಯೋಗ, ಆಯುರ್ವೇದ, ದೇವಸ್ಥಾನ ಪುನರುಜ್ಜೀವನ, ರಾಷ್ಟ್ರೀಯ ಚಿಹ್ನೆಗಳ ಪುನರ್‌ಅರ್ಥೈಸಿಕೆಗಳೆಲ್ಲವೂ ಒಂದು ವಿಸ್ತೃತ ಸಾಂಸ್ಕೃತಿಕ ಚಳವಳಿಯ ಭಾಗವೆಂದು ಪರಿಗಣಿಸಲಾಗುತ್ತದೆ.

ನವಭಾರತದ ದೀಪಸ್ತಂಭ

'ಸೇವಾ ತೀರ್ಥ' ಉದ್ಘಾಟನೆ ಒಂದು ಕಟ್ಟಡದ ಉದ್ಘಾಟನೆಯಷ್ಟೇ ಅಲ್ಲ; ಅದು ರಾಷ್ಟ್ರದ ಮನೋಭಾವದ ಪರಿವರ್ತನೆಯ ಸಂಕೇತ. 2014ರಲ್ಲಿ ಉಚ್ಚರಿಸಲ್ಪಟ್ಟ ದೃಷ್ಟಿ, ಮಾನಸಿಕ ದಾಸ್ಯದಿಂದ ಮುಕ್ತವಾಗಿರುವ ಆತ್ಮವಿಶ್ವಾಸಿ ಭಾರತ ಇಂದು ಸ್ಪಷ್ಟ ರೂಪ ಪಡೆದುಕೊಳ್ಳುತ್ತಿರುವುದನ್ನು ಈ ಸಂಕೀರ್ಣ ಸೂಚಿಸುತ್ತದೆ. ಅಭಿವೃದ್ಧಿಯೊಂದಿಗೆ ಪರಂಪರೆಯನ್ನು ಕಾಪಾಡುವ ಪಥದಲ್ಲಿ ಸಾಗುತ್ತಿರುವ ಭಾರತ, ತನ್ನ ಇತಿಹಾಸವನ್ನು ಮರೆಯದೆ, ಅದರಿಂದ ಪಾಠಗಳನ್ನು ಕಲಿತು, ಭವಿಷ್ಯದತ್ತ ಆತ್ಮವಿಶ್ವಾಸದಿಂದ ಹೆಜ್ಜೆ ಇಡುತ್ತಿದೆ.



ಡಿಜಿಟಲ್ ಮೂಲಸೌಕರ್ಯ ಭಾರತ ಮುಂಚೂಣಿ: ಮೋದಿ | ಎಐ ಮಾನವಕಲ್ಯಾಣಕ್ಕಾಗಿ ಹಂಚಿಕೆಯ ಸಂಪನ್ಮೂಲವಾಗಬೇಕು

ಪ್ರಗತಿ ಯುಗಕ್ಕೆ ಕೃತಬುದ್ಧಿಮತ್ತೆ ನಾಂದಿ

ಹೊಸದಿಲ್ಲಿ: ಭಾರತವು ಅತ್ಯುತ್ತಮ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯವನ್ನು ನಿರ್ಮಿಸಿ, ಅದನ್ನು ವಿಶ್ವದೊಂದಿಗೆ ಹಂಚಿಕೊಳ್ಳುತ್ತಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅಭಿಪ್ರಾಯಪಟ್ಟಿದ್ದಾರೆ. ತಂತ್ರಜ್ಞಾನವು ಶಕ್ತಿಯ ಸಾಧನವಲ್ಲ, ಸೇವೆಯ ಸಾಧನವಾಗಿದೆ. ಇದು ಆಳಲು ಅಲ್ಲ, ಸಬಲಗೊಳಿಸಲು ಇದೆ ಎಂಬುದೇ ಭಾರತದ ದೃಷ್ಟಿಕೋನ ಎಂದು ಅವರು ಸ್ಪಷ್ಟಪಡಿಸಿದರು. ಇಂಡಿಯಾ ಎಐ ಇಂಪ್ಯಾಕ್ಟ್ ಶೃಂಗಸಭೆಯ ನಾಯಕರ ಪೂರ್ಣ ಅಧಿವೇಶನದಲ್ಲಿ ಮಾತನಾಡಿದ ಮೋದಿ, ಕೃತಕ ಬುದ್ಧಿಮತ್ತೆ (ಎಐ) ಎಲ್ಲರಿಗೂ ಲಭ್ಯವಾಗುವಂತಾಗಬೇಕು. ಎಐ ಆಡಳಿತದಲ್ಲಿ ಗ್ಲೋಬಲ್ ಸೌತ್‌ನ ಆಶಯಗಳು ಮತ್ತು ಆದ್ಯತೆಗಳಿಗೆ ಕೇಂದ್ರಸ್ಥಾನ ನೀಡಬೇಕು ಎಂದು ಒತ್ತಿಹೇಳಿದರು.

ಯುನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್(ಯುಪಿಐ) ಕಠಿಣ ಪರಿಸ್ಥಿತಿಗಳಲ್ಲಿಯೂ ನಿರಂತರ ಆನ್‌ಲೈನ್ ವ್ಯವಹಾರಗಳನ್ನು ಸಾಧ್ಯಮಾಡಿ, ಡಿಜಿಟಲ್ ಅಂತರವನ್ನು ಕಡಿಮೆ ಮಾಡಿದೆ ಎಂದು ಪ್ರಧಾನಿ ಉಲ್ಲೇಖಿಸಿದರು. ಸ್ಟಾರ್ಟ್‌ಅಪ್‌ಗಳಿಗೆ ಕೈಗೆಟಕುವ ದರದಲ್ಲಿ ವಿಶ್ವಮಟ್ಟದ ಕಂಪ್ಯೂಟಿಂಗ್ ಸಾಮರ್ಥ್ಯ ಒದಗಿಸಲಾಗುತ್ತಿದೆ ಎಂದರು.

ಎಐಕೋಶ್ ರಾಷ್ಟ್ರೀಯ ಡೇಟಾಸೆಟ್ ವೇದಿಕೆ ಮೂಲಕ ಸಾವಿರಾರು ಡೇಟಾಸೆಟ್‌ಗಳು ಮತ್ತು ಎಐ ಮಾದರಿಗಳನ್ನು ಹಂಚಲಾಗಿದೆ. ಎಐ ಮಾನವಕಲ್ಯಾಣಕ್ಕಾಗಿ ಹಂಚಿಕೆಯಸಂಪನ್ಮೂಲವಾಗಬೇಕು ಎಂಬ ಭಾರತದ ದೃಷ್ಟಿಕೋನ ಸ್ಪಷ್ಟವಾಗಿದೆ ಎಂದು ಹೇಳಿದರು. ಎಐ ಯುಗದಲ್ಲಿ ನೈತಿಕ ಮಾನದಂಡಗಳು ಅಸೀಮಿತವಾಗಿರಬೇಕು. ಡೇಟಾ ಸಾರ್ವಭೌಮತ್ವಕ್ಕೆ ಗೌರವ, ಸುರಕ್ಷಿತ ಮತ್ತು ವಿಶ್ವಾಸಾರ್ಹ ಡೇಟಾ ಚೌಕಟ್ಟು ಹಾಗೂ ಪಾರದರ್ಶಕ ಸುರಕ್ಷತಾ ನಿಯಮಗಳ ಅಗತ್ಯವಿದೆ ಎಂದು ಮೋದಿ ಅಭಿಪ್ರಾಯಪಟ್ಟರು. ಭಾರತದ ಎಐ ಮಿಷನ್ ಅಡಿಯಲ್ಲಿ ಈಗಾಗಲೇ 38,000 ಜಿಪಿಯುಗಳು ಲಭ್ಯವಿದ್ದು, ಮುಂದಿನ ಆರು ತಿಂಗಳಲ್ಲಿ 24,000 ಹೆಚ್ಚಿಸಲಾಗುವುದು ಎಂದು ಪ್ರಧಾನಿ ತಿಳಿಸಿದರು. ತಂತ್ರಜ್ಞಾನ ಮತ್ತು ಮಾನವ ವಿಶ್ವಾಸ ಒಂದಾಗುವಾಗ ಎಐಯ ನಿಜವಾದ ಪರಿಣಾಮ ಗೋಚರಿಸುತ್ತದೆ ಎಂದು ಹೇಳಿದರು.

ಎಐಯನ್ನು ಜವಾಬ್ದಾರಿಯುತವಾಗಿ ಬಳಸಿ

ಅತ್ಯುಚ್ಚ ಪ್ರಗತಿಯ ಯುಗಕ್ಕೆ ಕೃತಕ ಬುದ್ಧಿಮತ್ತೆ ನಾಂದಿ ಹಾಡಿದೆ ಎಂದು ಗೂಗಲ್ ಸಿಇಒ ಸುಂದರ್ ಪಿಚ್ಚೈ ಬಣ್ಣಿಸಿದ್ದಾರೆ. ಹೊಸ ವೈಜ್ಞಾನಿಕ ಆವಿಷ್ಕಾರಗಳ ತೆರೆದಿಡಲು ಸಮರ್ಥ ಎಐ , ಸಾಂಪ್ರದಾಯಿಕ ಅಭಿವೃದ್ಧಿ ಹಂತಗಳ ದಾಟಿ ಮುನ್ನಡೆಯುವಲ್ಲಿ ಉದಯೋನ್ಮುಖ ಆರ್ಥಿಕತೆಗಳಿಗೆ ಪ್ರೇರಣೆಯಾಗಿದೆ ಎಂದು ಹೇಳಿದ್ದಾರೆ. ಎಐ ವಿಜ್ಞಾನ, ಶಿಕ್ಷಣ, ಆರ್ಥಿಕ ಬೆಳವಣಿಗೆ ಸಹಿತ ಎಲ್ಲಾ ರಂಗಗಳಲ್ಲೂ ಪರಿವರ್ತನೆ ಸೃಷ್ಟಿಸುವ ಸಾಮರ್ಥ್ಯವುಳ್ಳದ್ದಾಗಿದೆ. ಎಐ ಹೊರತು ಯಾವುದೇ ತಂತ್ರಜ್ಞಾನಗಳೂ ಬೃಹತ್ ಕನಸು ಕಾಣಲು ನನ್ನನ್ನು ಪ್ರೇರೇಪಿಸಿದ್ದಿಲ್ಲ ಎಂದಿರುವ ಪಿಚ್ಚೈ , ಭಾರತ-ಅಮೆರಿಕ ನಡುವಿನ ಎಐ ಸಂಪರ್ಕ ಬಲಪಡಿಸಲು ಸಮುದ್ರದಾಳದಲ್ಲಿ ನಾಲ್ಕು ಹೊಸ ಫೈಬರ್‌ಆಪ್ಟಿಕ್ ಕೇಬಲ್ ಸಿಸ್ಟಮ್‌ಗಳನ್ನು ಗೂಗಲ್ ನಿರ್ಮಿಸಲಿದೆ. ವಿಸ್ತೃತ ಎಐ ಮತ್ತು ಡಿಜಿಟಲ್ ಮೂಲಸೌಕರ್ಯ ವಿಸ್ತರಣೆಗೆ ಪ್ರಸ್ತುತ ಯೋಜನೆ ಮೂಲಾಧಾರವಾಗಲಿದೆ ಎಂದಿದ್ದಾರೆ.

ನಮ್ಮ ಜೀವಿತಾವಧಿಯಲ್ಲಿ (ಭಾರೀ ಸೃಜನಾತ್ಮಕ ಸ್ಥಿತ್ಯಂತರ) ಸೃಜಿಸುವ ತಂತ್ರಜ್ಞಾನ ಎಐ ಎಂದು ಎಐ ಇಂಪ್ಯಾಕ್ಟ್ ಶೃಂಗಸಭೆಯಲ್ಲಿ ಬಣ್ಣಿಸಿದ ಗೂಗಲ್ ಹಾಗೂ ಆಲ್ಫಬೆಟ್ ಸಿಇಒ ಪಿಚ್ಚೈ, ಈ ತಂತ್ರಜ್ಞಾನವನ್ನು ಧೈರ್ಯದಿಂದ ಮತ್ತು ಜವಾಬ್ದಾರಿಯುತವಾಗಿ ಬಳಸಿಕೊಳ್ಳಿ ಎಂದು ಸರಕಾರಗಳು, ಕಂಪನಿಗಳು ಹಾಗೂ ಶಿಕ್ಷಣ ಸಂಸ್ಥೆಗಳನ್ನು ಆಗ್ರಹಿಸಿದರು.



ಎಐಗೆ 10 ಲಕ್ಷ ಕೋಟಿ ರೂ. ಹೂಡಿಕೆ

ಮುಂದಿನ ಏಳು ವರ್ಷಗಳಲ್ಲಿ ಕೃತಕ ಬುದ್ಧಿಮತ್ತೆ ರಂಗದಲ್ಲಿ 10ಲಕ್ಷ ಕೋಟಿ ಹೂಡಿಕೆ ಹೂಡುವ ಮುಖೇನ, ದೇಶದ ಮೂಲೆಮೂಲೆಗಳಿಗೂ ಮೊಬೈಲ್, ಇಂಟರ್‌ನೆಟ್ ಡೇಟಾ ಮತ್ತಷ್ಟು ಸುಲಭವಾಗಿ, ಮತ್ತಷ್ಟು ವೇಗವಾಗಿ ಲಭಿಸಲು ಶ್ರಮಿಸುವುದಾಗಿ ಉದ್ಯಮಿ ಮುಖೇಶ್ ಅಂಬಾನಿ ಘೋಷಿಸಿದ್ದಾರೆ.

ಜಿಯೋದ ಡಿಜಿಟಲ್ ಕ್ರಾಂತಿಯ ಪರಿವರ್ತನಾತ್ಮಕ ಮಟ್ಟವನ್ನು ಪ್ರತಿಫಲಿಸುವ ತೆರ, ಪ್ರಸ್ತುತ ಯೋಜನೆ ಮುಖೇನ ಪ್ರತಿಯೋರ್ವ ಪ್ರಜೆ, ವ್ಯಾಪಾರ ವಹಿವಾಟುಗಳು ಹಾಗೂ ಸರಕಾರಿ ಸೇವೆಗಳನ್ನು ಎಐ ಜತೆ ಜೋಡಿಸಲಾಗುವುದು. ಭಾರತವನ್ನು ಇಂಟರ್‌ನೆಟ್ ಯುಗದೊಂದಿಗೆ ಸಂಪರ್ಕಿಸಿದ್ದು ಜಿಯೋ. ಇದೀಗ ಜಿಯೋ ಭಾರತವನ್ನು ಬುದ್ಧಿಮತ್ತೆ ಯುಗದೊಂದಿಗೆ ಜೋಡಿಸಲಿದೆ. ಬುದ್ಧಿಮತ್ತೆಯನ್ನು ಭಾರತ ಬಾಡಿಗೆಗೆ ಪಡೆಯಲಾಗದು. ಹಾಗಾಗಿ ಡಾಟಾ ವಿಚಾರದಲ್ಲಿ ವೆಚ್ಚ ಕುಗ್ಗಿಸಿದಂತೆ ಕೃತಕ ಬುದ್ಧಿಮತ್ತೆ ರಂಗದಲ್ಲೂ ವೆಚ್ಚ ಕುಗ್ಗಿಸಲಾಗುವುದು ಎಂದು ಅಂಬಾನಿ ಇಂಡಿಯಾ ಎಐ ಇಂಪ್ಯಾಕ್ಟ್ ಸಮ್ಮಿಟ್‌ನಲ್ಲಿ ಘೋಷಿಸಿದರು. ಜಿಯೊ ಮತ್ತು ರಿಲಯನ್ಸ್ ಕಂಪೆನಿಗಳು ಒಟ್ಟಾಗಿ ಮುಂದಿನ ಏಳು ವರ್ಷಗಳಿಗೆ ಅನ್ವಯಿಸುವಂತೆ ಎಐ ರಂಗದಲ್ಲಿ 10ಲಕ್ಷ ಕೋಟಿ ಹೂಡಿಕೆ ಹೂಡಲಿವೆ. ಜಾಮ್ ನಗರದಲ್ಲಿ ಗಿಗಾವಾಟ್ ಮಟ್ಟದ ಎಐ -ರೆಡೀ ಡಾಟಾ ಕೇಂದ್ರಗಳ ಸ್ಥಾಪನೆ, 10 ಗಿಗಾವ್ಯಾಟ್‌ಗೆ ಗ್ರೀನ್ ಪವರ್ ಹೆಚ್ಚುವರಿಗಳ ನಿಯಂತ್ರಣ ಸಹಿತ ಮೂರು ಪ್ರಧಾನ ವಿಚಾರಗಳನ್ನು ಪ್ರಸ್ತಾವಿತ ಯೋಜನೆ ಕೇಂದ್ರೀಕರಿಸಿರುವುದು. ಜಿಯೋ ಎಐ ಭಾರತೀಯ ಭಾಷೆಗಳಲ್ಲಿ ಕಾರ್ಯ ನಿರ್ವಹಿಸುತ್ತದೆ. ಇದರಿಂದ ರೈತರು, ಯುವಕರು, ವಿದ್ಯಾರ್ಥಿಗಳು ಮತ್ತು ಸಣ್ಣ ವ್ಯವಹಾರಗಳು ತಮ್ಮದೇ ಆದ ಭಾಷೆಗಳಲ್ಲಿ ಇದರ ಪ್ರಯೋಜನ ಪಡೆಯಬಹುದು ಎಂದು ಅಂಬಾನಿ ಒತ್ತಿ ಹೇಳಿದರು. ಶಿಕ್ಷಣಕ್ಕಾಗಿ ಜಿಯೋ ಶಿಕ್ಷಾ ಎಐ, ಆರೋಗ್ಯಕ್ಕಾಗಿ ಜಿಯೋ ಆರೋಗ್ಯ ಎಐ, ಕೃಷಿಗಾಗಿ ಜಿಯೋ ಕೃಷಿ ಮತ್ತು ಸಾಮಾನ್ಯ ಬಳಕೆಗಾಗಿ ಜಿಯೋ ಭಾರತ್ ಐಕ್ಯೂ ಮುಂತಾದ ಪ್ಲಾಟ್ ಫಾರ್ಮ್ ಗಳನ್ನು ಪರಿಚಯಿಸಲಾಗಿದೆ, ಇದು ಸ್ಥಳೀಯ ಭಾಷೆಗಳಲ್ಲಿ ಎಐ ಆಧಾರಿತ ಸಹಾಯವನ್ನು ಒದಗಿಸುತ್ತದೆ.

ಗ್ಲೋಬಲ್ ಸೌತ್ ಎಐ ಭಾರತ ಮುನ್ನಡೆ

- ಕೇಂದ್ರ ಐಟಿ ಸಚಿವ ಅಶ್ವಿನಿ ವೈಷ್ಣವ್ ಅಭಿಪ್ರಾಯ
- ನ್ಯೂ ದಿಲ್ಲಿ ಫ್ರಾಂಟಿಯರ್ ಎಐ ಇಂಪ್ಯಾಕ್ಟ್ ಕಮಿಟ್‌ಮೆಂಟ್ಸ್ ಘೋಷಣೆ

ಜಾಗತಿಕ ಮುಂಚೂಣಿ ಎಐ ಕಂಪನಿಗಳು ಹಾಗೂ ಭಾರತದ ನವೋದ್ಯಮಿಗಳು ನ್ಯೂ ದಿಲ್ಲಿ ಫ್ರಾಂಟಿಯರ್ ಎಐ ಇಂಪ್ಯಾಕ್ಟ್ ಕಮಿಟ್‌ಮೆಂಟ್ಸ್ ಅಡಿಯಲ್ಲಿ ನೈಜ ಜಗತ್ತಿನ ಎಐ ಬಳಕೆಯ ಅರಿವು ಹೆಚ್ಚಿಸಲು ಹಾಗೂ ಉದ್ಯೋಗ, ಕೌಶಲ್ಯಾಭಿವೃದ್ಧಿ ಮತ್ತು ಆರ್ಥಿಕ ಪರಿವರ್ತನೆ ಕುರಿತ ಸಾಕ್ಷ್ಯಾಧಾರಿತ ನೀತಿಗಳಿಗೆ ಬೆಂಬಲ ನೀಡಲು ಬದ್ಧತೆ ವ್ಯಕ್ತಪಡಿಸಿದ್ದಾರೆ ಎಂದು ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಗುರುವಾರ ತಿಳಿಸಿದ್ದಾರೆ.

ಇಲ್ಲಿ ನಡೆದ ಇಂಡಿಯಾ ಎಐ ಇಂಪ್ಯಾಕ್ಟ್ ಸಮಿಟ್‌ನ ನಿರ್ಣಯವನ್ನು ಪ್ರಕಟಿಸಿದ ಅವರು, 'ಸರ್ವಂ, ಭಾರತ್ ಜನ್, ಯಾನಿ, ಸೋಕೆಟ್ ಮುಂತಾದ ಭಾರತೀಯ ನವೋದ್ಯಮಿಗಳೊಂದಿಗೆ ಪ್ರಮುಖ ಫ್ರಾಂಟಿಯರ್ ಎಐ ಕಂಪನಿಗಳು ಕೈಜೋಡಿಸಿ, ಸಮಾವೇಶಾತ್ಮಕ ಹಾಗೂ ಹೊಣೆಗಾರಿಕೆಯ ಎಐ ಅಭಿವೃದ್ಧಿಗೆ ಸ್ವಯಂಪ್ರೇರಿತ ಬದ್ಧತೆಗಳನ್ನು ಘೋಷಿಸಿವೆ' ಎಂದರು.

ಇದು ನಾವೀನ್ಯತೆ ಮತ್ತು ಸಮಾನತೆಯ ಸಮತೋಲನ ಸಾಧಿಸುವ ಮೂಲಕ ಗ್ಲೋಬಲ್ ಸೌತ್‌ನ ನೇತೃತ್ವದ ಎಐ ಆಡಳಿತದ ದೃಷ್ಟಿಕೋನಕ್ಕೆ ಭಾರತವನ್ನು ಮುಂಚೂಣಿಗೆ ತರುತ್ತದೆ ಎಂದು ಸಚಿವರು ಹೇಳಿದರು.

ಈ ಬದ್ಧತೆಗಳಡಿ ಎರಡು ಪ್ರಮುಖ ಅಂಶಗಳನ್ನು ಕಂಪನಿಗಳು ಒಪ್ಪಿಕೊಂಡಿವೆ. ಮೊದಲನೆಯದಾಗಿ, ಜಾಗತಿಕ ಆರ್ಥಿಕತೆಯಲ್ಲಿ ಎಐ ತಂತ್ರಜ್ಞಾನ ಹೇಗೆ ವ್ಯಾಪಿಸುತ್ತಿದೆ ಎಂಬುದರ ಕುರಿತಾಗಿ ಅನಾಮಧೇಯ ಮತ್ತು ಒಟ್ಟುಗೂಡಿಸಿದ ಮಾಹಿತಿಗಳ ಆಧಾರದ ಮೇಲೆ ವಿಶ್ಲೇಷಣೆ ನಡೆಸಲಾಗುತ್ತದೆ. ಇದು ಉದ್ಯೋಗ, ಕೌಶಲ್ಯಾಭಿವೃದ್ಧಿ ಮತ್ತು ಆರ್ಥಿಕ ಪರಿವರ್ತನೆ ಕುರಿತ ಸಾಕ್ಷ್ಯಾಧಾರಿತ ನೀತಿ ರೂಪಣೆಗೆ ನೆರವಾಗಲಿದೆ. ಜತೆಗೆ ಮಾನವ ಎಐ ಸಹಕಾರದ ಭವಿಷ್ಯ ಕುರಿತ ಅಧ್ಯಯನಕ್ಕೂ ದಾರಿ ಮಾಡಿಕೊಡಲಿದೆ. ಬಳಕೆದಾರರ ಗೌಪ್ಯತೆಯನ್ನು ಕಾಪಾಡುತ್ತ, ಮುಂದಿನ ಎಐ ಸಮಿಟ್‌ಗೆ ಮುನ್ನ ಅಂಕಿ-ಅಂಶಾಧಾರಿತ ವರದಿಯನ್ನು ಪ್ರಕಟಿಸಲಾಗುವುದು ಎಂದು ತಿಳಿಸಲಾಗಿದೆ.

ಎರಡನೇ ಬದ್ಧತೆಯಡಿ ಎಐ ವ್ಯವಸ್ಥೆಗಳ ಬಹುಭಾಷಾ ಹಾಗೂ ಪ್ರಾಸಂಗಿಕ ಮೌಲ್ಯಮಾಪನವನ್ನು ಬಲಪಡಿಸಲಾಗುತ್ತದೆ. ವಿವಿಧ ಭಾಷೆಗಳು, ಸಂಸ್ಕೃತಿಗಳು ಮತ್ತು ನೈಜ ಬಳಕೆ ಸಂದರ್ಭಗಳಲ್ಲಿ ಎಐ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಕ್ರಮ ಕೈಗೊಳ್ಳಲಾಗುವುದು. ವಿಶೇಷವಾಗಿ ಗ್ಲೋಬಲ್ ಸೌತ್ ದೇಶಗಳಲ್ಲಿ ಎಐ ಜನತಂತ್ರೀಕರಣಕ್ಕೆ ಇದು ನೆರವಾಗಲಿದೆ ಎಂದು ಸಚಿವರು ಅಭಿಪ್ರಾಯಪಟ್ಟರು.

ಬೆಂಗಳೂರಿನಲ್ಲಿ ಒಪನ್ ಎಐ ಕಚೇರಿ

ಹೊಸದಿಲ್ಲಿ: ಈ ವರ್ಷಾಂತ್ಯದೊಳಗೆ ಬೆಂಗಳೂರು ಮತ್ತು ಮುಂಬೈ ನಗರಗಳಲ್ಲಿ ಹೊಸ ಕಚೇರಿಗಳನ್ನು ತೆಗೆಯುವುದಾಗಿ ಒಪನ್ ಎಐ ಸಿಇಒ ಸ್ಯಾಮ್ ಆಲ್ಟ್‌ಮನ್ ಘೋಷಿಸಿದ್ದಾರೆ. ಭಾರತದಂತಹ ಪ್ರಮುಖ ಮಾರುಕಟ್ಟೆಯಲ್ಲಿ ತಮ್ಮ ಉದ್ಯಮವನ್ನು ವಿಸ್ತರಿಸುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳುತ್ತಿರುವುದಾಗಿ ಹೇಳಿದ್ದಾರೆ.

ಹೊಸ ಕಚೇರಿಗಳು ಸಂಸ್ಥೆಯ ಈಗಿನ ದಿಲ್ಲಿ ಕಚೇರಿಗೆ ಸೇರ್ಪಡೆಯಾಗಲಿವೆ. ಈ ನಿರ್ಧಾರ ದೇಶವ್ಯಾಪಿ ಒಪನ್ ಎಐ ಫಾರ್ ಇಂಡಿಯಾ ಯೋಜನೆಯ ಭಾಗವಾಗಿದ್ದು, ಕೃತಕ ಬುದ್ಧಿಮತ್ತೆಗೆ ಪ್ರವೇಶ ವಿಸ್ತರಣೆ ಮತ್ತು ಉದ್ಯಮ ಕ್ಷೇತ್ರಗಳಲ್ಲಿ ಪರಿವರ್ತನೆಗೆ ವೇಗ ನೀಡುವುದು ಗುರಿಯಾಗಿದೆ.ಕೃತಕ ಬುದ್ಧಿಮತ್ತೆ ಅಳವಡಿಕೆಯಲ್ಲಿ ಭಾರತ ಮುಂಚೂಣಿಯಲ್ಲಿದೆ ಎಂದು ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸ್ಯಾಮ್ ಆಲ್ಟ್‌ಮನ್ ತಿಳಿಸಿದ್ದಾರೆ.ಭಾರತವು ಚಾಟ್ ಜಿಪಿಟಿಯ ಪ್ರಮುಖ ಮಾರುಕಟ್ಟೆಗಳಲ್ಲೊಂದಾಗಿ ಹೊರಹೊಮ್ಮಿದ್ದು, ವಾರಕ್ಕೆ 100 ಮಿಲಿಯನ್‌ಕ್ಕಿಂತ ಹೆಚ್ಚು ಬಳಕೆದಾರರನ್ನು ಹೊಂದಿದೆ.

ಜಿನೀವಾದಲ್ಲಿ ಮುಂದಿನ ಎಐ ಶೃಂಗ

2027ರ ಎಐ ಶೃಂಗಕ್ಕೆ ಸ್ವಿಜರ್ಲೆಂಡ್‌ನ ಜಿನೀವಾ ಆತಿಥ್ಯ ವಹಿಸಲಿದೆ ಎಂದು ಸ್ವಿಜರ್ಲೆಂಡ್‌ನ ಅಧ್ಯಕ್ಷ ಗೈ ಪಾರ್ಮಲಿನ್ ಹೇಳಿದ್ದಾರೆ. ಎಐ ಇಂಪ್ಯಾಕ್ಟ್ ಶೃಂಗಸಭೆಯ ಅಂಗವಾಗಿ ಭಾರತ ಮಂಟಪಂನಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಪಾರ್ಮಲಿನ್, ಸ್ವಿಸ್ ಪೆವಿಲಿಯನ್‌ನಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು. ಈ ವೇಳೆ ಅಲ್ಲೇ ಹಿಂದೆ ಹಾಕಲಾಗಿದ್ದ 2027ರಲ್ಲಿ ಜಿನೀವಾದಲ್ಲಿ ಸಿಗೋಣ ಎಂಬ ಬರಹ ಗಮನ ಸೆಳೆಯಿತು.

ಕಿರುಸುದ್ದಿ

ಡಿಎಂಡಿಕೆ ನೇತೃತ್ವದ ಮೈತ್ರಿ ಕೂಟಕ್ಕೆ ಸೇರಿದ ಡಿಎಂಡಿಕೆ

ಚೆನ್ನೈ: ತಮಿಳುನಾಡು ವಿಧಾನಸಭಾ ಚುನಾವಣೆಗೆ ಮುಂಚಿತವಾಗಿ ಡಿಎಂಕೆ ನೇತೃತ್ವದ ಜಾತ್ಯತೀತ ಪ್ರಗತಿಪರ ಮೈತ್ರಿಕೂಟವನ್ನು ಸೇರಿದೆ. ಈ ಮೂಲಕ ರಾಜಕೀಯ ಊಹಾಪೋಹಗಳಿಗೆ ಅಂತ್ಯ ಹಾಡಿದೆ. ಇಲ್ಲಿನ ಡಿಎಂಕೆ ಪ್ರಧಾನ ಕಚೇರಿ ಅಣ್ಣಾ ಅರಿವಾಳಿಯಂನಲ್ಲಿ ಮುಖ್ಯಮಂತ್ರಿ ಮತ್ತು ಪಕ್ಷದ ಅಧ್ಯಕ್ಷ ಎಂ. ಕೆ. ಸ್ಟಾಲಿನ್ ಅವರ ಸಮ್ಮುಖದಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಸಾಮಾಜಿಕ ಮಾಧ್ಯಮ ಪೋಸ್ಟ್ ಒಂದರಲ್ಲಿ, ಕ್ಯಾಪ್ಟನ್ ವಿಜಯಕಾಂತ್ ಸ್ಥಾಪಿಸಿದ ಡಿಎಂಡಿಕೆ ಮತ್ತು ಕಲೈಂಜರ್ (ಡಿಎಂಕೆ ಪಿತಾಮಹ ಎಂ ಕರುಣಾನಿಧಿ) ಅವರ ಮೇಲೆ ಅಚಲವಾದ ಪ್ರೀತಿಯನ್ನು ಹೊಂದಿದ್ದ ವ್ಯಕ್ತಿ ಜಾತ್ಯತೀತ ಪ್ರಗತಿಪರ ಮೈತ್ರಿಕೂಟವನ್ನು ಸೇರಿರುವುದು ನನಗೆ ಅಪಾರ ಸಂತೋಷವನ್ನು ತರುತ್ತದೆ ಎಂದು ಸ್ಟಾಲಿನ್ ಹೇಳಿದ್ದಾರೆ.

ವಂದೇ ಭಾರತ್ ಮೇಲೆ ಕಲ್ಲೆಸೆತ

ಹಾರ್ದೋಯಿ: ವಂದೇ ಭಾರತ್ ರೈಲಿನ ಮೇಲೆ ಉತ್ತರ ಪ್ರದೇಶದ ಹಾರ್ದೋಯಿ ಜಿಲ್ಲೆಯ ಕೌಡಾ ಗ್ರಾಮದ ಸಮೀಪ ಕಲ್ಲು ತೂರಾಟ ನಡೆದಿದೆ. ಇದರಲ್ಲಿ ಆರ್‌ಎಸ್‌ಎಸ್‌ನ ಸರಸಂಘಚಾಲಕ್ ಮೋಹನ್ ಭಾಗವತ್ ಪ್ರಯಾಣಿಸುತ್ತಿದ್ದರು. ಮಧ್ಯಾಹ್ನ ಸುಮಾರು 3.20ರ ವೇಳೆಗೆ ದೆಹಲಿಯತ್ತ ಸಾಗುತ್ತಿದ್ದ ರೈಲಿನ ಮೇಲೆ ಕಲ್ಲು ಎಸೆಯಲಾಗಿದೆ. ಇದರಿಂದಾಗಿ ರೈಲಿನ ಒಂದು ಕಿಟಕಿಯ ಗಾಜು ಬಿರುಕುಬಿಟ್ಟಿದೆ ಎಂದು ರೈಲ್ವೆ ಮೂಲಗಳು ತಿಳಿಸಿವೆ.ಪ್ರಾಥಮಿಕ ಮಾಹಿತಿಯ ಪ್ರಕಾರ, ರೈಲು ಹಳಿಯ ಸಮೀಪ ಕ್ರಿಕೆಟ್ ಆಡುತ್ತಿದ್ದ 8ರಿಂದ 13 ವರ್ಷದೊಳಗಿನ ಕೆಲ ಮಕ್ಕಳು ಸಾಗುತ್ತಿದ್ದ ರೈಲಿನತ್ತ ಕಲ್ಲು ತೂರಿರುವ ಸಾಧ್ಯತೆ ಇದೆ ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆ ಕುರಿತು ತನಿಖೆ ಮುಂದುವರಿದಿದ್ದು, ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕರಾಚಿ ಸಿಲಿಂಡರ್ ಸ್ಫೋಟ: 16 ಸಾವು

ಕರಾಚಿ: ಪಾಕಿಸ್ತಾನದ ಕರಾಚಿಯ ಅಪಾರ್ಟ್‌ಮೆಂಟ್ ಕಟ್ಟಡವೊಂದರಲ್ಲಿ ಗುರುವಾರ ಸಂಭವಿಸಿದ ಅನಿಲ ಸಿಲಿಂಡರ್ ಸ್ಫೋಟದಲ್ಲಿ ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ ಕನಿಷ್ಠ 16 ಜನರು ಮೃತಪಟ್ಟಿದ್ದಾರೆ. ಕರಾಚಿಯ ವಸತಿ ಪ್ರದೇಶದಲ್ಲಿ ಜನರು ಮುಂಜಾನೆ ಆಹಾರ ಸಿದ್ಧಪಡಿಸುತ್ತಿದ್ದಾಗ ರಂಜಾನ್ ತಿಂಗಳ ಮೊದಲ ದಿನದಂದು ಸ್ಫೋಟ ಸಂಭವಿಸಿದೆ. ಸ್ಫೋಟದಲ್ಲಿ ಹಲವಾರು ಜನರು ಗಾಯಗೊಂಡಿದ್ದಾರೆ ಎಂದು ಪೊಲೀಸ್ ಮುಖ್ಯಸ್ಥರು ತಿಳಿಸಿದ್ದಾರೆ.

ಚಾರ್ಲ್ಸ್ ಸಹೋದರ ಆಂಡ್ರ್ಯೂ ಬಂಧನ

ಲಂಡನ್: ಎಪ್‌ಸ್ಟೀನ್ ಕಡತಗಳ ವಿವಾದಕ್ಕೆ ಸಂಬಂಧಿಸಿದಂತೆ ಬ್ರಿಟನ್ ರಾಜ ಕುಟುಂಬಕ್ಕೆ ಮತ್ತೊಮ್ಮೆ ಸಂಕಷ್ಟ ಎದುರಾಗಿದೆ. ರಾಜ ಚಾರ್ಲ್ಸ್ 3 ಸಹೋದರ ಹಾಗೂ ಮಾಜಿ ಪ್ರಿನ್ಸ್ ಆಂಡ್ರ್ಯೂ ಮೌಂಟ್‌ಬ್ಯಾಟನ್ ವಿಂಡ್ಸರ್ ಅವರನ್ನು ಸಾರ್ವಜನಿಕ ಹುದ್ದೆಯ ದುರುಪಯೋಗ ಶಂಕೆ ಮೇರೆಗೆ ಬಂಧಿಸಲಾಗಿದೆ. ಥೇಮ್ಸ್ ವ್ಯಾಲಿ ಪೊಲೀಸರು 2010ರಲ್ಲಿ ಜೆಫ್ರಿ ಎಪ್‌ಸ್ಟೀನ್‌ಗೆ ವ್ಯಾಪಾರ ಸಂಬಂಧಿತ ವರದಿಗಳನ್ನು ಕಳುಹಿಸಿದ್ದಾರೆ ಎಂಬ ಆರೋಪಗಳ ಕುರಿತು ತನಿಖೆ ನಡೆಸುತ್ತಿದ್ದಾರೆ. ಈ ತನಿಖೆಯ ಭಾಗವಾಗಿ ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ. ಆದರೆ, ತಾನು ಯಾವುದೇ ತಪ್ಪು ಮಾಡಿಲ್ಲ ಎಂದು ಆಂಡ್ರ್ಯೂ ಹೇಳಿದ್ದಾರೆ. ಈ ಸಂಬಂಧ ಮಾತನಾಡಿರುವ ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್, ಕಾನೂನಿಗಿಂತ ಯಾರೂ ದೊಡ್ಡವರಲ್ಲ ಎಂದಿದ್ದಾರೆ. ಎಪ್‌ಸ್ಟೀನ್ ಸಂಪರ್ಕಗಳ ಕುರಿತು ಅಮೆರಿಕ ಕಾಂಗ್ರೆಸ್ ಮುಂದೆ ಆಂಡ್ರ್ಯೂ ಸಾಕ್ಷ್ಯ ಹೇಳಬೇಕು ಎಂಬ ತಮ್ಮ ಹಿಂದಿನ ಅಭಿಪ್ರಾಯವನ್ನು ಪುನರಾವರ್ತಿಸಿದ್ದಾರೆ. ಈ ಹಿಂದೆ ಲೈಂಗಿಕ ಅಪರಾಧಿ ಜೆಫ್ರಿ ಎಪ್‌ಸ್ಟೀನ್ ಜೊತೆಗಿನ ಸಂಬಂಧದ ಹಿನ್ನೆಲೆಯಲ್ಲಿ ಆಂಡ್ರ್ಯೂ ಅವರ ಪ್ರಿನ್ಸ್ ಪಟ್ಟವನ್ನು ಕಿತ್ತುಕೊಳ್ಳಲಾಗಿತ್ತು. ಅಮೆರಿಕ ಕಾನೂನು ಇಲಾಖೆ ಇತ್ತೀಚೆಗೆ ಎಪ್‌ಸ್ಟೀನ್ ಪ್ರಕರಣಕ್ಕೆ ಸಂಬಂಧಿಸಿದ ಸುಮಾರು 30 ಲಕ್ಷ ಪುಟಗಳ ದಾಖಲೆಗಳನ್ನು ಬಿಡುಗಡೆ ಮಾಡಿದ್ದು, ಹೊಸ ಸಂಗತಿಗಳು ಬೆಳಕಿಗೆ ಬಂದಿವೆ.

- ಎಪ್‌ಸ್ಟೀನ್‌ನಲ್ಲಿ ಕಡತಗಳಲ್ಲಿ ಹೆಸರು
- ಯುವತಿ ಜತೆ ಇರುವ ಫೋಟೋ ಬಹಿರಂಗ

ಹೈ-ಸೀ ಉಗ್ರವಾದ ತಡೆ: ರಾಜನಾಥ್ ಸಿಂಗ್ ಕರೆ

ವಿಶಾಖಪಟ್ಟಣಂ: ಸಮುದ್ರದಲ್ಲಿ ಭಯೋತ್ಪಾದನೆ ಮತ್ತು ಅಪರಾಧ ಚಟುವಟಿಕೆಗಳ ವಿರುದ್ಧ ಹೋರಾಟ ಬಲಪಡಿಸಲು ಹೊಸ ಜಾಗತಿಕ ನೌಕಾ ಸಂರಚನೆಗೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಗುರುವಾರ ಕರೆ ನೀಡಿದ್ದಾರೆ. ಇಲ್ಲಿ, 74 ದೇಶಗಳ ಪ್ರತಿನಿಧಿಗಳು ಭಾಗವಹಿಸಿದ ಬಹುರಾಷ್ಟ್ರೀಯ ನೌಕಾಭ್ಯಾಸ ''ಮಿಲನ್ 2026''ರಲ್ಲಿ ಅವರು ಈ ಪ್ರಸ್ತಾಪ ಮಾಡಿದ್ದಾರೆ.

ಉದಯೋನ್ಮುಖ ಸಮಸ್ಯೆಗಳು: ಸಮುದ್ರದ ಕಾನೂನಿನ ಕುರಿತಾದ ವಿಶ್ವಸಂಸ್ಥೆಯ ಸಮಾವೇಶ ಕಾನೂನು ಚೌಕಟ್ಟಿದ್ದರೂ, ಮಾಹಿತಿ ಹಂಚಿಕೆಯನ್ನು ಆಧರಿಸಿದ ಹೆಚ್ಚುವರಿ ಕಾರ್ಯವಿಧಾನ ಕಡಲ ಭಯೋತ್ಪಾದನೆ ಮತ್ತು ಭದ್ರತಾ ಸವಾಲುಗಳ ವಿರುದ್ಧದ ಕ್ರಮವನ್ನು ಮತ್ತಷ್ಟು ಬಲಪಡಿಸುತ್ತದೆ ಎನ್ನಲಾಗಿದೆ. ಜಲಸಂಧಿಗಳು, ಕಾಲುವೆಗಳು ಮತ್ತು ನೀರೊಳಗಿನ ಅಪರೂಪದ ಸಂಪನ್ಮೂಲಗಳ ಮೇಲೆ ಹೆಚ್ಚುತ್ತಿರುವ ವಿವಾದಗಳನ್ನು ಉದಯೋನ್ಮುಖ ಸಮಸ್ಯೆಗಳೆಂದು ವ್ಯಾಖ್ಯಾನಿಸಲಾಗಿದೆ.

ಕಡಲ ಪಾತ್ರದ ವಿಸ್ತರಣೆ: ಕಡಲ ಭದ್ರತೆಯನ್ನು ಉತ್ತೇಜಿಸುವ 47 ರಾಷ್ಟ್ರಗಳ ಸಮೂಹವಾದ ಕಂಬೈನ್ಡ್ ಮ್ಯಾರಿಟೈಮ್ ಫೋರ್ಸಸ್‌ನಲ್ಲಿ ಕಂಬೈನ್ಡ್ ಟಾಸ್ಕ್ ಫೋರ್ಸ್ 154 ರ ಕಮಾಂಡ್ ಅನ್ನು ಭಾರತ ವಹಿಸಿಕೊಂಡಿದೆ. ಕಡಲ್ಗಳ್ಳತನ, ಕಳ್ಳಸಾಗಣೆ ಮತ್ತು ಸೈಬರ್ ಬೆದರಿಕೆಗಳನ್ನು ಎದುರಿಸುವಲ್ಲಿ ನೌಕಾಪಡೆಗಳ ಹೆಚ್ಚುತ್ತಿರುವ ಪಾತ್ರದ ಬಗ್ಗೆ ಬೆಳಕು ಚೆಲ್ಲಲಾಯಿತು. ನೌಕಾಪಡೆ ಮುಖ್ಯಸ್ಥ ದಿನೇಶ್ ತ್ರಿಪಾಠಿ ಭಾಗವಹಿಸಿದ್ದರು. ಈ ಮಧ್ಯೆ, ಐಎಎಸ್ ಸಾಗರ್‌ನ ವಿಸ್ತರಿತ ಎರಡನೇ ಆವೃತ್ತಿ ಏಪ್ರಿಲ್ ನಲ್ಲಿ ಬಿಡುಗಡೆಯಾಗಲಿದೆ ಎಂದು ತಿಳಿದುಬಂದಿದೆ.

ಭ್ರಷ್ಟಾಚಾರ :ಬಾಲುಗೆ ಅಣ್ಣಾಮಲೈ ಸವಾಲು

ಚೆನ್ನೈ: ತಮಿಳುನಾಡಿನ ಮಾಜಿ ರಾಜ್ಯಾಧ್ಯಕ್ಷ ಬಿಜೆಪಿ ಅಧ್ಯಕ್ಷ ಕೆ. ಅಣ್ಣಾಮಲೈ, ಡಿಎಂಕೆ ಸಂಸದ ಮತ್ತು ಪಕ್ಷದ ಖಜಾಂಚಿ ಟಿ.ಆರ್ ಬಾಲು ಅವರನ್ನು ವೈಯಕ್ತಿಕವಾಗಿ ಪಾಟೀ ಸವಾಲಿಗೆ ಒಳಪಡಿಸಿದ್ದಾರೆ. ಭ್ರಷ್ಟಾಚಾರದ ಆರೋಪಗಳಲ್ಲಿ ಬೇರೂರಿರುವ ಉನ್ನತ ಮಟ್ಟದ ಮಾನನಷ್ಟ ಮೊಕದ್ದಮೆಯಲ್ಲಿ ಬಾಲು ಸೈದಾಪೇಟ್‌ನ 17 ನೇ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಸುಮಾರು ಮೂರು ಗಂಟೆಗಳ ಕಾಲ ಇದ್ದರು. ಡಿಎಂಕೆಯ ಉನ್ನತ ನಾಯಕರು ಭ್ರಷ್ಟಾಚಾರದ ಮೂಲಕ ಸಂಪತ್ತು ಸಂಗ್ರಹಿಸಿದ್ದಾರೆ ಮತ್ತು ಅದನ್ನು ಚುನಾವಣಾ ಅಫಿಡವಿಟ್‌ಗಳಲ್ಲಿ ಮರೆಮಾಡಿದ್ದಾರೆ ಎಂದು ಆರೋಪಿಸಿ ಅಣ್ಣಾಮಲೈ 2023ರಲ್ಲಿ ಡಿಎಂಕೆ ಫೈಲ್ಸ್‌ನ ಎಂಬ ಶೀರ್ಷಿಕೆಯ ದಾಖಲೆ ಬಿಡುಗಡೆ ಮಾಡಿದ ನಂತರ ಬಾಲು ಈ ಪ್ರಕರಣ ದಾಖಲಿಸಿದ್ದರು. 100 ಕೋಟಿ ರೂ. ಪರಿಹಾರ ಕೋರಿರುವ ಬಾಲು, ಆರೋಪಗಳನ್ನು ಸುಳ್ಳು, ಆಧಾರರಹಿತ ಮತ್ತು ಮಾನಹಾನಿಕರ ಎಂದು ಹೇಳಿದ್ದಾರೆ. ಬೇಷರತ್ತಾಗಿ ಕ್ಷಮೆಯಾಚಿಸಲು ಒತ್ತಾಯಿಸಿದ್ದಾರೆ. ವಿಚಾರಣೆಯ ಸಮಯದಲ್ಲಿ, ಬಾಲು ತನ್ನ ಪತ್ನಿಯ ಹೆಸರಿನಲ್ಲಿ 1.46 ಕೋಟಿ. ರೂ ವೈಯಕ್ತಿಕ ಸಾಲ ಮತ್ತು 6.60 ಕೋಟಿ.ರೂ ಸಾಲವಿರುವುದನ್ನು ಬಹಿರಂಗಪಡಿಸಿದ್ದಾರೆ. ಮತ್ತು ಸಾಲ ನೀಡುವ ಕಂಪನಿಯನ್ನು ತನ್ನ ಮಗ ನಡೆಸುತ್ತಿದ್ದಾನೆಯೇ ಎಂದು ತನಗೆ ತಿಳಿದಿಲ್ಲ ಎಂದು ಹೇಳಿದ್ದಾರೆ. ಮುಂದಿನ ವಿಚಾರಣೆಯನ್ನು 2026ರ ಏಪ್ರಿಲ್ 7ಕ್ಕೆ ಮುಂದೂಡಲಾಗಿದೆ. ವಿಚಾರಣೆಯ ಸಮಯದಲ್ಲಿ ತನ್ನ ಪತ್ನಿಯ ವಿರುದ್ಧ ಮಾಡಲಾದ ಆರೋಪಗಳ ಮೇಲೆ ಪ್ರತ್ಯೇಕ ಮಾನನಷ್ಟ ಮೊಕದ್ದಮೆ ಹೂಡುವುದಾಗಿ ಅಣ್ಣಾಮಲೈ ಘೋಷಿಸಿದ್ದಾರೆ.

ತಾಯಿಯಿಂದ ಅವಳಿ ಬೇರ್ಪಡಿಸಿದ್ದು ಕ್ರೌರ್ಯಕ್ಕೆ ಸಮ: ಸುಪ್ರೀಂ

ಹೊಸದಿಲ್ಲಿ: ವೈವಾಹಿಕ ವಿವಾದದಲ್ಲಿ ವಿಚ್ಛೇದಿತ ಪತಿ ಆರು ತಿಂಗಳ ಅವಳಿ ಮಕ್ಕಳನ್ನು ಅವರ ತಾಯಿಯಿಂದ ಬೇರ್ಪಡಿಸಿದ್ದು ಅತ್ಯುನ್ನತ ಕ್ರೌರ್ಯದ ಪ್ರಕರಣ ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ. ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್, ಸಂದೀಪ್ ಮೆಹ್ತಾ ಮತ್ತು ಎನ್. ವಿ. ಅಂಜಾರಿಯಾ ಅವರ ನ್ಯಾಯಪೀಠವು, ಸದ್ಯ ಒಂದೂವರೆ ವರ್ಷ ವಯಸ್ಸಿನ ಮಕ್ಕಳನ್ನು ತಮ್ಮ 6ತಿಂಗಳಲ್ಲಿ ತಾಯಿಯಿಂದ ಬೇರ್ಪಡಿಸಿದ್ದಕ್ಕಾಗಿ ಗಂಡನನ್ನು ತರಾಟೆಗೆ ತೆಗೆದುಕೊಂಡಿದೆ. ವಿಚ್ಛೇದಿತ ಸಂಗಾತಿಗಳಿಬ್ಬರೂ ಮುಂದಿನ ದಿನಾಂಕದಂದು ನ್ಯಾಯಮೂರ್ತಿಗಳ ಮುಂದೆ ಹಾಜರಾಗುವಂತೆ ಕೇಳಿಕೊಂಡಿತು. ಕೇವಲ ಆರು ತಿಂಗಳ ಮಕ್ಕಳನ್ನು ಅವರ ತಾಯಿಯಿಂದ ಬೇರ್ಪಡಿಸುವ ಮೂಲಕ ಪತಿ ತೀವ್ರ ಕ್ರೌರ್ಯವನ್ನು ಮಾಡಿದ್ದಾನೆ. ಮಕ್ಕಳ ಕಲ್ಯಾಣವೇ ಮುಖ್ಯ. ಇದು ನ್ಯಾಯದ ಅಪಹಾಸ್ಯವಾಗಿದೆ. ಆರು ತಿಂಗಳಷ್ಟು ಚಿಕ್ಕ ಮಕ್ಕಳನ್ನು ಅವರ ತಾಯಿಯಿಂದ ದೂರವಿಡಲು ಸಾಧ್ಯವಿಲ್ಲ, ಇದು ಅತ್ಯುನ್ನತ ಕ್ರಮದ ಕ್ರೌರ್ಯವಾಗಿದೆ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಎಲ್ಲಾ ಪಡೆಗಳ ಜಂಟಿ ಕಾರ್ಯಾಚರಣೆಗಳ ಮೂಲಕ ಗುರಿ

ನಕ್ಸಲಿಸಂ ವಿರುದ್ಧದ ಕಾರ್ಯಚರಣೆ ಯಶ

ಗುವಾಹಟಿ: ನಕ್ಸಲಿಸಂ ವಿರುದ್ಧದ ಹೋರಾಟ ಕೊನೆ ಹಂತದಲ್ಲಿದ್ದು, ಗೃಹ ಸಚಿವ ಅಮಿತ್ ಶಾ ಘೋಷಿಸಿದಂತೆ ಮಾರ್ಚ್ ವೇಳೆಗೆ ದೇಶದಿಂದ ಈ ಪಿಡುಗನ್ನು ನಿರ್ಮೂಲನೆ ಮಾಡಲಾಗುವುದು ಎಂದು ಸಿಆರ್‌ಪಿಎಫ್ ಮಹಾನಿರ್ದೇಶಕ ಜಿ. ಪಿ. ಸಿಂಗ್ ಗುರುವಾರ ಹೇಳಿದ್ದಾರೆ.

ಗುವಾಹಟಿಯಲ್ಲಿ ದಳದ ಡಿಜಿ ಪಥಸಂಚಲನವನ್ನುದ್ದೇಶಿಸಿ ಮಾತನಾಡಿದ ಅವರು, ಕಳೆದ ವರ್ಷದಲ್ಲಿ ನಕ್ಸಲರ ವಿರುದ್ಧ ಇತರ ಭದ್ರತಾ ಸಂಸ್ಥೆಗಳೊಂದಿಗೆ ಜಂಟಿ ಕಾರ್ಯಾಚರಣೆಯಲ್ಲಿ ಸಿಆರ್‌ಪಿಎಫ್ ನಿರ್ಣಾಯಕ ಕ್ರಮಗಳನ್ನು ಕೈಗೊಂಡಿದೆ ಎಂದು ಹೇಳಿದರು. ನಕ್ಸಲರ ವಿರುದ್ಧದ ಕಾರ್ಯಾಚರಣೆಯಲ್ಲಿ ನಾವು ಅಭೂತಪೂರ್ವ ಯಶಸ್ಸನ್ನು ಸಾಧಿಸಿದೆವು. ಇತರ ಭದ್ರತಾ ಸಂಸ್ಥೆಗಳೊಂದಿಗೆ ಜಂಟಿ ಕಾರ್ಯಾಚರಣೆಯಲ್ಲಿ ನಿರ್ಣಾಯಕ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಅವರು ಹೇಳಿದರು. ಇದರಲ್ಲಿ ಸಿಆರ್‌ಪಿಎಫ್‌ನ ಜನರಲ್ ಡ್ಯೂಟಿ ಬೆಟಾಲಿಯನ್ ಮತ್ತು ಕೋಬ್ರಾ ಕಮಾಂಡೋಗಳ ಪಾತ್ರದ ಬಗ್ಗೆ ಉಲ್ಲೇಖಿಸಿದರು. ನಕ್ಸಲಿಸಂ ತನ್ನ ಕೊನೆಯ ಉಸಿರನ್ನು ತೆಗೆದುಕೊಳ್ಳುತ್ತಿದೆ. ನಮ್ಮ ಜಂಟಿ ಕಾರ್ಯಾಚರಣೆಗಳ ಮೂಲಕ, ನಕ್ಸಲಿಸಂ ಬಹುತೇಕ ಕೊನೆಗೊಂಡಿದೆ. ನಮ್ಮ ಕೇಂದ್ರ ಗೃಹ ಸಚಿವರು ಘೋಷಿಸಿದಂತೆ 2026ರ ಮಾರ್ಚ್ ವೇಳೆಗೆ ಇದನ್ನು ನಿರ್ಮೂಲನೆ ಮಾಡುವ ಹಾದಿಯಲ್ಲಿದೆ ಎಂದು ಸಿಂಗ್ ಹೇಳಿದರು.

ನಕ್ಸಲ್ ಪೀಡಿತ ಜಿಲ್ಲೆಗಳ ಸಂಖ್ಯೆ 7ಕ್ಕೆ ಇಳಿಕೆ

ಹೊಸದಿಲ್ಲಿ: ದೇಶದಲ್ಲಿ ನಕ್ಸಲ್ ಬಾಧಿತ ಜಿಲ್ಲೆಗಳ ಸಂಖ್ಯೆ ಎಂಟರಿಂದ ಏಳಕ್ಕೆ ಇಳಿಕೆಯಾಗಿದೆ ಎಂದು ನಕ್ಸಲ್ ಬಾಧಿತವಾದ ಪ್ರದೇಶಗಳ ಹೊಸ ಪರಿಶೀಲನೆಯಿಂದ ತಿಳಿದು ಬಂದಿದೆ. ಈ ಮೂಲಕ 2026ರ ಮಾರ್ಚ್ ಅಂತ್ಯದ ವೇಳೆಗೆ ನಕ್ಸಲ್ ಮುಕ್ತ ಭಾರತ ನಿರ್ಮಾಣಕ್ಕೆ ಹೊಸ ಬಲದೊರಕಿದೆ. ಗೃಹ ಸಚಿವಾಲಯವು ಇತ್ತೀಚೆಗೆ ಫೆಬ್ರವರಿ 9 ರಿಂದ ಜಾರಿಗೆ ಬರುವಂತೆ ಎಲ್ಲಾ ನಕ್ಸಲ್ ಪೀಡಿತ ರಾಜ್ಯಗಳಿಗೆ ಹೊಸ ವರ್ಗೀಕರಣವನ್ನು ನೀಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇನ್ನು 10 ದಿನಗಳಲ್ಲಿ ನಿರ್ಧಾರ ಎಂದ ಟ್ರಂಪ್

ಅಮೆರಿಕ - ಇರಾನ್ ಯುದ್ಧ ನಿಶ್ಚಿತ?

ಹೊಸದಿಲ್ಲಿ/ವಾಷಿಂಗ್ಟನ್: ಅಮೆರಿಕ-ಇರಾನ್ ನಡುವಿನ ಉದ್ವಿಗ್ನತೆ ಮತ್ತಷ್ಟು ಗಂಭೀರವಾಗಿರುವ ನಡುವೆಯೇ, ಯುದ್ಧದ ಬಗ್ಗೆ ಮುಂದಿನ 10 ದಿನಗಳಲ್ಲಿ ನಿರ್ಧಾರ ತೆಗೆದುಕೊಳ್ಳುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ.

ವಾಷಿಂಗ್ಟನ್ ಡಿಸಿಯಲ್ಲಿ ಹೊಸದಾಗಿ ರಚಿಸಲಾದ ಬೋರ್ಡ್ ಆಫ್ ಪೀಸ್‌ನ ಮೊದಲ ಸಭೆಯ ನಂತರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಟ್ರಂಪ್, ಅಮೆರಿಕ ಮತ್ತು ಇರಾನ್ ನಡುವೆ ಒಪ್ಪಂದದ ಸಾಧ್ಯತೆಗಳನ್ನೂ ಉಲ್ಲೇಖಿಸಿದರು. ಇದನ್ನು ಇನ್ನೊಂದು ಹಂತಕ್ಕೆ ತೆಗೆದುಕೊಳ್ಳಬೇಕಾಗಬಹುದು ಅಥವಾ ಇಲ್ಲದಿರಬಹುದು. ಮುಂದಿನ 10 ದಿನಗಳಲ್ಲಿ ಎಲ್ಲವೂ ಸ್ಪಷ್ಟವಾಗಲಿದೆ ಎಂದರು. ಇದೇ ವೇಳೆ, ಅಮೆರಿಕ ಉಪಾಧ್ಯಕ್ಷ ಜೆಡಿ ವ್ಯಾನ್ಸ್, ಟ್ರಂಪ್ ನಿಗದಿಪಡಿಸಿದ ರೆಡ್ ಲೈನ್‌ಗಳನ್ನು ಇರಾನ್ ಇನ್ನೂ ಒಪ್ಪಿಕೊಂಡಿಲ್ಲ ಎಂದು ಹೇಳಿದ್ದಾರೆ. ಫಾಕ್ಸ್ ನ್ಯೂಸ್‌ಗೆ ನೀಡಿದ ಸಂದರ್ಶನದಲ್ಲಿ, ''ಅಣ್ವಸ್ತ್ರ ಹೊಂದಬಾರದು ಎಂಬುದು ಅಧ್ಯಕ್ಷರ ಸ್ಪಷ್ಟ ನಿಲುವು. ಆದರೆ ಇರಾನ್ ಅದನ್ನು ಗಂಭೀರವಾಗಿ ಪರಿಗಣಿಸುತ್ತಿರುವ ಲಕ್ಷಣಗಳು ಕಾಣುತ್ತಿಲ್ಲ ಎಂದು ವ್ಯಾನ್ಸ್ ಅಭಿಪ್ರಾಯಪಟ್ಟರು. ಇದರ ನಡುವೆ, ಇರಾನ್ ಫೆ.17ರಂದು ಹಾರ್ಮುಜ್ ಜಲಸಂಧಿಯಲ್ಲಿ ಲೈವ್ ಫೈರ್ ಸೈನಿಕ ಅಭ್ಯಾಸ ನಡೆಸಿ, ಜಲಸಂಧಿಯನ್ನು ತಾತ್ಕಾಲಿಕವಾಗಿ ಮುಚ್ಚಿದ ಬೆಳವಣಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಆತಂಕಕ್ಕೆ ಕಾರಣವಾಗಿದೆ.

ಷೇರುಪೇಟೆಗೆ ಯುದ್ಧದ ಭೀತಿ

ಮುಂಬೈ: ಅಮೆರಿಕ ಮತ್ತು ಇರಾನ್ ನಡುವೆ ಯುದ್ಧ ನಡೆಯುವ ಸಂಭವ ಹೆಚ್ಚಾಗಿದ್ದು, ಇದರ ಪರಿಣಾಮ ಭಾರತೀಯ ಷೇರುಮಾರುಕಟ್ಟೆಗಳ ಮೇಲೂ ಬೀರಿತು. ಗುರುವಾರ ಬಿಎಸ್‌ಇ ಸೆನ್ಸೆಕ್ಸ್ 1,236.11 ಅಂಕಗಳು (ಶೇ.1.48) ಇಳಿದು 82,498.14ಕ್ಕೆ ಮುಕ್ತಾಯಗೊಂಡರೆ, ಎನ್‌ಎಸ್‌ಇ ನಿಫ್ಟಿ 365 ಅಂಕಗಳು (ಶೇ.1.41) ಕುಸಿದು 25,454.35ಕ್ಕೆ ತಲುಪಿತು. ಮೂರು ದಿನಗಳ ಏರಿಕೆ ಸರಣಿಗೆ ತೆರೆ ಬಿದ್ದಿದ್ದು, ದಿನದ ವಹಿವಾಟಿನಲ್ಲಿ ಸೆನ್ಸೆಕ್ಸ್ 1,470 ಅಂಕಗಳವರೆಗೆ ಕುಸಿದು 82,264.20 ಎಂಬ ಕನಿಷ್ಠ ಮಟ್ಟ ತಲುಪಿತು. ನಿಫ್ಟಿ ಮಧ್ಯಂತರ ದಿನ ಅವಧಿಯಲ್ಲಿ 430 ಅಂಕಗಳಷ್ಟು ಇಳಿಕೆ ಕಂಡು 25,388.75 ಮಟ್ಟ ತಲುಪಿತು.

ಇಂದಿನ ಪಂದ್ಯಗಳು
ಆಸ್ಟ್ರೇಲಿಯಾ vs ಒಮನ್
ಸಂಜೆ 7 (ಕೊಲಂಬೋ)

ಕಿರುಸುದ್ದಿ

ಬೆಂಗಳೂರು ಓಪನ್: ವೈಷ್ಣವಿ ಕ್ವಾರ್ಟರ್‌ಗೆ

ಬೆಂಗಳೂರು: ಭಾರತದ ಭರವಸೆಯ ಆಟಗಾರ್ತಿ ವೈಷ್ಣವಿ ಆಡ್ಕರ್ ಇಲ್ಲಿ ನಡೆಯುತ್ತಿರುವ ಮಹಿಳೆಯರ ಬೆಂಗಳೂರು ಓಪನ್ ಪಂದ್ಯಾವಳಿಯ ಪಂದ್ಯದಲ್ಲಿ ಸ್ಮರಣೀಯ ಜಯ ಸಾಧಿಸಿ ಕ್ವಾರ್ಟರ್‌ಫೈನಲ್‌ಗೆ ಪ್ರವೇಶಿಸಿದ್ದಾರೆ. ಎಂಟನೇ ಸೀಡ್ ಆಗಿದ್ದ ಜಪಾನ್‌ನ ಮಾಯ್ ಹೊಂಟಾಮಾ ವಿರುದ್ಧ 2-6, 6-4, 7-6(8) ಅಂಕಗಳಿಂದ ರೋಚಕ ಮೂರು ಸೆಟ್‌ಗಳ ಹೋರಾಟದಲ್ಲಿ ಗೆಲುವು ದಾಖಲಿಸಿ ಬೆಂಗಳೂರಿನ ಗಮನ ಸೆಳೆದರು.



ಮೊದಲ ಸೆಟ್‌ನಲ್ಲಿ ಹೋಂಟಾಮಾ ಆಕ್ರಮಣಕಾರಿ ಆಟ ಪ್ರದರ್ಶಿಸಿ ಆಡ್ಕರ್ ಅವರ ತಪ್ಪುಗಳನ್ನು ಸದುಪಯೋಗಪಡಿಸಿಕೊಂಡು 6-2ರಿಂದ ಮುನ್ನಡೆ ಪಡೆದರು. ಬೇಸ್‌ಲೈನ್‌ನಲ್ಲಿ ಸ್ಥಿರತೆ ಮತ್ತು ಆಳದ ಶಾಟ್‌ಗಳ ಮೂಲಕ ಅವರು ಪಂದ್ಯದ ನಿಯಂತ್ರಣ ಹಿಡಿದಿಟ್ಟುಕೊಂಡರು. ಎರಡನೇ ಸೆಟ್‌ನಲ್ಲಿ ಆಡ್ಕರ್ ತಮ್ಮ ಆಟದ ತೀವ್ರತೆಯನ್ನು ಹೆಚ್ಚಿಸಿ ನೆಟ್‌ಗೆ ಹತ್ತಿರವಾಗಿ ಆಕ್ರಮಣ ಆರಂಭಿಸಿದರು. ಎರಡನೇ ಗೇಮ್‌ನಲ್ಲೇ ಬ್ರೇಕ್ ಸಾಧಿಸಿ 3-0 ಮುನ್ನಡೆ ಪಡೆದರು. ಹೊಂಟಾಮಾ 3-2ಕ್ಕೆ ಅಂತರ ಕಡಿತ ಮಾಡಿದರೂ, ಆಡ್ಕರ್ ಶಕ್ತಿಶಾಲಿ ರಿಟರ್ನ್‌ಗಳ ಮೂಲಕ ಒತ್ತಡ ಹೆಚ್ಚಿಸಿ 6-4ರಿಂದ ಸೆಟ್ ಜಯಿಸಿದರು.

ನಿರ್ಣಾಯಕ ಸೆಟ್‌ನಲ್ಲಿ: ನಿರ್ಣಾಯಕ ಮೂರನೇ ಸೆಟ್‌ನಲ್ಲಿ ಇಬ್ಬರೂ ಆಟಗಾರ್ತಿಯರು ಪರಸ್ಪರ ಬ್ರೇಕ್‌ಗಳನ್ನು ವಿನಿಮಯ ಮಾಡಿಕೊಂಡರು. 10ನೇ ಗೇಮ್‌ನಲ್ಲಿ ಆಡ್ಕರ್ ಗೆಲುವಿನ ಅಂಚಿನಲ್ಲಿದ್ದರೂ, ಹೋಂಟಾಮಾ ಮ್ಯಾಚ್ ಪಾಯಿಂಟ್ ಉಳಿಸಿಕೊಂಡು ಟೈಬ್ರೇಕ್‌ಗೆ ಕೊಂಡೊಯ್ದರು. ಟೈಬ್ರೇಕ್‌ನಲ್ಲಿ ಹೋಂಟಾಮಾ 5-2 ಮುನ್ನಡೆ ಸಾಧಿಸಿದರೂ, ಆಡ್ಕರ್ ಹಿಂಜರಿಯದೆ ಫೋರ್‌ಹ್ಯಾಂಡ್ ವಿನ್ನರ್‌ಗಳ ಮೂಲಕ ಮರುಪ್ರವೇಶಿಸಿದರು. ಮೂರು ಮ್ಯಾಚ್ ಪಾಯಿಂಟ್‌ಗಳನ್ನು ತಪ್ಪಿಸಿಕೊಂಡ ಬಳಿಕ 9-8 ಸಮಯದಲ್ಲಿ ಹೋಂಟಾಮಾ ಬ್ಯಾಕ್‌ಹ್ಯಾಂಡ್ ನೆಟ್‌ಗೆ ತಾಕಿದಾಗ ಆಡ್ಕರ್ ಸ್ಮರಣೀಯ ಜಯ ಸಾಧಿಸಿದರು.

ಎರಡನೇ ಟಿ20 ಗೆದ್ದ ಆಸೀಸ್ ಮಹಿಳೆಯರು

ಕ್ಯಾನ್ಬೆರಾ: ಜಾರ್ಜಿಯಾ ವಾಲ್ ಅವರ ಸ್ಫೋಟಕ ಬ್ಯಾಟಿಂಗ್ ಮತ್ತು ಆಸೀಸ್ ತಂಡದ ಸಾಂಘಿಕ ಬೌಲಿಂಗ್ ದಾಳಿಯ ನೆರವಿನಿಂದ ಆಸ್ಟ್ರೇಲಿಯಾ ಮಹಿಳೆಯರ ತಂಡವು ಇಲ್ಲಿ ನಡೆದ ಎರಡನೇ ಟಿ20 ಪಂದ್ಯವನ್ನು ಗೆದ್ದು, ಸರಣಿಯನ್ನು ಟೈ ಮಾಡಿಕೊಂಡಿದೆ. ಮೊದಲ ಪಂದ್ಯದಲ್ಲಿ ಭಾರತ ಭರ್ಜರಿ ಗೆಲುವು ಸಾಧಿಸಿದ ನಂತರ ಎರಡನೇ ಪಂದ್ಯದಲ್ಲಿ ಆಸ್ಟ್ರೇಲಿಯಾ ಪಡೆ ಚೇತರಿಸಿಕೊಂಡಿತು. ತಾಳ್ಮೆಯಿಂದ ಪಂದ್ಯ ಗೆದ್ದುಕೊಂಡಿತು.

ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 163 ರನ್ ಗಳಿಸಿತು. ವಾಲ್ 88 ರನ್ ಗಳಿಸಿದರು. ಮೂನಿ 44 ರನ್‌ಗಳಿಸಿದರು. ಭಾರತ ಪರ ರೆಡ್ಡಿ 2 ವಿಕೆಟ್ ಪಡೆದರು. ಗುರಿ ಬೆನ್ನತ್ತಿದ ಭಾರತ 20 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 144 ರನ್ ಮಾತ್ರ ಗಳಿಸಿತು. ಕೌರ್ ಮತ್ತು ಮಂಧಾನ ಅಲ್ಪ ಪ್ರತಿರೋಧಿಸಿದವರಾದರು. ಆಸೀಸ್ ಪರ ಸೋಫಿ, ಅನಾಬೆಲ್ ಮತ್ತು ಗಾರ್ತ್ ತಲಾ 2 ವಿಕೆಟ್ ಪಡೆದುಕೊಂಡರೆ, ಗಾರ್ಡನರ್ 3 ವಿಕೆಟ್ ಪಡೆದರು.

ಪ್ಯಾರಾಲಿಂಪಿಕ್ಸ್‌ಗೆ ಉಕ್ರೇನ್ ಬಹಿಷ್ಕಾರ

ಹೊಸದಿಲ್ಲಿ: ರಷ್ಯಾ, ಬೆಲರೂಸಿಯನ್ ಕ್ರೀಡಾಪಟುಗಳು ತಮ್ಮ ದೇಶದ ಧ್ವಜದ ಅಡಿಯಲ್ಲೇ ಆಡುವುದಕ್ಕೆ ಅಧಿಕೃತ ಅನುಮತಿ ಪಡೆದ ನಂತರ ಉಕ್ರೇನ್ ಅಧಿಕಾರಿಗಳು ಮಿಲಾನೋ ಕೋರ್ಟಿನಾದಲ್ಲಿ ನಡೆಯಲಿರುವ ಚಳಿಗಾಲದ ಪ್ಯಾರಾಲಿಂಪಿಕ್ಸ್ ಬಹಿಷ್ಕರಿಸುವುದಾಗಿ ಹೇಳಿದ್ದಾರೆ. ರಷ್ಯಾ ಮತ್ತು ಉಕ್ರೇನ್ ಯುದ್ಧದ ಬಿಸಿ ಕ್ರೀಡೆಗೂ ತಟ್ಟಿದಂತಾಗಿದೆ. ವಿವಿಧ ಕಾರಣಗಳಿಂದಾಗಿ ಈ ಹಿಂದೆ ರಷ್ಯಾ ಆಟಗಾರರಿಗೆ ತಮ್ಮ ಧ್ವಜದೊಂದಿಗೆ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವುದಕ್ಕೆ ಅನುಮತಿ ಕೊಟ್ಟಿರಲಿಲ್ಲ. ಆದರೆ ಮೇಲ್ಮನವಿ ಸಲ್ಲಿಸಿದ ನಂತರ ಅವಕಾಶ ದೊರೆತಿದೆ. ಈ ಬೆನ್ನಲ್ಲೇ ನಾವು ಕ್ರೀಡಾಕೂಟದಲ್ಲಿ ಭಾಗವಹಿಸುವುದಿಲ್ಲ ಎಂದು ಉಕ್ರೇನ್ ಕ್ರೀಡಾ ಮಂತ್ರಿ ತಿಳಿಸಿದ್ದಾರೆ. ಮಾರ್ಚ್ 6ರಿಂದ 15ರವರೆಗೆ ನಡೆಯಲಿರುವ ವಿಂಟರ್ ಪ್ಯಾರಾಲಿಂಪಿಕ್ಸ್‌ನಲ್ಲಿ ಉಕ್ರೇನ್ ಕ್ರೀಡಾಪಟುಗಳು ಭಾಗಿಯಾದರೂ ಸಮಾರೋಪ ಸಮಾರಂಭದಲ್ಲಿ ಉಕ್ರೇನ್‌ನ ಅಧಿಕಾರಿಗಳು ಭಾಗವಹಿಸುವುದಿಲ್ಲ.

ಉತ್ತರಾಖಂಡ ವಿರುದ್ಧದ ಪಂದ್ಯ | ಇನ್ನಿಂಗ್ಸ್ ಮುನ್ನಡೆಯಿಂದಾಗಿ ಫೈನಲ್‌ಗೆ ಪಡಿಕ್ಕಲ್ ಪಡೆ

ಪಂದ್ಯ ಡ್ರಾ: ರಣಜಿ ಫೈನಲ್‌ಗೆ ಕರ್ನಾಟಕ

ಲಖನೌ: ಒಬ್ಬರ ಹಿಂದೊಬ್ಬರಂತೆ ದ್ವಿಶತಕ ಮತ್ತು ಶತಕಗಳ ಪ್ರಹಾರ ಮಾಡಿದ ಕರ್ನಾಟಕ ಬ್ಯಾಟಿಗರು ತಮ್ಮ ತಂಡವನ್ನು ಪ್ರತಿಷ್ಠಿತ ರಣಜಿ ಪಂದ್ಯಾವಳಿಯ ಫೈನಲ್‌ಗೆ ಲೀಲಾಜಾಲವಾಗಿ ಕೊಂಡೊಯ್ದರು.

ದಾಖಲೆಯ ಮೊತ್ತ ಗಳಿಸಿದ ಕರ್ನಾಟಕ ಪರಿಪೂರ್ಣ ಪಂದ್ಯ ಗೆಲ್ಲದಿದ್ದರೂ ಫೈನಲ್‌ಗೇರುವುದಕ್ಕೆ ಬೇಕಾದ ಮೊದಲ ಇನ್ನಿಂಗ್ಸ್ ಮುನ್ನಡೆ ಮೂರನೇ ದಿನವೇ ಸಾಧಿಸಿತ್ತು. ಅಲ್ಲಿಂದ ಇಲ್ಲಿಯವರೆಗೆ ಉತ್ತರಾಖಂಡ ಬೌಲರ್‌ಗಳ ತಾಳ್ಮೆ ಪರೀಕ್ಷಿಸಿತು. ಜಮ್ಮು-ಕಾಶ್ಮೀರದೊಂದಿಗೆ ಫೈನಲ್ ಆಡುವುದಕ್ಕೆ ಅಡಿಪಾಯ ಹಾಕಿತು. ಪ್ರತಿಯೊಂದು ಪಂದ್ಯದಲ್ಲಿ ಪ್ರತಿಸ್ಪರ್ಧಿಗಳಿಗೆ ಪ್ರತ್ಯುತ್ತರ ನೀಡುತ್ತಾ ಬಂದ ಉತ್ತರಾಖಂಡ ಕರ್ನಾಟದೆದುರು ಉತ್ತರವಿಲ್ಲದೆ, ನಿಬ್ಬೆರಗಾಗಿ ನಿಂತಿತು. ಡ್ರಾ ಆದ ಪಂದ್ಯದಲ್ಲಿ ಪರಾಭವ ಕಂಡ ತಂಡವಾಗಿತು. ಫೈನಲ್ ಆಡುವ ಅವಕಾಶ ಕೈಚೆಲ್ಲಿತು.

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ **ಒಟ್ಟು 86.58 ಲಕ್ಷ** ಮೊತ್ತದಲ್ಲಿ **ಒಟ್ಟು 03** ಕಾಮಗಾರಿಗೆ (ಕನಿಷ್ಠ ಮೊತ್ತ **ರೂ: 1.58 ಲಕ್ಷ** ಹಾಗೂ ಗರಿಷ್ಠ ಮೊತ್ತ **ರೂ: 80.00 ಲಕ್ಷ**) ಕೆಪಿಪಿಪಿ **(kppp)** ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ (kppp) ಸ್ಟಾಂಡರ್ಡ್ ಬಿಡ್ ಡಾಕುಮೆಂಟ್ ಕೆ ಡಬ್ಲ್ಯೂ-1 ಹಾಗೂ 3. ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ **http:// www. kppp. Karnataka. gov.in/** ದಲ್ಲಿ ನೋಡಿಕೊಳ್ಳಬಹುದು.

Work Indent No: Part-1 24475-SC/Call-2
ಮೇಲಿನ ಕಾಮಗಾರಿಯ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ : **24-02-2026** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **25-02-2026** ಮಧ್ಯಾಹ್ನ 4.00 ಘಂಟೆಯವರೆಗೆ, ತಾಂತ್ರಿಕ/ ಆರ್ಥಿಕ ಬಿಡ್ ತೆರೆಯುವ ದಿನಾಂಕ : **26-02-2026**

Work Indent No: Part-2 29101/Call-2 32930-ST/Call-2
ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ : **04-03-2026** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **06-03-2026** ಮಧ್ಯಾಹ್ನ 4.00 ಘಂಟೆಯವರೆಗೆ, ತಾಂತ್ರಿಕ/ಆರ್ಥಿಕ ಬಿಡ್ ತೆರೆಯುವ ದಿನಾಂಕ : **07-03-2026.** ಆರ್ಥಿಕ ಬಿಡ್ ತೆರೆಯುವ ದಿನಾಂಕ : **09-03-2026.**
ಪರಿಶಿಷ್ಟ ಜಾತಿ ಮತ್ತು ಪಂಗಡ, ಕೆಟಗರಿ-1 ಹಾಗೂ ಕೆಟಗರಿ-2ಎ ಕ್ಕೆ ಮೀಸಲಿರಿಸಿದ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸುವ ಗುತ್ತಿಗೆದಾರರು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪೂರಕ ದಾಖಲೆಗಳಾದ ಜಾತಿ ಪ್ರಮಾಣ ಪತ್ರ, 10 ವರ್ಷದ ರಹವಾಸಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
GST shall be paid separately as per prevailing Government Order. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ಸಹಿ/- ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ, ಗದಗ
ವಾಸಾಸಂಇ/ಗದಗ/ಕೆಎಸ್‌ಎಂಸಿಎ/663/2025-26

CHANGE OF NAME
I, **FHATIMA** (Old Name) R/o. 2nd Ward Near Bust Stand Kamalapur, Bellary have changed my name as **FATHIMA GUNDUMALLI** (New Name) vide affidavit sworn before notary M.K.Kagadagar, Gadag, Dated 17.02.2026.

ಕರ್ನಾಟಕ ಸರಕಾರ
ಜಿಲ್ಲಾ ಪಂಚಾಯತ ಬೆಳಗಾವಿ
ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ ರಾಜ ಇಂಜನೀಯರಿಂಗ್ ವಿಭಾಗ ಚಿಕ್ಕೋಡಿ
Email :preckdee@gmail.com ಕಚೇರಿ ದೂರವಾಣಿ/ಫ್ಯಾಕ್ಸ ಸಂಖ್ಯೆ: 08338-272131,
ಕ್ರ.ಸಂ:ಕಾನಿಅ/ಪಂರಾಇಂ/ಚಿವಿ/ಡಿಬಿ/ಕೆಪಿಪಿಪಿ/2025-26/8177 ದಿನಾಂಕ:16-02-2026

(ಕೆಪಿಪಿಪಿ ಅಲ್ಪಾವಧಿ ಟೆಂಡರ ಪ್ರಕಟಣೆ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ ಚಿಕ್ಕೋಡಿ ಇವರು KW-1, KW-2, KW-3, KW-4 (Standard Tender Document) ನಿಬಂಧನೆಗಳೊಪಟ್ಟಂತೆ ಪಂಚಾಯತ ರಾಜ್ ಇಂಜನೀಯರಿಂಗ್ ಇಲಾಖೆಯಲ್ಲಿ ಸಿವ್ಹಿಲ್ ನೊಂದಾಯಿತ ಹಾಗೂ ಇ-ಗುತ್ತಿಗೆ ಕುರಿತು ಕೆಪಿಪಿಪಿ ಇವರಿಂದ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ವಿವಿಧ ಯೋಜನೆ ಅಡಿಯಲ್ಲಿಯ ಕಾಮಗಾರಿಗಳಿಗೆ ಐಟಂವಾರು ಟರ್ನಕೀ ಆಧಾರದ ಮೇಲೆ ಇ-ಟೆಂಡರ ಆಹ್ವಾನಿಸಲಾಗಿದೆ.
1]Last date of request for issue of blank E-bid document through e-Procurment Date: Other works:16-02-2026 To 27-02-2026, 2]Bid Closing & submission Date: 27-02-2026 AT 04:00 PM, 3]Financial Bid Opening Date:02-03-2026 AT 11:00 AM, 4]Pre Bid Meeting Date: [KW-3 & 4 Works Only]:26-02-2026 AT 05:00 PM, 5]Techanical Bid Opening Date: [KW-3 & 4 Works Only]:02-02-2026 AT 11:00 AM, 6]Financial Bid Opening Date: [KW-3 & 4 Works Only]:04-02-2026 AT 11:00 AM.
General Works Indent No's:24455, 24453, 24469, 24467, 24451, 24448, 24460, 24496, 24492, 24466, 24446, 24506, 24443, 24445, 24462, 24454, 23965, 24868, 23944, 23943, 24042, 24041, 22966, SC Works Indent No's:24471, 24458, 24452, 23942, 24053, 24045, ST Works Indent No's:24457, 24489, 24044, Category 1 Works Indent No's:24470, 24504, Category 2A Works Indent No's:24497, 24499, 24449, 24503, 24039, 24040,
ಕಾಮಗಾರಿಗಳ ವಿವರ, ಷರತ್ತು ನಿಬಂಧನೆಗಳಿಗಾಗಿ ಈ ಕಚೇರಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್ ಸೈಟ್ https://kppp.karnataka.gov.in/ ಸಂಪರ್ಕಿಸಬಹುದಾಗಿದೆ:

ಸಹಿ/-ಕಾರ್ಯನಿರ್ವಾಹಕ ಅಭಿಯಂತರು ಪಂ.ರಾಜ್.ಇಂ.ವಿಭಾಗ ಚಿಕ್ಕೋಡಿ.
DIPR/BGM/RO-NO-1876/KSMCA/2025-26

ಕರ್ನಾಟಕ ಸರ್ಕಾರ
ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ, ಕಾರವಾರ, ಉತ್ತರ ಕನ್ನಡ
ದೂರವಾಣಿ: 08382-220556 ಇ-ಮೇಲ್: predkarwar@gmail.com
ಕ್ರ.ಸಂ:ಪಂರಾ.ಇಂ/ಕಾ/ಪಿಬಿ-1/2025-26/46 ದಿ: 17.02.2026

ಟೆಂಡರ್ ಪ್ರಕಟಣೆ-46/2025-26 (ಕೆ.ಪಿ.ಪಿ.ಪಿ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ ಕಾರವಾರ ಇವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಹಾಗೂ ಕೆ.ಪಿ.ಪಿ.ಪಿ. ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ 2025-206 ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಮೂಲಸೌಕರ್ಯ ಅನುದಾನದ ಲೆಕ್ಕಶೀರ್ಷಿಕೆಯಡಿಯ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Document ನ K.W-1, 2 ರ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಟೆಂಡರ್ ವಿವರಗಳು ಈ ಕೆಳಗಿನಂತಿವೆ.

ಕಾಮಗಾರಿಯ ಹೆಸರು: (ಮೀಸಲಾತಿ: ಸಾಮಾನ್ಯ) (1) ಹೊನ್ನಾವರ ತಾ: ಇಡಗುಂಜಿ ಗ್ರಾಮ ಪಂಚಾಯತದ ಮೊಳ್ಕೋಡ ಚರ್ಚ ಕ್ರಾಸನಿಂದ ಅಡ್ಕುರಿ ಮಾಳ್ಕೋಡ ಬ್ರಿಜ್ ವರೆಗೆ ರಸ್ತೆ ನಿರ್ಮಾಣ. RDPR/2025-26/RD/WORK_INDENT24778, ಅಂದಾಜು ಮೊತ್ತ: ರೂ. 50.00 ಲಕ್ಷ, ಮುಂಗಡ ಠೇವಣಿ: ರೂ. 1,00,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(2) ಹೊನ್ನಾವರ ತಾ: ಹಳದೀಪುರ ಪಂಚಾಯತದ ದುಗ್ಗೂರು ರಸ್ತೆ ಮತ್ತು ಕಿರಬೈಲ್ ಬ್ರಿಜ್ ಹೋಗುವಲ್ಲಿ ರಸ್ತೆ ನಿರ್ಮಾಣ. RDPR/2025-26/RD/WORK_INDENT24763, ಅಂದಾಜು ಮೊತ್ತ: ರೂ. 30.00 ಲಕ್ಷ, ಮುಂಗಡ ಠೇವಣಿ: ರೂ. 60,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(3) ಹೊನ್ನಾವರ ತಾ: ಖರ್ವಾ ಗ್ರಾಮ ಪಂಚಾಯತದ ವಲ್ಕಿ ಕೊಚ್ಚನಕೊಡ ಹೋಗುವ ಕಾಂಕ್ರೀಟ್ ರಸ್ತೆ ನಿರ್ಮಾಣ. RDPR/2025-26/RD/WORK_INDENT24846, ಅಂದಾಜು ಮೊತ್ತ: ರೂ. 20.00 ಲಕ್ಷ, ಮುಂಗಡ ಠೇವಣಿ: ರೂ. 50,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(4) ಹೊನ್ನಾವರ ತಾ: ಕಾಸರಕೋಡ ಪಂಚಾಯತದ ಹೊಸಪಟ್ಟಣ ಮೇಸ್ತರಕೇರಿಗೆ ಕಾಂಕ್ರೀಟ್ ರಸ್ತೆ ನಿರ್ಮಾಣ. RDPR/2025-26/RD/WORK_INDENT24851, ಅಂದಾಜು ಮೊತ್ತ: ರೂ. 20.00 ಲಕ್ಷ, ಮುಂಗಡ ಠೇವಣಿ: ರೂ. 50,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(5) ಹೊನ್ನಾವರ ತಾ: ಹಳದೀಪುರ ಪಂ ಮೂಡಗಣಪತಿ ದೇವಸ್ಥಾನದಿಂದ ಜೈನಬಸಿದಿ ರಸ್ತೆ ಸುಧಾರಣೆ ಹಾಗೂ ಹಳದೀಪುರ ಪಂ.ದ ಕಿರಬ್‌ಐಲ್ ರಸ್ತೆ ನಿರ್ಮಾಣ. RDPR/2025-26/RD/WORK_INDENT24651, ಅಂದಾಜು ಮೊತ್ತ: ರೂ. 30.00 ಲಕ್ಷ, ಮುಂಗಡ ಠೇವಣಿ: ರೂ. 74,000.00

(6) ಭಟ್ಕಳ ತಾಲೂಕಿನ ಮುಂಡಳ್ಳಿ ಗ್ರಾ.ಪಂ ಮಾದೇವನ ಮನೆಯಿಂದ ಬೇಲೆಗದ್ದೆಯವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ. RDPR/2025-26/RD/WORK_INDENT24804, ಅಂದಾಜು ಮೊತ್ತ: ರೂ. 25.00 ಲಕ್ಷ, ಮುಂಗಡ ಠೇವಣಿ: ರೂ. 50,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(7) ಭಟ್ಕಳ ತಾಲೂಕಿನ ಮಾವಳ್ಳಿ-1 ಗ್ರಾ.ಪಂ ಪಟ್ರಗದ್ದೆ ವಿಠಲ ಗಣಪತಿ ಮನೆಯಿಂದ ಮಂಜಪ್ಪ ನಾಯ್ಕ ಮನೆಯವರೆಗೆ ರಸ್ತೆ ನಿರ್ಮಾಣ. RDPR/2025-26/RD/WORK_INDENT24822, ಅಂದಾಜು ಮೊತ್ತ: ರೂ. 25.00 ಲಕ್ಷ, ಮುಂಗಡ ಠೇವಣಿ: ರೂ. 50,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(8) ಭಟ್ಕಳ ತಾಲೂಕಿನ ಮಾವಳ್ಳಿ-1 ಗ್ರಾ.ಪಂ ಅಸ್ಪಾಕ್ ಕಂಪೌಂಡ ಹತ್ತಿರ ಕಾಂಕ್ರೀಟ್ ರಸ್ತೆ ನಿರ್ಮಾಣ. RDPR/2025-26/RD/WORK_INDENT24818, ಅಂದಾಜು ಮೊತ್ತ: ರೂ. 25.00 ಲಕ್ಷ, ಮುಂಗಡ ಠೇವಣಿ: ರೂ. 50,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(9) ಹೊನ್ನಾವರ ತಾ: ಮಾವಿನಕುರ್ವಾ ಪಂಚಾಯತದ ಸಾಲೆಹಿತ್ತಲ ಕಾಳಿಂಗ ಗೌಡರ ಮನೆ ಹತ್ತಿರದಿಂದ ಪೆದ್ರು ಫರ್ನಾಂಡಿಸ್ ಮನೆಯವರೆಗೆ ಕಾಂಕ್ರೀಟ ರಸ್ತೆ ನಿರ್ಮಾಣ. RDPR/2025-26/RD/WORK_INDENT24857, ಅಂದಾಜು ಮೊತ್ತ: ರೂ. 25.00 ಲಕ್ಷ, ಮುಂಗಡ ಠೇವಣಿ: ರೂ. 50,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(ಮೀಸಲಾತಿ: ಪ್ರ ವರ್ಗ 2 ಎ) (10) ಹೊನ್ನಾವರ ತಾ: ಜಲವಳ್ಳಿ ಪಂ.ದ ಕರಿಕುರ್ವಾ ಗೋಪಾಲಕೃಷ್ಣ ದೇವಸ್ಥಾನದಿಂದ ಅಂಬಿಗರಕೇರಿಗೆ ಹಾಗೂ ಹೊಳೆಬದಿಕೇರಿ ಸುಬ್ರಾಯ ನಾಯ್ಕ ಮನೆಯಿಂದ ಬಾಳಕಳಿ ಕಟ್ಟೆಗೆ ಹೋಗುವಲ್ಲಿ ಕಾಂಕ್ರೀಟ ರಸ್ತೆ ನಿರ್ಮಾಣ. RDPR/2025-26/RD/WORK_INDENT24854, ಅಂದಾಜು ಮೊತ್ತ: ರೂ. 35.00 ಲಕ್ಷ, ಮುಂಗಡ ಠೇವಣಿ: ರೂ. 35,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(ಮೀಸಲಾತಿ: ಪರಿಶಿಷ್ಟ ಜಾತಿ) (11) ಹೊನ್ನಾವರ ತಾ: ಮಾವಿನಕುರ್ವಾ ಗ್ರಾಮ ಪಂಚಾಯತದ ಹೊಸಾಡ ರಂಗಿನಮೋಟೆ ರಸ್ತೆ ನಿರ್ಮಾಣ. RDPR/2025-26/RD/WORK_INDENT24771, ಅಂದಾಜು ಮೊತ್ತ: ರೂ. 25.00 ಲಕ್ಷ, ಮುಂಗಡ ಠೇವಣಿ: ರೂ. 25,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(12) ಹೊನ್ನಾವರ ತಾ: ಕಡ್ಲೆ ಗ್ರಾಮ ಪಂಚಾಯತದ ವಂದೂರು ಹರಿಕೇರಿ ಮತ್ತು ವಂದೂರು ಮೇಲಿನಕೇರಿ ರಸ್ತೆ ನಿರ್ಮಾಣ. RDPR/2025-26/RD/WORK_INDENT24765, ಅಂದಾಜು ಮೊತ್ತ: ರೂ. 30.00 ಲಕ್ಷ, ಮುಂಗಡ ಠೇವಣಿ: ರೂ. 30,000.00

(1) ಕಾಮಗಾರಿಯ ಟೆಂಡರ್ ಶೆಡ್ಯೂಲ್ - ಬಿಗಳನ್ನು ಮತ್ತು Technical Bid ನ್ನು ವೆಬ್‌ಸೈಟ್‌ನಲ್ಲಿ ತುಂಬಿ ಮರಳಿ ಸಲ್ಲಿಸುವ ಕೊನೆಯ ದಿನಾಂಕ: 25.02.2026 ರ ಮಧ್ಯಾಹ್ನ 16.30 ಘಂಟೆವರೆಗೆ. (2) ಕಾಮಗಾರಿಯ Technical Bid ನ್ನು ತೆರೆಯುವ ದಿನಾಂಕ: 26.02.2026 ಬೆಳಿಗ್ಗೆ 16.31 ಘಂಟೆಗೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ತಾಂತ್ರೀಕ ಬಿಡ್‌ನಲ್ಲಿ ಯಶಸ್ವಿಯಾದ ಅರ್ಹ ಗುತ್ತಿಗೆದಾರರಿಗೆ ನಂತರದಲ್ಲಿ ತಿಳಿಸಲಾಗುವುದು.

ಸಹಿ/- ಕಾರ್ಯನಿರ್ವಾಹಕ ಇಂಜನೀಯರು, ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ, ಕಾರವಾರ
DIPR/KWR/KSMCA/1119/25-26 dt. 19.02.2026

ಕ್ರಿ.ಮಿ.ನಂ: 1151/2025
ಮಾ॥ ಸಿವ್ಹಿಲ್ ನ್ಯಾಯಾಧೀಶರು ವ.ಜೆ.ಎಂ.ಎಫ್.ಸಿ ನ್ಯಾಯಾಲಯ ಬಸವನ ಬಾಗೇವಾಡಿ ಇವರ ನ್ಯಾಯಾಲಯದಲ್ಲಿ
1) ಶ್ರೀ ಚಿದಾನಂದ ತಂ. ಸೋಮಲಿಂಗಪ್ಪ ದಿನ್ನಿ ಹಾಗೂ ಇತರರು ---ಅರ್ಜಿದಾರರು
ವಿರುದ್ಧ
1)ಮುಖ್ಯಾಧಿಕಾರಿಗಳು ಪುರಸಭೆ, ಜನನ ಮರಣ ನೋಂದಣಾಧಿಕಾರಿಗಳು ಬಸವನ ಬಾಗೇವಾಡಿ -----ಎದುರುದಾರ
ಪತ್ರಿಕಾ ಪ್ರಕಟಣೆ
ಸದರ ಮೇಲ್ಕಾಣಿಸಿದ ಅರ್ಜಿಯಲ್ಲಿಯ ಅರ್ಜಿದಾರನ ತಂದೆಯಾದ ಸೋಮಲಿಂಗಪ್ಪ ತಂದೆ ಸಿದ್ದಪ್ಪ ದಿನ್ನಿ ಇವರು ದಿನಾಂಕ:19-12-1977ರಂದು ಬಸವನ ಬಾಗೇವಾಡಿ ಪಟ್ಟಣದಲ್ಲಿ ಮೃತವಾಗಿದ್ದು, ಸದರಿಯವರು ಮರಣ ಪ್ರಮಾಣ ಪತ್ರ ಪಡೆಯಲು ಅರ್ಜಿದಾರರು ಈ ಅರ್ಜಿಯನ್ನು ದಾಖಲಿಸಿರುತ್ತಾರೆ. ಆದ್ದರಿಂದ ಸದರಿ ಅರ್ಜಿದಾರರ ತಂದೆಯ ಮರಣದ ಬಗ್ಗೆ ಮರಣ ನೋಂದಣಾಧಿಕಾರಿಗಳ ರಜಿಸ್ಟರ್‌ದಲ್ಲಿ ದಾಖಲಿಸುವ ಕುರಿತು, ಯಾರಾದರೂ ಯಾವುದೇ ರೀತಿಯ ತಂಟೆ, ವ ತಕರಾರು ಇದ್ದಲ್ಲಿ ಅಂತವರು ಹಾಜರಾಗಲು ಮಾನ್ಯ ನ್ಯಾಯಾಲಯದವರು ದಿನಾಂಕ: 18-03-2026 ರಂದು ಬೆಳಿಗ್ಗೆ 11 ಘಂಟೆಗೆ ಮುದ್ದತ್ ನೇಮಿಸಿದ್ದು ಇರುತ್ತದೆ. ತಾವಾಗಲೀ ತಮ್ಮ ವಕೀಲರ ಮುಖಾಂತರವಾಗಲೀ ಈ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು, ಇದಕ್ಕೆ ತಪ್ಪಿದಲ್ಲಿ ಪ್ರಕರಣವನ್ನು ತಮ್ಮ ಗೈರ ಹಾಜರಾತಿಯಲ್ಲಿ ನಿರ್ಣಯಿಸಲಾಗುವುದು.
ಈ ಹೊತ್ತು ದಿನಾಂಕ : 16-02-2026ರಂದು ನ್ಯಾಯಾಲಯದ ಆದೇಶದ ಮೇರೆಗೆ ನನ್ನ ಸಹಿ ಹಾಗೂ ನ್ಯಾಯಾಲಯದ ಮುದ್ರೆಯೊಂದಿಗೆ ಕೊಡಲ್ಪಟ್ಟಿತು.
ಬಸವನಬಾಗೇವಾಡಿ
ದಿನಾಂಕ: 16-02-2026
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-ಶಿರಸ್ತೇದಾರರು,(ಅಡಳಿತ)
ಮಾ॥ ಸಿವ್ಹಿಲ್ ನ್ಯಾಯಾಧೀಶರು ವ ಜೆ.ಎಮ್.ಎಫ್.ಸಿ ನ್ಯಾಯಾಲಯ ಬಸವನ ಬಾಗೇವಾಡಿ.
ಸಹಿ/- ಶ್ರೀ.ಆರ್.ಎಸ್.ಬಂಡಿಪಾಟೀಲ
ಅರ್ಜಿದಾರರ ಪರ ವಕೀಲರು

ಕರ್ನಾಟಕ ಸರ್ಕಾರ
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)
ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ
3ನೇ ಮಹಡಿ, "ಗ್ರಾಮೀಣಾಭಿವೃದ್ಧಿ ಭವನ", ಆನಂದರಾವ್ ವೃತ್ತ, ಬೆಂಗಳೂರು - 560009.
ದೂರವಾಣಿ ಸಂಖ್ಯೆ: 080-29710021/22/23/24 ಫ್ಯಾಕ್ಸ್: 080-29710025
ಇ-ಮೇಲ್: coo.krrda.karbng@gmail.com ವೆಬ್‌ಸೈಟ್: http://www.krrda.in
ಸಂಖ್ಯೆ:ಕೆಆರ್‌ಆರ್‌ಡಿಎ/ತಾಂ.ಸ-01/ಎ.ಇ-09/208/ಟೆಂಡರ್ ನೋ-9/2025-26/3099 ದಿನಾಂಕ: 19-02-2026

ಟೆಂಡರ್ ಪ್ರಕಟಣೆ-9

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕೆ.ಆರ್.ಆರ್.ಡಿ.ಎ ಯಿಂದ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಈ ಕೆಳಕಂಡ ಇಂಡೆಂಟ್ ಸಂಖ್ಯೆಯ ಕಾಮಗಾರಿಗೆ ಐಟಂ ದರದ ಟೆಂಡರ್‌ನ್ನು ಕರೆದಿದ್ದು, ವಿವರಗಳು ಈ ಕೆಳಕಂಡಂತಿವೆ.
i) 5054 ರ ಸಾಮಾನ್ಯ ಯೋಜನೆ ಅಡಿಯಲ್ಲಿ, ಕಲ್ಬುರ್ಗಿ - KRRDA/2025-26/RD/WORK_INDENT No: 316
ii) ಇ.ಎಂ.ಡಿ **(EMD):** ಟೆಂಡರ್‌ಗಿಟ್ಟ ಮೊತ್ತಕ್ಕೆ ಶೇ. 1.5%.
ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿಯ ವಿವರಗಳು ಕೆಳಕಂಡಂತಿವೆ:
1) ಪ್ರಿ-ಬಿಡ್ ಸಭೆಯ ದಿನಾಂಕ: **11-03-2026 ರಂದು ಬೆಳಿಗ್ಗೆ 11.00 ಗಂಟೆಗೆ. 2)** ಬಿಡ್‌ಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸುವ ಕೊನೆಯ ದಿನಾಂಕ: **23-03-2026 ರಂದು ಸಂಜೆ 5.00 ಗಂಟೆವರೆಗೆ. 3)** ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **24-03-2026 ರಂದು ಸಂಜೆ 5.05 ಗಂಟೆ ನಂತರ. 4)** ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **26-03-2026 ರಂದು ಸಂಜೆ 5.00 ಗಂಟೆ ನಂತರ ಅಥವಾ ತಾಂತ್ರಿಕ ಬಿಡ್ ಪರಿಶೀಲನೆ ಪೂರ್ಣಗೊಂಡ ನಂತರ.**
ಈ ಸಂಬಂಧ ಮಾಹಿತಿಗಾಗಿ **ಕಾರ್ಯಪಾಲಕ ಇಂಜಿನಿಯರ್, ಕೆ.ಆರ್.ಆರ್.ಡಿ.ಎ.,** ರವರನ್ನು ಸಂಪರ್ಕಿಸಲು ಹಾಗೂ ಹೆಚ್ಚಿನ ಮಾಹಿತಿಯನ್ನು ವೆಬ್‌ಸೈಟ್: **https://kppp.karnataka.gov.in** ನಲ್ಲಿ ಪಡೆಯಬಹುದಾಗಿರುತ್ತದೆ.
ಟಿಪ್ಪಣಿ: ಸದರಿ ಟೆಂಡರ್ ಪ್ರಕಟಣೆ ಸಂಬಂಧ ಮುಂದಿನ ಯಾವುದೇ ತಿದ್ದುಪಡಿಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಸಹಿ/- ಟೆಂಡರಿಂಗ್ ಅಧಿಕಾರಿ ಮತ್ತು ಕಾರ್ಯಪಾಲಕ ಇಂಜಿನಿಯರ್ ಕ.ಗ್ರಾ.ರ.ಅ. ಸಂಸ್ಥೆ, ಬೆಂಗಳೂರು.
ವಾಸಾಸಂಇ/ವಾ.ಪ್ರ/5757/ಅಕ್ಟೋಬರ್/2025-26

ಇಂದಿನ ಉತ್ಪನ್ನವಾರು ದರ — ಹುಬ್ಬಳ್ಳಿ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಅಲಸಂದೆ ಕಾಳು	5869	5869
ಕಡಲೆಕಾಳು	1409	5730
ಉದ್ದಿನಕಾಳು	4289	6589
ತೆಂಗಿನಕಾಯಿ	34000	34000
ಒಣ ಮೆಣಸಿನಕಾಯಿ	20186	35700
ಹೆಸರುಕಾಳು	999	7309
ನೆಲಗಡಲೆ (ಶೇಂಗಾ)	1109	7211
ಹುರುಳಿ ಕಾಳು	3609	3609
ಬೆಲ್ಲ	4000	5350
ಜೋಳ	3256	3256
ಮೆಕ್ಕೆಜೋಳ	1501	1839
ಮಡಿಕೆ (ಮಟಕಿ)	12521	12925
ಈರುಳ್ಳಿ	600	2000
ಆಲೂಗಡ್ಡೆ	1000	1600
ಕುಸುಬೆ	5111	5129
ಸೋಯಾಬಿನ್	3695	5419
ತೊಗರಿ	3819	5229
ಗೋಧಿ	2510	2510

CITATION
IN THE COURT OF HON' BLE PRL JMFC AT GANGAVATI
Cri Misc. No 138/2026

T. Nagappa & Others
/VS/
The C.M.C. Gangavathi 4 onether

To All Concern

WHEREAS the above named petitioners have made an application for registration of death of **Earamma w/o Nagappa,** who was 08-05-2023 at her residence at ward-no-12 islampur Tq. Gangavati. in the register of deaths maintained by registrar of Births and deaths/CMC Gangavati.

All the persons who have got any objection or claim over the above mentioned claim, appear before this court on 7th day of 3 may 2026 at 11-00 A.M., with relevant documents in their support of claim either in person or through an advocate, failing which the petition will be heard and determined as per law.

Given under my hand and seal of the court this day of 2-2026.

By order of the court
Shirestedar,
Chief Ministerial Officer
Court PRL J.M.F.C Gangavathi
Through: Arun kumar Avali
Advocate for Petitioner.

CITATION
IN THE COURT OF THE CIVIL JUDGE & JMFC AT AFZALPUR
Crl. Misc.No.1364/2025

Hirabai and Another
V/s.
The Register Birth and Death Tahsildar Afzalpur

To.
All concerned.

Whereas, the **petitioner No.1 by name Hirabai W/o Late Shivaji Yadav, Age: 52 Yrs, Occ: Household Petitioner No.2 by name Prajawal S/o Late Shivaji yadav, Age: 28 Yrs, Occ: Auto Driver, Both are R/o Gudur village, Tq: Afzalpur, Dist: Kalaburagi** has filed Misc. Petition U/s.13(3) of Birth and Death Registration Act, against the respondent before this Court, for obtaining death certificate of his Father Late by name Shivaji S/o Vithal Yadav

If any one having any interest or objections in the above said matter, then appear before the Court in person or through pleader duly instructed and able to answer all the material questions in the above case on 26.03.2026 at 11.00 AM, failing which, the above case will be heard and determined on merits.

Hence, this Paper Citation signed on this the 12-02-2026.

By order of Court
Sd/- **Sri. Hanmanth.**
Chief Ministerial Officer
Civil Judge & JMFC Court
Afzalpur

Advocate for petitioner
Sri. M.S.Patil.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಹೂವಿನಹಡಗಲಿ.
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 67/2026
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 68/2026

ಅರ್ಜಿದಾರರು: ಶ್ರೀ ಟಿ.ಬಸವರಾಜ ತಂದೆ: ಟಿ.ಈಶಪ್ಪ, ವಯಸ್ಸು 31 ವರ್ಷ.ಉದ್ಯೋಗ : ವ್ಯವಸಾಯ, ವಾಸಸ್ಥಳ : ಶಾಲೆಯ ಹತ್ತಿರ, ಕೃಷ್ಣಪುರ ಗ್ರಾಮ, ಬಸರಕೋಡು ಅಂಚೆ. ಹಗರಿಬೊಮ್ಮನಹಳ್ಳಿ ತಾ\\ ವಿಜಯನಗರ ಜಿ॥

ವಿರುದ್ಧ

ಎದುರುದಾರರು: ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ, ಮತ್ತು ಇನ್ನೊಬ್ಬರು ಹೂವಿನಹಡಗಲಿ

ಸಾರ್ವಜನಿಕ ನೋಟಿಸು

ಈ ಪ್ರಕರಣದಲ್ಲಿ ಅರ್ಜಿದಾರನು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ಅರ್ಜಿದಾರನು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ಕುಟುಂಬದ ಹಿರಿಯರ ಮರಣ ಪ್ರಮಾಣಪತ್ರ ಪಡೆಯಲು ಅರ್ಜಿ ಹಾಕಿರುತ್ತಾರೆ.

ಅರ್ಜಿದಾರರು ತನ್ನ ಕುಟುಂಬದ ಹಿರಿಯರ ಮರಣದಿನಾಂಕದ ವಿವರ.

1.ಹೆಸರು: ರಮೇಶಿ ಯಲ್ಲಮ್ಮ ತಾಯಿ ಮಂಜಮ್ಮ, ಸಂಬಂಧ: ಅಜ್ಜಿ, ಮರಣ ದಿನಾಂಕ: 30-09-1996, ಸ್ಥಳ:ಮಾಗಳ.

2. ಹೆಸರು: ರಮೇಶಿ ಹನುಮಮ್ಮ ತಾಯಿ ಮಂಜಮ್ಮ, ಸಂಬಂಧ: ಅಜ್ಜಿ, ಮರಣ ದಿನಾಂಕ: 11-02-2002, ಸ್ಥಳ:ಮಾಗಳ.

ಸದರಿಯವರ ಮರಣದ ಬಗ್ಗೆ ಎದುರುದಾರರ ಕಛೇರಿಯಲ್ಲಿ ನೊಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ: 18-03-2026 ರಂದು ಸಮಯ ಬೆಳಿಗ್ಗೆ 11-00 ಗಂಟೆಗೆ ಹೂವಿನಹಡಗಲಿ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ(ಏಕಪಕ್ಷಿಯ) ಆದೇಶ ಮಾಡಲಾಗುವುದು ಎಂದು ತಿಳಿಯತಕ್ಕದ್ದು.

ದಿನಾಂಕ: 17/02/26 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ

ಸಹಿ/-ಶಿರಸ್ತೆದಾರರು
ಸಿ.ಜೆ.& ಜೆ.ಎಂ.ಎಫ್.ಸಿ.ನ್ಯಾಯಾಲಯ,
ಸಹಿ/- ಶ್ರೀ ಹನುಮಂತಪ್ಪ.ಆರ್
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ,

ಕ್ರಿ.ಮಿ.ನಂ: 83/2026
ಮೆ॥ ಜೆ.ಎಮ್.ಎಫ್.ಸಿ ಬಸವನ ಬಾಗೇವಾಡಿ ಇವರ ನ್ಯಾಯಾಲಯದಲ್ಲಿ

1) ರಾಜಶೇಖರ ತಂದೆ. ಮಲ್ಲಿಕಾರ್ಜುನ ಐಗಳಿ ಹಾಗೂ ಇತರರು --ಅರ್ಜಿದಾರರು

ವಿರುದ್ಧ

1) ಮಾನ್ಯ ತಹಶೀಲ್ದಾರರು. ಜನನ ಮರಣ ನೊಂದಣಿ ಇಲಾಖೆ ಬಸವನ ಬಾಗೇವಾಡಿ----ಎದುರುದಾರ

ವ್ಯವಹಾರ ಪ್ರಕ್ರೀಯಾ ಸಂಹಿತೆ ಆದೇಶ 5 ನಿಯಮ 20(1)ರ ಅಡಿ ಸಾರ್ವಜನಿಕ ನೋಟಿಸು.

ಇದರಲ್ಲಿ ಯಾವತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ,

ಮೇಲ್ಕಾಣಿಸಿದ ಅರ್ಜಿಯಲ್ಲಿ ಅರ್ಜಿದಾರರ ತಾಯಿಯಾದ ಶಾಂತಾಬಾಯಿ ಗಂ: ಮಲ್ಲಿಕಾರ್ಜುನ ಐಗಳಿ ಇವರು ದಿನಾಂಕ: 15-08-2013 ರಂದು ಹಂಗರಗಿ ಗ್ರಾಮದಲ್ಲಿ ಮೃತವಾಗಿರುತ್ತಾಳೆ, ಸದರಿಯವರ ಮರಣ ಪ್ರಮಾಣ ಪತ್ರ ಪಡೆಯಲು ಅರ್ಜಿದಾರರು ಈ ಅರ್ಜಿಯನ್ನು ದಾಖಲಿಸಿರುತ್ತಾರೆ. ಆದ್ದರಿಂದ ಸದರಿಯವರ ಮರಣದ ದಿನಾಂಕವನ್ನು ಎದುರುದಾರ ಕಚೇರಿಯ ರಜಿಸ್ಟಾರದಲ್ಲಿ ದಾಖಲಿಸುವ ಕುರಿತು. ಯಾರಾದರೂ ಯಾವುದೇ ರೀತಿಯ ತಂಟೆ, ವ ತಕರಾರು ಇದ್ದಲ್ಲಿ ಅಂತವರು ಹಾಜರಾಗಲು ಮಾನ್ಯ ನ್ಯಾಯಾಲಯದವರು ದಿನಾಂಕ: 18-3-2026 ರಂದು ಬೆಳಿಗ್ಗೆ 11-00ಗಂಟೆಗೆ ಮುದ್ದತ್ತು ನೇಮಿಸಿದ್ದು ಇರುತ್ತದೆ. ತಾವಾಗಲೀ ತಮ್ಮ ವಕೀಲರ ಮುಖಾಂತರವಾಗಲೀ ಈ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಪ್ರಕರಣವನ್ನು ತಮ್ಮ ಗೈರ ಹಾಜರಾತಿಯಲ್ಲಿ ನಿರ್ಣಯಿಸಲಾಗುವುದು. ಈ ಹೊತ್ತು ದಿನಾಂಕ : 16-02-2026 ರಂದು ನ್ಯಾಯಾಲಯದ ಆದೇಶದ ಮೇರೆಗೆ ನನ್ನ ಸಹಿ ಹಾಗೂ ನ್ಯಾಯಾಲಯದ ಮುದ್ರೆಯೊಂದಿಗೆ ಕೊಡಲ್ಪಟ್ಟಿತು.

ಬಸವನ ಬಾಗೇವಾಡಿ
ದಿನಾಂಕ: 16-02-2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಆಡಳಿತ (ಶಿರಸ್ತೆದಾರರು)
ಮೆ॥ ಸಿವ್ಹಿಲ್ ನ್ಯಾಯಾಧೀಶರು ವ ಜೆ.ಎಂ.ಎಫ್.ಸಿ ನ್ಯಾಯಾಲಯ ಬಸವನ ಬಾಗೇವಾಡಿ.
ಸಹಿ/-ಶ್ರೀಮತಿ.ಜಿ.ಪಿ.ಪತ್ತಾರ.
ಅರ್ಜಿದಾರರ ಪರ ವಕೀಲರು

Dispute No.DRL/G/NML/DIS/74/2025-26

BEFORE THE NOMINEE (Mrs. Arati Nandi, ADVOCATE).

Appointed by the Central Registrar, through Karnataka Registrar of Co-op Societies, Belagavi

BETWEEN:
DISPUTANT : 1. M/s MARGADARSI CHITS (K) PVT. LTD.
AND
OPPONENTS : 1. Mr. Suresh S Hegade & others.

NOTICE/CITATION

TO
Mr. Kedari S/o.Chandu Chougale
Resi: H. No.: 139/3B, At/Post: Kankanawadi, Tq: Raibag, Dist: Belagavi-591222.

Take notice that, the above dispute was filed against you & Others for recovery of chit amount of Rs. 15,89,846/- by the disputant, before the Hon'ble DRCS, Belagavi. The same is referred to honorary nominee Smt. Arti B. Nandi for disposal of dispute. Now the above said dispute stands post, at 1-00 P.M. on 11/ O3/2026 for your appearance at the address of the Disputant company Branch office at 1st Floor, Mujawar Arcade, Old-PB Road, (JNMC Road), Nehru Nagar, Belagavi-590010. If you fails to appear on that day. the matter will be heard in your absence. Given under my hand & seal of the court, on this day of 03/02/2026

(Smt. Arati B Nanadi)
Honorary Nominee
(S. L. Karale)
Adv. for Disputant

IN THE COURT OF THE PRINCIPAL CIVIL JUDGE & JMFC AT BALLARI
Crl. M.C. No. 99/2026

Between:-1)SHARANABASAVA.H S/O LATE. SHARANAPPA, aged about 34 years 2)MEENAKSHI W/O LATE. SHARANAPPA, aged about 64 years, Both are R/o, House No.6, ward No.1, Sunkalamma temple, Metri village, Kampli taluk, Ballari District ...Petitioners

And

The register of Birth & Death's Register, Thasildhar, Taluk office, Kampli ...**Respondent**

WHEREAS, the above named petitioner has filed the above petition under section 13(2) of Birth and Deaths Act, 1969 against the respondent for the purpose of seeking date of death of Petitioner's No.1 father by name A.SHARANAPPA S/O LATE. CHENNA BASAPPA died on 10-08-1995 at Metri village, Kampli taluk, Ballari District in the above mentioned address.

Therefore, If any persons are interested you are hereby directed to appear in this court in person or by a pleader duly instructed on 16-03-2026 at about 11.00 a.m to show cause against the above suit, failing which the suit will be heard and determined ex-parte against you.

Given under my hand and seal of the court on this 19th day Of Feb- 2026

By Order of the court.
Shirestedar,
Prl Civil Judge and JMFC Ballari.
A.K. Prakash
Advocate for the petitioner

ಸಾರ್ವಜನಿಕ ನೋಟಿಸು

ಇದರಲ್ಲಿ ನಾನು ಶ್ರೀ. ವ್ಹಿ.ಎಸ್. ಹೊಸಮಠ ವಕೀಲರು ನವನಗರ, ಬಾಗಲಕೋಟೆ ನನ್ನ ಪಕ್ಷಗಾರರಾದ ...

1/4ಹಿಸ್ಸಾ ಮಂಜೂರು ಮಾಡಿದ್ದು ಇದೆ. ಈ ಬಗ್ಗೆ ಎಫ್.ಡಿ.ಪಿ ನಂ: 6/2012 ರಲ್ಲಿ ದಿನಾಂಕ: 01-08-2025 ರಂದು ಅಂತಿಮ ಡಿಕ್ರಿ ಆಗಿದ್ದು, ಅದರಲ್ಲಿ ರಿ.ಸ.ನಂ: 55/4ಎ ಕ್ಷೇತ್ರ 04 ಎಕರೆ 35 ಗುಂಟೆ ಇದರಲ್ಲಿ 01 ಎಕರೆ 08.12 ಗುಂಟೆ ಮಂಜೂರು ಮಾಡಿದ್ದು ಇರುತ್ತದೆ. ಸದರ ವಿಷಯವನ್ನು ಸದರ ನನ್ನ ಪಕ್ಷಗಾರಳ ಅಣ್ಣಂದಿರು ಮರೆಮಾಚಿ ಪುನಃ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಮೂಲ ಸರ್ವೆ ನಂಬರನ್ನು 55/5, 55/8, 55/9 ಅಂತಾ ಮಾಡಿ ನನ್ನ ಪಕ್ಷಗಾರಳ ಹೆಸರನ್ನು ಹೊರತುಪಡಿಸಿ ತಮ್ಮ ಹೆಸರನ್ನು ದಾಖಲಿಸಿಕೊಂಡಿದ್ದು, ತಿಳಿದುಬಂದಿರುತ್ತದೆ.

ಅದು ಅಲ್ಲದೆ ಸದರ 3 ಜನರು ಮೇಲೆ ನಮೂದಿಸಿದ ಜಮೀನುಗಳನ್ನು ಮಾರಾಟ ಮಾಡುವ ತಯಾರಿಯಲ್ಲಿ ಇರುವುದು ಕಂಡುಬಂದಿರುತ್ತದೆ ಹಾಗೂ ನನ್ನ ಪಕ್ಷಗಾರಳು ಸದರಿಯವರ ಮೇಲೆ ದಿವಾಣಿ ನ್ಯಾಯಾಲಯದಲ್ಲಿ ಕಾನೂನು ಕ್ರಮ ತೆಗೆದು ಕೊಂಡಿರುತ್ತಾಳೆ. ಕಾರಣ ಯಾವತ್ತು ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಸದರ ಜಮೀನುಗಳನ್ನು ಸದರಿಯವರಿಂದ ಯಾರೂ ಖರೀದಿ ವಗೈರೆ ಮಾಡಬಾರದು ಹಾಗೇನಾದರೂ ಮಾಡಿದಲ್ಲಿ ಅಂತಹ ವ್ಯವಹಾರಗಳು ನನ್ನ ಪಕ್ಷಗಾರಳ 1/4 ಹಿಸ್ಸಾದ ಮೇಲೆ ಬಂಧನಕಾರಿ ಇರುವುದಿಲ್ಲ ಹಾಗೂ ಲುಕ್ಸಾನಕ್ಕೆ ಪಾತ್ರರಾಗುತ್ತೀರಿ ಅಂತಾ ಕೊಡುವ ಸಾರ್ವಜನಿಕ ನೋಟಿಸು.

ಸ್ಥಳ: ಬಾಗಲಕೋಟೆ
ದಿನಾಂಕ : 19-02-2026

(ವ್ಹಿ.ಎಸ್. ಹೊಸಮಠ)
ವಕೀಲರು
V.S. HOSAMATH Advocate
"ARUNODAYA" Plot No.42
Sector No.32, Navanagar
BAGALKOT-587103.

... ಅಂತಿಮ ಎಂದು ಪರಿಗಣಿಸಿ, ಅರ್ಜಿದಾರರ ಪರ ಏಕ ಪಕ್ಷಿಯ ಆದೇಶ ಹೊರಡಿಸಲಿದೆ ಎಂದು ತಿಳಿಯತಕ್ಕದ್ದು.
ಸ್ಥಳ : ಗಂಗಾವತಿ
ದಿ: 17/02/2026
ನ್ಯಾಯಾಲಯದ ಆದೇಶದ ಮೇರೆಗೆ
ಮುಖ್ಯ ಅಧಿಕಾರಿ
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ ನ್ಯಾಯಾಲಯ, ಗಂಗಾವತಿ.
ಮುಖಾಂತರ: (ಗುರುಬಸವರಾಜ ಅಬ್ಬಿಗಲ್)
ಅರ್ಜಿದಾರರ ಪರ ವಕೀಲರು, ಗಂಗಾವತಿ

ಪಟ್ಟಣ ಪಂಚಾಯತ ಕಾರ್ಯಾಲಯ, ಕೆರೂರ

TOWN PANCHAYAT, KERUR - 587206
Taluka: Badami Landline: 08354(:230037 District: Bagalakote
Website: www.kerurtown.mrc.gov.in E mail Id:- ka.kerur.tp@gmail.co.in

ನಂ/ ಪಪಂಕೆ/ಲೋಇ/ಎಸ್.ಎಫ್.ಸಿ.ವಿ.ಅ/ಟೆಂಪ್ರ/2025-26 ದಿನಾಂಕ:17-02-2026

ಅಲ್ಪಾವಧಿ ಟೆಂಡರ್ ಪ್ರಕಟಣೆ
KPPP portal ಮುಖಾಂತರ

ಕರ್ನಾಟಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧ್ಯಾದೇಶ 1999, ನಿಯಮಾವಳಿಗಳು 2000 ರಂತೆ ಕೆರೂರ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಸನ್-2023-24ನೇ ಸಾಲಿನ ಎಸ್.ಎಫ್.ಸಿ. ವಿಶೇಷ ಅನುದಾನದ ಹಾಗೂ ಸ್ಥಳೀಯ ನಿಧಿ ಅನುದಾನದಲ್ಲಿ ಈ ಕೆಳಗೆ ನಮೂದಿಸಿದ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ದರ್ಜೆಯ ಗುತ್ತಿಗೆದಾರರಿಂದಾ Standard Tender Documents Kw-1/ K/C-1 ದಂತೆ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕೆ (ತಿದ್ದುಪಡಿ) ಅಧಿನಿಯಮ 2016 ಗೆಜೆಟ್ ಅಧಿಸೂಚನೆ ದಿನಾಂಕ : 29.06.2017 ರನ್ವಯ ಟೆಂಡರನ್ನು ಆಹ್ವಾನಿಸಲಾಗಿದ್ದು, ವಿವರ **DMA/2025-26/RD/WORK_INDENT54514/CALL-2, DMA/2025-26/SE7083/CALL-2** ಆಸಕ್ತಿಯುಳ್ಳ ಗುತ್ತಿಗೆದಾರರು ತಮ್ಮ ಟೆಂಡರನ್ನು, ಆನ್ ಲೈನ್‌ದಲ್ಲಿ KPPP Portal ಮುಖಾಂತರ ಸಲ್ಲಿಸುವುದು. ಹಾಗೂ ಇ.ಎಂ.ಡಿ ಮತ್ತು ಟೆಂಡರ ಪ್ರೊಸಸಿಂಗ್ ಫೀಯನ್ನು ಇ-ಪೋರ್ಟಲ್ ಮುಖಾಂತರ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ http://kppp.karnataka.gov.in ದಲ್ಲಿ ಅಥವಾ ಈ ಕಛೇರಿಯ ತಾಂತ್ರಿಕ ವಿಭಾಗದಲ್ಲಿ ಸಂಪರ್ಕಿಸಬಹುದಾಗಿದೆ.

1) Last date for submission of bid through e- procurement portal before : 26.02.2026 At 17.00 hours.
2) Opening of Technical and Financial bid is on or after 27.02.2026 at 17.15 hours

ಸಹಿ/- ಆಡಳಿತಾಧಿಕಾರಿಗಳು ಪಟ್ಟಣ ಪಂಚಾಯತ ಕೆರೂರ

ಸಹಿ/- ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯತ, ಕೆರೂರ

ಕಿರುಸುದ್ದಿ

ವಿಚಿತ್ರ ಕುರಿಮರಿ ಜನನ

ರಬಕವಿ-ಬನಹಟ್ಟಿ: ಸಾಮಾನ್ಯವಾಗಿ ಹಸು, ಕುರಿಗಳು ಎರಡು ತಲೆ ಅಥವಾ 5 ಕಾಲು ಹೊಂದಿರುವ ಮರಿಗಳು ಜನಿಸಿರುವ ಘಟನೆಗಳನ್ನು ನೋಡಿದ್ದೇವೆ. ಆದರೆ, ಇಲ್ಲಿ 8 ಕಾಲು, 3 ಕಿವಿ, 2 ತಲೆ ಹಾಗೂ ಒಂದೇ ಮುಖ ಹೊಂದಿರುವ ವಿಚಿತ್ರ ಕುರಿ ಮರಿಯೊಂದು ಜನಿಸಿರುವ ಘಟನೆ ಬಾಗಲಕೋಟೆ ಜಿಲ್ಲೆಯ ರಬಕವಿ-ಬನಹಟ್ಟಿ ತಾಲೂಕಿನ ನಾವಲಗಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಹಣಮಂತ ಕರಿಗಾರ ಎಂಬುವರ ಮನೆಯ ಕುರಿ ವಿಚಿತ್ರ ರೀತಿಯ ಮರಿಗೆ ಜನ್ಮ ನೀಡಿದೆ. ಬಹು ಅಂಗಾಂಗಗಳನ್ನು ಹೊಂದಿರುವ ಮರಿಯನ್ನು ಪಶು ವೈದ್ಯ ಡಾ.ಯಲ್ಲಪ್ಪ ಅಥಣಿ ಹಾಗೂ ಈಶ್ವರ ಬಂಗಿಯವರ ಸಹಾಯದಿಂದ ಶಸ್ತ್ರಕ್ರಿಯೆ ಮಾಡುವ ಮೂಲಕ ಗರ್ಭದಿಂದ ಹೊರತೆಗೆಯಲಾಯಿತಾದರೂ ಬದುಕುಳಿಯುವಲ್ಲಿ ಯಶಸ್ವಿಯಾಗದೆ ಕೆಲ ಹೊತ್ತಿನಲ್ಲಿ ಸತ್ತು ಹೋಗಿದೆ.



ದಂಡೇರಿ ಮರಿಯಮ್ಮ ಮೂರ್ತಿ ಭಗ್ನ: ಆಕ್ರೋಶ

ಲಕ್ಷ್ಮೇಶ್ವರ: ತಾಲೂಕಿನ ಆದರಳ್ಳಿ ಗ್ರಾಮದ ಸಮೀಪದಲ್ಲಿರುವ ದಂಡೇರಿ ಮರಿಯಮ್ಮ ದೇವಸ್ಥಾನದ ಮರಿಯಮ್ಮ ದೇವಿಯ ಮೂರ್ತಿಯನ್ನು ಬುಧವಾರ ರಾತ್ರಿ ಭಗ್ನಗೊಳಿಸಿರುವ ಘಟನೆ ನಡೆದಿದ್ದು, ಗುರುವಾರ ಮುಂಜಾನೆ ಮೂರ್ತಿ ನೋಡಿದ ಜನರು ದುಷ್ಕರ್ಮಿಗಳನ್ನು ಬಂಧಿಸುವಂತೆ ಆಗ್ರಹಿಸಿದರು.



ದೇವಸ್ಥಾನದ ಬಳಿ ಜಮಾಯಿಸಿದ ಜನರು ಮೂರ್ತಿ ಭಗ್ನಗೊಳಿಸಿದ ಕೃತ್ಯವನ್ನು ಖಂಡಿಸಿದರು. ದಂಡೇರಿ ಮರಿಯಮ್ಮ ದೇವಸ್ಥಾನದಲ್ಲಿ ದೇವಿಯ ಮೂರ್ತಿಯ ಮುಖ ಭಾಗವನ್ನು ಸಂಪೂರ್ಣವಾಗಿ ಹಾನಿಗೊಳಿಸಲಾಗಿದೆ.

ಈ ಕುರಿತು ಮಾಹಿತಿ ನೀಡಿದ ದೇವಸ್ಥಾನ ಅರ್ಚಕ ದ್ಯಾಮಣ್ಣ ಲಮಾಣಿ ಬುಧವಾರ ರಾತ್ರಿ 10 ಗಂಟೆವರೆಗೂ ದೇವಸ್ಥಾನದಲ್ಲಿಯೇ ಇದ್ದು ರಾತ್ರಿ ದೇವಸ್ಥಾನ ಬಾಗಿಲಿಗೆ ಬೀಗ ಹಾಕಿ ಬಂದಿದ್ದೆ. ಗುರುವಾರ ಬೆಳಗ್ಗೆ ಪೂಜೆಗಾಗಿ ದೇವಸ್ಥಾನದ ಬಾಗಿಲು ತೆರೆಯಲು ಹೋದಾಗ ಕೀಲಿ ಮುರಿದು ಬಾಗಿಲು ತೆರೆಯಲಾಗಿತ್ತು. ದೇವಿಯ ಮೂರ್ತಿಯ ಹಣೆ, ಕಣ್ಣು, ಮೂಗು, ಬಾಯಿ ಸೇರಿ ಮುಖದ ಭಾಗವನ್ನು ಒಡೆದು ಹಾಕಿದ್ದರು. ಕೂಡಲೇ ಗ್ರಾಮಸ್ಥರಿಗೆ ವಿಷಯ ಮುಟ್ಟಿಸಿದ್ದೇನೆ ಎಂದರು.

ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ, ಸಿಪಿಐ ಬಿ.ವಿ ನ್ಯಾಮಗೌಡ, ಪಿಎಸ್‌ಐ ನಾಗರಾಜ ಗಡದ, ಅಪರಾಧ ವಿಭಾಗದ ಪಿಎಸ್‌ಐ ಟಿ.ಕೆ ರಾಠೋಡ, ಶ್ವಾನದಳ ಹಾಗೂ ಬೆರಳಚ್ಚು ತಜ್ಞರು, ಪೊಲೀಸ್ ಸಿಬ್ಬಂದಿ ಭೇಟಿ ಪರಿಶೀಲಿಸಿ ಮಾಹಿತಿ ಪಡೆದಿದ್ದಾರೆ.

ಜಮೀನು ವ್ಯಾಜ್ಯ: ಹಲ್ಲೆ ಆರೋಪಿಗೆ ಶಿಕ್ಷೆ

ಕೊಪ್ಪಳ: ಜಮೀನು ವ್ಯಾಜ್ಯಕ್ಕೆ ಸಂಬಂಧಿಸಿದಂತೆ ವ್ಯಕ್ತಿಯೊಬ್ಬರ ಮೇಲೆ ಹಲ್ಲೆ ಮಾಡಿದ್ದ ಆರೋಪಿ ವಿರುಪಾಕ್ಷಪ್ಪ ತಂದೆ ಸಿದ್ದಪ್ಪನಿಗೆ 9 ತಿಂಗಳು ಜೈಲು ಶಿಕ್ಷೆ ಹಾಗೂ 1300 ರೂ. ದಂಡ ವಿಧಿಸಿ ಕೊಪ್ಪಳದ 1ನೇ ಹೆಚ್ಚುವರಿ ಸಿಜೆ ಮತ್ತು ಜೆಎಂಎಫ್ ಸಿ ನ್ಯಾಯಾಧೀಶರು ತೀರ್ಪು ನೀಡಿದ್ದಾರೆ.

ಕೊಪ್ಪಳ ಗ್ರಾಮೀಣ ಪೊಲೀಸ್ ಠಾಣೆ ವ್ಯಾಪ್ತಿಯ ಕುಟಗನಹಳ್ಳಿ ಗ್ರಾಮ ಸೀಮಾದ ಸರ್ವೇ ನಂ.17ರಲ್ಲಿ ಆರೋಪಿ ವಿರೂಪಾಕ್ಷಪ್ಪ ಅಜಯಕುಮಾರ ಜಾಂಗಡಾ ಜೊತೆ ಜಗಳ ತೆಗೆದು ಅವಾಚ್ಯ ಶಬ್ದದಿಂದ ಬೈಯ್ದು ಕೈಯಿಂದ ಮೈ ಕೈಗೆ ಹಲ್ಲೆ ಮಾಡಿ, ಜೀವ ಬೆದರಿಕೆ ಹಾಕಿದ್ದರು. ದೂರುದಾರ ಅಜಯ ಕುಮಾರ ಅರವಿಂದ ಅಣ್ಣಿಗೇರಿ ಇವರಿಂದ ಜಮೀನು ಸರ್ವೇ ಮಾಡಿಸುವಾಗ, ಆರೋಪಿ ವಿರೂಪಾಕ್ಷಪ್ಪ, ಅತಿಕ್ರಮ ಪ್ರವೇಶ ಮಾಡಿ ಜಮೀನು ಮಾಲೀಕ ಅಜಯಕುಮಾರ ಜಾಂಗಡಾಗೆ ಅವಾಚ್ಯ ಶಬ್ದದಿಂದ ಬೈಯ್ದು ಜಗಳ ತೆಗೆದು ಕೈಯಿಂದ ಮೈ-ಕೈಗೆ ಹಲ್ಲೆ ಮಾಡಿ ಸರ್ವೇ ಮಾಡಲು ಬಂದ ಅರವಿಂದ ಅವರ ಸರ್ವೇ ಕಾರ್ಯಕ್ಕೆ ಅಡ್ಡಿಪಡಿಸಿ, ಸರ್ವೇ ಮಾಡಿದರೆ, ಜಮೀನಿನಲ್ಲಿ ಹೂತು ಹಾಕುವುದಾಗಿ ಜೀವ ಬೆದರಿಕೆ ಹಾಕಿರುವುದು ಆರೋಪ ಸಾಬೀತಾಗಿದೆ.

ಕೊಪ್ಪಳ ಗ್ರಾಮೀಣ ಪೊಲೀಸ್ ಠಾಣಾ ಗುನ್ನೆಯಲ್ಲಿ ಪ್ರಕರಣ ದಾಖಲಾಗಿತ್ತು. ಅಂದಿನ ತನಿಖಾಧಿಕಾರಿ ಮುಖ್ಯ ಪೇದೆ ರಾಮಪ್ಪ ತನಿಖೆ ಮಾಡಿ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪ್ರಕರಣದಲ್ಲಿ ಬಹದ್ದೂರು ಬಂಡಿ ಗ್ರಾಮದ ವಿರೂಪಾಕ್ಷಪ್ಪ ತಂದೆ ಸಿದ್ದಪ್ಪ ಇತರ ಮೇಲಿರುವ ಆರೋಪ ಸಾಬೀತಾಗಿದೆ. ಸರ್ಕಾರದ ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕಿ ಭಾರತಿ ವಾಡೇಕರ ವಾದ ಮಂಡಿಸಿದ್ದರು. ಪ್ರಕರಣದಲ್ಲಿ ಕೊಪ್ಪಳ ಗ್ರಾಮೀಣ ಪೊಲೀಸರಾದ ಮಹೇಶಕುಮಾರ ಲ, ರವಿಕುಮಾರ, ರಾಘವೇಂದ್ರ, ಶೇಕ್ಷಾವಲಿ, ಕೆಂಚಪ್ಪ ಇವರು ಸಾಕ್ಷಿದಾರರು ಸರಿಯಾದ ಸಮಯಕ್ಕೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.

ಮತ್ತೆ ಉತ್ಖನನ ನಡೆಸಲು ಪರವಾನಗಿಗೆ ಪ್ರಯತ್ನ

10 ಅಡಿ ಆಳದಲ್ಲಿ ನೈಸರ್ಗಿಕ ಚಿಹ್ನೆಗಳು ಪತ್ತೆ

ರುದ್ರಗೌಡ ಪಾಟೀಲ

ಗದಗ: ಐತಿಹಾಸಿಕ ನಾಡು, ದೇಗುಲಗಳ ಬೀಡು, ಬಂಗಾರದ ಖಣಜ ಲಕ್ಕುಂಡಿಯಲ್ಲಿ ಕಳೆದೊಂದು ತಿಂಗಳಿನಿಂದ ನಡೆಯುತ್ತಿರುವ ಉತ್ಖನನ ಕೊನೆಯ ಹಂತಕ್ಕೆ ತಲುಪಿದ್ದು, ಇನ್ನೊಂದು ವಾರದೊಳಗೆ ಉತ್ಖನನಕ್ಕೆ ತೆರೆ ಬೀಳಲಿದೆ.

ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಪುರಾತತ್ವ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆ ಸಹಯೋಗದೊಂದಿಗೆ ತಾಲೂಕಿನ ಲಕ್ಕುಂಡಿ ಗ್ರಾಮದ ಕೋಟೆ ವೀರಭದ್ರೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಕಳೆದೊಂದು ತಿಂಗಳಿನಿಂದ ನಡೆಯುತ್ತಿರುವ ಉತ್ಖನನದಲ್ಲಿ ಆರಂಭದ 15 ದಿನಗಳ ಕಾಲ ಕೆಲ ಪ್ರಾಚೀನ ಕಾಲದ ಪ್ರಾಚ್ಯಾವಶೇಷಗಳಷ್ಟೇ ದೊರೆತಿದ್ದು, ನಂತರದ 15 ದಿನಗಳಲ್ಲಿ ಯಾವುದೇ ಪ್ರಾಚ್ಯಾವಶೇಷಗಳು ಕಂಡು ಬರದಿದ್ದರೂ ಕೋಟೆ ಗೋಡೆ ಆಕಾರದ ವಾಲ್ ಕಂಡು ಬಂದಿದೆ.

ಕೇಂದ್ರ ಪುರಾತತ್ವ ಇಲಾಖೆಯ ಮಾರ್ಗದರ್ಶನ ಹಾಗೂ ಸೂಚನೆಯಂತೆ ಲಕ್ಕುಂಡಿಯ ಕೋಟೆ ವೀರಭದ್ರೇಶ್ವರ ದೇವಸ್ಥಾನದ ಎದುರು ಪ್ರಾರಂಭಿಕ ಹಂತದಲ್ಲಿ 10 ಚದರ ಮೀಟರ್ ವ್ಯಾಪ್ತಿಯಲ್ಲಿ ಉತ್ಖನನ ನಡೆದಿದ್ದು, ಈ ವೇಳೆ ಕೋಟೆ ಗೋಡೆ ಆಕಾರದ ವಾಲ್ ಕಂಡು ಬಂದ ಹಿನ್ನೆಲೆಯಲ್ಲಿ ಕೋಟೆ ಗೋಡೆಯ ಅಗಲ ಹಾಗೂ ಉದ್ದವನ್ನು ನಿಖರವಾಗಿ ತಿಳಿಯಲು ಹೆಚ್ಚುವರಿಯಾಗಿ 5 ಚದರ್ ಮೀಟರ್ ವ್ಯಾಪ್ತಿಯಲ್ಲಿ ಉತ್ಖನನ ನಡೆಸಲು ಪರವಾನಗಿ ಪಡೆಯಲು ಪ್ರಯತ್ನಿಸಲಾಗುತ್ತಿದೆ.

ಲಕ್ಕುಂಡಿಯಲ್ಲಿ ಉತ್ಖನನಕ್ಕೆ ತಡೆ: ಲಕ್ಕುಂಡಿಯ ಕೋಟೆ ವೀರಭದ್ರೇಶ್ವರ ದೇವಸ್ಥಾನದ ಮುಂಭಾಗದಲ್ಲಿ 10/10 ಚದರ ಮೀಟರ್ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಉತ್ಖನನವು 9ರಿಂದ 10 ಅಡಿಗಳಷ್ಟು ಆಳದಲ್ಲಿ ನೈಸರ್ಗಿಕ ಚಿಹ್ನೆಗಳು ದೊರೆತಿದ್ದರಿಂದ ಉತ್ಖನನಕ್ಕೆ ತಡೆ ನೀಡಲಾಗಿದೆ. ಜೊತೆಗೆ ಒಂದು ಬದಿಯಲ್ಲಿ ಕೋಟೆ ಗೋಡೆ ಮಾದರಿಯ ವಾಲ್ ಕೂಡ ಪತ್ತೆಯಾಗಿದ್ದರಿಂದ ಹೆಚ್ಚುವರಿಯಾಗಿ 5ರಿಂದ 10 ಚದರ್ ಮೀಟರ್‌ನಷ್ಟು ಉತ್ಖನನ ವಿಸ್ತರಣೆಯಾದಾಗ ಕೋಟೆ ಗೋಡೆಯ ಉದ್ದ-ಅಗಲ ಸ್ಪಷ್ಟವಾಗಿ ತಿಳಿಯಲಿದೆ ಎನ್ನುತ್ತಾರೆ ಪುರಾತತ್ವ ಇಲಾಖೆ ಅಧಿಕಾರಿಗಳು.



ಉತ್ಖನನ ಕೊನೆಯ ಹಂತ

ಕಳೆದ ಸುಮಾರು ದಿನಗಳಿಂದ ಲಕ್ಕುಂಡಿಯಲ್ಲಿ 10/10 ಚದರ ಮೀಟರ್ ವ್ಯಾಪ್ತಿಯಲ್ಲಿ ನಾಲ್ಕು ಬ್ಲಾಕ್‌ಗಳನ್ನಾಗಿ ಮಾಡಿ ನಡೆಯುತ್ತಿರುವ ಉತ್ಖನನ ಕೊನೆಯ ಹಂತಕ್ಕೆ ತಲುಪಿದ್ದು, ಬ್ಲಾಕ್‌ಗಳ ತೆರವು ಕಾರ್ಯ ಆರಂಭವಾಗಲಿದೆ. ಸೆಕ್ಷನ್‌ಗಳನ್ನು ಮಾಡಲಾಗುತ್ತಿದ್ದು, ಎರಡು ಮೂರು ದಿನಗಳಲ್ಲಿ ಡ್ರಾಯಿಂಗ್ ಮಾಡಿಕೊಂಡು ಬ್ಲಾಕ್‌ಗಳನ್ನು ತೆಗೆದು ಸಧ್ಯದ ಮಟ್ಟಿಗೆ ಉತ್ಖನನವನ್ನು ನಿಲ್ಲಿಸಲಾಗುವುದು ಎಂದು ಪುರಾತತ್ವ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

"ಲಕ್ಕುಂಡಿಯಲ್ಲಿ ನಡೆಯುತ್ತಿರುವ ಉತ್ಖನನ ಕೊನೆಯ ಹಂತಕ್ಕೆ ಬಂದಿದ್ದು, ಇನ್ನೊಂದು ವಾರದಲ್ಲಿ ಪೂರ್ಣಗೊಳ್ಳಲಿದೆ. ಈಗಾಗಲೇ ಉತ್ಖನನದಲ್ಲಿ ಹಲವಾರು ಪ್ರಾಚ್ಯಾವಶೇಷಗಳು ಪತ್ತೆಯಾಗಿದೆ. ಕೋಟೆ ಗೋಡೆ ಮಾದರಿಯ ವಾಲ್ ಕಂಡು ಬಂದಿದೆ. ಮುಂದಿನ ಭಾಗವನ್ನು ಉತ್ಖನನ ಮಾಡಲು ಪರವಾನಗಿ ಇಲ್ಲದ ಕಾರಣ ಅಲ್ಲಿಗೆ ನಿಲ್ಲಿಸಲಾಗಿದೆ. ಕನಿಷ್ಠ 5ರಿಂದ 10 ಚದರ್ ಮೀಟರ್ ವಿಸ್ತರಣೆ ಅವಶ್ಯವಿದೆ. ಈಗಾಗಲೇ ನಡೆಯುತ್ತಿರುವ ಉತ್ಖನನದ ಕೊನೆಯ ಹಂತದಲ್ಲಿ ಸೆಕ್ಷನ್‌ಗಳನ್ನು ಮಾಡಲಾಗುತ್ತಿದ್ದು, ಬ್ಲಾಕ್‌ಗಳನ್ನು ತೆಗೆದು ಡ್ರಾಯಿಂಗ್ ಮಾಡಿಕೊಂಡು ಉತ್ಖನನದ ಹಂತವನ್ನು ಪೂರ್ಣಗೊಳಿಸಲಾಗುವುದು.

■ ಡಾ.ಆರ್.ತೇಜೇಶ್ವರ, ಉತ್ಖನನ ನಿರ್ದೇಶಕರು ಹಾಗೂ ಪುರಾತತ್ವ ಇಲಾಖೆ ಅಧಿಕಾರಿ

ಖಾಲಿ ಹುದ್ದೆಗಳ ಭರ್ತಿಗೆ ಫೆ.25ರಿಂದ ಅನಿರ್ದಿಷ್ಟಾವಧಿ ಧರಣಿ

ಧಾರವಾಡ: ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿ ಹುದ್ದೆಗಳ ಭರ್ತಿಗೆ ಆಗ್ರಹಿಸಿ ಫೆ.24ಕ್ಕೆ ಪ್ರತಿಭಟನಾ ರ್‍ಯಾಲಿ ಮತ್ತು ಫೆ.25ರಿಂದ ಅನಿರ್ದಿಷ್ಟಾವಧಿ ಧರಣಿ ಹಮ್ಮಿಕೊಂಡಿದೆ ಎಂದು ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿ ಸಂಘಟನೆ ಅಧ್ಯಕ್ಷ ಕಾಂತಕುಮಾರ ಮಾಹಿತಿ ನೀಡಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ರಾಜ್ಯದ ಗ್ರಾಮೀಣ ಬಡ ನಿರುದ್ಯೋಗಿಗಳಿಗೆ ಸರ್ಕಾರಿ ನೌಕರಿ ಮಹದಾಸೆಗೆ ಊರು ತೊರೆದಿದ್ದು, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿದ್ದಾರೆ. ಆದರೆ, ರಾಜ್ಯ ಸರ್ಕಾರ ಹುದ್ದೆಗಳ ಭರ್ತಿಗೆ ಮುಂದಾಗುತ್ತಿಲ್ಲ ಎಂದು ದೂರಿದರು.

ಕಳೆದ 5 ವರ್ಷಗಳಿಂದ ಯಾವುದೇ ಹುದ್ದೆಗಳು ಭರ್ತಿ ಮಾಡಿಲ್ಲ, ಇದರಿಂದ ನಿರುದ್ಯೋಗ ಹೆಚ್ಚಿದೆ. ನೌಕರಿ ಕನಸು ಕಂಡು, ವಯೋಮಿತಿ ಮೀರಿದ ಆಕಾಂಕ್ಷಿಗಳು ಆತ್ಮಹತ್ಯೆ ದಾರಿ ತುಳಿಯುತ್ತಿದ್ದಾರೆ. ಹೀಗಾಗಿ ತಕ್ಷಣ ಸರ್ಕಾರ ಖಾಲಿ ಹುದ್ದೆಗಳ ಭರ್ತಿಗೆ ಮುಂದಾಗಬೇಕು ಎಂದರು.

ರಾಜ್ಯದ 43 ಇಲಾಖೆಗಳಲ್ಲಿ 2.84 ಲಕ್ಷ ಹುದ್ದೆಗಳು ಖಾಲಿ ಇವೆ. ಒಂದು ವರ್ಷದಲ್ಲಿ ಒಂದು ಲಕ್ಷ ಹುದ್ದೆಗಳ ಭರ್ತಿಗೆ ಭರವಸೆ ನೀಡಿದ ಕಾಂಗ್ರೆಸ್ ಸರ್ಕಾರ ಮಾತು ತಪ್ಪಿದೆ. ಕರ್ನಾಟಕದಲ್ಲಿ 15 ರಿಂದ 20 ಲಕ್ಷ ಯುವ ಜನತೆ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದಾರೆ ಎಂದು ಹೇಳಿದರು.

ಖಾಲಿ ಹುದ್ದೆಗಳ ಭರ್ತಿಗೆ ಈಗಾಗಲೇ ಬೆಂಗಳೂರು, ಧಾರವಾಡ, ವಿಜಯಪುರದಲ್ಲಿ ಮಾಡಿದ ಹೋರಾಟಕ್ಕೆ ಸ್ಪಂದಿಸಿದ ಮುಖ್ಯಮಂತ್ರಿಗಳು, ವಯಸ್ಸಿನ ಮಿತಿಯನ್ನು ಹೆಚ್ಚಿಸಿ, 50 ಸಾವಿರ ಹುದ್ದೆಗಳ ಭರ್ತಿಗೂ ಆಶ್ವಾಸನೆ ನೀಡಿದ್ದರು. ಆದರೆ, ಈವರೆಗೆ ಭರ್ತಿ ಮಾಡದ ಕುರಿತು ಬೇಸರಿಸಿದರು.

ಹುದ್ದೆಗಳ ಭರ್ತಿ ವಿಳಂಬದಿಂದ ಬಡ ಉದ್ಯೋಗ ಆಕಾಂಕ್ಷಿಗಳು, ರೂಮ್ ಬಾಡಿಗೆ ಕಟ್ಟಲು, ಹೊಟ್ಟೆ ಪಾಡಿಗೆ ಹೊಟೇಲ್, ಬಾರ್ ಆ್ಯಂಡ್ ರೆಸ್ಟೋರೆಂಟ್ ಸೇರಿದಂತೆ ವಿವಿಧ ತಾತ್ಕಾಲಿಕ ಕೆಲಸ ಮಾಡುತ್ತಿದ್ದು, ಸರ್ಕಾರ ತಕ್ಷಣ ಹುದ್ದೆಗಳ ಭರ್ತಿಗೆ ಮುಂದಾಗಲು ಆಗ್ರಹಿಸಿದರು.

ಫೆ.24ರ ಪಾದಯಾತ್ರೆ, ಫೆ.25ರ ಅನಿರ್ದಿಷ್ಟಾವಧಿ ಧರಣಿಗೆ ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳ ರೈತಪರ ಸಂಘಟನೆ ಹಾಗೂ ಕನ್ನಡಪರ ಸಂಘಟನೆ ಬೆಂಬಲಿಸುವಂತೆ ಕೋರಿದರು. ಸುದ್ದಿಗೋಷ್ಠಿಯಲ್ಲಿ ಮಂಜುನಾಥ್, ಸಂಜಯ್ ಕುಮಾರ್ ಇದ್ದರು.

ವಿದೇಶದಲ್ಲಿ ರಾಜಕೀಯ ಸಾಧ್ಯವೇ?: ಸಚಿವ ಲಾಡ್

ಧಾರವಾಡ: ರಾಜ್ಯದ ಶಾಸಕರು ವಿದೇಶಕ್ಕೆ ಹೋಗಿ ರಾಜ್ಯದ ರಾಜಕಾರಣ ಮಾಡಲು ಸಾಧ್ಯವೇ? ಎಂದು ಕಾರ್ಮಿಕ ಇಲಾಖೆ ಹಾಗೂ ಉಸ್ತುವಾರಿ ಸಚಿವ ಸಂತೋಷ ಲಾಡ್ ಪ್ರಶ್ನಿಸಿದರು.

ಗುರುವಾರ ಸುದ್ದಿಗಾರರೊಂದಿಗೆ ಅವರು ಮಾತನಾಡಿ, ಬಿಜೆಪಿ ಸರ್ಕಾರ ಮಾಡುವಾಗ ಅವರ ಶಾಸಕರು ಎಲ್ಲಿಗೆ ಹೋಗಿದ್ದರು. ಅವರ ಪ್ರವಾಸದ ಬಗ್ಗೆ ಹೇಳಬೇಕಾ? ಎಂದು ಟಾಂಗ್ ನೀಡಿದರು.



ವಿದೇಶಕ್ಕೆ ಹೋದ ನಮ್ಮ ಹತ್ತಿಪ್ಪತ್ತು ಶಾಸಕರು ಅಲ್ಲಿ ಹೋಗಿ ರಾಜಕಾರಣ ಮಾಡಲು ಸಾಧ್ಯವೇ? ಅವರೇನೂ ಅಲ್ಲಿಗೆ ಹೋಗಿ ಮತಗಳನ್ನು ಹಾಕುತ್ತಾರಾ? ಎಂದು ಲಾಡ್ ಬಿಜೆಪಿಗರಿಗೆ ಪ್ರಶ್ನಿಸಿದರು. ಸರ್ಕಾರದಿಂದ ಅಥವಾ ವೈಯಕ್ತಿಕವಾಗಿ ವಿದೇಶ ಪ್ರವಾಸಕ್ಕೆ ಹೋಗಿದ್ದರ ಬಗ್ಗೆ ನನಗೆ ಮಾಹಿತಿ ಇಲ್ಲ. ಕೆಎಸ್‌ಆರ್ ಟಿಸಿ ನೌಕರರ ಪ್ರತಿಭಟನೆ ವಿಚಾರವಾಗಿ ಪ್ರತಿಕ್ರಿಯಿಸಿದ ಲಾಡ್, ಸಾರಿಗೆ ನೌಕರರ ಬೇಡಿಕೆಗಳು ನ್ಯಾಯಯುತವಾಗಿವೆ. ಅವರ ಹೋರಾಟಕ್ಕೆ ಸಹಮತವಿದೆ ಎಂದು ಹೇಳಿದರು.

ಎಲ್ಲ ಸರ್ಕಾರಗಳಲ್ಲೂ ಹೋರಾಟ ನಡೆಯುತ್ತವೆ. ಈ ಕುರಿತಂತೆ ಸಾರಿಗೆ ಇಲಾಖೆ ಸಚಿವರು ಗಮನ ಹರಿಸಿ, ನೌಕರರ ಬೇಡಿಕೆಗಳು ಈಡೇರಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಬಗ್ಗೆ ಮಾತನಾಡಿದ ಅವರು, ಈಗಾಗಲೇ 50 ಸಾವಿರ ಹುದ್ದೆಗಳನ್ನು ಭರ್ತಿ ಮಾಡಿದ್ದೇವೆ. ಪ್ರಸ್ತುತ ರಾಜ್ಯದಲ್ಲಿ ಒಳಮೀಸಲಾತಿ ಸೇರಿದಂತೆ ಕೋರ್ಟ್ ವಿಚಾರ ಬಗೆಹರಿದ ನಂತರವೇ ಖಾಲಿ ಇರುವ ಹುದ್ದೆಗಳ ನೇಮಕಾತಿ ಸರ್ಕಾರ ಕ್ರಮ ಕೈಗೊಳ್ಳಲಿದೆ ಎಂದು ತಿಳಿಸಿದರು.

ಫೆ.24ಕ್ಕೆ ಗುವಿ.ವಿ.ಯ 43ನೇ ಘಟಿಕೋತ್ಸವ । ರಾಜ್ಯಪಾಲ ಥಾವರ್‌ಚೆಂದ್ ಗೆಹ್ಲೋಟ್ ಭಾಗಿ

ಮೂವರಿಗೆ ಗೌರವ ಡಾಕ್ಟರೇಟ್: ಪ್ರೊ.ಉಡಿಕೇರಿ

ಕಲಬುರಗಿ: ಗುಲಬರ್ಗಾ ವಿಶ್ವವಿದ್ಯಾಲಯದ 43ನೇ ವಾರ್ಷಿಕ ಘಟಿಕೋತ್ಸವವು ಜ್ಞಾನಗಂಗಾ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಫೆ.24 ರಂದು ಬೆಳಗ್ಗೆ 11 ಗಂಟೆಗೆ ನಡೆಯಲಿದ್ದು, ಮೂವರು ಸಾಧಕರಿಗೆ ಈ ಬಾರಿ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಲಾಗುತ್ತಿದೆ ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಶಶಿಕಾಂತ್ ಎಸ್.ಉಡಿಕೇರಿ ತಿಳಿಸಿದರು.

ಗುರುವಾರ ವಿಶ್ವವಿದ್ಯಾಲಯದ ಕೈಲಾಶ ಭವನ ಅತಿಥಿಗೃಹದಲ್ಲಿ ಕರೆಯಲಾದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರದಲ್ಲಿನ ಸಾಧನೆಗೆ ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯಾ, ಸಾಮಾಜಿಕ ಸೇವೆ ಪರಿಗಣಿಸಿ ಮಾಜಿ ಸಚಿವ ಮುರುಗೇಶ ನಿರಾಣಿ ಹಾಗೂ ಸಾಮಾಜಿಕ ಸೇವೆ ಗುರುತಿಸಿ ಹೋರಾಟಗಾರ ಕೇದಾರಲಿಂಗಯ್ಯ ಹಿರೇಮಠ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಗುತ್ತಿದೆ ಎಂದರು.



ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ 43ನೇ ಘಟಿಕೋತ್ಸವದ ಅಧ್ಯಕ್ಷತೆ ವಹಿಸಿ ಗಣ್ಯರಿಗೆ ಗೌಡಾ ಮತ್ತು ಅಭ್ಯರ್ಥಿಗಳಿಗೆ ಪದವಿ ಪ್ರದಾನ ಮಾಡಲಿದ್ದಾರೆ. ಉನ್ನತ ಶಿಕ್ಷಣ ಸಚಿವ ಹಾಗೂ ವಿಶ್ವವಿದ್ಯಾಲಯಗಳ ಸಮಕುಲಾಧಿಪತಿ ಡಾ.ಎಂ.ಸಿ.ಸುಧಾಕರ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದು, ಪುಣೆಯ ಉನ್ನತ ರಕ್ಷಣಾ ತಂತ್ರಜ್ಞಾನ ಸಂಸ್ಥೆ (ಡೀಮ್ಡ್ ವಿಶ್ವವಿದ್ಯಾಲಯ)ಯ ವಿಶ್ರಾಂತ ಕುಲಪತಿ ಪ್ರೊ.ಎಲ್.ಎಂ.ಪಟ್ನಾಯಕ್ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ ಎಂದರು.

77 ವಿದ್ಯಾರ್ಥಿಗಳಿಗೆ 172 ಚಿನ್ನದ ಪದಕ

43ನೇ ವಾರ್ಷಿಕ ಘಟಿಕೋತ್ಸವದಲ್ಲಿ ವಿವಿಧ ಸ್ನಾತಕ ಪದವಿ ಕೋರ್ಸ್‌ಗಳಿಗೆ 24 ಹಾಗೂ ವಿವಿಧ ಸ್ನಾತಕೋತ್ತರ ಕೋರ್ಸ್‌ಗಳಿಗೆ 148 ಸೇರಿ ಒಟ್ಟಾರೆ 172 ಚಿನ್ನದ ಪದಕಗಳನ್ನು 58 ಮಹಿಳಾ ವಿದ್ಯಾರ್ಥಿ ಹಾಗೂ 19 ಪುರುಷ ವಿದ್ಯಾರ್ಥಿ ಸೇರಿ 77 ವಿದ್ಯಾರ್ಥಿಗಳಿಗೆ ವಿತರಿಸಲಾಗುತ್ತಿದೆ. ಇದಲ್ಲದೆ, ವಿವಿಧ ನಿಕಾಯಗಳಲ್ಲಿ ಒಟ್ಟು 123 ವಿದ್ಯಾರ್ಥಿಗಳಿಗೆ ಪಿಎಚ್.ಡಿ ಪದವಿ ಪ್ರದಾನ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಕುಲಸಚಿವ ಪ್ರೊ.ರಮೇಶ್ ಲಂಡನಕರ್, ಮೌಲ್ಯಮಾಪನ ಕುಲಸಚಿವ ಡಾ.ಎನ್.ಜಿ.ಕಣ್ಣೂರು, ವಿತ್ತಾಧಿಕಾರಿ ಜಯಾಂಬಿಕ ಇದ್ದರು.

ನದಿ ತಿರುವು ಯೋಜನೆ ಕೈಬಿಡಲು ಆಗ್ರಹ

ಶಿರಸಿ: ಉತ್ತರ ಕನ್ನಡ ಜಿಲ್ಲೆಯ ಪರಿಸರ ವ್ಯವಸ್ಥೆ ಹಾಗೂ ಜನರ ಜೀವನೋಪಾಯಕ್ಕೆ ಮಾರಕವಾಗಿರುವ ಬೇಡ್ತಿ-ಅಘನಾಶಿನಿ ನದಿ ತಿರುವು ಯೋಜನೆಗಳನ್ನು ಸರ್ಕಾರ ತಕ್ಷಣವೇ ಕೈಬಿಡಬೇಕು ಎಂದು ಬೇಡ್ತಿ-ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ತೀವ್ರವಾಗಿ ಒತ್ತಾಯಿಸಿದೆ.

ಫೆಬ್ರವರಿ 22ರಂದು ಜಿಲ್ಲೆಯ ಅಂಕೋಲಾಕ್ಕೆ ಭೇಟಿ ನೀಡಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಯೋಜನೆಗಳ ರದ್ದತಿಯನ್ನು ಅಧಿಕೃತವಾಗಿ ಘೋಷಿಸಬೇಕು ಎಂದು ಸಮಿತಿ ಆಗ್ರಹಿಸಿದೆ.

ಗುರುವಾರ ಶಿರಸಿಯ ಯೋಗ ಮಂದಿರದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಸಮಿತಿಯ ಅಧ್ಯಕ್ಷ ಅನಂತ ಅಶೀಸರ ಅವರು, ಈ ಹಿಂದೆ ಸಮಿತಿಯ ನಿಯೋಗವು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ ಸಂದರ್ಭದಲ್ಲಿ ನೀರಾವರಿ ತಜ್ಞರು ಹಾಗೂ ವಿಜ್ಞಾನಿಗಳ ಜೊತೆ ಸಮಾಲೋಚನೆ ನಡೆಸಿ ಸೂಕ್ತ ತೀರ್ಮಾನ ಕೈಗೊಳ್ಳುವುದಾಗಿ ಸಿಎಂ ಭರವಸೆ ನೀಡಿದ್ದರು. ಆ ಭರವಸೆಯನ್ನು ಈಗ ಕಾರ್ಯರೂಪಕ್ಕೆ ತರಬೇಕಾದ ಸಮಯ ಬಂದಿದೆ. ಜಿಲ್ಲೆಗೆ ಭೇಟಿ ನೀಡುವ ಸಂದರ್ಭದಲ್ಲೇ ಈ ವಿವಾದಿತ ಯೋಜನೆಗಳನ್ನು ನಿಲ್ಲಿಸುವ ಬಗ್ಗೆ ಸರ್ಕಾರ ಸ್ಪಷ್ಟ ನಿರ್ಧಾರ ಪ್ರಕಟಿಸಬೇಕು ಎಂದು ಒತ್ತಾಯಿಸಿದರು.

ಪಶ್ಚಿಮ ಘಟ್ಟದ ಸೂಕ್ಷ್ಮ ಪ್ರದೇಶದಲ್ಲಿ ನದಿ ತಿರುವು ಮಾಡುವುದರಿಂದ ಭೂಕುಸಿತದಂತಹ ನೈಸರ್ಗಿಕ ವಿಕೋಪಗಳು ಸಂಭವಿಸುವ ಸಾಧ್ಯತೆ ಹೆಚ್ಚಿದೆ. ಇದು ಕೇವಲ ಪರಿಸರಕ್ಕೆ ಮಾತ್ರವಲ್ಲದೆ, ಜಿಲ್ಲೆಯ ರೈತರು, ಮೀನುಗಾರರು ಹಾಗೂ ವನವಾಸಿಗಳ ಬದುಕನ್ನು ಅತಂತ್ರ ಸ್ಥಿತಿಗೆ ದೂಡುತ್ತದೆ. ಈಗಾಗಲೇ ಜ.11ರಂದು ಶಿರಸಿಯಲ್ಲಿ ಮಠಾಧೀಶರು, ವಿಜ್ಞಾನಿಗಳು ಹಾಗೂ ಸರ್ವಪಕ್ಷಗಳ ನೇತೃತ್ವದಲ್ಲಿ ಬೃಹತ್ ಸಮಾವೇಶ ನಡೆಸಿ ಆಕ್ರೋಶ ವ್ಯಕ್ತಪಡಿಸಲಾಗಿದೆ.



ಕೇಂದ್ರ ಸಚಿವರಿಗೂ ಈ ಬಗ್ಗೆ ಮನವಿ ಸಲ್ಲಿಸಲಾಗಿದ್ದು, ಜಿಲ್ಲೆಯ ನೂರಾರು ಗ್ರಾಮ ಪಂಚಾಯತ್‌ಗಳು ಮತ್ತು ಸಹಕಾರಿ ಸಂಘಗಳು ಯೋಜನೆಯ ವಿರುದ್ಧ ಅಧಿಕೃತ ನಿರ್ಣಯ ಕೈಗೊಂಡಿವೆ. ಜನಸಾಮಾನ್ಯರ ಈ ಹೋರಾಟವನ್ನು ಗಮನಿಸಿ ಸರ್ಕಾರ ಈ ಮಾರಕ ಯೋಜನೆಯಿಂದ ಹಿಂದೆ ಸರಿಯಬೇಕು ಎಂದು ತಿಳಿಸಿದರು.

ಪೂಜೆ ಮತ್ತು ಗಂಗಾರತಿ: ಹೋರಾಟದ ತೀವ್ರತೆಯನ್ನು ಹೆಚ್ಚಿಸುವ ಭಾಗವಾಗಿ ಫೆ.23ರ ಸಂಜೆ 5 ಗಂಟೆಗೆ ಸಾಣಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಶಿಲ್ಲಬೈಲ್ ಬಳಿ ಬೃಹತ್ ನದಿ ಪೂಜೆ ಹಾಗೂ ಗಂಗಾರತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸ್ವರ್ಣವಲ್ಲೀ ಮಹಾಸಂಸ್ಥಾನದ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ಈ ಧಾರ್ಮಿಕ ಮತ್ತು ಜಾಗೃತಿ ಕಾರ್ಯಕ್ರಮ ನಡೆಯಲಿದ್ದು, ಸಾವಿರಾರು ಸಂಖ್ಯೆಯಲ್ಲಿ ರೈತರು ಹಾಗೂ ಮಹಿಳೆಯರು ಭಾಗವಹಿಸಲಿದ್ದಾರೆ ಎಂದು ಅಶೀಸರ ಮಾಹಿತಿ ನೀಡಿದರು. ಪತ್ರಿಕಾಗೋಷ್ಠಿಯಲ್ಲಿ ಸಮಿತಿಯ ಪ್ರಮುಖರಾದ ಜಿ.ಟಿ.ತಟ್ಟೀಸರ, ಆರ್.ಎಸ್.ಹೆಗಡೆ, ಸುರೇಶ ಹಕ್ಕಿಮನೆ,ರತ್ನಾಕರ ಬಾಡಲಕೊಪ್ಪ, ಎಸ್.ಎಮ್.ಭಟ್ ಸೇರಿದಂತೆ ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಆತ್ಮಲಿಂಗ ದರ್ಶನ ಪಡೆದ ಭಾರತಿ ವಿಷ್ಣುವರ್ಧನ್



ಗೋಕರ್ಣ: ಖ್ಯಾತ ನಟ ಡಾ.ವಿಷ್ಣುವರ್ಧನ ಪತ್ನಿ ಭಾರತಿ ವಿಷ್ಣುವರ್ಧನ್ ಗುರುವಾರ ಇಲ್ಲಿನ ಮಹಾಬಲೇಶ್ವರ ಮಂದಿರಕ್ಕೆ ಭೇಟಿ ನೀಡಿ ಆತ್ಮಲಿಂಗದ ದರ್ಶನ ಪಡೆದರು. ನಂತರ ಮಂದಿರವರತಿಯಿಂದ ಪ್ರಸಾದ ನೀಡಿ ಗೌರವಿಸಲಾಯಿತು.

ಈ ವೇಳೆ ಮಂದಿರದ ವ್ಯವಸ್ಥಾಪಕ ಸುಬ್ರಹ್ಮಣ್ಯ ಹೆಗಡೆ,ವೇ. ಗಣಪತಿ ಜಂಭೆ, ಭಾರತೀಯವರ ಕುಟುಂಬ ಸದಸ್ಯರು ಉಪಸ್ಥಿತರಿದ್ದರು. ಇದಕ್ಕೂ ಮೊದಲು ಮಹಾಗಣಪತಿ ಮಂದಿರಕ್ಕೆ ತೆರಳಿ ದೇವರ ದರ್ಶನ ಪಡೆದರು. ಸ್ಥಳೀಯ ಪೊಲೀಸ್ ಸಿಬ್ಬಂದಿ ಜೊತೆಗಿದ್ದು ಸೂಕ್ತ ಬಂದೋಬಸ್ತ್ ಕಲ್ಪಿಸಿದ್ದರು.

ದೇವಾಲಯಕ್ಕೆ ತೆರಳುತ್ತಿರುವ ವೇಳೆ ಜನರು ಫೋಟೋ ತೆಗೆಸಿಕೊಳ್ಳಲು ಮುಗಿ ಬಿದ್ದರು. ಇದಾದ ನಂತರ ಅಮೃತಾನ್ನ ಭೋಜನಶಾಲೆಗೆ ತೆರಳಿದಾಗ, ಕಡಲತೀರದ ವೀಕ್ಷಣೆಗೆ ತೆರಳಿದ ವೇಳೆ ಪೊಲೀಸ್ ಸಿಬ್ಬಂದಿ ಜನರ ನಿಯಂತ್ರಿಸಲು ಶ್ರಮಿಸಿದರು.

ಹೆಂಡತಿ, ಮಗಳ ಕೊಲೆ: ಜೀವಾವಧಿ ಶಿಕ್ಷೆ

ಕೊಪ್ಪಳ: ನಗರ ಪೊಲೀಸ್ ಠಾಣೆ ವ್ಯಾಪ್ತಿಯ ಕೊಪ್ಪಳದ ಹಮಾಲರ ಕಾಲೋನಿಯಲ್ಲಿ ಶೀಲ ಶಂಕಿಸಿ ತನ್ನ ಪತ್ನಿ ಮುನ್ನಿಬೇಗಂ ಹಾಗೂ ಎರಡು ತಿಂಗಳ ಹೆಣ್ಣು ಮಗು ರಾಹಿನ್ ಪರ್ವಿನ್‌ರನ್ನು ಉಸಿರುಗಟ್ಟಿಸಿ ಕೊಲೆ ಮಾಡಿರುವ ಸುಲೇಮಾನ ಅನ್ಸಾರಿಗೆ ಜೀವಾವಧಿ ಶಿಕ್ಷೆ ಹಾಗೂ 1.05 ಲಕ್ಷ ದಂಡ ವಿಧಿಸಿ, ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯ ಆದೇಶಿಸಿದೆ. ಶಿಕ್ಷೆಗೆ ಗುರಿಯಾದ ಅಪರಾಧಿ, ತನ್ನ ಹೆಂಡತಿಗೆ ತವರು ಮನೆಯಿಂದ ಆಟೋ ಖರೀದಿಸಲು 1 ಲಕ್ಷ ರೂ. ವರದಕ್ಷಿಣೆ ಹಣ ತರುವಂತೆ ಕಿರುಕುಳ ನೀಡಿದ್ದ. ಅವಾಚ್ಯ ಶಬ್ದದಿಂದ ಬೈದು ಹೊಡಿ ಬಡಿ ಮಾಡಿ ಮಾನಸಿಕ ಮತ್ತು ದೈಹಿಕ ಹಿಂಸೆ ಮಾಡಿದ್ದ. ಜೊತೆಗೆ ಹೆಂಡತಿ ಶೀಲದ ಬಗ್ಗೆ ಸಂಶಯ ವ್ಯಕ್ತಪಡಿಸಿ ಕಳೆದ 2016ರ ಆ.2ರಂದು ಮೃತ ಮುನ್ನಿಬೇಗಂರ ಅಣ್ಣನ ಮನೆಯ ಮೇಲಿನ ರೂಮಿನಲ್ಲಿ ತಲೆ ದಿಂಬಿನಿಂದ ಮುನ್ನಿಬೇಗಂ ಹಾಗೂ ಆಕೆಯ ಎರಡು ತಿಂಗಳ ಹೆಣ್ಣು ಮಗು ರಾಹಿನ್ ಪರ್ವಿನ್ ಇವರನ್ನು ಉಸಿರುಗಟ್ಟಿಸಿ ಕೊಲೆ ಮಾಡಿದ್ದ. ಕೊಪ್ಪಳ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ತನಿಖಾಧಿಕಾರಿಯಾಗಿ ಶ್ರೀಕಾಂತ ಬಿ.ಕಟ್ಟಿಮನಿ, ಡಿವೈಎಸ್ಪಿ ಕೆಲಸ ಮಾಡಿದ್ದರು. ಕೊಪ್ಪಳ ಹಮಾಲರ ಕಾಲೋನಿಯ ಸುಲೇಮಾನ ಅನ್ಸಾರಿ ಇವರ ಮೇಲಿನ ಆರೋಪ ಸಾಬೀತಾಗಿವೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಸಿ.ಚಂದ್ರಶೇಖರ ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಅಂಬಣ್ಣ ಟಿ ಮತ್ತು ಸರ್ಕಾರಿ ಅಭಿಯೋಜಕರಾದ ಬಂಡಿ ಅಪರ್ಣಾ ಎಂ. ವಾದ ಮಂಡಿಸಿದ್ದರು.

ವಿಷ ಆಹಾರ ಸೇವಿಸಿ 23 ಕುರಿಗಳ ಸಾವು



ಸಿರುಗುಪ್ಪ: ತಾಲೂಕಿನ ರಾವಿಹಾಳ್ ಗ್ರಾಮ ಪಂಚಾಯತಿ ವ್ಯಾಪ್ತಿಯ ಗುಬ್ಬಿಹಾಳ್ ಗ್ರಾಮದಲ್ಲಿ ವಿಷಾಹಾರ ಸೇವಿಸಿ 23 ಕುರಿಗಳು ಮೃತಪಟ್ಟ ಘಟನೆ ಗುರುವಾರ ನಡೆದಿದೆ.

ಕೊಪ್ಪಳ ಜಿಲ್ಲೆಯ ಕನಕಗಿರಿ ತಾಲೂಕಿನ ಉಮಲಟಿ ಕಟ್ಟೆಪುರ ಗ್ರಾಮದ ಸಂಚಾರಿ ಕುರಿಗಾಹಿ ಯಂಕಪ್ಪ, ಲಕ್ಷ್ಮಿ ಎಂಬುವರಿಗೆ ಕುರಿಗಳು ಸೇರಿದ್ದು ಎಂದು ಹೇಳಲಾಗುತ್ತಿದೆ. 400ಕ್ಕೂ ಹೆಚ್ಚು ಕುರಿಗಳನ್ನು ಬುಧವಾರ ಜೋಳದ ಹುಲ್ಲು ಮೇಯಿಸಿಕೊಂಡು ಸಂಜೆಗೆ ಬಂದಾಗ ಅದರಲ್ಲಿ ಅನೇಕ ಕುರಿಗಳು ಹಸಿರು ಬಣ್ಣದಲ್ಲಿ ವಾಂತಿಯನ್ನು ಮಾಡಿಕೊಂಡಿವೆ. ಹತ್ತಿರದ ಪಶು ಚಿಕಿತ್ಸೆ ಅಧಿಕಾರಿಯಿಂದ ಚಿಕಿತ್ಸೆ ಕಲ್ಪಿಸಿದ್ದಾರೆ. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಅದರಲ್ಲಿ 23 ಕುರಿಗಳು ತಡ ರಾತ್ರಿ ಮೃತಪಟ್ಟಿರುತ್ತವೆ. ಈ ಕುರಿತು ಹಚ್ಚೊಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಿರಿಯ ಪಶು ವೈದ್ಯಾಧಿಕಾರಿ ಎ.ಕುಬೇರ ಹಾಗೂ ಅವರ ತಂಡ ಘಟನಾ ಸ್ಥಳಕ್ಕೆ ಭೇಟಿ ನೀಡಿ ಕುರಿಗಳ ಸಾವಿನ ಬಗ್ಗೆ ತಪಾಸಣೆ ನಡೆಸಿದ್ದಾರೆ. ಇನ್ನು ಉಳಿದ ಕುರಿಗಳಿಗೆ ಚಿಕಿತ್ಸೆ ನೀಡುತ್ತಿದ್ದಾರೆ.

ಹಚ್ಚೊಳ್ಳಿ ಪೊಲೀಸ್ ಠಾಣೆಯ ಎಎಸ್‌ಐ ವೆಂಕಟೇಶ ಗ್ರಾಮಸ್ಥರಾದ ದುರುಗೇಶ, ಬಾಬಣ್ಣ, ಬಸವರಾಜ ಶಿವಶಂಕರ ರೆಡ್ಡಿ ಇದ್ದರು.

ನೂತನ ಕುಲಪತಿ ನೇಮಕ

ವಿಜಯಪುರ: ನಗರದ ಪ್ರತಿಷ್ಠಿತ ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದ ನೂತನ ಕುಲಪತಿಯಾಗಿ ಚರ್ಮರೋಗ ವಿಭಾಗದ ಪ್ರಾಧ್ಯಾಪಕ ಮತ್ತು ಖ್ಯಾತ ತಜ್ಞ ಡಾ.ಅರುಣ ಇನಾಮದಾರ ಗುರುವಾರ ಅಧಿಕಾರ ಸ್ವೀಕರಿಸಿದರು.

ಈವರೆಗೆ ಹಂಗಾಮಿ ಕುಲಪತಿಯಾಗಿದ್ದ ಅವರು, ಈಗ ಕುಲಪತಿಯಾಗಿ ಅಧಿಕಾರ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಸಮಕುಲಾಧಿಪತಿ ಡಾ.ವೈ.ಎಂ.ಜಯರಾಜ, ಬಿಎಲ್‌ಡಿಇ ಸಂಸ್ಥೆಯ ಅಧ್ಯಕ್ಷ ಮತ್ತು ಸಚಿವ ಎಂ.ಬಿ.ಪಾಟೀಲ, ಡೀಮ್ಡ್ ವಿವಿ ಕುಲಾಧಿಪತಿ ಬಿ.ಎಂ.ಪಾಟೀಲ, ಪರೀಕ್ಷೆ ನಿಯಂತ್ರಣಾಧಿಕಾರಿ ಡಾ. ಶಶಿಧರ ದೇವರಮನಿ, ವೈದ್ಯಕೀಯ ಮಹಾವಿದ್ಯಾಲಯದ ಪ್ರಾಚಾರ್ಯೆ ಡಾ.ತೇಜಸ್ವಿನಿ ವಲ್ಲಭ, ಅಲೈಡ್ ಹೆಲ್ತ್ ಸಾಯಿನ್ಸ್ ಡೀನ್ ಡಾ.ಎಸ್.ವಿ.ಪಾಟೀಲ, ವೈದ್ಯಕೀಯ ನಿರ್ದೇಶಕ ಮತ್ತು ಹಿರಿಯ ಉಪಪ್ರಾಚಾರ್ಯ ಡಾ.ವಿಜಯಕುಮಾರ ಕಲ್ಯಾಣಪ್ಪಗೋಳ, ಶರೀರಕ್ರಿಯಾಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಪ್ರೊ.ಕುಶಾಲ ದಾಸ, ಸಂಶೋಧನಾ ಕೋಶ, ನಿರ್ದೇಶಕ ಡಾ.ಎಂ.ಎಂ.ಪಾಟೀಲ, ಉಪಕುಲಸಚಿವ ಸತೀಶ ಪಾಟೀಲ, ವೈದ್ಯಕೀಯ ಉಪಅಧೀಕ್ಷಕ ಡಾ. ರವಿಕುಮಾರ ಬಿರಾದಾರ, ಬೋಧಕ ಹಾಗೂ ಬೋಧಕರ ಹೊರತಾದ ಸಿಬ್ಬಂದಿ ಇದ್ದರು.



ಬಸ್ ನಿಲ್ದಾಣದ ಒಳಗೆ ವಾಮಾಚಾರ

ಮುಂಡರಗಿ: ಪಟ್ಟಣದ ಹುಡ್ಕೋ ಕಾಲೋನಿಯಲ್ಲಿರುವಂತಹ ಸಾರ್ವಜನಿಕರ ಬಸ್ ನಿಲ್ದಾಣದ ಒಳಗೆ ಅಮವಾಸ್ಯೆ ರಾತ್ರಿಯಲ್ಲಿ ವಾಮಾಚಾರ ನಡೆಸಿದ ಘಟನೆ ನಡೆದಿದೆ. ಈ ಘಟನೆಯಿಂದ ಹುಡ್ಕೋ ಕಾಲೋನಿಯ ಸಾರ್ವಜನಿಕರು ಭಯ ಭೀತರಾಗಿದ್ದಾರೆ.

ಮುಂಡರಗಿಯಿಂದ ಕೊಪ್ಪಳಕ್ಕೆ ಹೋಗುವ ಮುಖ್ಯ ರಸ್ತೆಯಲ್ಲಿರುವ ಹುಡ್ಕೋ ಕಾಲೋನಿಯ 7ನೇ ವಾರ್ಡ್‌ನ ಬಸ್ ನಿಲ್ದಾಣದ ಒಳಭಾಗದಲ್ಲಿ ಅಮವಾಸ್ಯೆ ರಾತ್ರಿ ದುಷ್ಕರ್ಮಿಗಳು ವಾಮಾಚಾರ ನಡೆಸಿದ್ದಾರೆ.

ಲಿಂಬೆ ಹಣ್ಣುಗಳು, ಕುಂಕುಮ, ಅರಿಶಿನ ಹಾಗೂ ಪೂಜಾ ಸಾಮಗ್ರಿಗಳು ಬಸ್ ನಿಲ್ದಾಣದ ಆವರಣದಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ಕೇವಲ ಬಸ್ ನಿಲ್ದಾಣ ಮಾತ್ರವಲ್ಲದೆ, ಬಡಾವಣೆಯ ಸುತ್ತಮುತ್ತಲಿನ ಹಲವು ಕಡೆಗಳಲ್ಲಿ ಇಂತಹ ಪೂಜೆ ಮಾಡಿದ ಕುರುಹುಗಳು ಪತ್ತೆಯಾಗಿವೆ.



ಇದೇ ಸ್ಥಳದಲ್ಲಿ ಇಂತಹ ಘಟನೆ ನಡೆಯುತ್ತಿರುವುದು ಇದು ಎರಡನೇ ಬಾರಿ. ಎರಡು ವರ್ಷಗಳ ಹಿಂದೆ ಕೂಡ ಇದೇ ಜಾಗದಲ್ಲಿ ವಾಮಾಚಾರ ನಡೆಸಲಾಗಿತ್ತು. ಈಗ ಮತ್ತೆ ಅದೇ ಪುನರಾವರ್ತನೆಯಾಗಿರುವುದು ಜನರಲ್ಲಿ ಯಾರೋ ಉದ್ದೇಶಪೂರ್ವಕವಾಗಿ ಈ ಕೃತ್ಯ ಎಸಗುತ್ತಿದ್ದಾರೆ. ಇಂತಹ ದುಷ್ಕೃತ್ಯ ಎಸಗುವ ದುಷ್ಕರ್ಮಿಗಳಿಗೆ ಕಠಿಣ ಶಿಕ್ಷೆ ನೀಡಬೇಕೆಂದು ಹುಡ್ಕೋ ಕಾಲೋನಿಯ ನಾಗರಿಕರು ಆಗ್ರಹಿಸುತ್ತಿದ್ದಾರೆ.

ತೋಟಗಾರಿಕೆ ಕ್ಷೇತ್ರಕ್ಕೆ ಬೆಂಕಿ: ಅಪಾರ ಹಾನಿ

ಮುಂಡರಗಿ: ತಾಲೂಕಿನ ತೋಟಗಾರಿಕೆ ಇಲಾಖೆಯ ವ್ಯಾಪ್ತಿಯ ಬ್ಯಾಲವಾಡಗಿ ಹತ್ತಿರ ಇರುವಂತಹ ತೋಟಗಾರಿಕೆ ಕ್ಷೇತ್ರಕ್ಕೆ (ಸಿಟ್ ಫಾರ್ಮ್) ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ತಗಲಿ ವೈವಿಧ್ಯಮಯ ತೋಟಗಾರಿಕೆ ಸಂಪತ್ತು ಸುಟ್ಟು ಕರಕಲಾಗಿದೆ.

ಮುಂಡರಗಿ-ಬೆಳ್ಳಟ್ಟಿ ರಸ್ತೆಯಲ್ಲಿರುವಂತಹ ತೋಟಗಾರಿಕೆ ಕ್ಷೇತ್ರವಾದ ಬ್ಯಾಲವಾಡಗಿ ಫಾರ್ಮ್‌ನಲ್ಲಿ ಟೆಂಗು,ಚಿಕ್ಕು, ಮಾವು ,ಜಂಬುನೀರಲೆ ಹೀಗೆ ಮುಂತಾದ ಮರಗಿಡಗಳು ಬೆಳೆದು ನಿಂತಿವೆ. ಆದರೆ, ಆಕಸ್ಮಾತಾಗಿ ಬೆಂಕಿ ತಗುಲಿ ಅನೇಕ ಮರಗಿಡಗಳು ಸುಟ್ಟು ಕರಕಲಾಗಿವೆ ಎಂದು ವರದಿ ತಿಳಿಸಿದೆ.

120ಕ್ಕೂ ಹೆಚ್ಚು ಚಿಕ್ಕು ಗಿಡಗಳು ಇಲ್ಲಿ ಬೆಳೆದು ನಿಂತಿದ್ದವು, ಅವುಗಳಲ್ಲಿ ಸುಮಾರು 70 ಗಿಡಗಳು ಸುಟ್ಟು ಕಲಕಲಾಗಿವೆ. ಉಳಿದಂತೆ ಜಂಬುನೀರಲೆ 4 ಗಿಡಗಳು ಸುಟ್ಟು ಹೋಗಿವೆ. ಬೆಂಕಿ ಕಾಣಿಸಿಕೊಂಡ ತಕ್ಷಣ ಅಗ್ನಿಶಾಮಕ ದಳ ಮತ್ತು ತೋಟಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕ ಎಂ.ಎಂ. ತಾಂಬೋಟಿ ಅವರು ತಮ್ಮ ಸಿಬ್ಬಂದಿಯೊಂದಿಗೆ ಆಗಮಿಸಿ ಬೆಂಕಿ ನಂದಿಸುವ ಕೆಲಸ ಮಾಡಿದ್ದರಿಂದ ಹೆಚ್ಚಿನ ಅನಾಹುತ ತಡೆದರು.ಇಲ್ಲಿಯ ಪಾಲಿಹೌಸ್‌ಗೆ ಯಾವುದೇ ಅನಾಹುತವಾಗಿಲ್ಲ ಎಂದು ಇಲಾಖೆಯ ಸಹಾಯಕ ನಿರ್ದೇಶಕ ಎಂ.ಎಂ.ತಾಂಬೋಟಿ ತಿಳಿಸಿದ್ದಾರೆ.



ಕಿರುಸುದ್ದಿ

ಮೂರ್ತಿ ಭಗ್ನ: ತನಿಖೆಗೆ ಆಗ್ರಹ



• ಮುಂಡರಗಿ: ತಾಲೂಕಿನ ಸಿಂಗಟಾಲೂರ ಗ್ರಾಮದ ಹೊರ ವಲಯದಲ್ಲಿರುವ ರಾಮಲಿಂಗೇಶ್ವರ ದೇವಸ್ಥಾನದ ಈಶ್ವರ ಹಾಗೂ ನಂದಿ ಮೂರ್ತಿ ಹಾಗೂ ಸಮೀಪದ ಹೊನ್ನತ್ತೆದೇವಿ ಮೂರ್ತಿಗಳನ್ನು ಭಗ್ನಗೊಳಿಸಿ ನಾಲ್ಕು ದಿನ ಕಳೆದರೂ ಕೃತ್ಯ ಎಸಗಿದವರನ್ನು ಇನ್ನೂ ಪತ್ತೆಹಚ್ಚಿಲ್ಲ, ಕೂಡಲೇ ತನಿಖೆ ಚುರುಕುಗೊಳಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಸಿಂಗಟಾಲೂರ ಶ್ರೀ ವೀರಭದ್ರೇಶ್ವರ ದೇವಸ್ಥಾನ ಟ್ರಸ್ಟ್ ಕಮಿಟಿ ಅಧ್ಯಕ್ಷ ಕರಬಸಪ್ಪ ಹಂಚಿನಾಳ ಒತ್ತಾಯಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಹಿಂದೂ ದೇವಸ್ಥಾನಗಳನ್ನೇ ಟಾರ್ಗೆಟ್ ಮಾಡಿ ಇಂತಹ ಕೃತ್ಯ ಎಸಗುವವರನ್ನು ತಕ್ಷಣವೇ ಪತ್ತೆಹಚ್ಚಿ ಬಂಧಿಸಿ, ಶಿಕ್ಷೆಗೆ ಗುರಿಪಡಿಸಿದರೆ ಮುಂದೆ ಈ ರೀತಿಯ ಕೃತ್ಯ ಎಸಗುವವರಿಗೆ ಹೆದರಿಕೆ ಹುಟ್ಟುತ್ತದೆ ಎಂದಿದ್ದಾರೆ.

ಅಭಿನಂದನಾ ಗ್ರಂಥ ಲೋಕಾರ್ಪಣೆ



• ನರೇಗಲ್ಲ: ಸ್ಥಳೀಯ ಹಿರಿಯ ವೈದ್ಯ ಡಾ. ಜಿ.ಕೆ. ಕಾಳೆಯವರ ಮತ್ತು ಭಾಗ್ಯವತಿ ಅನಿಲ ಕಾಳೆಯವರ 75ನೇ ವರ್ಷದ ಅಮೃತ ಮಹೋತ್ಸವದ ಸವಿನೆನಪಿಗಾಗಿ ಅಭಿನಂದನಾ ಗ್ರಂಥದ ಲೋಕಾರ್ಪಣೆ ಕಾರ್ಯಕ್ರಮವನ್ನು ಫೆ.22ರ ಬೆಳಗ್ಗೆ 9 ಗಂಟೆಗೆ ಸಮೀಪದ ಕೋಡಿಕೊಪ್ಪದ ವೀರಪ್ಪಜ್ಜನ ಮಠದಲ್ಲಿ ಆಯೋಜಿಸಲಾಗಿದೆ.
ಡಾ. ಜಿ. ಕೆ. ಕಾಳೆ ಅವರು ತ್ಯಾಗಮಯ ಜೀವನ ನಡೆಸುತ್ತಾ ವೈದ್ಯಕೀಯ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಮತ್ತು ಕೃಷಿಕ ಸಾಧನೆಗಳನ್ನು ಮುಂದಿನ ಪೀಳಿಗೆಗೆ ಪರಿಚಯವಾಗಲಿ ಎನ್ನುವ ಉದ್ದೇಶದೊಂದಿಗೆ ಕುಟುಂಬಸ್ಥರು, ಅಭಿಮಾನಿಗಳು ಹಾಗೂ ಹಿತೈಷಿಗಳು ಒಂದೆಡೆ ಸೇರಿ ಸಮಾಜ ಸಮರ್ಪಿತ ಎನ್ನುವ ಗ್ರಂಥದ ಬಿಡುಗಡೆ ಕಾರ್ಯಕ್ರಮ ನಡೆಯಲಿದೆ. ಹಾಲಕೆರೆ ಅನ್ನದಾನೇಶ್ವರ ಸಂಸ್ಥಾನ ಮಠದ ಮುಪ್ಪಿನ ಬಸವಲಿಂಗ ಸ್ವಾಮೀಜಿ, ರೋಣ ಗುಲಗಂಜಿ ಮಠದ ಗುರುಪಾದ ಸ್ವಾಮೀಜಿ, ನರೇಗಲ್ ಹಿರೇಮಠದ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ನಿಡಗುಂದಿಕೊಪ್ಪ ಶಾಖಾ ಶಿವಯೋಗ ಮಂದಿರದ ಅಭಿನವ ಚನ್ನಬಸವ ಸ್ವಾಮೀಜಿ ಹಾಗೂ ಸಿದ್ಧಲಿಂಗೇಶ್ವರ ನಿರಂತರ ದಾಸೋಹ ಮಠದ ಡಾ. ಶಿವಕುಮಾರ ಸ್ವಾಮೀಜಿಯವರು ಸಾನ್ನಿಧ್ಯ ವಹಿಸಲಿದ್ದಾರೆ. ಶಾಸಕ ಜಿ. ಎಸ್. ಪಾಟೀಲ ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್. ಕೆ. ಪಾಟೀಲ ಉದ್ಘಾಟಿಸಲಿದ್ದಾರೆ. ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ. ಆರ್. ಪಾಟೀಲ ಅಭಿನಂದನಾ ಗ್ರಂಥ ಲೋಕಾರ್ಪಣೆ ಮಾಡಲಿದ್ದಾರೆ. ಡಾ. ಜಿ. ಕೆ. ಕಾಳೆಯವರಿಗೆ ಎಲ್ಲ ಸಂಘಸಂಸ್ಥೆಗಳ ಮತ್ತು ಅಭಿಮಾನಿಗಳಿಂದ ಗೌರವಿಸಲಾಗುವುದು ಎಂದು ಕಾಳೆ ಪರಿವಾರದವರು ಮತ್ತು ಅಭಿಮಾನಿ ಬಳಗದವರು ತಿಳಿಸಿದ್ದಾರೆ.

ಕುಂದುಕೊರತೆ ಸಭೆ ನಾಳೆ

• ಗದಗ: ಫೆ.21ರಂದು ಬೆಳಗ್ಗೆ 11ಕ್ಕೆ ಜಿಲ್ಲಾ ಮಟ್ಟದ ಎಚ್.ಟಿ.ಗ್ರಾಹಕರ ಕುಂದುಕೊರತೆ ಸಭೆಯು ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯಲ್ಲಿ ಆಯೋಜಿಸಲಾಗಿದೆ. ಸಂಬಂಧಪಟ್ಟ ತಮ್ಮ ಕುಂದುಕೊರತೆಗಳನ್ನು ಲಿಖಿತವಾಗಿ ಅಥವಾ ಖುದ್ದು ಹಾಜರಾಗಿ ಸಲ್ಲಿಸಬಹುದಾಗಿದೆ ಎಂದು ಹೆಸ್ಕಾಂ ಪ್ರಕಟಣೆ ತಿಳಿಸಿದೆ.

ಸಮಯ ಪ್ರಜ್ಞೆಯಿಂದ ತಪ್ಪಿದ ದುರಂತ

• ರೋಣ: ತಾಲೂಕಿನ ಕೊತಬಾಳ ಗ್ರಾಮದ ಚಹಾ ಅಂಗಡಿಯಲ್ಲಿ ಸಿಲಿಂಡರ್‌ಗೆ ಹತ್ತಿಕೊಂಡಿದ್ದ ಬೆಂಕಿಯನ್ನು ಕರ್ತವ್ಯಕ್ಕೆ ತೆರಳುತ್ತಿದ್ದ ಅಗ್ನಿಶಾಮಕ ಸಿಬ್ಬಂದಿ ಸಹಾಯಕ್ಕೆ ಸ್ಥಳಕ್ಕೆ ಆಗಮಿಸಿ ಬೆಂಕಿ ನಂದಿಸುವ ಮೂಲಕ ಭಾರೀ ಪ್ರಮಾಣದ ಅನಾಹುತವನ್ನು ತಪ್ಪಿಸಿದ ಘಟನೆ ಬುಧವಾರ ಮಧ್ಯಾಹ್ನ ನಡೆದಿದೆ. ಗ್ರಾಮದ ಬಸ್ ನಿಲ್ದಾಣದ ಬಳಿಯಿರುವ ಚಹಾ ಅಂಗಡಿಯಲ್ಲಿದ್ದ ಸಿಲಿಂಡರ್‌ಗೆ ಏಕಾಏಕಿ ಬೆಂಕಿ ಹತ್ತಿಕೊಂಡಿದೆ. ಆಗ ಬಸ್‌ನಲ್ಲಿದ್ದ ಅಗ್ನಿಶಾಮಕ ಸಿಬ್ಬಂದಿ ಹೊಸಕೋಟಿ ಎಂಬುವವರು ತಕ್ಷಣ ಬಸ್‌ನಿಂದ ಇಳಿದು ಗೋಣಿಚೀಲದಿಂದ ಸಿಲಿಂಡರ್‌ಗೆ ಹೊತ್ತಿದ ಬೆಂಕಿಯನ್ನು ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ. ಸಿಬ್ಬಂದಿಯ ಸಮಯ ಪ್ರಜ್ಞೆಯಿಂದ ಭಾರೀ ಅನಾಹುತ ತಪ್ಪಿದಂತಾಗಿದೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜೆ ಶೇಂಗಾ	4712-7220
ಅಜವಾನ	8660-10907
ಅಲಸಂದಿಕಾಳು	6012-6809
ಕಡಲೆ	2569-5509
ಹವೀಜ	9519-9519
ಹೆಸರು	1400-6696
ಹುರಳಿ	3112-4077
ಜೋಳ	1099-4412
ಗೋವಿನಜೋಳ	1460-1780
ಸಾಸವಿ	6009-6009
ಕುಸಬಿ	4109-6182
ಸೂರ್ಯಕಾಂತಿ	6082-6532
ತೊಗರಿ	3309-5959
ಗೋಧಿ	2143-4537
ಬೆಲ್ಲ	5350-5350
ಶೇಂಗಾ ಬೀಜ	10000-10000



ನರಗುಂದ: ಪಂಚಗೃಹ ಗುಡ್ಡದ ಹಿರೇಮಠದ ನಮ್ಮೂರ ಶ್ರೀ ಸಿದ್ದೇಶ್ವರ ಜಾತ್ರಾ ಮಹೋತ್ಸವ ಹಾಗೂ ರಥೋತ್ಸವದ ನಿಮಿತ್ತ ಶ್ರೀಮಠದಲ್ಲಿ 30 ಮಕ್ಕಳಿಗೆ ಅಯ್ಯಾಚಾರ ಹಾಗೂ 10 ಜನರಿಗೆ ಲಿಂಗಧೀಕ್ಷೆಯನ್ನು ಸಿದ್ಧಲಿಂಗ ಸ್ವಾಮೀಜಿ ಸಾನ್ನಿಧ್ಯದಲ್ಲಿ ವೈದಿಕ ವೃಂದದವರಾದ ಶಂಕ್ರಯ್ಯ ಶಾಸ್ತ್ರೀಗಳು, ಮೃತ್ಯುಂಜಯ ಶಾಸ್ತ್ರೀಗಳು, ಕಪಲಯ್ಯ ಶಾಸ್ತ್ರೀಗಳು, ಈಶ್ವರ ಶಾಸ್ತ್ರೀಗಳು ಭೋದನೆ ಮಾಡಿದರು.

ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಪ್ರಾಶಸ್ತ್ಯ: ಲಮಾಣಿ

• ಲಕ್ಷ್ಮೇಶ್ವರ: ಪಟ್ಟಣದ ಸರ್ಕಾರಿ ಮಾದರಿ ಪ್ರಾಥಮಿಕ ಕನ್ನಡ ಹೆಣ್ಣು ಮಕ್ಕಳ ಶಾಲೆಯಲ್ಲಿ ದಕ್ಷಿಣ ಸಮೂಹ ಸಂಪನ್ಮೂಲ ಕೇಂದ್ರದ ವತಿಯಿಂದ ಎಫ್‌ಎಲ್‌ಎನ್ ಕಲಿಕಾ ಹಬ್ಬ ಜರುಗಿತು.

ಶಾಸಕ ಡಾ.ಚಂದ್ರು ಲಮಾಣಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಎಲ್ಲ ಮಕ್ಕಳಲ್ಲೂ ಪ್ರತಿಭೆ ಇರುತ್ತದೆ. ಅದನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸವನ್ನು ಶಿಕ್ಷಕರು ಪ್ರಾಮಾಣಿಕವಾಗಿ ಮಾಡಬೇಕು. ಕ್ಷೇತ್ರದಲ್ಲಿ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಪ್ರಾಶಸ್ತ್ಯ ನೀಡಲಾಗಿದೆ. ಹೊಸ ಕೊಠಡಿಗಳ ನಿರ್ಮಾಣ, ಹಳೆ ಕೊಠಡಿಗಳ ನವೀಕರಣ, ಶೌಚಾಲಯ ನಿರ್ಮಾಣ, ಕಂಪೌಂಡ್ ನಿರ್ಮಾಣಕ್ಕೆ ಆದ್ಯತೆ ನೀಡಲಾಗುವುದು ಎಂದರು. ಬಿಇಒ ಎನ್.ಎನ್. ನಾಯ ಮಾತನಾಡಿ, ಮಕ್ಕಳಲ್ಲಿನ ಪ್ರತಿಭೆಯನ್ನು ಹೊರ ಜಗತ್ತಿಗೆ ತೋರಿಸುವ ಮುಖ್ಯ ಉದ್ದೇಶವೇ ಕಲಿಕಾ ಹಬ್ಬವಾಗಿದೆ. ಏಕಪಾತ್ರಾಭಿನಯ, ಛದ್ಮವೇಷಗಳಂಥ ಸ್ಪರ್ಧೆಗಳನ್ನು ಹಮ್ಮಿಕೊಳ್ಳುವ ಮೂಲಕ ಮಕ್ಕಳ ಜಾಣ್ಮೆಯ ಪರೀಕ್ಷೆ ನಡೆಯುತ್ತದೆ ಎಂದರು. ಮುಖ್ಯ ಶಿಕ್ಷಕ ಬಿ.ಎಂ. ಕುಂಬಾರ ಪ್ರಾಸ್ತಾವಿಸಿದರು. ಎಸ್‌ಡಿಎಂಸಿ ಅಧ್ಯಕ್ಷೆ ನಿಖಿತಾ ಶೆರಖಾನೆ ಅಧ್ಯಕ್ಷತೆ ವಹಿಸಿದ್ದರು. ನಿವೃತ್ತ ಶಿಕ್ಷಕ ಪೂರ್ಣಾಜಿ ಖರಾಟೆ, ನಿವೃತ್ತ ನೌಕರರ ಸಂಘದ ತಾಲೂಕು ಘಟಕದ ಅಧ್ಯಕ್ಷ ಸಿ.ಆರ್.ಲಕ್ಕುಂಡಿಮಠ, ಎನ್.ಎ.ಹೇಮಗಿರಿಮಠ, ಐ.ಎಸ್. ಮಡಿವಾಳರ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಗುರುರಾಜ ಹವಳದ, ಆರ್.ಬಿ.ಪವಾರ, ಡಿ.ಎಚ್.ಪಾಟೀಲ, ಚಂದ್ರು ನೇಕಾರ, ಡಿ.ಡಿ.ಲಮಾಣಿ, ಎಫ್.ಎಸ್.ತಳವಾರ, ಬಿ.ಎನ್.ದೊಡ್ಡಮನಿ, ಲಕ್ಷ್ಮೇಶ್ವರ, ಬಸವರಾಜ ದನದಮನಿ, ಎಚ್.ಡಿ.ನಿಂಗರಡ್ಡಿ, ಶ್ರೀನಿವಾಸ ಮತ್ತೂರ, ಎನ್.ಎ.ಮುಲ್ಲಾ, ಸತೀಶ ಬೋಮಲೆ, ಎಲ್.ಎನ್.ನಚಿದೆಣ್ಣವರ, ಎನ್.ಎ.ನಧಾಫ್, ಬಸಣ್ಣ ಯತ್ನಳ್ಳಿ, ಫಕೀರೇಶ ತಳವಾರ, ಎಸ್.ಬಿ.ಲಕ್ಷ್ಮೇಶ್ವರ, ಗೀತಾ ಹಳ್ಳಾಳ ಮುಂತಾದವರಿದ್ದರು.



ಲಕ್ಷ್ಮೇಶ್ವರ: ಪಟ್ಟಣದ ಸರ್ಕಾರಿ ಮಾದರಿ ಪ್ರಾಥಮಿಕ ಕನ್ನಡ ಹೆಣ್ಣು ಮಕ್ಕಳ ಶಾಲೆಯಲ್ಲಿ ದಕ್ಷಿಣ ಸಮೂಹ ಸಂಪನ್ಮೂಲ ಕೇಂದ್ರದ ವತಿಯಿಂದ ಎಫ್‌ಎಲ್‌ಎನ್ ಕಲಿಕಾ ಹಬ್ಬ ಜರುಗಿತು. ಶಾಸಕ ಡಾ.ಚಂದ್ರು ಲಮಾಣಿ ಕಾರ್ಯಕ್ರಮ ಉದ್ಘಾಟಿಸಿದರು.

ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ | ಸಿ.ಎನ್. ಶ್ರೀಧರ್ ಅಭಿಮತ

ಛತ್ರಪತಿ ಶಿವಾಜಿ ಸ್ವಾಭಿಮಾನದ ಪ್ರತೀಕ



• ಗದಗ: ಛತ್ರಪತಿ ಶಿವಾಜಿ ಮಹಾರಾಜರು ಎಂದರೆ ಶಕ್ತಿಯ ಸಂಕೇತ ಹಾಗೂ ಸ್ವಾಭಿಮಾನದ ಪ್ರತೀಕ ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಹೇಳಿದರು.

ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಗುರುವಾರ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಛತ್ರಪತಿ ಶಿವಾಜಿಯವರು ಅಪ್ಪಟ ದೇಶಪ್ರೇಮಿಯಾಗಿದ್ದರು. ದೇಶ ಕಂಡ ಸಂಘಟನಾಕಾರ. ತಾಯಿ ಜೀಜಾಬಾಯಿಯ ಪ್ರೇರಣೆಯಿಂದ ಶಿವಾಜಿ ಮಹಾರಾಜರು ಸಂಸ್ಕಾರವಂತರಾಗಿ ಆದರ್ಶ ಜೀವನ ನಡೆಸಲು ಕಾರಣವಾಯಿತು. ಜೀಜಾಬಾಯಿಯವರ ಸ್ವರಾಜ್ಯದ ಕನಸು ನನಸು ಮಾಡಿದ ಅಪ್ರತಿಮ ವೀರ ಶಿವಾಜಿ ಮಹಾರಾಜರು. ಶಿವಾಜಿ ಮಹಾರಾಜರ ಜೀವನ ಮೌಲ್ಯಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಉಪನ್ಯಾಸಕ ಹಿರಿಯ ವಕೀಲ ಸುಧೀರಸಿಂಹ ಘೋರ್ಪಡೆ ಮಾತನಾಡಿ, ಶಿವಾಜಿಯವರ ತತ್ವಗಳು ಒಂದೇ ಸಮುದಾಯಕ್ಕೆ ಅಲ್ಲದೇ ಎಲ್ಲ ಸಮುದಾಯಕ್ಕೆ ಸೀಮಿತವಾಗಿವೆ. ಕ್ರಿ.ಶ 1630 ರಲ್ಲಿ ಶಿವನೇರಿ ದುರ್ಗದಲ್ಲಿ ಶಿವಾಜಿ ಮಹಾರಾಜರ ಜನನವಾಗುತ್ತದೆ. ಪರಕೀಯರ ಆಳ್ವಿಕೆಯಲ್ಲಿ ಇರಬಾರದು ಎಂಬುದು ಜೀಜಾಮಾತೆಯು ಬಯಕೆಯಾಗಿತ್ತು ಎಂದರು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ್ ಬಬರ್ಚಿ, ಅಪರ ಜಿಲ್ಲಾಧಿಕಾರಿ ಡಾ.ದುರಗೇಶ ಕೆ.ಆರ್., ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಸಿ.ಆರ್.ಮುಂಡರಗಿ. ಬಸವರಾಜ ಜಕ್ಕಲಿ, ಸುರೇಶ ಬೇಂದ್ರೆ, ಕೃಷ್ಣಾಜಿ ತುಕ್ಕಪ್ಪನವರ, ಮುರಿಗೆಪ್ಪ ಶೆಟ್ಟರ್, ಅಜಿತ ಘೋರ್ಪಡೆ, ಯಲ್ಲಪ್ಪ ಬೇಂದ್ರೆ ಇದ್ದರು.

ಇದೇ ಸಂದರ್ಭದಲ್ಲಿ ಎಸ್.ಎಸ್.ಎಲ್.ಸಿ, ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಮತ್ತು ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಮುದಾಯದ ಸಾಧಕರಿಗೆ ಸನ್ಮಾನಿಸಲಾಯಿತು.

ಶಿವಾಜಿ ಮಹಾರಾಜರ ಮೂರ್ತಿ ಮೆರವಣಿಗೆ

• ಗದಗ: ಛತ್ರಪತಿ ಶಿವಾಜಿ ಜಯಂತ್ಯುತ್ಸವದ ಅಂಗವಾಗಿ ಶ್ರೀರಾಮ ಸೇನಾ ಹಾಗೂ ವಿವಿಧ ಸಂಘಟನೆಯ ಜತೆಗೂಡಿ ಗುರುವಾರ ಆಯೋಜಿಸಿದ್ದ ಶಿವಾಜಿ ಮಹಾರಾಜರ ಮೂರ್ತಿಗಳ ಬೃಹತ್ ಮೆರವಣಿಗೆ ಅದ್ದೂರಿಯಾಗಿ ಜರುಗಿತು.

ಮೆರವಣಿಗೆಯಲ್ಲಿ ಈ ಬಾರಿ 17 ಅಡಿ ಎತ್ತರದ ಪ್ರಭು ಶ್ರೀರಾಮ, ಸಹಸ್ರಾರ್ಜುನ, ಮಹರ್ಷಿ ವಾಲ್ಮೀಕಿ, ವೀರಮಾತೆ ಕಿತ್ತೂರ ರಾಣಿ ಚನ್ನಮ್ಮ, ಪಾಡುರಂಗ ವಿಠ್ಠಲ ಸೇರಿದಂತೆ ಮೂರ್ತಿಗಳ ಮೆರವಣಿಗೆ ಮಾಡಿದ್ದು ವಿಶೇಷವಾಗಿತ್ತು. ಒಕ್ಕಲಗೇರಿ ಓಣಿಯ ರಾಚೋಟೇಶ್ವರ ದೇವಸ್ಥಾನದಿಂದ ಪ್ರಾರಂಭವಾದ ಶಿವಾಜಿ ಜಯಂತಿಯ ಅದ್ದೂರಿ ಮೆರವಣಿಗೆಗೆ ಚಾಲನೆ ನೀಡಲಾಯಿತು. ಕೊರಳಲ್ಲಿ ಕೇಸರಿ ಶಾಲು, ಹಣೆಯಲ್ಲಿ ಕುಂಕುಮ ಧರಿಸಿದ್ದ ಯುವಪಡೆ ಕಿವಿಗಡಚಿಕ್ಕುವ ಡಿಜೆ ಸದ್ದಿಗೆ ಹೆಜ್ಜೆ ಹಾಕುತ್ತ, ಶಿವಾಜಿ, ಶ್ರೀರಾಮ್ ಘೋಷಣೆ ಕೂಗಿದರು. ಎಲ್ಲೆಲ್ಲೂ ಶಿವಾಜಿ, ಶ್ರೀರಾಮನ ಧ್ವಜಗಳು ರಾರಾಜಿದವು. ಮೆರವಣಿಗೆಗೆ ಭಾರೀ ಪ್ರಮಾಣದ ಬೆಂಬಲ ವ್ಯಕ್ತವಾಗಿದ್ದಲ್ಲದೇ ಜಿಲ್ಲೆ ಸೇರಿದಂತೆ ಅಕ್ಕ ಪಕ್ಕದ ಜಿಲ್ಲೆಯಿಂದ ಅಪಾರ ಸಂಖ್ಯೆಯ ಹಿಂದು ಯುವಕರ ಪಡೆಯೇ ಹಾಜರಾಗಿತ್ತು. ಅಲ್ಲ ಅಲ್ಲಿ ಹಿಂದು ಪರ ಸಂಘಟನೆಗಳಿಂದ ಪ್ರಸಾದ ಸೇವೆ ಜರುಗಿತು.



ವಿದ್ಯಾಭ್ಯಾಸಕ್ಕೆ ಹೆಚ್ಚಿನ ಒತ್ತು ನೀಡಿ: ಲಮಾಣಿ



• ಲಕ್ಷ್ಮೇಶ್ವರ: ಸಾಧನೆ ಎನ್ನುವದು ಸಾಧಕನ ಸ್ವತ್ತಾಗಿದೆ. ಆದರೆ ಸಾಧನೆ ಮಾಡುವ ಛಲ ವಿದ್ಯಾರ್ಥಿಗಳಲ್ಲಿ ಬರಬೇಕು, ಅದಕ್ಕಾಗಿ ಪ್ರತಿಯೊಬ್ಬ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಒತ್ತು ನೀಡಬೇಕು. ಈ ಮೂಲಕ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ತಾಲೂಕಿಗೆ ಮತ್ತು ಜಿಲ್ಲೆಯಲ್ಲಿ ಉತ್ತಮ ಸಾಧನೆ ಮಾಡುವ ನಿಟ್ಟಿನಲ್ಲಿ ಮುಂದಾಗಬೇಕು ಎಂದು ಶಾಸಕ ಡಾ.ಚಂದ್ರು ಲಮಾಣಿ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಅವರು ಪಟ್ಟಣದ ಕರೆಗೋರಿ ಸಮೀಪದಲ್ಲಿರುವ ಜ.ವೀರಗಂಗಾಧರ ಸರ್ಕಾರಿ ಪ್ರೌಢಶಾಲೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಮತ್ತು ಜ.ವೀರಗಂಗಾಧರ ಸರಕಾರಿ ಪ್ರೌಢಶಾಲೆಯ ಸಹಯೋಗದಲ್ಲಿ ಎಸ್‌ಎಸ್‌ಎಲ್‌ಸಿ ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳಿಗೆ ಎರಡು ದಿನಗಳ ಕಾಲ ಹಮ್ಮಿಕೊಳ್ಳಲಾಗಿರುವ ಪ್ರೇರಣಾ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ಈ ಬಾರಿ ಜಿಲ್ಲೆಗೆ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಉತ್ತಮ ಸಾಧನೆ ಮಾಡುವ ನಿಟ್ಟಿನಲ್ಲಿ ಇಲಾಖೆ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಿರುವುದು ವಿದ್ಯಾರ್ಥಿಗಳ ಸಾಧನೆಯ ಉದ್ದೇಶದಿಂದ ಎನ್ನುವದನ್ನು ವಿದ್ಯಾರ್ಥಿಗಳು ಅರ್ಥ ಮಾಡಿಕೊಳ್ಳಬೇಕು. ವಿದ್ಯಾರ್ಥಿಗಳು ಶ್ರಮಪಟ್ಟು ಓದುವ, ನಿರಂತರ ಅಧ್ಯಯನ ಮೂಲಕ ಸಾಮಾನ್ಯರ ಗುಂಪಿನಿಂದ ಸಾಧಕರ ಗುಂಪಿಗೆ ಸೇರಬೇಕು, ಏಕಾಗ್ರತೆ ಮತ್ತು ಯೋಜನಾಬದ್ಧವಾಗಿ ತಯಾರಿ ಮಾಡಿಕೊಳ್ಳಬೇಕು. ಎಸ್ಸೆಸ್ಸೆಲ್ಸಿ ಪರೀಕ್ಷಾ ಸಿದ್ಧತೆಗೆ ಕ್ಷಣಕಾಲವು ವ್ಯಯ ಮಾಡದೆ ಉನ್ನತ ಗುರಿಯೊಂದಿಗೆ ಸಾಗಿದರೆ ಸಾಧನೆ ಸಾಧ್ಯ. ಕ್ಷೇತ್ರದಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಅತಿ ಹೆಚ್ಚು ಅಂಕಗಳಿಸುವ ವಿದ್ಯಾರ್ಥಿಗಳಿಗೆ ಉತ್ತಮ ನಗದು ಬಹುಮಾನ ನೀಡುವ ಮೂಲಕ ಪ್ರೋತ್ಸಾಹ ನೀಡಲಾಗುತ್ತಿದ್ದು, ಬಹುಮಾನದ ಮೊತ್ತವೇ ಅಧಿಕವಾಗಿರಲಿದ್ದು ಇದು ನಿಮ್ಮ ಮುಂದಿನ ವಿದ್ಯಾಭ್ಯಾಸಕ್ಕೆ ನೆರವು ನೀಡಲಿದೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಎಚ್.ಎನ್.ನಾಯಕ್ ಮಾತನಾಡಿ, ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಎಸ್.ಎಸ್.ಎಲ್.ಸಿ.ಪರೀಕ್ಷಾ ಫಲಿತಾಂಶ ಸುಧಾರಣೆಗಾಗಿ ಹಲವು ಕ್ರಿಯಾಯೋಜನೆ ರೂಪಿಸಿಕೊಳ್ಳಲಾಗಿದೆ ಎಂದರು. ಎಸ್‌ಡಿಎಂಎಸಿ ಅಧ್ಯಕ್ಷ ಈರಪ್ಪ ಹಾದಿಮನಿ, ಎಸ್.ಕೆ.ಹವಾಲ್ದಾರ, ಮುಖ್ಯೋಪಾಧ್ಯಾಯ ಬಿ.ಸಿ.ಪಟ್ಟೇದ, ಆನಂದಕುಮಾರ ಮುಳಗುಂದ, ಹೆಚ್.ಎಂ.ಗುತ್ತಲ್, ಉಮೇಶ ಹುಚ್ಚಯ್ಯನವರಮಠ, ಈಶ್ವರ ಮೇಡ್ಲೇರಿ, ಎಸ್.ಡಿ.ಲಮಾಣಿ, ಬಿ.ಎಸ್. ಹರ್ಲಾಪೂರ, ಎ.ಎಂ.ಅಕ್ಕಿ, ಉಮೇಶ ನೇಕಾರ, ಬಸವರಾಜ ಯರಗುಪ್ಪಿ, ಚಂದ್ರು ಮಾಗಡಿ, ಎಸ್.ಎಚ್. ಪೂಜಾರ, ಎ.ಎಂ. ಕುಂಬಾರ, ಪಿ.ಎಸ್. ಪುರಾಣಿಕಮಠ ಜೆ.ಡಿ.ಲಮಾಣಿ ಮುಂತಾದವರಿದ್ದರು.

ಪಾಲಕರು ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಲಿ

• ಮುಂಡರಗಿ: ಧಾರ್ಮಿಕ ಕಾರ್ಯಕ್ರಮಗಳಿಗೆ ಭಾಗವಹಿಸುವದರ ಮೂಲಕ ಸನಾತನ ಧರ್ಮ ರಕ್ಷಣೆಗಾಗಿ ಪಾಲಕರು ತಮ್ಮ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಬೇಕು ಎಂದು ಜಗದ್ಗುರು ನಾಡೋಜ ಡಾ. ಅನ್ನದಾನೀಶ್ವರ ಮಹಾಶಿವಯೋಗಿಗಳು ಹೇಳಿದರು.

ಅವರು ತಾಲೂಕಿನ ಕಲಕೇರಿ-ವಿರುಪಾಪುರದ ಗುರು ಮುದುಕೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಧರ್ಮಸಭೆಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ನಮ್ಮ ಪೂರ್ವಜರು ಆಚರಿಸುತ್ತಾ ಬಂದಿರುವ ಜಾತ್ರೆ ಹಾಗೂ ಹಬ್ಬ, ಹರಿದಿನಗಳಿಗೆ ತುಂಬಾ ವಿಶಾಲವಾದ ಅರ್ಥವಿದೆ. ಆದರೆ ಇತ್ತೀಚೆಗೆ ಜಾತ್ರೆಗಳು ಕೇವಲ ಮೋಜು, ಮಸ್ತಿಗೆ ಮೀಸಲಾಗುತ್ತಿರುವುದು ತುಂಬಾ ದುರ್ದೈವದ ಸಂಗತಿಯಾಗಿದೆ ಎಂದರು.

ಮೈಸೂರಿನ ಡಾ.ಸುಜ್ಞಾನದೇವ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಸಕಲ ವಿದ್ಯಾ ಪಾರಂಗತರಾಗಿರುವ ಹಾಗೂ ಸಕಲ ಸದ್ಗುಣ ಸಂಪನ್ನರಾಗಿರುವ ಶಿವಕುಮಾರ ದೇವರು ಮುದುಕೇಶ್ವರ ಮಠದ ಉತ್ತರಾಧಿಕಾರಿಯಾಗಿರುವುದು ಎಲ್ಲರಲ್ಲಿ ಹರ್ಷ ಮೂಡಿಸಿದೆ. ಇಂತಹ ಸರಳ ವ್ಯಕ್ತಿಯನ್ನು ಶ್ರೀಮಠಕ್ಕೆ ನಿಯೋಜಿಸುವ ಮೂಲಕ ಮುದುಕೇಶ್ವರ ಶಿವಾಚಾರ್ಯ ಸ್ವಾಮೀಜಿ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದಾರೆ ಎಂದರು. ಶಿಕ್ಷಣ ಇಲಾಖೆಯ ಬಿ.ಆರ್.ಸಿ. ಹನುಮರಡ್ಡಿ ಇಟಗಿ ಮಾತನಾಡಿ, ಮಠ, ಮಾನ್ಯಗಳಲ್ಲಿ, ಗುಡಿ, ಗುಂಡಾರಗಳಲ್ಲಿ ನಿಯಮಿತವಾಗಿ ಪೂಜೆ, ಪುನಸ್ಕಾರ, ದಾನ, ಧರ್ಮ ಮೊದಲಾದವುಗಳು ನಡೆಯುತ್ತಿರುತ್ತವೆ. ಈ ಕಾರಣದಲ್ಲಿ ನಮ್ಮ ಧಾರ್ಮಿಕ ಕೇಂದ್ರಗಳಲ್ಲಿ ಸದಾ ಸಕಾರಾತ್ಮಕ ಶಕ್ತಿ ಸಂಚರಿಸುತ್ತಿರುತ್ತದೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಗುರು ಮುದುಕೇಶ್ವರ ಶಿವಾಚಾರ್ಯ ಸ್ವಾಮೀಜಿ ವಹಿಸಿದ್ದರು. ದಾಸೋಹ ಸೇವೆ ವಹಿಸಿಕೊಂಡಿದ್ದ ಶಿದ್ದನಗೌಡ ಪಾಟೀಲ ಹಾಗೂ ಪ್ರಭುಗೌಡ ತಲೆಗೌಡರ ಕುಟುಂಬ ವರ್ಗದವರನ್ನು ಹಾಗೂ ರಥಾಲಂಕಾರ ಸೇವೆ ಮಾಡಿದ ಈಶ್ವರಗೌಡ ಪಾಟೀಲ, ಕುಮಾರಸ್ವಾಮಿ ಹಿರೇಮಠ ಮುಂತಾದವರುನ್ನು ಸನ್ಮಾನಿಸಲಾಯಿತು. ಶ್ರೀಮಠದ ನಿಯೋಜಿತ ಪೀಠಾಧಿಪತಿ ಶಿವಕುಮಾರ ದೇವರು, ಕೆಸಿಸಿ ಬ್ಯಾಂಕ್ ಅಧ್ಯಕ್ಷ ಶಿವಕುಮಾರಗೌಡ ಪಾಟೀಲ, ಸತ್ಯಣ್ಣ ದೇಸಾಯಿ, ಎಸ್.ಎನ್.ಡೊಣಿ, ಶಿದ್ದನಗೌಡ ಪಾಟೀಲ, ಪಿ.ಎಂ.ಪಾಟೀಲ, ಮಹೇಶ ದ್ರಾಕ್ಷಿ, ಅಪ್ಪಣ್ಣ ಮೇಟಿ, ಬಸವರಾಜ ಕೊಪ್ಪಣ್ಣವರ, ಮುತ್ತನಗೌಡ ಪಾಟೀಲ, ಬಿ.ಎಸ್.ರಡ್ಡೇರ, ಎಸ್.ಎನ್.ದೇವರಗೂಳಿ, ಪ್ರಕಾಶ ತಿಪ್ಪಾಪುರ, ಯಂಕಪ್ಪ ಹುಳಕಣ್ಣವರ ಉಪಸ್ಥಿತರಿದ್ದರು. ಜಯಣ್ಣ ದ್ರಾಕ್ಷಿ ಸ್ವಾಗತಿಸಿದರು. ಯಂಕಪ್ಪ ಯಕ್ಲಾಸಪುರ ನಿರೂಪಿಸಿದರು.





ಲಕ್ಷ್ಮೇಶ್ವರ: ಇಲ್ಲಿನ ಸರ್ಕಾರಿ ಮಾದರಿ ಪ್ರಾಥಮಿಕ ಕನ್ನಡ ಹೆಣ್ಣು ಮಕ್ಕಳ ಶಾಲೆಯಲ್ಲಿ ದಕ್ಷಿಣ ಸಮೂಹ ಸಂಪನ್ಮೂಲ ಕೇಂದ್ರದ ವತಿಯಿಂದ ಬುಧವಾರ ನಡೆದ ಎಫ್‌ಎಲ್‌ಎನ್ ಕಲಿಕಾ ಹಬ್ಬದಲ್ಲಿ ಲಕ್ಷ್ಮೇಶ್ವರ ಸರ್ಕಾರಿ ಕಿರಿಯ ಪ್ರಾಥಮಿಕ ರಂಬಾಪುರಿ ನಗರ ತರಗತಿ ವಿದ್ಯಾರ್ಥಿನಿ ತನ್ವಿ 3ನೇ ವಿಶೇಷ ವೇಷ ಭೂಷಣದಲ್ಲಿ ಗಮನ ಸೆಳೆದಳು.

ಛತ್ರಪತಿ ಶಿವಾಜಿ ಮಹಾರಾಜರ ಸ್ಮರಿಸಿ



• ರೋಣ: ಛತ್ರಪತಿ ಶಿವಾಜಿ ಮಹಾರಾಜರು ಅಪ್ಪಟ ದೇಶ ಭಕ್ತರಾಗಿದ್ದರು. ಶೂರರು ಸಹ ಆಗಿದ್ದರು. ಛತ್ರಪತಿ ಶಿವಾಜಿ ಮಹಾರಾಜರ ಸ್ಮರಣೆ ಇಂದು ಅವಶ್ಯಕವಾಗಿದೆ ಎಂದು ಉಪತಹಶೀಲ್ದಾರ್ ಜೆ.ಟಿ.ಕೊಪ್ಪದ ಹೇಳಿದರು.

ಅವರು ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ತಾಲೂಕಾಡಳಿತದಿಂದ ಜರುಗಿದ ಛತ್ರಪತಿ ಶಿವಾಜಿ ಮಹಾರಾಜ ಜಯಂತ್ಯುತ್ಸವ ನಿಮಿತ್ತ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿ, ಶಿವಾಜಿ ಮಹಾರಾಜರು ದೇಶ ರಕ್ಷಣೆಗಾಗಿ ತಮ್ಮನ್ನು ತಾವುಗಳು ತೊಡಗಿಸಿಕೊಂಡಿದ್ದರು .ಶಿವಾಜಿ ಮಹಾರಾಜರ ಹೆಸರು ಕೇಳಿದರೆ ವೈರಿಗಳು ನಡುಗುತ್ತಿದ್ದರು. ಶಿವಾಜಿ ಮಹಾರಾಜರು ಆಡಳಿತ ವ್ಯವಸ್ಥೆಯ ನೈಪುಣ್ಯತೆ ಹೊಂದಿದ್ದರು. ಅವರು ತಮ್ಮ ನೆಲದಲ್ಲಿರುವ ಸರ್ವ ಜನಾಂಗವನ್ನು ಅತ್ಯಂತ ಪ್ರೀತಿ ವಿಶ್ವಾಸದಿಂದ ಕಾಣುತ್ತಿದ್ದರು ಎಂದರು. ಉಪತಹಶೀಲ್ದಾರ್ ರೇಣುಕಾ ನಿಲೂಗಲ್ಲ, ಆಹಾರ ವಿಭಾದ ಸುವರ್ಣ ಜುಮ್ಮನಕಟ್ಟಿ, ಸಂಗೀತಾ ತಳವಾರ, ಪರ್ವಿನ ಮುಲ್ಲಾ, ಎಸ್.ಎಲ್.ದಾಸಪ್ಪನವರ ಸೇರಿದಂತೆ ಇತರರಿದ್ದರು.

ಬಜೆಟ್‌ನಲ್ಲಿ ₹200 ಕೋಟಿ ಮೀಸಲಿಡಿ

• ಗದಗ: ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಸರ್ವತೋಮುಖ ಅಭಿವೃದ್ಧಿಗಾಗಿ ಕನಿಷ್ಠ 220 ಕೋಟಿಗಳ ಪ್ರತ್ಯೇಕ ಬಜೆಟ್‌ನಲ್ಲಿ ಮೀಸಲಿಡಬೇಕು ಎಂದು ಜಿಲ್ಲಾ ಸದಸ್ಯೆ ಪುಷ್ಪ ಬಿಜಾಪುರ್ ಹೇಳಿದರು.

ನಗರದ ಪತ್ರಿಕಾಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದಲ್ಲಿ ಅಧಿಕಾರಕ್ಕೆ ಬರುವ ಮೊದಲು ಕಾಂಗ್ರೆಸ್ ಸರ್ಕಾರವು ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ವಾರ್ಷಿಕ 250 ಕೋಟಿಯನ್ನು ಮೀಸಲಿಡುವುದಾಗಿ ಘೋಷಿಸಿತ್ತು. ವಾಗ್ದಾನ ಮಾಡಿದ ಸರ್ಕಾರ ಈಗ ತನ್ನ ಮಾತು ಉಳಿಸಿಕೊಳ್ಳುವ ಹೊಣೆಗಾರಿಕೆಯಿಂದ ಹಿಂದೆ ಸರಿಯಬಾರದು. ಮಾರ್ಚ್ ಮೊದಲ ವಾರದಲ್ಲಿ ಆರಂಭವಾಗಲಿರುವ ಬಜೆಟ್ ಅಧಿವೇಶನದಲ್ಲಿ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರಿಗಾಗಿ ಪ್ರತ್ಯೇಕವಾಗಿ ಮತ್ತು ಕಡ್ಡಾಯವಾಗಿ ಅನುದಾನ ಘೋಷಿಸಲೇಬೇಕು ಎಂದರು.

ಕರ್ನಾಟಕ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವನ್ನು ತಕ್ಷಣ ಸ್ಥಾಪಿಸಬೇಕು. ವಸತಿ, ಹಾಸ್ಟೆಲ್ ಮತ್ತು ಶಾರ್ಟ್ ಸ್ಟೇ ಹೋಮ್‌ಗಳನ್ನು ತಕ್ಷಣ ಒದಗಿಸಬೇಕು. ಪ್ರತಿ ವರ್ಷ ಕನಿಷ್ಠ 500 ಮನೆಗಳನ್ನು ಹಂಚಿಕೆ ಮಾಡಬೇಕು. ಜೀವನೋಪಾಯ, ಆಹಾರ ಮತ್ತು ಸಾಮಾಜಿಕ ಭದ್ರತೆ ನೀಡಬೇಕು. ಕೃಷಿಯಲ್ಲಿ ಆಸಕಿ ಹೊಂದಿರುವ ಪ್ರತಿ ವ್ಯಕ್ತಿಗೆ 2 ಎಕರೆ ಕೃಷಿಯೋಗ್ಯ ಭೂಮಿಯನ್ನು ನೀಡಬೇಕು. ಗೋಮಾಳ ಜಮೀನನ್ನು ಗುತ್ತಿಗೆ ಆಧಾರದಲ್ಲಿ ಹಂಚಿಕೆ ಮಾಡಬೇಕು. ಬಡ್ಡಿರಹಿತಸಾಲಗಳನ್ನು ಒದಗಿಸಬೇಕು. ಶೇಕಡಾ 1 ಮೀಸಲಾತಿಯನ್ನು ಕೇವಲ ಘೋಷಣೆಯಾಗಿ ಉಳಿಸದೇ, ಸರ್ಕಾರಿ ಉದ್ಯೋಗಗಳಿಗೆ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಮತ್ತು ಕೋಚಿಂಗ್ ನೀಡಬೇಕು ಎಂದರು.

ಉಚಿತ ಲಿಂಗತ್ವ ದೃಢೀಕರಣ ಶಸ್ತ್ರಚಿಕಿತ್ಸೆಗಳನ್ನು ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಜಾರಿಗೊಳಿಸಬೇಕು. ಶಸ್ತ್ರಚಿಕಿತ್ಸೆಯ ನಂತರ ಕನಿಷ್ಠ 6 ತಿಂಗಳು ಪ್ರತಿ ತಿಂಗಳು 5,000 ಪುನರ್ವಸತಿ ನೆರವು ನೀಡಬೇಕು. ಪ್ರತಿಯೊಂದು ಜಿಲ್ಲೆಯಲ್ಲಿ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರಿಗಾಗಿ ಕನಿಷ್ಠ 1 ವಿಶೇಷ ಆರೋಗ್ಯ ಕೇಂದ್ರ ತೆರೆಯಬೇಕು ಎಂದು ಒತ್ತಾಯಿಸಿದರು. ಪತ್ರಿಕಾಗೋಷ್ಠಿಯಲ್ಲಿ ಆದಿತ್ಯ, ಆರಾಧನೆ, ಮಮತಾ ಹೊಸಮನಿ ಸೇರಿದಂತೆ ಇತರರಿದ್ದರು.



ಪರಿಸರ ರಕ್ಷಣೆಗೆ ಸರ್ವರೂ ಪಣತೊಡಲಿ



• ಗಜೇಂದ್ರಗಡ: ನಮ್ಮ ಪೂರ್ವಜರು ಪರಿಸರದ ಬಗ್ಗೆ ಹೆಚ್ಚು ಕಾಳಜಿ ವಹಿಸಿದ ನಿಮಿತ್ತ ನಾವೆಲ್ಲರೂ ಆರೋಗ್ಯದಾಯಕವಾಗಿದ್ದೇವೆ. ಉತ್ತಮ ವಾತಾವರಣ ಲಭಿಸಿದೆ. ಇಂತಹ ಉತ್ತಮ ವಾತಾವರಣ ನಮ್ಮ ಮುಂದಿನ ಜನಾಂಗಕ್ಕೂ ಉಳಿಸಿಕೊಂಡು ಹೋಗಬೇಕಾದ ಹೊಣೆ ನಮ್ಮ ಮೇಲಿದೆ ಎಂದು ವಿಘ್ನೇಶ್ವರ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಡಾ.ಬಿ.ಕೆ. ಮಾದಿ ಹೇಳಿದರು.

ನಗರದ ಸರ್ಕಾರಿ ಪ್ರಾಥಮಿಕ ಶಾಲೆ ನಂಬರ್ 4ರಲ್ಲಿ ಹಮ್ಮಿಕೊಂಡಿದ್ದ ಇಕೋ ಕ್ಲಬ್‌ನಲ್ಲಿ ಪರಿಸರ ಕುರಿತು ಉಪನ್ಯಾಸ ನೀಡಿ, ವೃಕ್ಷ ಮಾತೆ ಸಾಲುಮರದ ತಿಮ್ಮಕ್ಕರಂತೆ ನಮ್ಮ ಭಾಗದಲ್ಲಿಯೂ ಬಸರಿ ಗಿಡದ ವೀರಪ್ಪನವರು ಬೇನಗಿಡದ ಬಸಪ್ಪನವರು ಸಂಕ ನೂರು ಕ್ರಾಸ್‌ನಿಂದ ಗದಗ ರಸ್ತೆಯ ಸುತ್ತಮುತ್ತ ಬದಾಮಿಯವರೆಗೂ ಅನೇಕ ಸಸಿಗಳನ್ನು ನೆಟ್ಟು ಮರವಾಗಿ ಬೆಳೆಸಿದ್ದರು. ರಸ್ತೆ ಅಗಲೀಕರಣದ ನಿಮಿತ್ತ ಬಹಳಷ್ಟು ಮರಗಳು ಕಣ್ಮರೆಯಾಗಿ ಆ ಭಾಗದಲ್ಲಿ ಕೆಲವು ಗಿಡಗಳು ಅವರ ಕಾರ್ಯಕ್ಕೆ ಸಾಕ್ಷಿ ಎಂಬಂತೆ ನಿಂತಿವೆ ಎಂದರು.

ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಈರಣ್ಣ ಸಂಕನೂರು ಉದ್ಘಾಟಿಸಿದರು. ಶಾಲೆಯ ಹಿರಿಯ ಗುರುಮಾತೆ ಶ್ರೀಮತಿ ಕಂದಂಪುರ ಮಾತನಾಡಿದರು. ಮುಖ್ಯೋಪಾಧ್ಯಾಯ ಎಸ್. ಬಿ.ನಾಯಕ್ ಅಧ್ಯಕ್ಷತೆ ವಹಿಸಿದ್ದರು. ಗುರು ಮಾತೆ ಎಂ.ಎಸ್. ಹೊನವಾಡ ಸ್ವಾಗತಿಸಿದರು. ಎಸ್.ಸಿ ಪಾಟೀಲ್ ವಂದಿಸಿದರು.

ಹಿಂದೂ ಸಂಸ್ಕೃತಿ ರಕ್ಷಕ ಛತ್ರಪತಿ ಶಿವಾಜಿ

• ಶಿರಹಟ್ಟಿ: ಛತ್ರಪತಿ ಶಿವಾಜಿ ಮಹಾರಾಜರು ಹಿಂದೂ ಧರ್ಮ, ಸಂಸ್ಕೃತಿ ರಕ್ಷಣೆಯ ಜೊತೆ ರಾಷ್ಟ್ರಪ್ರೇಮ ಮೈಗೂಡಿಸಿಕೊಂಡು, ಹಿಂದೂ ಸಾಮ್ರಾಜ್ಯ ಸ್ಥಾಪಿಸಿ, ಸಾಮಾಜಿಕ ಹಾಗೂ ನ್ಯಾಯಸಮ್ಮತ ಕೊಡುಗೆಗಳನ್ನು ಇಡೀ ಸಮಾಜಕ್ಕೆ ನೀಡಿದ್ದಾರೆ ಎಂದು ಗದಗ ಉಪವಿಭಾಗಾಧಿಕಾರಿ ಎಂ. ಗಂಗಪ್ಪ ಹೇಳಿದರು.

ಸ್ಥಳೀಯ ತಹಶೀಲ್ದಾರ್ ಕಾರ್ಯಾಲಯದಲ್ಲಿ ಗುರುವಾರ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದರು. ಛತ್ರಪತಿ ಶಿವಾಜಿಯವರು ಹುಟ್ಟು ಹೋರಾಟಗಾರರಾಗಿದ್ದು, ಅವರಲ್ಲಿ ಧೈರ್ಯ, ಶೌರ್ಯ, ನಾಯಕತ್ವದ ಗುಣ, ದೇಶಪ್ರೇಮ ನಿಜಕ್ಕೂ ಮೆಚ್ಚುವಂತಹದು ಎಂದರು.

ತಹಶೀಲ್ದಾರ್ ಕೆ. ರಾಘವೇಂದ್ರ ರಾವ್ ಮಾತನಾಡಿ, ಛತ್ರಪತಿ ಶಿವಾಜಿ ಮಹಾರಾಜರು ಅಪ್ಪಟ ದೇಶಭಕ್ತ, ಮಹಾಪರಾಕ್ರಮಿ, ದೈವಿ ಪುರುಷ, ಪರಕೀಯರ ಆಡಳಿತ ಕಿತ್ತೊಗೆದು ಸ್ವರಾಜ್ಯ ಸ್ಥಾಪಿಸಿದ ಛಕ್ರವರ್ತಿ. ಇಂತಹ ಮಹಾತ್ಮರನ್ನು ಯಾವುದೇ ಒಂದು ಜಾತಿ ಜನಾಂಗಕ್ಕೆ ಸೀಮಿತಗೊಳ್ಳಸಬಾರದು. ಅವರ ತತ್ವ ಸಿದ್ಧಾಂತ ರಾಷ್ಟ್ರಪ್ರೇಮವನ್ನು ಪ್ರತಿಯೊಬ್ಬರೂ ಮೈಗೂಡಿಸಿಕೊಳ್ಳಬೇಕು ಎಂದರು.

ಸಮಾಜದ ಅಧ್ಯಕ್ಷ ಪರಮೇಶ ಪರಬ, ಎಂ.ಕೆ. ಲಮಾಣಿ, ಪ್ರಭಾಕರ ಗಾಯಕವಾಡ, ಹಮೀದ ಸನದಿ, ಸಿ.ಕೆ. ಮುಳಗುಂದ, ಗಣಪತಿ ಶೇಳಕೆ, ದೇವೇಂದ್ರ ಪವಾರ, ಸಂತೋಷ ತೋಡಕಾರ, ರಾಜು ಪವಾರ ಇತರರಿದ್ದರು.



ಹಿಂದೂಗಳು ಒಗ್ಗಟ್ಟಾಗಿರಲಿ: ಮೆಹರವಾಡೆ



• ಗದಗ: ಪ್ರತಿಯೊಬ್ಬ ಹಿಂದೂಗಳು ಛತ್ರಪತಿ ಶಿವಾಜಿ ಮಹಾರಾಜರ ಜಯಂತಿಯನ್ನು ಆಚರಿಸುವ ಮೂಲಕ ಒಂದಾಗಬೇಕು ಎಂದು ಹಿರಿಯ ಉದ್ಯಮಿ ಈಶ್ವರಸಾ ಮೆಹರವಾಡೆ ಹೇಳಿದರು.

ಅವಳಿ ನಗರದ 31ನೇ ವಾರ್ಡ್‌ನ ಜೋಡ ಮಾರುತಿ ದೇವಸ್ಥಾನದ ಎದುರಿಗೆ ಇರುವ ಕಿಲ್ಲಾ ಓಣಿಯ ಎಸ್‌ಎಸ್‌ಕೆ ಸಮಾಜ ಬಾಂಧವರು ಹಮ್ಮಿಕೊಂಡ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು. ಅಖಂಡ ಹಿಂದೂ ಸಮಾಜ ನಿರ್ಮಾಣಕ್ಕಾಗಿ ಛತ್ರಪತಿ ಶಿವಾಜಿ ಮಹಾರಾಜರು ಸಾಕಷ್ಟು ಹೋರಾಟ ಮಾಡಿದ್ದಾರೆ. ಅವರ ಕನಸನ್ನು ನಾವೆಲ್ಲರೂ ನನಸು ಮಾಡಬೇಕಿದೆ. ನಾವೆಲ್ಲ ಹಿಂದೂಗಳು ಒಗ್ಗಟ್ಟಾಗದಿದ್ದರೆ ಮುಂದಿನ ದಿನಗಳಲ್ಲಿ ನಮ್ಮೆಲ್ಲರಿಗೂ ಕಷ್ಟದ ದಿನಗಳು ಬರಲಿವೆ ಎಂದರು.

ರಿಯಲ್ ಎಸ್ಟೇಟ್ ಉದ್ಯಮಿ ಸುಧೀರ ಕಾಟಿಗರ ಅಧ್ಯಕ್ಷತೆ ವಹಿಸಿದ್ದರು. ಇದಕ್ಕೂ ಮುನ್ನ ಛತ್ರಪತಿ ಶಿವಾಜಿ ಮಹಾರಾಜರ ಭಾವಚಿತ್ರಕ್ಕೆ ಜೋಡ ಮಾರುತಿ ದೇವಸ್ಥಾನದ ಅರ್ಚಕ ರಂಗಪ್ಪ ಪೂಜಾರಿ ಅವರು ವಿಶೇಷ ಪೂಜೆ ಸಲ್ಲಿಸಿದರು. ವಿಠ್ಠಲ ಬಾಂಡಗೆ, ಪರಶುರಾಮ ಬದಿ, ಪದ್ಮಾನಂದ ಬೇವಿನಕಟ್ಟಿ, ರಾಮಚಂದ್ರ ಶಿದ್ಲಿಂಗ, ಪರಶುರಾಮ ಮಿಸ್ಕಿನ್, ಶಿವಾನಂದ ಪೂಜಾರಿ, ನೇಮಚಂದ ಪವಾರ, ಸಂದೀಪ ಕಬಾಡಿ, ಸುನೀಲ ಬಸವಾ ಇತರರಿದ್ದರು. ಶ್ರೀಕಾಂತ ಬಾಕಳೆ ಸ್ವಾಗತಿಸಿ, ನಿರೂಪಿಸಿದರು. ರವಿ ಚವ್ಹಾಣ ವಂದಿಸಿದರು.

ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಿ

• ಲಕ್ಷ್ಮೇಶ್ವರ: ತಾಪಂ ವ್ಯಾಪ್ತಿಗೆ ಬರುವಂತಹ ಲಕ್ಷ್ಮೇಶ್ವರ ಪಟ್ಟಣದಿಂದ ಕೂಡಿ ಯಲ್ಲಮ್ಮ ದೇವಸ್ಥಾನಕ್ಕೆ ಹೋಗುವ ರಸ್ತೆ ಹಾಗೂ ಲಕ್ಷ್ಮೇಶ್ವರ ದೊಡ್ಡೂರ ಮುಖ್ಯ ರಸ್ತೆಯಿಂದ ಮುನಿಯನತಾಂಡಾ ಜಂಗಲ ಕೆರಿಯವರಗೂ ರಸ್ತೆ ಅಭಿವೃದ್ಧಿ ಪೂರ್ಣಗೊಳಿಸದೆ ಗುತ್ತಿಗೆದಾರರು ತೆರವುಗೊಳಿಸಿದ್ದು, ಯಾವುದೇ ಶರತ್ತು ಬದ್ಧ ರಸ್ತೆ ಕಾಮಗಾರಿ ಮಾಡಿಲ್ಲ ಎಂದು ಕರವೇ ನಾರಾಯಣ ಗೌಡ ಬಣದ ತಾಲೂಕಾಧ್ಯಕ್ಷ ಲೋಕೇಶ ಸುತಾರ ಹಾಗೂ ಗೌರವಾಧ್ಯಕ್ಷ ಪ್ರವೀಣ ಗಾಣ ಗೇರ ಆರೋಪಿಸಿದರು.

ಅವರು ತಾಪಂ ಇಒ ಧರ್ಮರ ಕೃಷ್ಣಪ್ಪ ಅವರಿಗೆ ಮನವಿ ಸಲ್ಲಿಸಿ ಮಾತನಾಡಿ, ಸಂಬಂಧಪಟ್ಟ ಅಧಿಕಾರಿಗಳು ಆ ರಸ್ತೆಗಳಿಗೆ ಭೇಟಿ ನೀಡಿ ನಿಯಮಾನುಸಾರ ಕಾಮಗಾರಿಗಳು ನಡೆಸಿರುವರೊ ಇಲ್ಲವೊ ಎಂದು ಪರಿಶಿಲಿಸಿ ನಿಯಮಾನುಸಾರ ಕಾಮಗಾರಿಯನ್ನು ರಸ್ತೆ ಅಭಿವೃದ್ಧಿ ಪಡಿಸಿ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು.

ಒಂದು ವೇಳೆ ಅಧಿಕಾರಿಗಳು ಪರಿಶಿಲಿಸದೆ ಕಾಮಗಾರಿ ಅನುದಾನವನ್ನು ಬಿಡುಗಡೆ ಗೊಳಿಸಿದ್ದಲ್ಲಿ ಕರವೇ ವತಿಯಿಂದ ಉಗ್ರ ಹೋರಾಟ ಅನಿವಾರ್ಯವಾಗಿರುತ್ತದೆ ಎಂದು ಎಚ್ಚರಿಸಿದರು. ಈ ಸಂದರ್ಭದಲ್ಲಿ ಗಂಗಾಧರ ಕೊಂಚಿಗೇರಿಮಠ, ಶಂಕರಗೌಡ್ರ ಪಾಟೀಲ, ಅರುಣ ಮೆಕ್ಕಿ, ಜಹಿರ ಮೊಮೀನ್, ಗಣೇಶ ಮೆಹರ ವಾಡೆ, ಹನುಮಂತ ಹುತ್ತರಗಿ, ಕಿರಣ ನಾಗಲೋಟಿ, ಈರಣ್ಣ ಶಿಗ್ಲಿ, ವಿನಾಯಕ ಮರಾಠೆ, ಶಿವಾನಂದ ಗೊಜನೂರ, ಬಸವರಾಜ ಶಿರಬಡಗಿ, ಕುಮಾರ ಅಣ್ಣಿಗೇರಿ, ರಾಜು ಮೆಕ್ಕಿ ಇತರರಿದ್ದರು.



ಶ್ರೀ ಸ್ವರ್ಣವಲ್ಲಿ ಸ್ವಾಮೀಜಿ ಮನವಿ

ನದಿ ತಿರುವು ಯೋಜನೆ ವಿರೋಧಿಸೋಣ

ಶಿರಸಿ: ಉತ್ತರ ಕನ್ನಡ ಜಿಲ್ಲೆಯ ಜೀವನಾಡಿಗಳಾದ ಬೇಡ್ತಿ ಮತ್ತು ಅಘನಾಶಿನಿ ನದಿಗಳು ನಮ್ಮ ಭಾಗದ ಕೃಷಿ ಹಾಗೂ ಕುಡಿಯುವ ನೀರಿನ ಮುಖ್ಯ ಆಧಾರವಾಗಿವೆ. ಈ ನದಿಗಳನ್ನು ಬಲಿ ಕೊಟ್ಟು ರೂಪಿಸುವ ನದಿ ತಿರುವು ಯೋಜನೆಗೆ ನಾವು ಯಾವುದೇ ಕಾರಣಕ್ಕೂ ಬೆಂಬಲ ನೀಡಬಾರದು ಎಂದು ಸ್ವರ್ಣವಲ್ಲೀ ಮಹಾಸಂಸ್ಥಾನದ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಕರೆ ನೀಡಿದರು.

ತಾಲೂಕಿನ ಬರೂರಿನ ಶ್ರೀ ಲಕ್ಷ್ಮೀನರಸಿಂಹ ದೇವಸ್ಥಾನದ ಆವರಣದಲ್ಲಿ ಹಿಂದೂ ಸಂಚಾಲನಾ ಸಮಿತಿ ಹಮ್ಮಿಕೊಂಡಿದ್ದ 'ಹಿಂದೂ ಸಮ್ಮೇಳನ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬೇರೆ ಜಿಲ್ಲೆಗಳಿಗೆ ನೀರು ಒದಗಿಸುವ ನೆಪದಲ್ಲಿ ಜಿಲ್ಲೆಯ ನದಿಗಳನ್ನು ತಿರುಗಿಸುವ ಸಂಚು ನಡೆಯುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದ ಶ್ರೀಗಳು, ಬೇರೆಯವರಿಗೆ ನೀರು ನೀಡಬಾರದು ಎಂಬ ಸಂಕುಚಿತ ಮನೋಭಾವ ನಮ್ಮದಲ್ಲ. ಆದರೆ, ಇಲ್ಲಿನ ನೀರನ್ನು ಬೇರೆಡೆಗೆ ಕೊಂಡೊಯ್ದರೆ ನಮ್ಮ ಸಮೃದ್ಧ ಪ್ರದೇಶ ಬರಡಾಗುವ ಅಪಾಯವಿದೆ. ಅಲ್ಲಿನ ಸ್ಥಳೀಯ ನೀರಾವರಿ ಯೋಜನೆಗಳನ್ನು ಸರಿಯಾಗಿ ಅನುಷ್ಠಾನಗೊಳಿಸಿದರೆ ಇಂತಹ ಪರಿಸ್ಥಿತಿ ಬರುವುದಿಲ್ಲ. ನದಿ ತಿರುವಿನಿಂದ ಪರಿಸರ, ಕೃಷಿ ಹಾಗೂ ಮೀನುಗಾರಿಕೆ ಮೇಲೆ ಗಂಭೀರ ದುಷ್ಪರಿಣಾಮ ಬೀರಲಿದ್ದು, ನದಿಗಳ ರಕ್ಷಣೆ ಅನಿವಾರ್ಯ ಎಂದರು.

ಭಾರತವು ತಪಸ್ವಿಗಳ ಪುಣ್ಯಭೂಮಿಯಾಗಿದ್ದು, ಇಲ್ಲಿನ ಪ್ರತಿಯೊಂದು ನೈಸರ್ಗಿಕ ಸಂಪನ್ಮೂಲವನ್ನು ಉಳಿಸಿಕೊಳ್ಳುವುದು ನಮ್ಮ ಧರ್ಮ ಎಂದು ತಿಳಿಸಿದರು.

ಮಾರಿಕಾಂಬಾ ಮಹಿಳಾ ಸಹಕಾರ ಬ್ಯಾಂಕ್ ಅಧ್ಯಕ್ಷೆ ಭಾಗೀರಥಿ ಜೋಶಿ ಮಾತನಾಡಿ, ಸನಾತನ ಧರ್ಮವನ್ನು ಉಳಿಸಿ ಮುಂದಿನ ಪೀಳಿಗೆಗೆ ಹಸ್ತಾಂತರಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು.



> ಜಾತಿ, ಭಾಷೆ ಮತ್ತು ಪ್ರಾಂತಗಳ ನಡುವಿನ ಒಡಕು ನಿವಾರಣೆಯಾಗಬೇಕು. ರಾಷ್ಟ್ರದ ಕಲ್ಪನೆ ಬಂದಾಗ ನಾವೆಲ್ಲರೂ ಒಂದಾಗಬೇಕು. ಮನೆಯೇ ವಿದ್ಯಾಲಯವಾಗಬೇಕು ಹಾಗೂ ಉಡುಗೆ-ತೊಡುಗೆಗಳಲ್ಲಿ ಭಾರತೀಯ ಸಂಸ್ಕೃತಿ ಬಿಂಬಿತವಾಗಬೇಕು. ಯುವಜನತೆ ವಿದೇಶದಲ್ಲಿದ್ದರೂ ಭಜನೆ ಮತ್ತು ಸಂಸ್ಕೃತಿಯೊಂದಿಗೆ ಬೆರೆಯಬೇಕು.
>
> ■ **ಕಜಂಪಾಡಿ ಸುಬ್ರಹ್ಮಣ್ಯ ಭಟ್ಟ**
> ಆರ್‌ಎಸ್‌ಎಸ್‌ನ ಅಖಿಲ ಭಾರತೀಯ ಆಮಂತ್ರಿತ ಸದಸ್ಯ

ಇದೇ ಸಂದರ್ಭದಲ್ಲಿ ಪಂಚಾಯತ್ ವ್ಯಾಪ್ತಿಯಲ್ಲಿ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿದವರನ್ನು ಶ್ರೀಗಳು ಆತ್ಮೀಯವಾಗಿ ಗೌರವಿಸಿದರು. ಸಭಾ ಕಾರ್ಯಕ್ರಮಕ್ಕೂ ಮುನ್ನ ಗ್ರಾಮಸ್ಥರಿಂದ ಭಾರತ ಮಾತೆಯ ಭವ್ಯ ಶೋಭಾಯಾತ್ರೆ ನಡೆಯಿತು. ಬರೂರು ಹಾಗೂ ಕುಳವೆ ಪಂಚಾಯತ್ ಗ್ರಾಮಸ್ಥರು ಡೊಳ್ಳು ಕುಣಿತದ ಮೂಲಕ ಶ್ರೀಗಳನ್ನು ಅದ್ದೂರಿಯಾಗಿ ಸ್ವಾಗತಿಸಿದರು.

ಸ್ವಾಗತ ಸಮಿತಿ ಅಧ್ಯಕ್ಷ ಚಾರುಚಂದ್ರ ಶಾಸ್ತ್ರಿ ಸ್ವಾಗತಿಸಿದರು. ಸಂಯೋಜಕ ಅಣ್ಣಪ್ಪ ನಾಯ್ಕ ಹಲಸಿನಕ್ಕೆ ನಿರ್ಣಯ ಮಂಡಿಸಿದರು. ಗಣಪತಿ ಭಟ್ಟ ಬೆಳಖಂಡ ನಿರೂಪಣೆ ಮಾಡಿದರು. ಪ್ರತಿಭಾ ಭಟ್ಟ ಸಾಧಕರನ್ನು ಪರಿಚಯಿಸಿದರು. ಶ್ರೀ ಲಕ್ಷ್ಮೀನರಸಿಂಹ ಭಜನಾ ಮಂಡಳಿಯಿಂದ ಸ್ವಾಗತಗೀತೆ ಮೊಳಗಿತು.

ಸಮಾನತೆ ಸಾಮ್ರಾಜ್ಯ ಕಟ್ಟಿದ ಶಿವಾಜಿ: ಜಕ್ಕಪ್ಪನವರ

ಧಾರವಾಡ: ಛತ್ರಪತಿ ಶಿವಾಜಿ ಮಹಾರಾಜ ಕೇವಲ ಅಪ್ರತಿಮ ಯೋಧನಲ್ಲ, ಶಿಸ್ತುಬದ್ಧ ಆಡಳಿತಗಾರ. ತನ್ನ ಸೈನ್ಯದಲ್ಲಿ ಸರ್ವ ಸಮಾಜದವರಿಗೂ ಸ್ಥಾನ ಕಲ್ಪಿಸಿ, ಸಮಾನತೆ ಸಾಮ್ರಾಜ್ಯ ಕಟ್ಟಿದ ಧೀಮಂತ ಎಂದು ವಿಧಾನ ಪರಿಷತ್ ಸದಸ್ಯ ಎಫ್.ಎಚ್.ಜಕ್ಕಪ್ಪನವರ ಹೇಳಿದರು.

ಜಿಲ್ಲಾಡಳಿತ, ಕನ್ನಡ-ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಗರದ ಮರಾಠ ವಿದ್ಯಾಪ್ರಸಾರಕ ಮಂಡಳದ ಆವರಣದಲ್ಲಿ ಗುರುವಾರ ಏರ್ಪಡಿಸಿದ ಶಿವಾಜಿ ಮಹಾರಾಜರ 399ನೇ ಜಯಂತಿಯಲ್ಲಿ ಮಾತನಾಡಿ, ಕೆಲವು ಇತಿಹಾಸಕಾರರು ಶಿವಾಜಿ ಅವರನ್ನು ದರೋಡೆಕೋರರು ಎಂದು ಬಿಂಬಿಸಿರುವುದು ಖೇದಕರ ಸಂಗತಿ. ಮರಾಠ ಬಾಂಧವರು ಇತಿಹಾಸಕಾರರು ತಪ್ಪಾಗಿ ಬಿಂಬಿಸಿದ ಶಿವಾಜಿ ಇತಿಹಾಸ ಅಧ್ಯಯನ ಮಾಡದೆ, ನೈಜ ಇತಿಹಾಸ ಅಧ್ಯಯನ ಮಾಡುವಂತೆ ಸಲಹೆ ನೀಡಿದರು.

ಮಹಾರಾಷ್ಟ್ರ ಸರ್ಕಾರ ಛತ್ರಪತಿ ಶಿವಾಜಿಯನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸಿರುವುದು ಶ್ಲಾಘನೀಯ. ಇಂತಹ ಮಹಾನ್ ವ್ಯಕ್ತಿಯನ್ನು ಕೇವಲ ಒಂದು ಧರ್ಮಕ್ಕೆ ಸೀಮಿತ ಮಾಡಬಾರದು. ಅವರ ಆದರ್ಶಗಳನ್ನು ಇಂದಿನ ಮಕ್ಕಳಲ್ಲಿ ಬೆಳೆಸಬೇಕು ಎಂದು ಸಲಹೆ ನೀಡಿದರು.

ಶಾಹು ಮಹಾರಾಜ ಹಣಕಾಸಿನ ನೆರವಿನಿಂದ ಅಧ್ಯಯನ ಮಾಡಿರುವ ಡಾ. ಬಿ.ಆರ್.ಅಂಬೇಡ್ಕರ್, ದೇಶಕ್ಕೆ ಸಂವಿಧಾನ ನೀಡಿದರು. ದಲಿತ ಸಮಾಜದ ಮೇಲೆ ಮರಾಠರ ಋಣ ಬಹಳಷ್ಟಿದೆ. ಮರಾಠ ಸಂಸ್ಥೆಗೆ ಶಾಸಕರ ನಿಧಿಯಡಿ ರೂ.20 ಲಕ್ಷ ನೀಡುವುದಾಗಿ ವಾಗ್ದಾನ ಮಾಡಿದರು.


ಉದ್ಘಾಟಿಸಿದ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಸಿ.ಡಿ.ಮಾತನಾಡಿ, ಶೌರ್ಯ ಹಾಗೂ ಸಾಹಸಕ್ಕೆ ಮತ್ತೊಂದು ಹೆಸರೇ ಛತ್ರಪತಿ ಶಿವಾಜಿ ಮಹಾರಾಜರು. ಧರ್ಮ ಸಹಿಷ್ಣುತೆ, ಪರಸ್ತ್ರೀಯನ್ನೂ ತಾಯಿಯಂತೆ ಗೌರವಿಸುವ ಅವರ ಈ ಮೌಲ್ಯ ಇಂದಿನ ಸಮಾಜಕ್ಕೆ ಅವಶ್ಯವಿದೆ ಎಂದರು.

ಪೊಲೀಸ್ ಮಕ್ಕಳ ವಸತಿ ಶಾಲೆ ಪ್ರಾಚಾರ್ಯ ಮಹಾದೇವಪ್ಪ ಯಾದವಾಡ, ಮರಾಠ ಮಂಡಳದ ಕಾರ್ಯಾಧ್ಯಕ್ಷ ಸುನೀಲ ಮೋರೆ ಮಾತನಾಡಿ, ಶಿವಾಜಿ ದೇಶದ ಅಸ್ಮಿತೆ. ಅವರ ಶಿಸ್ತು, ಸ್ತ್ರೀ-ಗೌರವ, ರಾಷ್ಟ್ರಪ್ರೇಮ ಇಂದಿನ ಯುವ ಪೀಳಿಗೆಗೆ ದಾರಿದೀಪ ಎಂದು ಹೇಳಿದರು.

ಮರಾಠ ವಿದ್ಯಾಪ್ರಸಾರಕ ಮಂಡಳದ ಅಧ್ಯಕ್ಷ ಎಂ.ಎನ್. ಮೋರೆ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಗೌರವ ಕಾರ್ಯದರ್ಶಿ ರಾಜು ಬಿರಜೆನವರ, ಸಹಕಾರ್ಯದರ್ಶಿ ರಾಜು ಕಾಳೆ, ಜಯಂತ್ಯುತ್ಸವ ಸಮಿತಿಯ ಅಧ್ಯಕ್ಷ ಮೋಹನ ಖೇಮಕರ ಅನೇಕರು ಇದ್ದರು.

ಕಾರ್ಯಕ್ರಮದಲ್ಲಿ ಸಂಸ್ಥೆ ಉಪಾಧ್ಯಕ್ಷ ಯಲ್ಲಪ್ಪ ಚವ್ಹಾಣ, ಆಡಳಿತ ಮಂಡಳಿ ನಿರ್ದೇಶಕರಾದ ಸುಭಾಷ ಶಿಂಧೆ, ಶಿವಾಜಿ ಸೂರ್ಯವಂಶಿ, ಪುರುಷೋತ್ತಮ ಜಾಧವ, ಈಶ್ವರ ಪಾಟೀಲ, ಪಾಲಿಕೆ ಸದಸ್ಯ ಶಂಕರ ಶೇಳಕೆ, ಮುಖಂಡ ಭೀಮಪ್ಪ ಕಾಸಾಯಿ ಪಾಲ್ಗೊಂಡಿದ್ದರು.

ಇದಕ್ಕೂ ಮೊದಲು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಹಾಗೂ ಗಣ್ಯರಿಗೆ ಸನ್ಮಾನಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕುಮಾರ್ ಬೆಕ್ಕೇರಿ ಸ್ವಾಗತಿಸಿದರು. ಆರತಿ ದೇವಶಿಖಾಮಣಿ ನಿರೂಪಿಸಿ, ವಂದಿಸಿದರು.



ಕಿರುಸುದ್ದಿ

ಶಿಕ್ಷಕರ ಸ್ವಾಭಿಮಾನಕ್ಕೆ ಧಕ್ಕೆ ಸಲ್ಲ: ಸಭಾಪತಿ ಹೊರಟ್ಟಿ

ಹುಬ್ಬಳ್ಳಿ: ಶಿಕ್ಷಕರು ಸಮಾಜದ ಮತ್ತು ಶಾಲಾ ವ್ಯವಸ್ಥೆಯ ಬೆನ್ನೆಲುಬು. ವಿದ್ಯಾರ್ಥಿಗಳು ಶಿಕ್ಷಕರನ್ನು ತಮ್ಮ ರೋಲ್ ಮಾಡೆಲ್ ಎಂದು ಪರಿಗಣಿಸುತ್ತಾರೆ. ಅಧಿಕಾರಿಗಳು ತಪಾಸಣೆ ಅಥವಾ ಭೇಟಿಯ ಸಮಯದಲ್ಲಿ ವಿದ್ಯಾರ್ಥಿಗಳ ಸಮ್ಮುಖದಲ್ಲೇ ಶಿಕ್ಷಕರನ್ನು ಏಕವಚನದಲ್ಲಿ ಸಂಬೋಧಿಸುವುದು, ಬೈಯುವುದು ಶಿಕ್ಷಕರ ಸ್ವಾಭಿಮಾನಕ್ಕೆ ಧಕ್ಕೆ ತರುತ್ತದೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆಗೆ ತಿಳಿಸಿದ ಅವರು, ಮಕ್ಕಳ ಮುಂದೆ ಶಿಕ್ಷಕರು ಅವಮಾನಕ್ಕೊಳಗಾದಾಗ, ವಿದ್ಯಾರ್ಥಿಗಳಿಗೆ ಶಿಕ್ಷಕರ ಮೇಲಿರುವ ಗೌರವ ಕಡಿಮೆಯಾಗುತ್ತದೆ. ಇದು ಶಾಲಾ ಶಿಸ್ತಿನ ಮೇಲೆ ನಕಾರಾತ್ಮಕ ಪರಿಣಾಮ ಬೀರುವುದಲ್ಲದೆ, ವಿದ್ಯಾರ್ಥಿಗಳ ಕಲಿಕಾ ಆಸಕ್ತಿಯನ್ನು ಕುಂಠಿತಗೊಳಿಸುತ್ತದೆ ಎಂದು ಹೇಳಿದ್ದಾರೆ. ಸಾರ್ವಜನಿಕವಾಗಿ ಟೀಕೆ ಮಾಡುವುದರಿಂದ ಶಿಕ್ಷಕರ ನೈತಿಕ ಸ್ಥೈರ್ಯ ಕುಸಿಯುತ್ತದೆ. ತಪ್ಪುಗಳಿದ್ದಲ್ಲಿ ಅವುಗಳನ್ನು ಪ್ರತ್ಯೇಕವಾಗಿ ಕಚೇರಿಯಲ್ಲಿ ಅಥವಾ ಶಿಕ್ಷಕರ ಕೊಠಡಿಯಲ್ಲಿ ಸಮಾಲೋಚನೆ ನಡೆಸಿ ಸರಿಪಡಿಸುವುದು ಹೆಚ್ಚು ಪರಿಣಾಮಕಾರಿ. ಶೈಕ್ಷಣಿಕ ಸುಧಾರಣೆಗೆ ವಿಮರ್ಶೆ ಅಗತ್ಯ, ಆದರೆ ಅದು ಗೌರವಾನ್ವಿತ ರೀತಿಯಲ್ಲಿರಬೇಕು. ಅಧಿಕಾರಿಗಳು ಸಂವಹನ ಮಾಡುವಾಗ ವೃತ್ತಿಪರ ನಡವಳಿಕೆಯನ್ನು ಕಾಯ್ದುಕೊಳ್ಳಲು ಸ್ಪಷ್ಟ ಮಾರ್ಗಸೂಚಿಗಳನ್ನು ಹೊರಡಿಸುವ ಅಗತ್ಯತೆ ಇದೆ. ಆದ್ದರಿಂದ ಶಿಕ್ಷಣ ಇಲಾಖೆ ಸಚಿವರು ಈ ವಿಷಯ ಗಂಭೀರವಾಗಿ ಪರಿಗಣಿಸಿ, ಇಲಾಖೆಯ ಕೆಳಹಂತದ ಎಲ್ಲಾ ಅಧಿಕಾರಿಗಳಿಗೆ ಶಾಲೆಗಳಲ್ಲಿ ವಿದ್ಯಾರ್ಥಿಗಳ ಮುಂದೆ ಶಿಕ್ಷಕರನ್ನು ನಿಂದಿಸದಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು ಎಂದು ಆಗ್ರಹಿಸಿದ್ದಾರೆ.



ಮೆಕ್ಕೆಜೋಳಕ್ಕೆ ಬೆಂಕಿ: 3.57ಲಕ್ಷ ರೂ. ಹಾನಿ

ಹಾವೇರಿ: ಜಮೀನಿನಲ್ಲಿ ರಾಶಿ ಹಾಕಿದ್ದ ಮೆಕ್ಕೆಜೋಳಕ್ಕೆ ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಂಡು ಸುಮಾರು 3.57ಲಕ್ಷ ರೂ.ಮೌಲ್ಯದ ಮೆಕ್ಕೆಜೋಳ ರಾಶಿ ಸಂಪೂರ್ಣವಾಗಿ ಸುಟ್ಟು ಕರಕಲಾಗಿರುವ ಘಟನೆ ತಾಲೂಕಿನ ಕೆರೆಕೊಪ್ಪ ಗ್ರಾಮದಲ್ಲಿ ನಡೆದಿದೆ. ಕೆರೆಕೊಪ್ಪ ಗ್ರಾಮದ ಯಲ್ಲಪ್ಪ ಹನುಮಪ್ಪ ಹರಿಜನ, ಶರೀಫ ಹರಿಜನ, ಷಣ್ಮುಖಪ್ಪ ಹರಿಜನ ಎಂಬ ಮೂರು ಜನ ರೈತರು ಗ್ರಾಮದ ಸರ್ವೇ ನಂ.112/ಕ ನೇದ್ದರ ಜಮೀನಿನಲ್ಲಿ ರಾಶಿ ಹಾಕಿದ್ದರು. ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಂಡ ಪರಿಣಾಮ ಸುಮಾರು 3,57,000 ರೂ.ಮೌಲ್ಯದ 150ಕ್ವಿಂಟಲ್‌ನಷ್ಟು ಮೆಕ್ಕೆಜೋಳ ಸಂಪೂರ್ಣವಾಗಿ ಸುಟ್ಟು ಹೋಗಿದೆ. ಈ ಕುರಿತು ಗುತ್ತಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಾನಪದ ವಿವಿ ಅಕ್ರಮ ನೇಮಕ ಪ್ರಕರಣ

ಬೆಳಗಾವಿ ಪ್ರಾದೇಶಿಕ ಆಯುಕ್ತರಿಂದ ವಿಚಾರಣೆ

ಹಾವೇರಿ: ಶಿಗ್ಗಾಂವ ತಾಲೂಕಿನ ಗೊಡಗೋಡಿಯಲ್ಲಿರುವ ಜಾನಪದ ವಿಶ್ವವಿದ್ಯಾಲಯದ ಸಹಾಯಕ ಕುಲಪತಿ ಹುದ್ದೆಗೆ ಆಯ್ಕೆಯಾಗಿರುವ ಶಹಜಹಾನ್ ಮುದಕವಿ ಅವರ ಶೈಕ್ಷಣಿಕ ದಾಖಲೆ ಕುರಿತು ಜಾನಪದ ವಿವಿಯ ಸಿಂಡಿಕೇಟ್ ಸದಸ್ಯರು ನೀಡಿದ ದೂರಿನನ್ವಯ ರಾಜ್ಯಪಾಲರು, ಸಿಎಂ ಹಾಗೂ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಸೂಚನೆ ಮೇರೆಗೆ ಗುರುವಾರ ಬೆಳಗಾವಿ ಪ್ರಾದೇಶಿಕ ಆಯುಕ್ತರಾದ ಕೆ.ಎಂ. ಜಾನಕಿ ಜಾನಪದ ವಿವಿಗೆ ಆಗಮಿಸಿ ವಿಚಾರಣೆ ನಡೆಸಿದರು.

ಬೆಳಗ್ಗೆ ಸುಮಾರು 9.30 ಗಂಟೆಯಿಂದ ಆರಂಭಗೊಂಡ ವಿಚಾರಣೆ ಸಂಜೆ 4 ಗಂಟೆಯವರೆಗೂ ನಡೆಯಿತು. ಈ ವೇಳೆ ಕುಲಪತಿಗಳು, ಕುಲಸಚಿವರು, ಸಿಂಡಿಕೇಟ್ ಸದಸ್ಯರೊಂದಿಗೆ ಪ್ರತ್ಯೇಕವಾಗಿ ಮಾತನಾಡಿದ್ದಾರೆ. ಈ ವೇಳೆ ಮುದಕವಿ ಅವರ ಶೈಕ್ಷಣಿಕ ದಾಖಲೆಗಳ ಕುರಿತು ಸಾರ್ವಜನಿಕರಿಂದ ಬಂದ ದೂರುಗಳು, ಮಾಹಿತಿ ಹಕ್ಕಿನ ಅಡಿಯಲ್ಲಿ ಪಡೆದ ಸಮಗ್ರ ಮಾಹಿತಿ, ಅವರ ಶೈಕ್ಷಣಿಕ ಅರ್ಹತೆ, ಮಾನದಂಡಗಳ ಕುರಿತು ಚರ್ಚಿಸಿದರು ಎನ್ನಲಾಗಿದೆ.

ಇನ್ನು ಚರ್ಚೆಯ ವೇಳೆ ಸಿಂಡಿಕೇಟ್ ಸದಸ್ಯರ ಎರಡೂ ಸಭೆಗಳಲ್ಲಿ ಮುದಕವಿ ಅವರ ಶೈಕ್ಷಣಿಕ ದಾಖಲೆಗಳನ್ನು ಸಲ್ಲಿಸದೇ ಇರುವುದು, ಮತ್ತು ಇದುವರೆಗೂ ಅವರ ಅರ್ಹತೆಗಳ ಕುರಿತಾದ ಮೂಲ ದಾಖಲೆಗಳನ್ನು ಸಿಂಡಿಕೇಟ್ ಸದಸ್ಯರ ಗಮನಕ್ಕೆ ಬಾರದಂತೆ ತಡೆಹಿಡಿದ ಅಂಶಗಳು ಕಂಡು ಬಂದಿವೆ. ಇದೇ ಹಿನ್ನೆಲೆಯಲ್ಲಿ ಸಿಂಡಿಕೇಟ್ ಸದಸ್ಯರು ಮುದಕವಿ ಅವರ ಅರ್ಹತೆ, ಪ್ರಮಾಣ ಪತ್ರಗಳ ನೈಜತೆ, ಅವರು ಕಲಿತ ಕೋರ್ಸ್‌ಗಳಿಗೆ ಮಾನ್ಯತೆ ಇಲ್ಲ ಎಂಬ ಕುರಿತಂತೆ ಸಂಬಂಧಿತ ವಿವಿಗಳಿಂದ ಪಡೆದ ಸ್ಪಷ್ಟೀಕರಣಗಳ ಮಾಹಿತಿಯನ್ನು ಸಹ ಪ್ರಾದೇಶಕ ಆಯುಕ್ತರಿಗೆ ಸಲ್ಲಿಸಿದ್ದಾರೆ ಎನ್ನಲಾಗಿದೆ.



ಇನ್ನು ಈ ಎಲ್ಲಾ ವಿಚಾರಣೆಗಳ ವರದಿಯನ್ನು ಪ್ರಾದೇಶಿಕ ಆಯುಕ್ತರು ಸರ್ಕಾರಕ್ಕೆ ಸಲ್ಲಿಸಬೇಕಿರುವುದರಿಂದ ಹೆಚ್ಚಿನ ಮಾಹಿತಿಗಳು ಲಭ್ಯವಾಗಿಲ್ಲ. ಪ್ರಸ್ತುತ ಸಿಂಡಿಕೇಟ್ ಸದಸ್ಯರ ದೂರಿನ ಆಧಾರದ ಮೇಲೆ ಇದೀಗ ವಿಚಾರಣೆ ಆರಂಭಗೊಂಡಂತಾಗಿದ್ದು, ಮುಂದಿನ ದಿನಗಳಲ್ಲಿ ಪ್ರಾದೇಶಿಕ ಆಯುಕ್ತರ ವರದಿ ಆಧರಿಸಿ ಸರ್ಕಾರ ಕೈಗೊಳ್ಳುವ ಮುಂದಿನ ಕ್ರಮದ ಮೇಲೆ ಏನೆಂದು ಸ್ಪಷ್ಟವಾಗಲಿದೆ.

ಕಾಡು ಪ್ರಾಣಿ ಮಾಂಸ, ಜಿಂಕೆ ಕೊಂಬು ವಶ: ಆರೋಪಿ ಪರಾರಿ

ಭಟ್ಕಳ: ಇಲ್ಲಿಯ ಹುರಳಿಸಾಲ್ ಮನೆಯೊಂದರಲ್ಲಿ ಕಾಡು ಪ್ರಾಣಿ ಹತ್ಯೆ ನಡೆಸಿದ ಶಂಕೆ ಮೇರೆಗೆ ದಾಳಿ ನಡೆಸಿದ ಅರಣ್ಯ ಇಲಾಖೆಯ ಅಧಿಕಾರಿಗಳು 21 ಕೆಜಿ ಮಾಂಸ, ಜಿಂಕೆ ಕೊಂಬು ಹಾಗೂ ಎರಡು ಏರ್‌ಗನ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಜಾಫರ್ ಬ್ರಹ್ಮಾವರ ಎಂಬಾತ ಕಾಡಿನಲ್ಲಿ ಪ್ರಾಣಿಯನ್ನು ಹತ್ಯೆ ಮಾಡಿ, ಮಾಂಸವನ್ನು ಮನೆಯ ಪಕ್ಕದಲ್ಲೇ ಬೇರ್ಪಡಿಸಿ ಉಳಿದ ಅವಶೇಷಗಳನ್ನು ಮನೆಯ ಪಕ್ಕದಲ್ಲಿ ಇದ್ದ ಪಾಳು ಬಿದ್ದ ಬಾವಿಗೆ ಎಸೆದಿರುವ ಶಂಕೆಯ ಮೇರೆಗೆ ದಾಳಿ ನಡೆಸಿದ ಅಧಿಕಾರಿಗಳು ಬಾವಿಯಲ್ಲಿದ್ದ ಅವಶೇಷಗಳನ್ನು ಹೊರತೆಗೆದು ಪರಿಶೀಲಿಸಿದರು.

ಮನೆ ಒಳಗೆ ಶೋಧಕ್ಕೆ ಮುಂದಾದಾಗ ಆರಂಭದಲ್ಲಿ ಮನೆಯವರು ಬಾಗಿಲು ತೆರೆದು ಸಹಕರಿಸದೆ ವಿರೋಧ ವ್ಯಕ್ತಪಡಿಸಿದ ಘಟನೆಯೂ ನಡೆಯಿತು. ಸುಮಾರು ಆರು ಗಂಟೆ ಅಧಿಕಾರಿಗಳು ಕಾದ ಬಳಿಕ ಬಾಗಿಲು ತೆರೆಯಲಾಯಿತು. ನಂತರ ನಡೆದ ಪರಿಶೀಲನೆಯಲ್ಲಿ ಫ್ರಿಡ್ಜ್‌ನಲ್ಲಿ ಸಂಗ್ರಹಿಸಿದ್ದ 21 ಕೆಜಿ ಮಾಂಸ ಪತ್ತೆಯಾಯಿತು. ಜೊತೆಗೆ ಜಿಂಕೆ ಕೊಬ್ಬು ಹಾಗೂ ಎರಡು ಏರ್‌ಗನ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಈ ಕುರಿತು ವಲಯ ಅರಣ್ಯಾಧಿಕಾರಿ ವಿಶ್ವನಾಥ ನಾಯ್ಕ ಪ್ರತಿಕ್ರಿಯಿಸಿ, ಮೇಲ್ನೋಟಕ್ಕೆಯಿದು ಕಾಡು ಕೋಣದ ಮಾಂಸವಾಗಿರುವ ಶಂಕೆ ಇದೆ. ಮಾಂಸದ ನಮೂನೆಯನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ವರದಿ ಬಂದ ಬಳಿಕ ಯಾವ ಪ್ರಾಣಿಯ ಮಾಂಸ ಎಂದು ಖಚಿತಪಡಿಸಲಾಗುತ್ತದೆ ಎಂದು ತಿಳಿಸಿದ್ದಾರೆ.





ಆರೋಪಿ ತಲೆಮರೆಸಿಕೊಂಡಿದ್ದು, ಬಂಧನಕ್ಕಾಗಿ ಅಧಿಕಾರಿಗಳು ಶೋಧ ಕಾರ್ಯ ಮುಂದುವರಿಸಿದ್ದಾರೆ. ಕಾರ್ಯಾಚರಣೆಯಲ್ಲಿ ನಗರ ಠಾಣೆ ಇನ್ಸಪೆಕ್ಟರ್ ದಿವಾಕರ ಪಿ.ಎಂ.ಪಿಎಸ್‌ಐ ನವೀನ ನಾಯ್ಕ, ಗ್ರಾಮೀಣ ಠಾಣೆ ಪಿಎಸ್‌ಐ ಮಲ್ಲಿಕಾರ್ಜುನ, ಡಿಆರ್ ಓಎಫ್‌ಗಳಾದ ಮಾರುತಿ, ಸಂದೀಪ್ ಸೇರಿದಂತೆ ಧನಂಜಯ ಮೊಗೇರ ಮುಂತಾದವರಿದ್ದರು.

ರಾಷ್ಟ್ರೀಯ ಹೆದ್ದಾರಿಯಲ್ಲಿ ಸರಣಿ ಅಪಘಾತ

ವಿದೇಶಿ ಪ್ರಜೆಗಳು ಸೇರಿ 24 ಜನರಿಗೆ ಗಾಯ

ಅಂಕೋಲಾ: ತಾಲೂಕಿನ ಸುಂಕಸಾಳ ಬಳಿ ರಾಷ್ಟ್ರೀಯ ಹೆದ್ದಾರಿ 52ರಲ್ಲಿ ಸಂಭವಿಸಿದ ಸರಣಿ ಅಪಘಾತದಲ್ಲಿ 8 ಜನ ವಿದೇಶಿ ಪ್ರಜೆಗಳೂ ಸೇರಿದಂತೆ 24 ಜನರು ಗಾಯಗೊಂಡಿದ್ದಾರೆ. ಗಾಯಾಳುಗಳಲ್ಲಿ 7 ಜನರಿಗೆ ತೀವ್ರ ಸ್ವರೂಪದ ಗಾಯಗಳಾಗಿವೆ.

ಮಂಗಳೂರು ಕಡೆಯಿಂದ ಹುಬ್ಬಳ್ಳಿ ಕಡೆ ಹೋಗುತ್ತಿದ್ದ ಎಚ್.ಆರ್ 68 ಸಿ 2158 ನೋಂದಣಿ ಸಂಖ್ಯೆಯ ಕಂಟೇನರ್ ವಾಹನ ಚಾಲಕನ ನಿರ್ಲಕ್ಷ್ಯದ ಚಾಲನೆಯಿಂದ ಎದುರಿನಿಂದ ಬರುತ್ತಿದ್ದ ಬಿಜಾಪುರದಿಂದ ಮಂಗಳೂರಿಗೆ ಹೋಗುತ್ತಿದ್ದ ಪಿ.ವೈ.01ಸಿಜೆ2842 ನೋಂದಣಿ ಸಂಖ್ಯೆಯ ಗಣೇಶ ಟ್ರಾವೆಲ್ಸ್ ಖಾಸಗಿ ಬಸ್ಸಿಗೆ ಬಲಬದಿಗೆ ಡಿಕ್ಕಿ ಹೊಡೆದು ಮುಂದೆ ಹೋಗಿ ಬಳ್ಳಾರಿಯಿಂದ ಗೋವಾಕ್ಕೆ

ಹೋಗುತ್ತಿದ್ದ ಎನ್.ಎಲ್ 01 ಬಿ 2722 ನೋಂದಣಿ ಸಂಖ್ಯೆಯ ಸೀಬರ್ಡ್ ಖಾಸಗಿ ಬಸ್ಸಿಗೆ ಮುಖಾಮುಖಿ ಡಿಕ್ಕಿ ಹೊಡೆದಿದೆ.

ಇದೇ ಸಮಯದಲ್ಲಿ ಅಂಕೋಲಾ ಕಡೆಯಿಂದ ಹುಬ್ಬಳ್ಳಿಯ ಕಡೆ ಹೋಗುತ್ತಿದ್ದ ಕೆ.ಎ22 ಎಎ6788 ನೋಂದಣಿ ಸಂಖ್ಯೆಯ ಲಾರಿ ಕಂಟೇನರ್ ಲಾರಿಗೆ ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ಅಪಘಾತದಲ್ಲಿ ಸೀಬರ್ಡ್ ಬಸ್ ಚಾಲಕ ಮತ್ತು ಕ್ಲೀನರ್ ಹಾಗೂ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಪ್ರಯಾಣಿಕರು, ಗಣೇಶ ಬಸ್ಸಿನಲ್ಲಿದ್ದ ಪ್ರಯಾಣಿಕರು, ಕಂಟೇನರ್ ಚಾಲಕ ಮತ್ತು ಕ್ಲೀನರ್ ಹಿಂಬದಿಯಿಂದ ಗುದ್ದಿದ ಲಾರಿ ಚಾಲಕ ಮತ್ತು ಕ್ಲೀನರ್ ತೀವ್ರವಾಗಿ ಗಾಯಗೊಂಡಿದ್ದಾರೆ.



ಸೀ ಬರ್ಡ್ ಬಸ್ಸಿನಲ್ಲಿ ಹಂಪಿಯಿಂದ ಗೋವಾಕ್ಕೆ ಪ್ರಯಾಣಿಸುತ್ತಿದ್ದ ಇಸ್ರೇಲ್ ,ಸ್ಪೇನ್,ಯು.ಕೆ ಮತ್ತಿತರ ದೇಶಗಳ ವಿದೇಶಿ ಪ್ರಯಾಣಿಕರಿದ್ದು ಗೋವಾ ವಿಮಾನ ನಿಲ್ದಾಣದಿಂದ ತಮ್ಮ ದೇಶಗಳಿಗೆ ತೆರಳಬೇಕಿದ್ದ ಇವರಲ್ಲಿ 8 ಜನರು ಗಾಯಗೊಂಡಿದ್ದಾರೆ.

ಗಾಯಾಳುಗಳನ್ನು ಕಾರವಾರ ಕಿಮ್ಸ್ ಮತ್ತು ಅಂಕೋಲಾ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಗಂಭೀರ ಗಾಯಗೊಂಡವರನ್ನು ವಿವಿಧ ಖಾಸಗಿ ಆಸ್ಪತ್ರೆಗಳಿಗೆ ಸಾಗಿಸಲಾಗಿದೆ. ನಸುಕಿನ ಜಾವದಲ್ಲಿ ಸಂಭವಿಸಿದ ಸರಣಿ ಅಪಘಾತದಲ್ಲಿ ರಾಷ್ಟ್ರೀಯ ಹೆದ್ದಾರಿ 52ರಲ್ಲಿ ನಾಲ್ಕು ವಾಹನಗಳು ಜಖಂಗೊಂಡು ನಿಂತಿದ್ದರಿಂದ ಹಲವು ಗಂಟೆಗಳ ಕಾಲ ವಾಹನಗಳ ಸಂಚಾರಕ್ಕೆ ವ್ಯತ್ಯಯ ಉಂಟಾಯಿತು.

ಅಂಕೋಲಾ ಪೊಲೀಸ್ ನಿರೀಕ್ಷಕ ಚಂದ್ರಶೇಖರ ಮಠಪತಿ, ಪಿ.ಎಸ್.ಐ ಬಸವರಾಜ ಹಾದಿಮನಿ, ಸುನೀಲ ಹುಲ್ಲೊಳ್ಳಿ ರಾಷ್ಟ್ರೀಯ ಹೆದ್ದಾರಿ ಗಸ್ತು ತಂಡ, ಸುಂಕಸಾಳ ಉಪ ಠಾಣೆಯ ಸಿಬ್ಬಂದಿಗಳು ಭೇಟಿ ನೀಡಿ ಸಂಚಾರ ವ್ಯವಸ್ಥೆ ಸುಗಮಗೊಳಿಸಿದರು.

ಡಿ.ವೈ.ಎಸ್.ಪಿ ಗಿರೀಶ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಪಡೆದರು. ವಿದೇಶಿ ಪ್ರಜೆಗಳ ಕುರಿತಂತೆ ಆಯಾ ದೇಶಗಳ ರಾಯಭಾರ ಕಚೇರಿಗಳಿಗೆ ಮಾಹಿತಿ ನೀಡಲಾಗಿದೆ.

ಉಣಕಲ್ಲ ಸಿದ್ದಪ್ಪಜ್ಜ ಶ್ರೇಷ್ಠ ಶರಣರು: ವೀರೇಂದ್ರ ಹೆಗ್ಗಡೆ

ಹುಬ್ಬಳ್ಳಿ: ನಾವು ಮಾಡಿದ ಕೆಲಸಗಳು ಮಾತ್ರ ಸದಾ ಜನಮಾನಸದಲ್ಲಿ ಇರುತ್ತವೆ. ಮಹಾತ್ಮರನ್ನು ಸ್ಮರಿಸುವ ಸಂಸ್ಕೃತಿ ಈ ಭಾಗದಲ್ಲಿ ಇನ್ನೂ ಉಳಿದಿದ್ದು, ಇದು ಉತ್ತಮ ಕಾರ್ಯ ಎಂದು ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಹೇಳಿದರು.

ಇಲ್ಲಿನ ಉಣಕಲ್ಲನ ಸಿದ್ಧೇಶ್ವರ ಮಠದ (ಹೊಸ ಮಠ) ದ್ವಾರ ಬಾಗಿಲು ನಿರ್ಮಾಣಕ್ಕೆ ಗುರುವಾರ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಉಣಕಲ್ಲ ಸಿದ್ದಪ್ಪಜ್ಜನವರು ಶ್ರೇಷ್ಠ ಶರಣರಾಗಿದ್ದರು. ಅವರ ಇತಿಹಾಸ ದೊಡ್ಡದು. ಸಮಾಜವನ್ನು ಎಚ್ಚರಿಸಿ, ಜಾಗೃತಿ ಮೂಡಿಸಿದ್ದೇ ಮಹಾತ್ಮರ ನಿಜವಾದ ಪವಾಡ ಎಂದರು.

ಒಂದು ಕನಸು ಕಂಡರೆ ಅದನ್ನು ಸಾಕಾರಗೊಳಿಸಲು ಎಲ್ಲರೂ ಕೈಜೋಡಿಸಬೇಕು. ಅದರಂತೆ ಇಲ್ಲಿನ ಸಿದ್ಧಪ್ಪಜ್ಜನ ಹೊಸಮಠವನ್ನು ನಿರ್ಮಾಣ ಮಾಡಲಾಗಿದೆ. ಅದಷ್ಟು ಶೀಘ್ರ ಮಠದ ಶಿಲಾ ದ್ವಾರವನ್ನು ನಿರ್ಮಿಸಬೇಕು ಎಂದು ಹೇಳಿದರು.

ಮಹಾನಗರ ಪಾಲಿಕೆ ಸದಸ್ಯ ರಾಜಣ್ಣ ಕೊರವಿ ಮಾತನಾಡಿ, ಹೊಸಮಠವನ್ನು ನಿರ್ಮಾಣ ಮಾಡಲು ಎರಡು ವರ್ಷಗಳ ಹಿಂದೆ ಸಂಕಲ್ಪ ಮಾಡಲಾಗಿತ್ತು. ಅದಕ್ಕೆ ಅನೇಕ ದಾನಿಗಳು, ಧರ್ಮಸ್ಥಳ ಸಂಘದಿಂದಲೂ ನೆರವು ಸಿಕ್ಕಿದೆ ಎಂದರು.



ವೀರೇಂದ್ರ ಹೆಗ್ಗಡೆಯವರು ಧಾರ್ಮಿಕ, ಶಿಕ್ಷ ಆರೋಗ್ಯ ಸೇರಿ ಎಲ್ಲ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಅವರು ಸಮಾಜ ಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡಿದ್ದಾರೆ. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೂಲಕ ಅನೇಕರು ಸ್ವಾವಲಂಬಿ ಬದುಕು ಕಟ್ಟಿಕೊಂಡಿದ್ದಾರೆ ಎಂದು ಹೇಳಿದರು.

ಮುಂದಿನ ವರ್ಷದ ಜಾತ್ರೆ ಒಳಗಾಗಿ ಮಠದ ದ್ವಾರವನ್ನು ನಿರ್ಮಿಸಲಾಗುವುದು. ಸಿದ್ಧಪ್ಪಜ್ಜನ ಜಾತ್ರೆ ಒಂದು ತಿಂಗಳು ನಡೆಯಲಿದ್ದು, 21 ದಿನ ಪ್ರವಚನ ಜರುಗಲಿದೆ. ಸಾಮೂಹಿಕ ವಿವಾಹ, ಬಯಲು ಕುಸ್ತಿ, ಅನ್ನಸಂತರ್ಪಣೆ ಸೇರಿ ವಿವಿಧ ಕಾರ್ಯಕ್ರಮಗಳು ನಡೆಯಲಿವೆ ಎಂದರು.

ಮಿಸ್ ಯೂನಿವರ್ಸಲ್ ಪೆಟೀಟ್ 2024 ಸ್ಪರ್ಧೆಯ ವಿಜೇತರಾದ ಡಾ.ಶ್ರುತಿ ಹೆಗಡೆ, ಕುಸ್ತಿ ಪಟು ವಿಕ್ರಂ ಚಿಲ್ಲಣ್ಣವರ, ಕೊಕ್ಕೊ ಪಟು ಖುಷಿ ಮತ್ತು ಮಠಕ್ಕೆ ದೇಣಿಗೆ ನೀಡಿದ ಭಕ್ತರನ್ನು ಸನ್ಮಾನಿಸಲಾಯಿತು.

ವಿಶ್ವನಾಥ ಕೊರವಿ ಸ್ವಾಗತಿಸಿದರು. ರಾಮಣ್ಣ ಪದ್ಮಣ್ಣವರ, ಗುರು ಎಂಜಿನಿಯರ್, ಗುರುಸಿದ್ಧಪ್ಪ ಮೆಣಸಿನಕಾಯಿ, ದಯಾಶೀಲ ಇದ್ದರು.

ಫೆ.22ರಂದು ಜಂಬಗಿ ಸೂಪರ್ ಸ್ಪೆಷಾಲಿಟಿ ನೇತ್ರ ಸಂಸ್ಥೆ ಲೋಕಾರ್ಪಣೆ

ವಿಶ್ವಮಟ್ಟದ ದೃಷ್ಟಿ ಆರೈಕೆ: ಡಾ.ಲಕ್ಷ್ಮಣ ಜಂಬಗಿ

ಬೆಳಗಾವಿ: ರಾಜ್ಯದ ಎರಡನೇಯ ರಾಜ್ಯಧಾನಿ ಕುಂದಾನಗರಿ ಬೆಳಗಾವಿ ದಿನನಿತ್ಯ ದೊಡ್ಡ ಮಟ್ಟದಲ್ಲಿ ಬೆಳೆಯುತ್ತಿರುವುದರಿಂದ ಬೆಳಗಾವಿಯ ಜನತೆಗೆ ಅನುಕೂಲವಾಗುವ ನಿಟ್ಟಿನಲ್ಲಿ ಫೆ.22ರಂದು ಜಂಬಗಿ ಸೂಪರ್ ಸ್ಪೆಷಾಲಿಟಿ ನೇತ್ರ ಸಂಸ್ಥೆ ಹಾಗೂ ಬೆಳಗಾವಿ ಲೇಸರ್ ಮತ್ತು ಕಾಂಟ್ಯಾಕ್ಟ್ ಲೆನ್ಸ್ ಕ್ಲಿನಿಕ್ ಆಸ್ಪತ್ರೆಯು ನಗರದ ಕೊಲ್ಹಾಪೂರ ವೃತ್ತದಲ್ಲಿ ಲೋಕಾರ್ಪಣೆಗೊಳ್ಳಲಿದೆ ಎಂದು ಜಂಬಗಿ ಸೂಪರ್ ಸ್ಪೆಷಾಲಿಟಿ ನೇತ್ರ ಸಂಸ್ಥೆಯ ಎಂಡಿ ಲಕ್ಷ್ಮಣ ಜಬಂಗಿ ಹೇಳಿದರು.

ಗುರುವಾರ ನಗರದ ಕೊಲ್ಹಾಪೂರ ವೃತ್ತದಲ್ಲಿರುವ ಜಂಬಗಿ ಕಣ್ಣಿನ ಸಂಸ್ಥೆಯ ಆಸ್ಪತ್ರೆಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಂಬಗಿ ಸೂಪರ್ ಸ್ಪೆಷಾಲಿಟಿ ನೇತ್ರ ಸಂಸ್ಥೆಯು ನೂತನವಾಗಿ ಪ್ರಾರಂಭಕೊಳ್ಳುವುದಕ್ಕೆ ಸಜ್ಜಾಗಿದ್ದು, ಬೆಳಗಾವಿಯಲ್ಲಿಯೇ ಜಾಗತಿಕ ಮಟ್ಟದಲ್ಲಿ ಜನತೆಗೆ ಅನಕೂಲವಾಗುವ ನಿಟ್ಟಿನಲ್ಲಿ ಈ ಸಂಸ್ಥೆಯನ್ನು ಪ್ರಾರಂಭ ಮಾಡಲಾಗುತ್ತಿದೆ. ಫೆ.22ರಂದು ನೂತನ ಕಣ್ಣಿನ ಆಸ್ಪತ್ರೆಯನ್ನು



ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ, ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಡಾ.ಪ್ರಭಾಕರ ಕೋರೆ ಅವರ ನೇತೃತ್ವದಲ್ಲಿ ಲೋಕಾರ್ಪಣೆಗೊಳಿಸಲಿದ್ದಾರೆ ಎಂದು ಹೇಳಿದರು.

ದೂರದ ನಗರಗಳಿಗೆ ಪ್ರಯಾಣಿಸದೇ, ಬೆಳಗಾವಿಯಲ್ಲೇ ಜಾಗತಿಕ ಮಟ್ಟದ ಕಣ್ಣು ಚಿಕಿತ್ಸೆಯನ್ನು ಪಡೆಯುವ ಒಂದು ಅವಕಾಶ ಇದ್ದಾಗಿದೆ. ಡಾ.ಲಕ್ಷಣ ಜಂಬಗಿ ಮತ್ತು ಡಾ.ವರ್ಷಾ ಜಂಬಗಿ ಅವರು ಕಳೆದ 30 ವರ್ಷಗಳ ಸೇವಾ ಪರಂಪರೆಯ ಮೇಲೆ ನಿರ್ಮಿತವಾಗಿರುವ ಈ ಸಂಸ್ಥೆಯಾಗಿದೆ. ಮಾನವೀಯ ಸೇವೆಯನ್ನು ಆತ್ಯಾಧುನಿಕ ತಂತ್ರಜ್ಞಾನದೊಂದಿಗೆ ಸಂಯೋಜಿಸಿ, ರೋಗಿಗಳಿಗೆ ಅತಿ ಶೀಘ್ರ ಹಾಗೂ ಉತ್ತಮ ದೃಷ್ಟಿ ಫಲಿತಾಂಶ ಒದಗಿಸುವ ನಿರೀಕ್ಷೆಯಲ್ಲಿದ್ದೇವೆ ಎಂದರು.

ಈ ಕಣ್ಣಿನ ಸಂಸ್ಥೆಯು ಡಾ.ಅಮೋಘ ಲಕ್ಷಣ ಜಂಬಗಿ ಅವರ ನೇತೃತ್ವದಲ್ಲಿ ಪ್ರಾರಂಭಗೊಳ್ಳಲಿದ್ದು, ಇದು ಸುಮಾರು 35,000 ಚದರ ಅಡಿಗಳ ವಿಶಾಲ ಹಾಗೂ ಆತ್ಯಾಧುನಿಕ ಸೌಲಭ್ಯಗಳನ್ನು ಹೊಂದಿದೆ. ಈ ಸಂಸ್ಥೆ, ಒಂದೇ ಸೂರಿನಡಿ ಸಂಪೂರ್ಣ ಕಣ್ಣಿನ ಚಿಕಿತ್ಸೆ ಒದಗಿಸುತ್ತದೆ. ಇದರಲ್ಲಿ ಕಣ್ಣಿನ ಮೋತಿ ಬಿಂದು, ಕ್ಯಾಟರಾಕ್ಟ್, ಕಾರ್ನಿಯಾ, ರೆಟಿನಾ, ಗ್ಲಕೋಮಾ, ಮಕ್ಕಳ ನೇತ್ರಚಿಕಿತ್ಸೆ, ಒಕ್ಯುಲೋಪ್ಲಾಸ್ಟಿ, ನ್ಯೂರೋ-ಅಫ್ತಾಲ್ಮಾಲಜಿ, ರಿಫ್ರಾಕ್ಟಿವ್ ಶಸ್ತ್ರಚಿಕಿತ್ಸೆ ಸೇರಿದಂತೆ ವಿಶೇಷ ಡ್ರೈ ಐ ಹಾಗೂ ಕಾಂಟ್ಯಾಕ್ಟ್ ಲೆನ್ಸ್ ಕ್ಲಿನಿಕ್ ಕೂಡ ಸೇರಿದೆ ಎಂದು ಹೇಳಿದರು.

ಇನ್ನು ಈ ಸಂಸ್ಥೆಯಲ್ಲಿ ಮೊದಲ ಬಾರಿಗೆ ರೋಬೋಟಿಕ್ 4 ಫ್ಯಾಕೋ ಕ್ಯಾಟರಾಕ್ಟ್ ಶಸ್ತ್ರಚಿಕಿತ್ಸೆ ಹಾಗೂ ಕನ್ನಡಕ ಮುಕ್ತಿಗಾಗಿ ಜೆಸ್ಸ್ ಎಂಇಎಲ್ 90 ಎಕ್ಸರ್ ಲೇಸರ್ ತಂತ್ರಜ್ಞಾನವನ್ನು ಹೆಚ್ಚಿನ ನಿಖರತೆ, ಸುರಕ್ಷತೆ ಮತ್ತು ವೇಗವಾದ ಗುಣಮುಖತೆಯನ್ನು ಪಡೆದುಕೊಳ್ಳಲಿದೆ ಎಂದು ತಿಳಿಸಿದರು.

ಈ ಸಂಸ್ಥೆಯಲ್ಲಿ ಡಾ.ಅಮೋಘ ಜಂಬಗಿ ಅವರ ತಂಡವು ವಿವಿಧ ಉಪವಿಭಾಗಗಳಲ್ಲಿ ಫೆಲೋಶಿಪ್ ಪಡೆದು ನುರಿತ ವೈದ್ಯರ ತಂಡವು ಕಾರ್ಯನಿರ್ವಹಿಸಲಿದೆ. ದಿನದ 24 ಗಂಟೆಯೂ ಜನತೆಯ ಸೇವೆ ಮಾಡಲಿದೆ ಇದರ ಲಾಭವನ್ನು ಸಾರ್ವಜನಿಕರು ಪಡೆದುಕೊಳ್ಳಬೇಕೆಂದು ತಿಳಿಸಿದರು.

ಈ ವೇಳೆ ಡಾ.ಜಗದೀಶ ಪಾಟೀಲ, ಡಾ.ಹೇಮಂತ್, ಡಾ.ಸ್ನೇಹಾ ಬಂಡಗೆ, ಡಾ. ಮಿತಾಲಿಶಾ, ಸೇರಿದಂತೆ ಆಸ್ಪತ್ರೆಯ ಸಿಬ್ಬಂದಿಗಳು ಇದ್ದರು.

ರೈಲು ಮಾರ್ಗಗಳ ಅನುಷ್ಠಾನಕ್ಕೆ ಭೂಸ್ವಾಧೀನ ಅಡ್ಡಿ

ಹುಬ್ಬಳ್ಳಿ: ರಾಜ್ಯಾದ್ಯಂತ ಹಲವು ರೈಲು ಯೋಜನೆಗಳು ಪ್ರಗತಿಯಲ್ಲಿದ್ದು, ಗಣನೀಯ ಹಣಕಾಸು ಹಂಚಿಕೆ ಮತ್ತು ಆಡಳಿತಾತ್ಮಕ ಅನುಮೋದನೆಗಳು ಈಗಾಗಲೇ ಲಭಿಸಿವೆ. ಆದರೆ, ಈ ಯೋಜನೆಗಳ ಅನುಷ್ಠಾನದ ವೇಗವು ಬಹುಪಾಲು ಸಕಾಲಿಕ ಭೂಸ್ವಾಧೀನದ ಮೇಲೆ ಅವಲಂಬಿತವಾಗಿದೆ ಎಂದು ನೈರುತ್ಯ ರೈಲ್ವೆ ತಿಳಿಸಿದೆ.

ಈ ಕುರಿತು ಪತ್ರಿಕಾ ಪ್ರಕಟಣೆಗೆ ತಿಳಿಸಿದ್ದು, ರಾಜ್ಯದಲ್ಲಿ ಮಂಜೂರಾದ ರೈಲ್ವೆ ಯೋಜನೆಗಳಿಗೆ ಒಟ್ಟು 9,064 ಹೆಕ್ಟೇರ್ ಭೂಮಿ ಅಗತ್ಯವಿದೆ. ಇದರಲ್ಲಿ 5,707 ಹೆಕ್ಟೇರ್ ಭೂಮಿ, ಅಂದರೆಶೇ.63 ರಷ್ಟು, ಈಗಾಗಲೇ ಸ್ವಾಧೀನಗೊಂಡಿದೆ. ಇನ್ನೂ 3,357 ಹೆಕ್ಟೇರ್ ಭೂಮಿ (ಶೇ.37) ಸ್ವಾಧೀನಗೊಳ್ಳಬೇಕಿದ್ದು, ಇದು ಹಲವಾರು ಪ್ರಮುಖ ರೈಲು ಮಾರ್ಗಗಳ ಅನುಷ್ಠಾನಕ್ಕೆ ಅಡ್ಡಿಯಾಗುತ್ತಿದೆ ಎಂದು ತಿಳಿಸಿದೆ.

96 ಕಿ.ಮೀ ಉದ್ದದ ಶಿವಮೊಗ್ಗ-ರಾಣೇಬೆನ್ನೂರು ಹೊಸ ರೈಲು ಮಾರ್ಗಕ್ಕೆ 559 ಹೆಕ್ಟೇರ್ ಭೂಮಿ ಅಗತ್ಯವಿದ್ದು, ಅದರಲ್ಲಿ 333 ಹೆಕ್ಟೇರ್ ಇನ್ನೂ ಬಾಕಿಯಿದೆ. ಹಾಗೆಯೇ, ಬೆಳಗಾವಿ-ಧಾರವಾಡ (73ಕಿ.ಮೀ) ಹೊಸ ಮಾರ್ಗಕ್ಕೆ 581 ಹೆಕ್ಟೇರ್, ಶಿವಮೊಗ್ಗ-ಹರಿಹರ (79 ಕಿ.ಮೀ) ಹೊಸ ಮಾರ್ಗಕ್ಕೆ 488 ಹೆಕ್ಟೇರ್, ವೈಟ್‌ಫೀಲ್ಡ್-ಕೋಲಾರ (53 ಕಿ.ಮೀ) ಹೊಸ ಮಾರ್ಗಕ್ಕೆ 337 ಹೆಕ್ಟೇರ್ ಮತ್ತು ಹಾಸನ-ಬೇಲೂರು (32 ಕಿ.ಮೀ) ಹೊಸ ಮಾರ್ಗಕ್ಕೆ 206 ಹೆಕ್ಟೇರ್ ಭೂಮಿ ಅಗತ್ಯವಿದ್ದು, ಈ ಎಲ್ಲಾ ಯೋಜನೆಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿಲ್ಲ ಎಂದು ತಿಳಿಸಿದೆ.

ಭಾರತ ಸರ್ಕಾರವು ಈ ಯೋಜನೆಗಳನ್ನು ಸಮಯಕ್ಕೆ ಸರಿಯಾಗಿ ಪೂರ್ಣಗೊಳಿಸಲು ತನ್ನ ಬದ್ಧತೆಯನ್ನು ವ್ಯಕ್ತಪಡಿಸಿದ್ದು, ಅಗತ್ಯ ಹಣಕಾಸು ಮತ್ತು ಕಾರ್ಯಯೋಜನೆಗಳನ್ನು ರೂಪಿಸಿದೆ. ಆದಾಗ್ಯೂ, ಇಂತಹ ದೊಡ್ಡ ಮಟ್ಟದ ಮೂಲಸೌಕರ್ಯ ಅಭಿವೃದ್ಧಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಸಮನ್ವಯ ಅತ್ಯಗತ್ಯ. ವಿಶೇಷವಾಗಿ, ಕರ್ನಾಟಕ ಸರ್ಕಾರದಿಂದ ಸಕಾಲಿಕ ಭೂಸ್ವಾಧೀನ ಮತ್ತು ನಿರಂತರ ಸಹಕಾರ ದೊರೆತರೆ ಯೋಜನೆಗಳ ವೇಗ ಹೆಚ್ಚಿಸಬಹುದು.

ಆದ್ದರಿಂದ ಬಾಕಿ ಇರುವ ಭೂಸ್ವಾಧೀನವು ಕೇವಲ ಆಡಳಿತಾತ್ಮಕ ವಿಷಯವಲ್ಲ, ಅದು ಅಭಿವೃದ್ಧಿಯ ಸವಾಲಾಗಿದೆ. ಭೂಮಿಸ್ವಾಧೀನದಲ್ಲಿ ಉಂಟಾಗುವ ಪ್ರತಿಯೊಂದು ವಿಳಂಬವು ಯೋಜನೆಯ ಸಮಯಾವಧಿ ವಿಸ್ತರಣೆ, ವೆಚ್ಚ ವೃದ್ಧಿ ಮತ್ತು ಸಾಮಾಜಿಕ-ಆರ್ಥಿಕ ಲಾಭಗಳ ಮುಂದೂಡಿಕೆಗೆ ಕಾರಣವಾಗುತ್ತದೆ.

ಅಗತ್ಯವಿರುವ ಭೂಮಿಯ 2/3 ಈಗಾಗಲೇ ಸ್ವಾಧೀನಗೊಂಡಿರುವುದು ಗಮನಾರ್ಹ ಸಾಧನೆ. ಇನ್ನು ಉಳಿದ ಭೂಸ್ವಾಧೀನವನ್ನು ವೇಗಗೊಳಿಸಲು ಪೂರ್ವಭಾವಿ ಯೋಜನೆ, ಸಮರ್ಪಕ ಸಮನ್ವಯ ಮತ್ತು ಸ್ಥಳೀಯ ಸಮುದಾಯಗಳೊಂದಿಗೆ ಸಂವಾದ ಅತ್ಯಂತ ಮುಖ್ಯ. ರಾಜ್ಯ ಸರ್ಕಾರ, ಜಿಲ್ಲಾಡಳಿತ ಮತ್ತು ಜನಪ್ರತಿನಿಧಿಗಳ ಸಹಯೋಗದ ಮೂಲಕ ಬಾಕಿ ಸಮಸ್ಯೆಗಳನ್ನು ಶೀಘ್ರ ಪರಿಹರಿಸಬೇಕು ಎಂದು ತಿಳಿಸಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಅಧ್ಯಕ್ಷರಾಗಿ ರವೀಂದ್ರ ಕೇಣಿ ಪುನರಾಯ್ಕೆ

ಅಂಕೋಲಾ: ಕಳೆದ ಆರು ವರ್ಷಗಳಿಂದ ವಿದಾಯಕ ಕಾರ್ಯಕ್ರಮಗಳ ಮೂಲಕ ಗುರುತಿಸಿಕೊಂಡಿರುವ ಸಾಮಾಜಿಕ ಸೇವಾ ಸಂಸ್ಥೆ ದಿನಕರ ವೇದಿಕೆಯ ಅಧ್ಯಕ್ಷರಾಗಿ ರವೀಂದ್ರ ಕೇಣಿ ಅವರನ್ನು ಪುನರಾಯ್ಕೆ ಮಾಡಲಾಗಿದೆ.ಸಂಸ್ಥೆಯ ಸರ್ವ ಸಾಧಾರಣ ಸಭೆಯಲ್ಲಿ ರವೀಂದ್ರ ಕೇಣಿ ಮತ್ತು ತಂಡದ ಅವಿರೋಧ ಆಯ್ಕೆ ನಡೆಯಿತು. ವೇದಿಕೆಯ ಕಾರ್ಯದರ್ಶಿಯಾಗಿ ಸಂದೇಶ



ಉಳ್ಳಿಕಾಶಿ, ಉಪಾಧ್ಯಕ್ಷರುಗಳಾಗಿ ರಫೀಕ ಶೇಖ ಮತ್ತು ಡಾ.ಕರುಣಾಕರ ನಾಯ್ಕ, ಸಹಕಾರ್ಯದರ್ಶಿಗಳಾಗಿ ವಸಂತ ನಾಯ್ಕ ಮತ್ತು ಎನ್.ವಿ.ರಾಠೋಡ, ಕೋಶಾಧ್ಯಕ್ಷರಾಗಿ ಸಂತೋಷ ನಾಯಕ, ಸಂಘಟನಾ ಕಾರ್ಯದರ್ಶಿಯಾಗಿ ಜಿ.ಆರ್. ತಾಂಡೇಲ ಆಯ್ಕೆಯಾದರು. ದಿನಕರ ವೇದಿಕೆಯ ಉತ್ತರ ಕನ್ನಡ ಜಿಲ್ಲೆಯ ಮತ್ತು ತಾಲೂಕು ಘಟಕಗಳ ಪ್ರತಿನಿಧಿಗಳ ಆಯ್ಕೆ ಸಹ ಅವಿರೋಧವಾಗಿ ನಡೆಯಿತು.

ಜಿ.ಎಚ್.ನಾಯಕ ಪ್ರತಿಷ್ಠಾನಕ್ಕೆ ಆಯ್ಕೆ

ಅಂಕೋಲಾ: ಕನ್ನಡ ಸಾಹಿತ್ಯ ಲೋಕದಲ್ಲಿ ಖ್ಯಾತ ವಿಮರ್ಶಕರಾಗಿ ಗುರುತಿಸಿಕೊಂಡಿದ್ದ ತಾಲೂಕಿನ ಸೂರ್ವೆಯ ಜಿ.ಎಚ್.ನಾಯಕ ಅವರ ಆಶಯ ಮತ್ತು ಆದರ್ಶಗಳನ್ನು ಮುಂದುವರಿಸುವ ಉದ್ದೇಶದಿಂದ ಜಿ.ಎಚ್.ನಾಯಕ ಪ್ರತಿಷ್ಠಾನ ಸ್ಥಾಪಿಸಲಾಗಿದ್ದು, ಅಧ್ಯಕ್ಷರಾಗಿ ಸಾಹಿತಿ ಗೋಪಾಲಕೃಷ್ಣ ನಾಯಕ, ಕಾರ್ಯದರ್ಶಿಯಾಗಿ ಎಸ್.ವಿ.ವಸ್ತ್ರದ, ಉಪಾಧ್ಯಕ್ಷರಾಗಿ ಜಾರ್ಜ ಫರ್ನಾಂಡೀಸ್, ಸಹ ಕಾರ್ಯದರ್ಶಿಯಾಗಿ ಮಹೇಶ ಗೋಳಿಕಟ್ಟೆ, ಕೋಶಾಧ್ಯಕ್ಷರಾಗಿ ಸಂದೀಪ ನಾಯಕ ನೇಮಕಗೊಂಡಿದ್ದಾರೆ.ಹಿರಿಯ ಸಾಹಿತಿ ಶಾಂತಾರಾಮ ನಾಯಕ ಹಿಚ್ಕಡ, ಪತ್ರಕರ್ತ ಗಂಗಾಧರ ಹಿರೇಗುತ್ತಿ, ಜಿ.ಪಿ.ಬಸವರಾಜ್, ಪೃಥ್ವಿ ದತ್ತಚಂದ್ರ, ವಿನಯಾ ಒಕ್ಕುಂದ, ಕೀರ್ತಿಶ್ರೀ ನಾಯಕ ಪ್ರತಿಷ್ಠಾನದ ಗೌರವ ಸದಸ್ಯರುಗಳಾಗಿದ್ದು, ನಾರಾಯಣ ನಾಯಕ, ಹೊನ್ನಮ್ಮ ನಾಯಕ, ಜೆ.ಪ್ರೇಮಾನಂದ, ಮಾರುತಿ ಹರಿಕಂತ್ರ ಅವರನ್ನು ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ.ಪ್ರತಿಷ್ಠಾನದಿಂದ ಸಾಹಿತ್ಯ, ಕಲೆ, ಸಂಸ್ಕೃತಿ ಹಾಗೂ ಜನಪರ ಅಭಿವೃದ್ಧಿ ಕಾರ್ಯದ ಜೊತೆಗೆ ವಿಶೇಷ ಉಪನ್ಯಾಸ ಕಾರ್ಯಕ್ರಮ, ಸಾಹಿತ್ಯ, ನಾಡುನುಡಿ, ಕಲೆ, ವಿಮರ್ಶೆ ಮತ್ತು ಸಂಶೋಧನ ಪುಸ್ತಕ ಬರೆಯುವವರಿಗೆ ಪ್ರೋತ್ಸಾಹ ಧನ ವಿತರಣೆ, ಜಿ.ಎಚ್.ನಾಯಕ ಅವರ ನೆನಪಿನಲ್ಲಿ ಪ್ರತಿ ವರ್ಷ ಕನ್ನಡ ವಿಮರ್ಶಕರಿಗೆ, ಸಂಶೋಧಕರಿಗೆ ಪ್ರಶಸ್ತಿ, ಉತ್ತಮ ಕೃತಿಗಳನ್ನು ಗುರುತಿಸಿ ಪ್ರಶಸ್ತಿ ಪುರಸ್ಕಾರ ಸೇರಿದಂತೆ ಹಲವಾರು ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗುವುದು ಎಂದು ಪ್ರತಿಷ್ಠಾನದ ಅಧ್ಯಕ್ಷ ಗೋಪಾಲಕೃಷ್ಣ ನಾಯಕ ತಿಳಿಸಿದ್ದಾರೆ.

16 ನೇ ಆವೃತಿ ಕ್ರಿಕೆಟ್ ಟೂರ್ನಮೆಂಟ್‌ಗೆ ಚಾಲನೆ



ಮುಂಡಗೋಡ: ತಾಲೂಕು ಕ್ರೀಡಾಂಗಣದಲ್ಲಿ ಮುಂಡಗೋಡ ಪ್ರೀಮಿಯರ್ ಲೀಗ್ (ಎಂಪಿಎಲ್) 16ನೇ ಆವೃತಿಯ ಕ್ರಿಕೆಟ್ ಟೂರ್ನಮೆಂಟ್‌ಗೆ ಗುರುವಾರ ಚಾಲನೆ ನೀಡಲಾಯಿತು. ಫೆ.22ರಂದು ಕೊನೆಗೊಳ್ಳಲಿದೆ. ಒಟ್ಟು ಎಂಟು ತಂಡ ಪ್ರಶಸ್ತಿಗಾಗಿ ಹೋರಾಟ ನಡೆಸಲಿದೆ. ಗುತ್ತಿಗೆದಾರ ರವಿ ಹಾವೇರಿ ಸಭಾ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮುಖಂಡ ಜಮೀರ ಅಹ್ಮದ ದರ್ಗಾವಾಲೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖಂಡರಾದ ಫಣಿರಾಜ ಹದಳಿಗಿ, ಪ್ರಕಾಶ ಕ್ಯಾಲಕೊಂಡ, ಮಂಜುನಾಥ ಕ್ಯಾಲಕೊಂಡ, ಅಣ್ಣಪ್ಪ ಕೊರವರ, ಚನ್ನಪ್ಪ ಹಿರೇಮಠ, ಶಂಭು ಶಿಂದೋಗಿ, ಶಿವು ಕೊರವರ ಇದ್ದರು.

16ನೇ ಆವೃತಿಯ ಮುಂಡಗೋಡ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಾಮೆಂಟ್‌ನ್ನು ಮುಖಂಡ ಮಂಜುನಾಥ ಕ್ಯಾಲಕೊಂಡ ಆಯೋಜಿಸಿದ್ದು ಪಂದ್ಯಾವಳಿಯ ನೇರಪ್ರಸಾರ ಮಾಡಲಾಗಿತ್ತು.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	62900	69689
ಬಿಳಿಗೋಟು	29199	41800
ಕೆಂಪುಗೋಟು	26899	38899
ಬೆಟ್ಟೆ	41699	53561
ರಾಶಿ	53099	56408
ಚಾಲಿ	41099	49712
ಬಿ.ಕಾಳುಮೆಣಸು	87899	87899



ಮುಂಡಗೋಡ: ರಾಜ್ಯ ಅನ್ನದಾತ ರೈತ ಸಂಘ ಮತ್ತು ಹಸಿರು ಸೇನೆ ವತಿಯಿಂದ ಗುರುವಾರ ನಡೆದ ಶಿವಾಜಿ ಜಯಂತಿ ಕಾರ್ಯಕ್ರಮದಲ್ಲಿ ಮುಂಡಗೋಡದ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಕೃಷ್ಣಾ ಕುಳ್ಳೂರ ಅವರ ಉತ್ತಮ ಸೇವೆಯನ್ನು ಪರಿಗಣಿಸಿ ಅವರಿಗೆ ಅಭಿನಂದನಾ ಪತ್ರ ನೀಡಿ ಗೌರವಿಸಲಾಯಿತು. ಸಂಘಟನೆ ರಾಜ್ಯಾಧ್ಯಕ್ಷ ಚಿದಾನಂದ ಹರಿಜನ, ವೇ.ಮೂ.ರುದ್ರಮುನಿ ಸ್ವಾಮಿಗಳು ಹಿರೇಮಠ ಮತ್ತು ರಾಜ್ಯ ಸಮಿತಿ ಪದಾಧಿಕಾರಿಗಳು ಇದ್ದರು.

ಯೋಜನೆ ಸದುಪಯೋಗಪಡಿಸಿಕೊಳ್ಳಿ

ಶಿರಸಿ: ರೋಗರುಜಿನಗಳಿಂದ ಜಾನುವಾರುಗಳು ಮೃತಪಟ್ಟಾಗ ಹಾಲು ಉತ್ಪಾದಕರಿಗೆ ಉಂಟಾಗುವ ಆರ್ಥಿಕ ನಷ್ಟವನ್ನು ತಪ್ಪಿಸಲು ಧಾರವಾಡ ಹಾಲು ಒಕ್ಕೂಟವು ಜಾರಿಗೆ ತಂದಿರುವ ಕಡಿಮೆ ಪ್ರೀಮಿಯಂ ಮೊತ್ತದ 'ಜಾನುವಾರು ವಿಮೆ' ಯೋಜನೆಯನ್ನು ಪ್ರತಿಯೊಬ್ಬ ರೈತರು ಸದುಪಯೋಗಪಡಿಸಿಕೊಳ್ಳಬೇಕು ಎಂದು ಕೆಡಿಸಿಸಿ ಬ್ಯಾಂಕ್ ನಿರ್ದೇಶಕ ಹಾಗೂ ಧಾರವಾಡ ಹಾಲು ಒಕ್ಕೂಟದ ಉಪಾಧ್ಯಕ್ಷ ಸುರೇಶ್ಚಂದ್ರ ಹೆಗಡೆ ಕೆಶಿನ್ಮನೆ ಹೇಳಿದರು. ತಾಲೂಕಿನ ಬೆಣಗಾಂವ ಹಾಲು ಉತ್ಪಾದಕರ ಸಹಕಾರ ಸಂಘದ ವತಿಯಿಂದ ಆಯೋಜಿಸಲಾಗಿದ್ದ ಎರಡು ವರ್ಷದ ಲಾಭಾಂಶ ಹಂಚಿಕೆ ಹಾಗೂ ಉತ್ಪಾದಕರಿಗೆ ಪ್ಲಾಸ್ಟಿಕ್ ಬಂಡಿ ವಿತರಿಸುವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಉತ್ತರ ಕನ್ನಡ ಜಿಲ್ಲೆಯು ಅತಿ ಹೆಚ್ಚು ಮಳೆ ಬೀಳುವ ಪ್ರದೇಶವಾಗಿರುವುದರಿಂದ, ಇಲ್ಲಿನ ಹವಾಮಾನಕ್ಕೆ ಜರ್ಸಿ ತಳಿಯ ಆಕಳುಗಳನ್ನು ಸಾಕುವುದು ಹೈನುಗಾರಿಕೆಯಲ್ಲಿ ಹೆಚ್ಚು ಲಾಭದಾಯಕವಾಗಿದೆ. ಸಂಘದ ಲಾಭಾಂಶದ ನೆನಪಿಗಾಗಿ ರೈತರಿಗೆ ಮೇವು ಸಾಗಿಸಲು ಅನುಕೂಲವಾಗುವಂತೆ ಪ್ಲಾಸ್ಟಿಕ್ ಬಂಡಿಗಳನ್ನು ವಿತರಿಸುತ್ತಿರುವುದು ಶ್ಲಾಘನೀಯ ಎಂದರು. ಸಂಘದ ಅಧ್ಯಕ್ಷ ಗಣೇಶ ವಡ್ಡರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ದೇವನಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ನಾಗರಾಜ ಮರಾಠಿ, ಮುಂಡಗನಮನೆ ಸೇವಾ ಸಹಕಾರಿ ಸಂಘದ ಮುಖ್ಯ ಕಾರ್ಯನಿರ್ವಾಹಕ ನಾಗಪತಿ ಭಟ್ಟ ಹಾಗೂ ಬೆಣಗಾಂವ ಹಾಲು ಸಂಘದ ಉಪಾಧ್ಯಕ್ಷ ಹರೀಶ ಹೆಗಡೆ ಉಪಸ್ಥಿತರಿದ್ದರು. ಸಂಘದ ನಿರ್ದೇಶಕ ಸುನೀಲ ಭಟ್ಟ ಸ್ವಾಗತಿಸಿ, ವಂದಿಸಿದರು. ಕಾರ್ಯಕ್ರಮದಲ್ಲಿ ಸಂಘದ ಆಡಳಿತ ಮಂಡಳಿಯ ಸದಸ್ಯರು ಹಾಗೂ ಗ್ರಾಮದ ಹಾಲು ಉತ್ಪಾದಕರು ಪಾಲ್ಗೊಂಡಿದ್ದರು.



ಶಿರಸಿ:ತಾಲೂಕಿನ ಬೆಣಗಾಂವ ಹಾಲು ಉತ್ಪಾದಕರ ಸಹಕಾರ ಸಂಘದ ವತಿಯಿಂದ ಆಯೋಜಿಸಲಾಗಿದ್ದ ಎರಡು ವರ್ಷದ ಲಾಭಾಂಶ ಹಂಚಿಕೆ ಹಾಗೂ ಉತ್ಪಾದಕರಿಗೆ ಪ್ಲಾಸ್ಟಿಕ್ ಬಂಡಿ ವಿತರಿಸುವ ಕಾರ್ಯಕ್ರಮವನ್ನು ಉದ್ಘಾಟಿಸಿ ಕೆಡಿಸಿಸಿ ಬ್ಯಾಂಕ್ ನಿರ್ದೇಶಕ ಹಾಗೂ ಧಾರವಾಡ ಹಾಲು ಒಕ್ಕೂಟದ ಉಪಾಧ್ಯಕ್ಷ ಸುರೇಶ್ಚಂದ್ರ ಹೆಗಡೆ ಕೆಶಿನ್ಮನೆ ಉದ್ಘಾಟಿಸಿದರು.

ಫೆ.22ಕ್ಕೆ ಮಲ್ಟಿ ಸ್ಪೆಶಾಲಿಟಿ ಆಸ್ಪತ್ರೆ ಕಟ್ಟಡ ಉದ್ಘಾಟನೆ

ಕಾರವಾರ: ಜಿಲ್ಲಾಡಳಿತ, ಜಿಪಂ, ಕಾರವಾರ ವೈದ್ಯಕೀಯ ವಿಜ್ಞಾನ ಸಂಸ್ಥೆ ಕಾರವಾರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನೀಯರಿಂಗ್ ವಿಭಾಗ, ಧಾರವಾಡ ಇವರ ಸಂಯುಕ್ತ ಆಶ್ರಯದಲ್ಲಿ, ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಆವರಣದಲ್ಲಿ ನಿರ್ಮಿಸಿರುವ 450 ಹಾಸಿಗೆಗಳ ಮಲ್ಟಿ ಸ್ಪೆಶಾಲಿಟಿ ಆಸ್ಪತ್ರೆ ಕಟ್ಟಡದ ಉದ್ಘಾಟನಾ ಸಮಾರಂಭವು ಫೆ.22ರಂದು ಬೆಳಗ್ಗೆ 11.30 ಗಂಟೆಗೆ ಕಾರವಾರದಲ್ಲಿ ನಡೆಯಲಿದೆ.

ಆಸ್ಪತ್ರೆಯ ಕಟ್ಟಡವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದು, ಕರ್ನಾಟಕ ರಾಜ್ಯ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ಅಧ್ಯಕ್ಷ ಹಾಗೂ ಶಾಸಕ ಸತೀಶ ಕೆ. ಸೈಲ್ ಅಧ್ಯಕ್ಷತೆ ವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ, ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಹಾಗೂ ಉದ್ಯಮಶೀಲತೆ, ಜೀವನೋಪಾಯ ಇಲಾಖೆ ಸಚಿವ ಡಾ. ಶರಣಪ್ರಕಾಶ ರುದ್ರಪ್ಪ ಪಾಟೀಲ, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕರಾದ ಆರ್.ವಿ ದೇಶಪಾಂಡೆ, ಶಿವರಾಮ ಹೆಬ್ಬಾರ್, ದಿನಕರ ಕೆ. ಶೆಟ್ಟಿ, ಭೀಮಣ್ಣ ಟಿ. ನಾಯ್ಕ, ವಿಧಾನ ಪರಿಷತ್ ಶಾಸಕರಾದ ಎಸ್. ವಿ.ಸಂಕನೂರು, ಶಾಂತಾರಾಮ ಬುಡ್ನ ಸಿದ್ದಿ, ಗಣಪತಿ ಡಿ.ಉಳ್ವೇಕರ ಹಾಗೂ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಸತೀಶ ನಾಯ್ಕ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

ಫೆ.22ರಂದು ಜಿಲ್ಲೆಗೆ ಸಿಎಂ ಸಿದ್ದರಾಮಯ್ಯ

ಕಾರವಾರ: ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಫೆ.22ರಂದು ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದು, ಅಂದು ಬೆಳಗ್ಗೆ 11.50ಕ್ಕೆ ಮಂಜುಗುಣಿ ಗ್ರಾಮದಲ್ಲಿ, ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಕಾರವಾರ ವತಿಯಿಂದ, ಅಂಕೋಲಾ ತಾಲೂಕಿನ ಮಂಜುಗುಣಿ ಗ್ರಾಮದಿಂದ ಕುಮಟಾ ತಾಲೂಕಿನ ಗಂಗಾವಳಿ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಗಂಗಾವಳಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಸೇತುವೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.ಮಧ್ಯಾಹ್ನ12.45ಕ್ಕೆ ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಆವರಣದಲ್ಲಿ ನಿರ್ಮಿಸಿರುವ 450 ಹಾಸಿಗೆಗಳ ಮಲ್ಟಿ ಸ್ಪೆಶಾಲಿಟಿ ಆಸ್ಪತ್ರೆ ಕಟ್ಟಡ ಮತ್ತು ಯಲ್ಲಾಪುರ ತಾಲೂಕಿನ ಖಾನಾಪುರ ತಾಳಗುಪ್ಪ ರಾಜ್ಯ ಹೆದ್ದಾರಿ-93 ರ ಕಿ.ಮೀ 82.50 ರಲ್ಲಿ ಸೇತುವೆ ನಿರ್ಮಾಣ, ಯಲ್ಲಾಪುರ ಪಟ್ಟಣದ ನಿರೀಕ್ಷಣಾ ಮಂದಿರದ ಹೊಸ ಕಟ್ಟಡ ನಿರ್ಮಾಣ ಹಾಗೂ ಮುಂಡಗೋಡ ತಾಲೂಕಿನ ಹೊಸ ಪ್ರವಾಸಿ ಮಂದಿರ ನಿರ್ಮಾಣ ಕಾಮಗಾರಿಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮಹಿಳೆಯರ ಮೇಲಿನ ದೌರ್ಜನ್ಯ ತಡೆಗೆ ಕ್ರಮ ಅಗತ್ಯ

ಕಾರವಾರ: ಭಾರತವು ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವ ರಾಷ್ಟ್ರವಾಗಿದ್ದು, ಹೆಣ್ಣು ಮಕ್ಕಳಿಗೆ ವಿಶೇಷವಾದ ಗೌರವ, ಸ್ಥಾನಮಾನ ನೀಡಲಾಗಿದೆ. ಆದರೆ ಮಹಿಳೆಯರು ಮತ್ತು ಮಕ್ಕಳ ಮೇಲೆ ದೌರ್ಜನ್ಯ, ಹಿಂಸೆಗಳು ಹೆಚ್ಚಾಗುತ್ತಿದ್ದು, ಇದನ್ನು ತಡೆಗಟ್ಟಬೇಕಾದುದ್ದು ಅತ್ಯಂತ ತುರ್ತು ಕೆಲಸವಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದಿವ್ಯಶ್ರೀ ಸಿ.ಎಂ ಹೇಳಿದರು.

ಜಿಲ್ಲಾಧಿಕಾರಿಗಳ ಕಾರ್ಯಾಲಯ ಸಭಾಂಗಣದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಪೊಲೀಸ್ ಇಲಾಖೆ , ಮಾನವ ಕಳ್ಳ ಸಾಗಾಣಿಕೆ ವಿರೋಧಿ ಘಟಕ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ , ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕಾರ್ಮಿಕ ಇಲಾಖೆ , ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ಉತ್ತರ ಕನ್ನಡ ಜಿಲ್ಲೆಯಲ್ಲಿ ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ತಡೆ ಹಾಗೂ, 1956 ಕಾಯ್ದೆ ಮತ್ತು ಜೀತ ಕಾರ್ಮಿಕ ಪದ್ಧತಿ ನಿರ್ಮೂಲನೆ ಕಾಯ್ದೆ ಕುರಿತು ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಮಾನವ ಕಳ್ಳ ಸಾಗಾಣಿಕೆಯು ಅತ್ಯಂತ ಘೋರ ಅಪರಾಧವಾಗಿದ್ದು, ಕಳ್ಳ ಸಾಗಾಣಿದಾರರು ಸಾಮಾನ್ಯವಾಗಿ ಉದ್ಯೋಗ ಭರವಸೆಗಳನ್ನು ನೀಡಿ ಅಥವಾ ವಿವಾಹದ ಮೂಲಕ ಭಾರತ ಅಥವಾ ವಿದೇಶಗಳಲ್ಲಿ ಮಹಿಳೆಯರು ಮತ್ತು ಹೆಣ್ಣು ಮಕ್ಕಳನ್ನು ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುವಂತೆ ಮಾಡುತ್ತಿದ್ದಾರೆ. ಕಳ್ಳ ಸಾಗಾಣಿದಾರರು ವೆಬ್ ಸೈಟುಗಳ, ಮೊಬೈಲ್ ಅಪ್ಲಿಕೇಶನಗಳು ಮತ್ತು ಆನ್‌ಲೈನ್ ಹಾಗೂ ವರ್ಗಾವಣೆಯ ವಿಧಾನಗಳನ್ನು ವಾಣಿಜ್ಯ ಲೈಂಗಿಕ ವ್ಯವಹಾರಗಳಿಗೆ ಬಳಸುತ್ತಿದ್ದಾರೆ. ಇಂತಹ ಕಳ್ಳ ಸಾಗಾಣಿಕೆ ತಡೆಯುವಲ್ಲಿ ತೊಡಗಿಸಿಕೊಳ್ಳುವವರಿಗೆ ಈ ಎಲ್ಲಾ ವಿಧಾನಗಳ ಪರಿಚಯ ಇರಬೇಕಾಗಿದ್ದು ಅವಶ್ಯಕವಾಗಿದ್ದು, ನಿಯಮಿತವಾಗಿ ನಡೆಯಬೇಕೆಂದು ತಿಳಿಸಿದರು.ಬೆಂಗಳೂರಿನ ಇಂಟರ್ ನ್ಯಾಷನಲ್ ಜಸ್ಟೀಸ್ ಮಿಷನ್ ನ ವಕೀಲೆ ಚಿತ್ರಾ.ವಿ ಮಾತನಾಡಿ, ಮಾನವ ಕಳ್ಳ ಸಾಗಾಣಿಕೆಯು, ಲೈಂಗಿಕ ಶೋಷಣೆಗಾಗಿ, ಮಕ್ಕಳ ಒತ್ತಾಯ ಪೂರ್ವಕ ಭಿಕ್ಷಾಟನೆ, ಜೀತದಾಳುಗಳಾಗಿ , ಬಾಲಕಾರ್ಮಿಕರಾಗಿ, ಅಂಗಾಂಗಳ ಮಾರಾಟ ಮತ್ತು ಸಂಬಂಧಿತ ಉದ್ದೇಶಗಳಿಗಾಗಿ ನಡೆಯುತ್ತಿದ್ದು, ಎಲ್ಲಾ ಇಲಾಖೆಗಳು ಒಗ್ಗೂಡಿ ಈ ಕೃತ್ಯವನ್ನು ತಡೆಯಬೇಕೆಂದು ತಿಳಿಸಿದರು.

ಸಂಪನ್ಮೂಲ ವ್ಯಕ್ತಿ ಹೃದಯ ರಾಜ್ ಮಾತನಾಡಿದರು. ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಿರೂಪಾಕ್ಷಗೌಡ ಪಿ ಪಾಟೀಲ, ಜಿಲ್ಲಾ ಕಾರ್ಮಿಕ ಅಧಿಕಾರಿ ಲಲಿತಾ, ಸಾರ್ವಜನಿಕ ಶಿಕ್ಷಣ ಇಲಾಖೆಯ ಶಿಕ್ಷಣ ಅಧಿಕಾರಿ ಕಲ್ಪನಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಕುಮಾರ ಉಪಸ್ಥಿತರಿದ್ದರು.



ನಾಳೆ ವಿದ್ಯುತ್ ಅದಾಲತ್, ಗ್ರಾಹಕರ ಸಂವಾದ ಸಭೆ

ಕಾರವಾರ: ಕುಮಟಾ ಉಪ ವಿಭಾಗದ ವ್ಯಾಪ್ತಿಯಲ್ಲಿ ಫೆ.21ರಂದು ಬೆಳಗ್ಗೆ 10.30 ರಿಂದ ಮಧ್ಯಾಹ್ನ 1.30 ಗಂಟೆವರೆಗೆ ವಿದ್ಯುತ್ ಅದಾಲತ್ ಹಾಗೂ ಗ್ರಾಹಕ ಸಂವಾದ ಸಭೆಯನ್ನು ಮಧ್ಯಾಹ್ನ 3.30 ರಿಂದ 5 ಗಂಟೆವರೆಗೆ ಕುಮಟಾ ಹೆಸ್ಕಾಂ ಉಪ-ವಿಭಾಗದ ಕಚೇರಿಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಹಕರು ಹಾಜರಿದ್ದು, ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವಂತೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ದೂರವಾಣಿಗೆ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ ಎಂದು ಹೆಸ್ಕಾಂ, ಕುಮಟಾ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೈತರಿಗೆ ಯಂತ್ರೋಪಕರಣ ವಿತರಿಸಿದ ಸಚಿವ

ಹೊನ್ನಾವರ: ತಾಲೂಕಿನ ರೈತರಿಗೆ ಕೃಷಿ ಇಲಾಖೆ ಮೂಲಕ ಸಹಾಯಧನದಿಂದ ಮಂಜೂರಾದ ಕೃಷಿ ಯಂತ್ರೋಪಕರಣ ಹಾಗೂ ಸಣ್ಣ ನೀರಾವರಿ ಘಟಕದ ಸಲಕರಣೆ ವಿತರಣೆಯನ್ನು ಮೀನುಗಾರಿಕೆ ಬಂದರು ಒಳನಾಡು ಜಲಸಾರಿಗೆ ಸಚಿವರಾದ ಮಂಕಾಳ ವೈದ್ಯ ಬುಧವಾರ ವಿತರಿಸಿದರು.

ಜಿಪಂ ಉತ್ತರಕನ್ನಡ, ತಾಪಂ ಹೊನ್ನಾವರ, ಕೃಷಿ ಇಲಾಖೆಯ ವತಿಯಿಂದ ತಾಲೂಕಿನ ಫಲಾನುಭವಿ 25 ರೈತ ಕುಟುಂಬದವರಿಗೆ 16,23573 ವೆಚ್ಚದ ಯಂತ್ರೋಪಕರಣಗಳಿಗೆ ಸರ್ಕಾರದಿಂದ 7,64489 ರೂ. ವೆಚ್ಚದ ಸಹಾಯಧನ ಅನುದಾನದಡಿ ಮಂಜೂರಾದ ಯಂತ್ರೋಪಕರಣಗಳನ್ನು ವಿತರಿಸಿದರು.

ಮಾಧ್ಯಮವರನ್ನು ಉದ್ದೇಶಿಸಿ ಮಾತನಾಡಿ ಸರ್ಕಾರ ರೈತರಿಗೆ ಯಂತ್ರೋಪಕರಣ ರಿಯಾಯತಿ ದರದಲ್ಲಿ ವಿತರಣೆ ಮಾಡುವ ಜೊತೆ, ಬಿತ್ತನೆ ಬೀಜ, ರಸಗೊಬ್ಬರವನ್ನು ಸಕಾಲಕ್ಕೆ ನೀಡುವ ಮೂಲಕ ಪ್ರೋತ್ಸಾಹಿಸುತ್ತಿದೆ. ಸರ್ಕಾರ ನೀಡುವ ಸೌಲಭ್ಯಗಳನ್ನು ಬಳಸಿಕೊಂಡು ರೈತರು ಕೃಷಿ ಚಟುವಟಿಕೆಯಲ್ಲಿ ಹೆಚ್ಚಿನ ಆದಾಯಗಳಿಸಬೇಕು.

> **ತಾಲೂಕಿನ 107 ಮೀನುಗಾರರಿಗೆ ಲೈಫ್ ಜಾಕೆಟ್ ವಿತರಿಸಲಾಗಿದೆ. ರಾಜ್ಯದ ಪ್ರತಿ ತಾಲೂಕಿನಲ್ಲಿ 100 ಜಾಕೆಟ್ ವಿತರಿಸಿದ್ದು, ಇನ್ನು 10 ಸಾವಿರದಷ್ಟು ವಿತರಣೆ ಬಾಕಿ ಇದ್ದು, ಕೆಲ ದಿನದಲ್ಲಿ ಅದನ್ನು ವಿತರಿಸಲಾಗುವುದು.**
> ■ **ಮಂಕಾಳ ವೈದ್ಯ, ಸಚಿವ**

ಕೃಷಿ ಇಲಾಖೆಯಲ್ಲಿ ರೈತರಿಗೆ ಸಹಾಯಧನದಡಿ ಯಂತ್ರೋಪಕರಣ ಲಭ್ಯವಿದ್ದು, ರೈತರು ಕೃಷಿ ಇಲಾಖೆಯ ಕಚೇರಿ ಅಥವಾ ರೈತ ಸಂಪರ್ಕ ಕೇಂದ್ರಗಳಿಗೆ ಭೇಟಿ ನೀಡಿ ಮಾಹಿತಿ ಪಡೆದುಕೊಳ್ಳುವಂತೆ ಸಚಿವರು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರಾದ ಪಾಂಡಪ್ಪ ಪಿ.ಲಂಬಾಣಿ, ಕೃಷಿ ಅಧಿಕಾರಿಗಳಾದ ಮನೀತಾ ಎಸ್.ಬಿ, ಲಕ್ಷ್ಮೀ ದಳವಾಹಿ, ಗ್ಯಾರಂಟಿ ಯೋಜನೆಯ ತಾಲೂಕ ಅಧ್ಯಕ್ಷ ಅಣ್ಣಪ್ಪ ನಾಯ್ಕ, ಬ್ಲಾಕ್ ಅಧ್ಯಕ್ಷ ಗೋವಿಂದ ನಾಯ್ಕ, ಮಹೇಶ ನಾಯ್ಕ, ಜಿಪಂ. ಮಾಜಿ ಸದಸ್ಯ ಕೃಷ್ಣ ಗೌಡ, ಸಿಬ್ಬಂದಿಗಳು, ಇಸಿಲೈಪ್ ಸಿಬ್ಬಂದಿ ಉಪಸ್ಥಿತರಿದ್ದರು.



ಧೈರ್ಯ, ಸ್ವರಾಜ್ಯದ ಪ್ರತೀಕ ಶಿವಾಜಿ

ಮುಂಡಗೋಡ: ಭೂಮಿಯ ಮೇಲೆ ಅಧರ್ಮ ಯಾವಾಗ ಯಾವಾಗ ತಾಂಡವವಾಡುತ್ತದೆಯೋ ಆಗಾಗ ಅವತಾರವೆತ್ತಿ ಬಂದ ಮಹಾಪುರುಷರಲ್ಲಿ ಛತ್ರಪತಿ ಶಿವಾಜಿ ಮಹಾರಾಜರು ಒಬ್ಬರು ಎಂದು ತಹಶೀಲ್ದಾರ ಶಂಕರ ಗೌಡಿ ಹೇಳಿದರು.

ತಾಲೂಕು ಆಡಳಿತ, ತಾಪಂ ಹಾಗೂ ಪಪಂ ಇವರ ಆಶ್ರಯದಲ್ಲಿ ಪಟ್ಟಣದ ಗಾಂಧಿ ನಗರದಲ್ಲಿರುವ ಛತ್ರಪತಿ ಶಿವಾಜಿ ಮಹಾರಾಜ ಮರಾಠಾ ಸಮುದಾಯ ಭವನದಲ್ಲಿ ಗುರುವಾರ ಆಯೋಜಿಸಿದ್ದ ಶ್ರೀ ಛತ್ರಪತಿ ಶಿವಾಜಿ ಜಯಂತ್ಯುತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

ಸಣ್ಣದಾದ ಸೈನ್ಯದ ನೆರವಿನಿಂದ ದೊಡ್ಡದೊಡ್ಡ ಸೈನ್ಯಗಳನ್ನು ಸೋಲಿಸಿ ಬೃಹತ್ ಸಾಮ್ರಾಜ್ಯ ನಿರ್ಮಾಣ ಮಾಡಿದರು. ಯಾವುದೇ ದುರ್ಗುಣಗಳಿಲ್ಲದ ಸದ್ಗುಣವುಳ್ಳ ಸಂಪನ್ನರಾಗಿದ್ದರು. ಮಹಿಳೆಯರನ್ನು ಮತ್ತು ಪರಧರ್ಮೀಯರನ್ನು ಗೌರವದಿಂದ ಕಾಣುತ್ತಿದ್ದರು ಎಂದರು. ತಾಪಂಇಒ ಟಿ.ವೈ.ದಾಸನಕೊಪ್ಪ ಮಾತನಾಡಿದರು.

ಪ್ರಭಾರ ಮುಖ್ಯ ಶಿಕ್ಷಕ ವಾಸುದೇವ ಮಡ್ಲಿ ಉಪನ್ಯಾಸ ನೀಡಿದರು. ಜ್ಞಾನದೇವ ಗುಡಿಯಾಳ ಮತ್ತು ಅಶೋಕ ಚಲವಾದಿ ಮಾತನಾಡಿದರು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳನ್ನು ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ನಗದು ಬಹುಮಾನ ನೀಡಲಾಯಿತು. ಸೊಸೈಟಿಯ ಮುಖ್ಯ ಕಾರ್ಯನಿರ್ವಾಹಕರು ಮತ್ತು ವಾಸುದೇವ ಮಡ್ಲಿ ಇವರನ್ನು ಸನ್ಮಾನಿಸಲಾಯಿತು. ಕರಿಯಪ್ಪ, ಕೃಷ್ಣಾ ಕುಳ್ಳೂರ, ಡಿ.ಎಫ್.ಮಡ್ಲಿ, ಶ್ರೀಧರ ಡೋರಿ, ಆರ್.ವೈ.ರಾಣೋಜಿ, ಸುಭಾಸ ಡೋರಿ, ಪರಶುರಾಮ ತಡಸದ, ಎಂ.ಪಿ.ಕುಸೂರ, ವಸಂತ ಕೊಣಸಾಲಿ, ಕುಮಾರ ನಾಯ್ಕ, ಪಿ.ಜಿ.ಪಾಟೀಲ, ಸುರೇಶ ಓಣಿಕೇರಿ, ರಮೇಶ ಅಂಬಿಗೇರ, ಅಶೋಕ ಸಂಕ್ರಿಕೊಪ್ಪ, ಶಿವರಾಜ ಸುಬ್ಬಾಯವರ, ಲಕ್ಷ್ಮೀಬಾಯಿ ಪಾಟೀಲ, ದಶರಥ ಸಾಳುಂಕೆ ಇದ್ದರು.ಕೀರ್ತಿ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ಶ್ರೀ ಲಕ್ಷ್ಮೀ ಹಾಗೂ ಸಂಗಡಿಗರು ನಾಡಗೀತೆ ಹೇಳಿದರು. ಸಂಘಟನೆ ತಾಲೂಕು ಯುವ ಘಟಕದ ಅಧ್ಯಕ್ಷ ನಾಗರಾಜ ಸಂಕನಾಳ ಸ್ವಾಗತಿಸಿದರು. ಪಾಂಡುರಂಗ ಟಕ್ಕೋಜಿ ನಿರೂಪಿಸಿದರು. ಬಸವರಾಜ ಬೆಂಡ್ಲಗಟ್ಟಿ ವಂದಿಸಿದರು.



> **ಹಿಂದು ಸಾಮ್ರಾಜ್ಯ ಕಟ್ಟಿದ ನಿಜವಾದ ಶೂರ ಶಿವಾಜಿ ಮಹಾರಾಜರು. ಜೀಜಾಬಾಯಿ ಮಹಿಳೆಯರಿಗೆಲ್ಲ ಸ್ಫೂರ್ತಿ. ಇಲ್ಲಿರುವ ಎಲ್ಲ ಪುರುಷರಿಗೆ ಅವರ ತಾಯಂದಿರು ಸಂಸ್ಕಾರ ನೀಡಿದ್ದಾರೆ. ಅವರೆಲ್ಲರೂ ಜೀಜಾಬಾಯಿಗೆ ಸಮಾನ.**
> ■ **ಸುಮಾ ಜಿ., ಬಿಇಒ**

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯ

ಶಿರಸಿ: ರೈತರ ಸಮಸ್ಯೆಗಳನ್ನು ಪರಿಹರಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ತಾಲೂಕಿನ ದಾಸನಕೊಪ್ಪದಲ್ಲಿ ರಸ್ತೆ ತಡೆದು ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ರೈತ ಸಂಘದ ರಾಜ್ಯ ಕಾರ್ಯದರ್ಶಿ ರಾಘವೇಂದ್ರ ನಾಯ್ಕ, ಸಮರ್ಪಕ ವಿದ್ಯುತ್ ಪೂರೈಕೆಯಾಗದೆ ಬೆಳೆಗಳು ಒಣಗುತ್ತಿವೆ. ಮಳೆ ಮಾಪನ ಯಂತ್ರದ ನೆಪವೊಡ್ಡಿ ವಿಮಾ ಕಂಪನಿಗಳು ಬೆಳೆ ವಿಮೆ ನೀಡದೆ ರೈತರಿಗೆ ವಂಚಿಸುತ್ತಿವೆ. ಅಲ್ಲದೆ, ಹಾವೇರಿ-ಶಿರಸಿ ಹೆದ್ದಾರಿ ಕಾಮಗಾರಿ ವಿಳಂಬದಿಂದಾಗಿ ಅಪಘಾತಗಳು ಹೆಚ್ಚುತ್ತಿದ್ದು, ಸಾರ್ವಜನಿಕರ ಆರೋಗ್ಯ ಹದಗೆಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಮುಖ ಬೇಡಿಕೆಗಳು: ಪಂಪ್‌ಸೆಟ್ಟಗಳಿಗೆ ನಿರಂತರ 3-ಫೇಸ್ ವಿದ್ಯುತ್ ನೀಡಬೇಕು, ಪೂರ್ಣ ಪ್ರಮಾಣದ ಅಡಿಕೆ ಬೆಳೆ ವಿಮೆ ಜಮಾ ಮಾಡಬೇಕು, ಅರಣ್ಯ ಹಕ್ಕು ಅರ್ಜಿ ಸಲ್ಲಿಕೆಗೆ ಆರು ತಿಂಗಳು ಕಾಲಾವಕಾಶ ನೀಡಬೇಕು, ದಾಸನಕೊಪ್ಪದಲ್ಲಿ ಗೋವಿನಜೋಳ ಖರೀದಿ ಕೇಂದ್ರ ಹಾಗೂ ಪದವಿಪೂರ್ವ ಕಾಲೇಜು ಆರಂಭಿಸಬೇಕು ಮತ್ತು ರೈತರ ಸಾಲಮನ್ನಾ ಮಾಡಬೇಕು ಎಂದು ಅವರು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು. ಸಂಘಟನೆಯ ಪ್ರಮುಖ ಸತೀಶ ನಾಯ್ಕ ಮಾತನಾಡಿ, ಅತಿವೃಷ್ಟಿ ಪರಿಹಾರ ಹಾಗೂ ವಿಮಾ ಹಣಕ್ಕಾಗಿ ಹೋರಾಟ ಅನಿವಾರ್ಯವಾಗಿದೆ ಎಂದರು.ಸ್ಥಳಕ್ಕೆ ಆಗಮಿಸಿದ ಸಹಾಯಕ ಆಯುಕ್ತ ಚಂದ್ರಶೇಖರ್, ಶೀಘ್ರದಲ್ಲೇ ಅಧಿಕಾರಿಗಳು ಹಾಗೂ ರೈತರ ಸಭೆ ಕರೆದು ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿದ ನಂತರ ಪ್ರತಿಭಟನೆ ಹಿಂಪಡೆಯಲಾಯಿತು.

ಡಿವೈಎಸ್ಪಿ ಗೀತಾ ಪಾಟೀಲ್, ಪ್ರಮುಖರಾದ ಪ್ರಮೋದ ಜಕ್ಕಣ್ಣನವರ್, ನಾಗರಾಜ, ನವೀನ, ಶಶಿಕುಮಾರ, ದೀಪಕ್, ಜಯಪುತ್ರ, ರೈತರು ಉಪಸ್ಥಿತರಿದ್ದರು.



ಸಂಸ್ಕೃತಿ ಉಳಿವಿಗೆ ಆಳ್ವಾ ಕೊಡುಗೆ ಶ್ಲಾಘನೀಯ: ದಿನಕರ ಶೆಟ್ಟಿ

ಕುಮಟಾ: ಸಮಾಜದಲ್ಲಿ ಸಾಂಸ್ಕೃತಿಕ ವಾತಾವರಣ ನಿರ್ಮಾಣವಾಗಬೇಕು ಎಂಬುದಕ್ಕಾಗಿ ನಿರಂತರ ಪ್ರಯತ್ನ ಮಾಡಲಾಗುತ್ತಿದೆ. ದೇಶದ ಸಂಸ್ಕೃತಿಯ ಉಳಿವಿಗೆ ಆಳ್ವಾ ಅವರ ಕಾರ್ಯ ಶ್ಲಾಘನೀಯ ಎಂದು ಶಾಸಕ ದಿನಕರ ಶೆಟ್ಟಿ ಅಭಿಪ್ರಾಯಪಟ್ಟರು.

ಪಟ್ಟಣದ ಚಿತ್ರಗಿ ಹಳಕಾರ್ ಕ್ರಾಸ್ ಸಮೀಪದ ಪುರಸಭಾ ಮೈದಾನದಲ್ಲಿ ನಡೆದ 'ಆಳ್ವಾಸ್ ಸಾಂಸ್ಕೃತಿಕ ವೈಭವ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಡಾ.ಮೋಹನ್ ಆಳ್ವಾ ಸಾಂಸ್ಕೃತಿಕ ವಾತಾವರಣ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಎಲ್ಲೆಡೆಗಳಲ್ಲಿ ಅವರ ತಂಡದೊಂದಿಗೆ ಕಾರ್ಯಕ್ರಮ ನೀಡುತ್ತಿದ್ದಾರೆ. ನಮ್ಮ ಜಿಲ್ಲೆಗೆ ಆಗಮನಿಸಿದ ಆಳ್ವಾ ಅವರನ್ನು ಬಿಚ್ಚು ಮನಸ್ಸಿನಿಂದ ಸ್ವಾಗತಿಸುತ್ತಿದ್ದೇವೆ. ನಾವು ಯಾವುದೇ ವ್ಯಾಪಾರಕ್ಕಾಗಿ ರಾಜ್ಯದಲ್ಲಿ ಸಂಚರಿಸುವುದಿಲ್ಲ, ಸಾಂಸ್ಕೃತಿಕ ವಾತಾವರಣ ನಿರ್ಮಾಣ ಮಾಡುವುದೇ ಆಳ್ವಾಸ್ ಸಾಂಸ್ಕೃತಿಕ ವೈಭವ ಕಾರ್ಯಕ್ರಮದ ಉದ್ದೇಶ ಎಂದರು.

ಕೆಡಿಸಿಸಿ ಬ್ಯಾಂಕ್ ನಿರ್ದೇಶಕ ರಾಜಗೋಪಾಲ ಅಡಿ, ಕಾಂಗ್ರೆಸ್ ಮುಖಂಡ ಸುಶ್ಮಾ ರಾಜಗೋಪಾಲ ರೆಡ್ಡಿ ಮಾತನಾಡಿ, ಆಳ್ವಾಸ್ ಸಂಸ್ಥೆಯ ಕಾರ್ಯ ಚಟುವಟಿಕೆ ಶ್ಲಾಘಿಸಿದರು. ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ಕಿಶನ್ ವಾಳ್ಕೆ ಅವರನ್ನು ಸನ್ಮಾನಿಸಲಾಯಿತು. ಶಾಸಕ ದಿನಕರ ಶೆಟ್ಟಿ ಡಾ. ಮೋಹನ ಆಳ್ವಾ ಅವರನ್ನು ಗೌರವಿಸಿದರು. ಸಹಾಯಕ ಆಯುಕ್ತ ಶ್ರವಣ ಕುಮಾರ, ತಹಶೀಲ್ದಾರ ಶ್ರೀಕೃಷ್ಣ ಕಾಮಕರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಭುವನ್ ಭಾಗ್ವತ್, ಗ್ರಾಪಂ ಅಧ್ಯಕ್ಷ ಎಂ.ಎಂ.ಹೆಗಡೆ, ಬಿಜೆಪಿ ಮಂಡಲಾಧ್ಯಕ್ಷ ಜಿ.ಐ.ಹೆಗಡೆ, ಜೆಡಿಎಸ್ ತಾಲೂಕಾ ಅಧ್ಯಕ್ಷ ಸಿ.ಜಿ.ಹೆಗಡೆ, ಪುರಸಭಾ ಉಪಾಧ್ಯಕ್ಷ ಮಹೇಶ ನಾಯ್ಕ, ತುಳಸು ಗೌಡ, ಸುರೇಶ ಶೆಟ್ಟಿ ಹೊನ್ನಾವರ, ಧೀರು ಶಾನಭಾಗ ಇತರರು ಇದ್ದರು. ಪತ್ರಕರ್ತ ಜಿ.ಯು ಭಟ್ಟ ಸ್ವಾಗತಿಸಿದರು. ಸಂಯೋಜಕ ಸಂತೋಷ ನಾಯ್ಕ ವಂದಿಸಿದರು. ವಿನಾಯಕ ನಾಯ್ಕ ಸಹಕರಿಸಿದರು. ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವಿನಾಯಕ ಭಟ್ಟ, ಚಿನ್ಮಯ ಭಟ್ಟ, ವಿನೋದ ಭಂಡಾರಿ ಸಹಕರಿಸಿದರು.

ಆಳ್ವಾಸ್ ಸಾಂಸ್ಕೃತಿಕ ವೈಭವದಲ್ಲಿ 500 ವಿದ್ಯಾರ್ಥಿ ಕಲಾವಿದರು ಸಾಂಸ್ಕೃತಿಕ ಲೋಕವನ್ನೇ ತೆರೆದಿಟ್ಟರು.



> **ಸೌಂದರ್ಯ ಪ್ರಜ್ಞೆ ಇರುವವನು ದೇಶದ ಆಸ್ತಿ, ಅದಿರದಿದ್ದರೆ ಅವನೇ ದೇಶಕ್ಕೆ ಬಹುದೊಡ್ಡ ಅಪಾಯಕಾರಿ ವ್ಯಕ್ತಿ. ಸಾಂಸ್ಕೃತಿಕ ಹೆಸರಿನಲ್ಲಿ ಪ್ರೇಕ್ಷಕರನ್ನು ದಾರಿ ತಪ್ಪಿಸುವುದಲ್ಲ, ದೇಶದ ಕಲೆಯನ್ನು ಉಳಿಸುವ ಕಾಯಕದ ಜೊತೆಗೆ, ಸಮಯ ಪ್ರಜ್ಞೆ ಹಾಗೂ ಇತರ ಸಂದೇಶ ನೀಡುವುದಕ್ಕಾಗಿ ಈ ಕಾರ್ಯಕ್ರಮ ಸಂಯೋಜನೆಗೊಂಡಿದೆ.**
> ■ **ಡಾ.ಮೋಹನ ಆಳ್ವಾ, ಅಧ್ಯಕ್ಷರು ಆಳ್ವಾ ಶಿಕ್ಷಣ ಸಂಸ್ಥೆ**

ಯಲ್ಲಾಪುರ ಗ್ರಾಮದೇವಿ ಜಾತ್ರೆ ಸಂಪನ್ನ

ಯಲ್ಲಾಪುರ: 9 ದಿನಗಳ ಕಾಲ ವಿಜೃಂಭಣೆಯಿಂದ ನಡೆದ ಗ್ರಾಮದೇವಿ ಜಾತ್ರೆ ಸಹಸ್ರಾರು ಭಕ್ತರ ನಡುವೆ ದೇವಿಯರ ವಿಸರ್ಜನಾ ಮೆರವಣಿಗೆ ಮೂಲಕ ತೆರೆಕಂಡಿದೆ.

ಗುರುವಾರ ಮಧ್ಯಾಹ್ನ 1 ಗಂಟೆಯವರೆಗೆ ರಾಜ್ಯದ ವಿವಿಧ ಭಾಗಗಳಿಂದ ಭಕ್ತರ ಮಹಾಪೂರವೇ ಆಗಮಿಸಿ, ಕೊನೆಯ ದಿನವಾದ್ದರಿಂದ ಬೆಳಗ್ಗೆ 6 ಗಂಟೆಯಿಂದಲೇ ಸರತಿ ಸಾಲಿನಲ್ಲಿ ನಿಂತು ವಿಶೇಷ ಪೂಜೆ, ಉಡಿ, ಹರಕೆ ಸೇವೆ ಸಲ್ಲಿಸಿದರು. ಧಾರ್ಮಿಕ ವಿಧಿ ವಿಧಾನಗಳ ನಂತರ 3.30 ಗಂಟೆಗೆ ಮೆರವಣಿಗೆ ಮೂಲಕ ನಂತರ ದೇವಿಯರನ್ನು ಮುಂಡಗೋಡು ರಸ್ತೆಯ ರವೀಂದ್ರನಗರದ ವಿಸರ್ಜನಾ ಗದ್ದುಗೆಗೆ ಕೊಂಡೊಯ್ಯಲಾಯಿತು. 5 ಗಂಟೆಗೆ ಸರಿಯಾಗಿ ವಿಸರ್ಜನಾ ಗದ್ದುಗೆಯಲ್ಲಿ ದೇವಿಯರನ್ನು ಕುಳ್ಳಿರಿಸಲಾಯಿತು. ಇದಕ್ಕೂ ಮುನ್ನ ಮಹಾಪೂಜೆ, ಮಂಗಳಾರತಿ. ಜಾತ್ರಾ ಮಂಟಪದಲ್ಲಿ ವಿವಿಧ ವಿಧಿ ವಿಧಾನಗಳು ನಡೆದವು. ಜಾತ್ರಾಮಂಟಪದ ಎದುರು ಮಾತಂಗಿ ಚಪ್ಪರಕ್ಕೆ ಅಗ್ನಿಸ್ಪರ್ಶ ನಂತರ ಪ್ರದಕ್ಷಿಣಾ ಪಥದಲ್ಲಿ ಸಾಗಿದ ಗ್ರಾಮದೇವಿಯರು ಅಲ್ಲಿಂದ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಭವ್ಯ ಮೆರವಣಿಗೆಯೊಂದಿಗೆ ದೇವಿಯರು ಪರಸ್ಪರ ಮುಖಾಮುಖಿಯಾಗುತ್ತಾ ಹೊನ್ನಾಟವಾಡುತ್ತಾ ಸಾಗಿಬಂದರು. ಭಕ್ತರ ಜಯಘೋಷದೊಂದಿಗೆ ನಡೆದ ಮೆರವಣಿಗೆಯಲ್ಲಿ 40 ಸಾವಿರಕ್ಕೂ ಅಧಿಕ ಜನರು ಪಾಲ್ಗೊಂಡಿದ್ದರು. ರಸ್ತೆಯ ಇಕ್ಕೆಲಗಳಲ್ಲಿನ ಕಟ್ಟಡಗಳಲ್ಲಿ ನಿಂತು ಸಾವಿರಾರು ಜನರು ಮೆರವಣಿಗೆಯನ್ನು ವೀಕ್ಷಿಸಿದರು. ನಂತರ ಮಧ್ಯರಾತ್ರಿ ದೇವಿಯರನ್ನು ಸಂಪೂರ್ಣ ಪಟ್ಟಣದ ವಿದ್ಯುತ್ ಸಂಪರ್ಕ ಕಡಿತಗೊಳಿಸಿ, ಕಾಲರಾತ್ರಿಯಲ್ಲಿ ದೇವಸ್ಥಾನಕ್ಕೆ ಕೊಂಡೊಯ್ಯಲಾಯಿತು. 11 ದಿನಗಳ ನಂತರ ಮಾ.2ರಂದು ದೇವಸ್ಥಾನದಲ್ಲಿ ದೇವರ ಪುನರ್ ಪ್ರತಿಷ್ಠಾಪನೆ ನಡೆಯಲಿದೆ.

ವ್ಯವಸ್ಥೆಯ ಕುರಿತು ಮೆಚ್ಚುಗೆ: ಜಾತ್ರೆ ಮಂಟಪದಲ್ಲಿ ಸೇವೆ ಸಲ್ಲಿಸಲು ಜನರಿಗೆ ಕಲ್ಪಿಸಲಾದ ವ್ಯವಸ್ಥೆಗಳ ಕುರಿತು, ವಿಶೇಷವಾಗಿ ಜಾತ್ರೆ ಮಂಟಪದ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು. ಪೊಲೀಸ್ ಇಲಾಖೆಯು ಸಹ ಹೆದ್ದಾರಿಯಲ್ಲಿ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಟ್ಟ ರೀತಿ ಹಾಗೂ ಪುಂಡರ ಹಾವಳಿಗೆ ಕಡಿವಾಣ ಹಾಕಿದ ರೀತಿ ಜನರ ಪ್ರಶಂಸೆಗೆ ಪಾತ್ರವಾಯಿತು.



ಶಿವಾಜಿ ಜಯಂತಿ ಆಚರಣೆ



ದಾಂಡೇಲಿ: ನಗರದ ವಿವಿದೆಡೆಗಳಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿಯನ್ನು ನಗರದ ಅಂಬೇವಾಡಿಯಲ್ಲಿರುವ ತಾಲೂಕು ಆಡಳಿತ ಸೌಧದ ಸಭಾಂಗಣದಲ್ಲಿ ಧಾರ್ಮಿಕ ಸಹಿಷ್ಣುತೆಯ ಹಿಂದೂ ಗೃದಯ ಸಾಮ್ರಾಟ್ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಆಚರಿಸಲಾಯಿತು.

ಛತ್ರಪತಿ ಶಿವಾಜಿ ಮಹಾರಾಜರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿ ಮಾತನಾಡಿದ ತಹಶೀಲ್ದಾರ್ ಶೈಲೇಶ್ ಪರಮಾನಂದ ಅವರು ರಾಷ್ಟ್ರವನ್ನು ಪರಕೀಯರ ಆಡಳಿತದಿಂದ ಮುಕ್ತಗೊಳಿಸುವಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಕೊಡುಗೆ ಅಪಾರವಾಗಿದೆ ಎಂದರು.

ತಾಲೂಕಾಡಳಿತದ ಪರವಾಗಿ ನಿವೃತ್ತ ಸೈನಿಕ ಹಾಗೂ ಮರಾಠಾ ಸಮಾಜದ ಕಾರ್ಯದರ್ಶಿ ಚಂದ್ರಕಾಂತ ಮಿರಾಶಿ ಮತ್ತು ಅರ್ಜುನ್ ಕೋರೊಳ್ಕರ ಅವರನ್ನು ಸನ್ಮಾನಿಸಲಾಯಿತು. ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆಗೆ ಮಾಲಾರ್ಪಣೆಯನ್ನು ಮಾಡಿ ಗೌರವ ನಮನಗಳನ್ನು ಸಲ್ಲಿಸಲಾಯಿತು.ನಗರದ ಮರಾಠಾ ಸಮಾಜದ ಅಧ್ಯಕ್ಷರು ಹಾಗೂ ಹಿರಿಯ ವೈದ್ಯ ಡಾ.ಮೋಹನ ಪಾಟೀಲ್, ಮಾಜಿ ಶಾಸಕರಾದ ಸುನೀಲ ಹೆಗಡೆ, ಬಿಜೆಪಿ ಮಂಡಲದ ಅಧ್ಯಕ್ಷ ಬುಧವಂತ ಗೌಡ ಪಾಟೀಲ್, ಉಪಾಧ್ಯಕ್ಷ ಗುರು ಮಠಪತಿ, ನಿಕಟ ಪೂರ್ವ ನಗರಸಭಾ ಸದಸ್ಯ ಸಂಜಯ್ ನಂದ್ಯಾಳ್ಕರ, ಛತ್ರಪತಿ ಶಿವಾಜಿ ಮಹಾರಾಜ ಸಮಿತಿಯ ಅಧ್ಯಕ್ಷ ಕೃಷ್ಣ ಗೌಡ, ಸಮಾಜದ ಪ್ರಮುಖರಾದ ವಿಜಯ ಮಿರಾಶಿ, ಸುನೀಲ ಸೋಮನಾಚೆ, ಸಂತೋಷ ಸೋಮನಾಚೆ ಸೇರಿದಂತೆ ಮರಾಠಾ ಸಮಾಜ ಬಾಂಧವರು ಉಪಸ್ಥಿತರಿದ್ದರು.

ಕಿರುಸುದ್ದಿ

ಫೆ.22ಕ್ಕೆ ಉಚಿತ ಪ್ರಕೃತಿ ಚಿಕಿತ್ಸಾ ಶಿಬಿರ

ಹಾವೇರಿ: ಇಲ್ಲಿನ ಹುಕ್ಕೇರಿಮಠ, ಲಯನ್ಸ್ ಕ್ಲಬ್ ಹಾಗೂ ಹರಪನಹಳ್ಳಿಯ ಜನನಿ ಯೋಗ ಪ್ರಕೃತಿ ಚಿಕಿತ್ಸಾ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಸಂಯುಕ್ತ ಆಶ್ರಯದಲ್ಲಿ ಫೆ.22ರಂದು ಹುಕ್ಕೇರಿಮಠದ ಆವರಣದಲ್ಲಿ ಉಚಿತ ಪ್ರಕೃತಿ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ.

ಹುಕ್ಕೇರಿ ಮಠಾಧ್ಯಕ್ಷರಾದ ಸದಾಶಿವ ಶ್ರೀಗಳು ಬೆಳಗ್ಗೆ 9ಗಂಟೆಗೆ ಶಿಬಿರ ಉದ್ಘಾಟಿಸುವರು. ಜನನಿ ಆಸ್ಪತ್ರೆಯ ನಿರ್ದೇಶಕ ಮತ್ತು ಮುಖ್ಯ ವೈದ್ಯಾಧಿಕಾರಿ ಡಾ.ರಾಜೇಶ್ ಪಾದೇಕಲ್ ಅಧ್ಯಕ್ಷತೆ ವಹಿಸುವರು. ಸಾರ್ವಜನಿಕ ಸಂಪರ್ಕಾಧಿಕಾರಿ ಉದಯಶಂಕರ ಭಟ್, ಲಯನ್ಸ್ ಅಧ್ಯಕ್ಷ ಎ.ಎಚ್. ಕಬ್ಬಿಣಕಂತಿಮಠ, ಕಾರ್ಯದರ್ಶಿ ಶಿವರಾಜ್ ಮರ್ತೂರು ಅತಿಥಿಗಳಾಗಿ ಭಾಗವಹಿಸುವರು. ಶಿಬಿರದಲ್ಲಿ ಉಚಿತ ವೈದ್ಯಕೀಯ ಸಮಾಲೋಚನೆ ಮತ್ತು ಆಹಾರ ಸಲಹೆ, ರಕ್ತದಲ್ಲಿನ ಸಕ್ಕರೆ ಅಂಶ ತಪಾಸಣೆ, ಪ್ರಕೃತಿ ಚಿಕಿತ್ಸೆ ಹಾಗೂ ಯೋಗ ಸಮಾಲೋಚನೆ, ಆಕ್ಯುಪಂಕ್ಚರ್ ಮತ್ತು ಆಕ್ಯುಪ್ರೆಶರ್, ಬೊಜ್ಜು ಮತ್ತು ಬೆನ್ನು ನೋವು ಸಮಸ್ಯೆಗೆ ಚಿಕಿತ್ಸೆ ಮತ್ತಿತರ ಸೌಲಭ್ಯಗಳಿರುತ್ತವೆ. ಬೆನ್ನುನೋವು, ಕೀಲುನೋವು, ಅಧಿಕ ರಕ್ತದ ಒತ್ತಡ, ಬೊಜ್ಜು, ಮಧುಮೇಹ ಮತ್ತಿತರ ಸಮಸ್ಯೆಗಳಿಂದ ಬಳಲುವವರು ಶಿಬಿರದ ಪ್ರಯೋಜನ ಪಡೆಯಬಹುದು.

ಚಿಕಿತ್ಸೆ ಫಲಿಸದೆ ಸಾವು

ಹಾವೇರಿ: ಬೈಕ್‌ನಿಂದ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದ ಹಿಂಬದಿ ಸವಾರರೊಬ್ಬರು ಚಿಕಿತ್ಸೆ ಫಲಿಸದೇ ಮೃತಪಟ್ಟಿರುವ ಘಟನೆ ತಾಲೂಕಿನ ಅಗಡಿ ಗ್ರಾಮದಲ್ಲಿ ನಡೆದಿದೆ. ಅಗಡಿ ಗ್ರಾಮದ ಗುರುಶಾಂತಪ್ಪ ನೀಲಪ್ಪನವರ ಮೃತ ವ್ಯಕ್ತಿ. ಅದೆ ಗ್ರಾಮದ ಪ್ರಕಾಶ ಪಟ್ಟಣಶೆಟ್ಟಿ ಎಂಬ ಬೈಕ್ ಸವಾರನ ವಿರುದ್ಧ ದೂರನ್ನು ದಾಖಲಿಸಲಾಗಿದೆ. ಜಮೀನಿಗೆ ಹೋಗುತ್ತಿದ್ದ ಗುರುಶಾಂತಪ್ಪರನ್ನು ಆರೋಪಿ ಪ್ರಕಾಶ ಪಟ್ಟಣಶೆಟ್ಟಿ ತನ್ನ ಬೈಕ್‌ನಲ್ಲಿ ಕೂರಿಸಿಕೊಂಡು ಹಾವೇರಿ ಕಡೆಗೆ ಹೋಗುತ್ತಿದ್ದಾಗ ಅಗಡಿ ಗ್ರಾಮದ ದೊಡ್ಡ ಹಳ್ಳದ ಬಳಿ ಈ ಘಟನೆ ಸಂಭವಿಸಿದೆ. ಹಾವೇರಿ ಕಡೆಯಿಂದ ವೇಗವಾಗಿ ಬರುತ್ತಿದ್ದ ಸ್ಕೂಟಿಯೊಂದರ ಚಾಲಕಿ ಅಪಘಾತಪಡಿಸುವ ಸಾಧ್ಯತೆ ಇರುವ ಕಾರಣ ಬೈಕ್ ಸವಾರ ಪ್ರಕಾಶ ತನ್ನ ಬೈಕ್‌ನ್ನು ನಿಯಂತ್ರಿಸಲಾಗದೆ ನೆಲಕ್ಕೆ ಕೆಡವಿದ್ದಾರೆ. ಬೈಕ್ ಹಿಂಬದಿ ಇದ್ದ ಗುರುಶಾಂತಪ್ಪ ನೆಲಕ್ಕೆ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದು, ಜಿಲ್ಲಾಸ್ಪತ್ರೆಗೆ ದಾಖಲಿಸಿ, ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಿಸದೇ ಮೃತಪಟ್ಟಿದ್ದಾರೆ ಎಂದು ಮೃತನ ಮಗ ಶಿವಕುಮಾರ ನೀಲಪ್ಪನವರ ಪೊಲೀಸರ ದೂರಿನಲ್ಲಿ ತಿಳಿಸಿದ್ದಾರೆ. ಹಾವೇರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕುಸಿದು ಬಿದ್ದು ಗಾರ್ಮೆಂಟ್ ನೌಕರ ಸಾವು

ಹಾವೇರಿ: ಗಾರ್ಮೆಂಟ್ಸ್ ಕೆಲಸಕ್ಕೆ ಹೋಗಿದ್ದ ವ್ಯಕ್ತಿಯೊಬ್ಬರು ಶೌಚಾಲಯದಲ್ಲಿ ಕುಸಿದು ಬಿದ್ದು ಸಾವನ್ನಪ್ಪಿರುವ ಘಟನೆ ನಗರದ ಆರ್‌ಟಿಒ ಕಚೇರಿ ಬಳಿ ಇರುವ ಗಾರ್ಮೆಂಟ್ಸ್‌ನಲ್ಲಿ ನಡೆದಿದೆ.

ಹಾನಗಲ್ಲ ತಾಲೂಕು ಕೂಡಲ ಗ್ರಾಮದ ಅಡಿವೆಪ್ಪ ಸೊಪ್ಪಿನ (45) ಮೃತ ವ್ಯಕ್ತಿ. ಈತನು ತನ್ನ ಹೆಂಡತಿ ಕಳೆದ ನಾಲ್ಕು ವರ್ಷದ ಹಿಂದೆ ಮನೆ ಬಿಟ್ಟು ಹೋಗಿದ್ದರಿಂದ ತನ್ನ ತಾಯಿ ಜತೆಗೆ ವಾಸವಿದ್ದರು. ಪ್ರತಿದಿನ ಹಾವೇರಿಯ ಶಾಂತಮ್ಮ ಗಾರ್ಮೆಂಟ್ಸ್‌ನಲ್ಲಿ ಕೂಲಿ ಕೆಲಸ ಮಾಡುತ್ತಿದ್ದನು. ಎಂದಿನಂತೆ ಗಾರ್ಮೆಂಟ್ಸ್‌ಗೆ ಕೆಲಸಕ್ಕೆ ಬಂದಾಗ ಶೌಚಾಲಯಕ್ಕೆ ಹೋಗಿದ್ದು, ಬಹಳ ಹೊತ್ತು ಕಳೆದರೂ ವಾಪಾಸ್ ಬಾರದೆ ಇದ್ದಾಗ ಕೆಲಸಗಾರರು ಹೋಗಿ ನೋಡಿದಾಗ ಕುಸಿದು ಬಿದ್ದಿರುವುದು ಗೊತ್ತಾಗಿದೆ. ಕೂಡಲೇ ಉಪಚಾರಕ್ಕೆ ಹಾವೇರಿ ಜಿಲ್ಲಾಸ್ಪತ್ರೆಗೆ ಕರೆದುಕೊಂಡು ಹೋದಾಗ ವೈದ್ಯರು ಪರಿಶೀಲಿಸಿ ಮೃತಪಟ್ಟಿರುವುದನ್ನು ಖಚಿತ ಪಡಿಸಿದ್ದಾರೆ ಎಂದು ಮೃತನ ಸಹೋದರ ಚಿಕ್ಕಪ್ಪ ಸೊಪ್ಪಿನ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಹಾವೇರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವ್ಯಕ್ತಿ ಆತ್ಮಹತ್ಯೆ

ಹಾವೇರಿ: ತಾಲೂಕಿನ ಗುತ್ತಲ ಪಟ್ಟಣದ ಕೂರಗುಂದ ರಸ್ತೆಯಲ್ಲಿ ವ್ಯಕ್ತಿಯೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ. ಗುತ್ತಲ ಪಟ್ಟಣದ ಗುಡ್ಡಪ್ಪ ವಾಲೀಕಾರ (73) ಆತ್ಮಹತ್ಯೆಗೆ ಶರಣಾದ ವ್ಯಕ್ತಿ. ಈತ ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದು, ಇದೇ ಕಾರಣಕ್ಕೆ ವಿಪರೀತ ಕುಡಿತದ ಚಟಕ್ಕೆ ಅಂಟಿಕೊಂಡಿದ್ದರು. ತನ್ನಷ್ಟಕ್ಕೆ ತಾನೇ ಕೂರಗುಂದ ರಸ್ತೆಯಲ್ಲಿರುವ ಹಳ್ಳದ ಬಳಿ ಹುಲಗಲಿ ಮರಕ್ಕೆ ಟವೆಲ್‌ನಿಂದ ನೇಣು ಹಾಕಿಕೊಂಡು ಮೃತಪಟ್ಟಿದ್ದಾರೆ ಎಂದು ಮೃತನ ಮಗ ನಾಗರಾಜ ವಾಲೀಕಾರ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಗುತ್ತಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಹಾವೇರಿ: ತಾಲೂಕಿನ ಕರಜಗಿ ಗ್ರಾಮದಲ್ಲಿ ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಜನ್ಮದಿನದ ಪ್ರಯುಕ್ತ ಉಚಿತ ಕಣ್ಣಿನ ತಪಾಸಣೆ ಶಿಬಿರವನ್ನು ಆಯೋಜಿಸಲಾಗಿತ್ತು. ಶಿಬಿರದಲ್ಲಿ ಗ್ರಾಮದ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸುಮಾರು 128 ಜನರು ಪಾಲ್ಗೊಂಡು ತಮ್ಮ ಕಣ್ಣಿನ ಆರೋಗ್ಯ ತಪಾಸಣೆಗೆ ಒಳಗಾದರು. ಈ ಪೈಕಿ 33 ಜನರು ಶಸ್ತ್ರಚಿಕಿತ್ಸೆಗೆ ಆಯ್ಕೆ ಮಾಡಲಾಗಿದ್ದು, ಮುಂದಿನ ದಿನಗಳಲ್ಲಿ ಅವರಿಗೆ ಕಣ್ಣಿನ ಶಸ್ತ್ರ ಚಿಕಿತ್ಸೆ ಮಾಡಲಾಗುವುದು ಎಂದು ರಾಣೆಬೆನ್ನೂರಿನ ಶಂಕರ ವಿಜನ್ ಸೆಂಟರ್‌ನ ಡಾ.ರವಿಕುಮಾರ ಮತ್ತು ಡಾ.ಬಸವನಗೌಡ ತಿಳಿಸಿದರು.

ಉತ್ತಮ ಸಮಾಜ ಸೇವಕರಾಗಲು ಆರೋಗ್ಯ ಅಗತ್ಯ

ಹಾವೇರಿ: ಸಮುದಾಯದಲ್ಲಿ ಬೆರೆತು ಕೆಲಸ ಮಾಡುವಾಗ ಸಾಮಾಜಿಕ ಕಾರ್ಯಕರ್ತರ ಆರೋಗ್ಯ ಮುಖ್ಯ. ಹಲವು ಸ್ವಭಾವದ ಜನರೊಡನೆ ಕೂಡಿದಾಗ ತನ್ನ ಆರೋಗ್ಯ ಸಂಪತ್ತು ಬೇಕು. ಆಂದಾಗ ಮಾತ್ರ ಉತ್ತಮ ಸಮಾಜ ಸೇವಕರಾಗಲು ಸಾಧ್ಯ ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಜಯಶ್ರೀ ಪಾಟೀಲ ಹೇಳಿದರು. ಇಲ್ಲಿಯ ಶಿವಾಜಿ ನಗರದ ಮೂರನೇಯ ಕ್ರಾಸ್‌ನಲ್ಲಿರುವ ಮಹಿಳಾ ಶಕ್ತಿ ಸದನದಲ್ಲಿ ನಡೆದ ಎರಡು ದಿನಗಳ ಹಾವೇರಿ ಜಿಲ್ಲಾ ಸ್ವಯಂಸೇವಾ ಸಂಸ್ಥೆಗಳ ಕಾರ್ಯಕರ್ತರಿಗೆ ಜರುಗಿದ ಮಾನಸಿಕ ಆರೋಗ್ಯ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು. ಬೆಂಗಳೂರಿನ ನಿಮಾಮ್ಸ್ ಮತ್ತು ನಗರದ ಇಡಾರಿ ಸಂಸ್ಥೆಗಳು ಜಂಟಿಯಾಗಿ ಏರ್ಪಡಿಸಿದ್ದ ಈ ಕಾರ್ಯಾಗಾರದಲ್ಲಿ ಜಿಲ್ಲೆಯ ಸ್ವಯಂಸೇವಾ ಸಂಸ್ಥೆಗಳ 35 ಕಾರ್ಯಕರ್ತರು ಪಾಲ್ಗೊಂಡಿದ್ದರು. ಮನೋವೈದ್ಯಕೀಯ ಸಮಾಜ ಕಾರ್ಯ ವಿಭಾಗ ಮತ್ತು ರಾಷ್ಟ್ರೀಯ ಮಾನಸಿಕ ನರವಿಜ್ಞಾನ ಸಂಸ್ಥೆಯ ಸಂಶೋಧಕ ಡಾ.ಶಿವಾನಂದ ಯರೇಶೀಮಿ ಶಿಬಿರದ ನಿರ್ದೇಶಕರಾಗಿ ಮಾತನಾಡಿ, ನನ್ನ ತವರು ಜಿಲ್ಲೆಯಾದ ಹಾವೇರಿಯನ್ನೇ ಸಮುದಾಯ ಮಾನಸಿಕ ಆರೋಗ್ಯ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದು ಇನ್ನೂ ಅನೇಕ ಕಾರ್ಯಾಗಾರಗಳನ್ನು ನಡೆಸಲು ಇಚ್ಛಿಸಿದ್ದೇನೆ ಎಂದರು. ಅಧ್ಯಕ್ಷತೆಯನ್ನು ವಹಿಸಿದ್ದ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಅಧ್ಯಕ್ಷರಾದ ಪರಿಮಳಾ ಜೈನ್ ಮಾತನಾಡಿದರು. ಈ ವೇಳೆ ಬಸವರಾಜ ಪೂಜಾರ, ರೇಣುಕಾ ಕಹಾರ, ಡಾ.ಬಸನಗೌಡ ಪಾಟೀಲ, ನಾಗರಾಜ ಹುಡೇದ, ಮಂಜುನಾಥ ಸಂಣ್ಣಿಂಗಮ್ಮನವರ, ಎಚ್.ಎಫ್. ಮಜೀದ್, ಡಾ. ಶಂಕರ ಪೇಠಕರ, ಶೈಲಾ ಎನ್, ಹಾಲಮ್ಮಾ ಕಳಸಾಪೂರ, ಭಾಗ್ಯಾ ಎಂ.ಕೆ, ಭಾಗವಹಿಸಿದ್ದರು.



ಹಾವೇರಿ : ನಗರದ ಮಹಿಳಾ ಶಕ್ತಿ ಸದನದಲ್ಲಿ ಸ್ವಯಂಸೇವಾ ಸಂಸ್ಥೆಗಳ ಕಾರ್ಯಕರ್ತರಿಗೆ ಹಮ್ಮಿಕೊಂಡಿದ್ದ ಮಾನಸಿಕ ಆರೋಗ್ಯ ಕಾರ್ಯಾಗಾರವನ್ನು ಪರಿಮಳಾ ಜೈನ್ ಉದ್ಘಾಟಿಸಿದರು.ಈ ಸಂದರ್ಭದಲ್ಲಿ ಬಸವರಾಜ ಪೂಜಾರ, ರೇಣುಕಾ ಕಹಾರ, ಡಾ.ಬಸನಗೌಡ ಪಾಟೀಲ, ನಾಗರಾಜ ಹುಡೇದ, ಮಂಜುನಾಥ ಸಂಣ್ಣಿಂಗಮ್ಮನವರ, ಎಚ್.ಎಫ್. ಮಜೀದ್, ಡಾ. ಶಂಕರ ಪೇಠಕರ, ಶೈಲಾ ಎನ್, ಹಾಲಮ್ಮಾ ಕಳಸಾಪೂರ, ಭಾಗ್ಯಾ ಎಂ.ಕೆ ಇದ್ದರು.

ಶಿವಾಜಿ ಮಹಾರಾಜರ 399ನೇ ಜಯಂತ್ಯುತ್ಸವ | ಡಾ.ನಾಗರಾಜ ಹೇಳಿಕೆ

ಶಿವಾಜಿ ಧೈರ್ಯ, ಸಾಹಸ ಪ್ರೇರಣೆ

ಹಾವೇರಿ: ಛತ್ರಪತಿ ಶಿವಾಜಿ ಮಹಾರಾಜರ ಧೈರ್ಯ, ಸಾಹಸ ಇಂದಿನ ಯುವ ಜನತೆಗೆ ಪ್ರೇರಣೆಯಾಗಬೇಕು. ಶಿವಾಜಿ ಅವರ ಜೀವನ ಚರಿತ್ರೆ, ಇತಿಹಾಸ ಅರಿತುಕೊಳ್ಳುವ ಮೂಲಕ ಅವರ ಗುಣಗಳನ್ನು ಪಾಲಿಸಿ, ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ.ನಾಗರಾಜ ಎಲ್. ಹೇಳಿದರು.

ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜಿಲ್ಲಾ ಮರಾಠ ಸಮಾಜದ ಸಹಯೋಗದಲ್ಲಿ ಗುರುವಾರ ಶಿವಾಜಿ ನಗರದ ತಾಲೂಕಾ ಮರಾಠಾ ಸಮುದಾಯ ಭವನದಲ್ಲಿ ನಡೆದ ಛತ್ರಪತಿ ಶಿವಾಜಿ ಮಹಾರಾಜರ 399ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ, ಪುತ್ಥಳಿಗೆ ಮಾಲಾರ್ಪಣೆ ಮಾಡಿ ಅವರು ಮಾತನಾಡಿ, ಛತ್ರಪತಿ ಶಿವಾಜಿ ಮಹಾರಾಜರ ಹೆಸರು ಕೇಳಿದರೆ ರೋಮಾಂಚನವಾಗುತ್ತದೆ. ಶಿವಾಜಿಯವರ ಜೀವನ ಸಾಧನೆ ತಾಯಂದಿರಿಗೆ ಆದರ್ಶವಾಗಬೇಕು. ಶಿವಾಜಿ ಅವರ ಗುಣಗಳನ್ನು ಪಾಲಿಸಿ, ಅನುಸರಿಸುವ ಮೂಲಕ ದೇಶ ಕಟ್ಟಲು ಶ್ರಮಿಸಬೇಕು ಎಂದರು.

ಅಧ್ಯಕ್ಷತೆವಹಿಸಿದ್ದ ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್‌ಎಫ್‌ಎನ್ ಗಾಜಿಗೌಡ್ರ ಮಾತನಾಡಿ, 17ನೇ ಶತಮಾನದಲ್ಲಿ ಛತ್ರಪತಿ ಶಿವಾಜಿ ಮಹಾರಾಜರು ಮರಾಠ ಸಾಮ್ರಾಜ್ಯ ಸ್ಥಾಪನೆ ಮಾಡಿದ್ದರು. 16ನೇ ವಯಸ್ಸಿನಲ್ಲಿ ಮೊಘಲ್ ಮತ್ತು ಆದಿಲ್ ಶಾಹಿ ಆಡಳಿತದ ವಿರುದ್ಧ ಹೋರಾಡಿದ ಯುಗ ಪುರುಷ, ಪರಾಕ್ರಮಿ. ಮರಾಠ ಸಮಾಜದವರು ಒಗ್ಗಟ್ಟಾಗಿ ಇರಬೇಕು. ಶಿವಾಜಿ ಜಯಂತಿ ಒಂದು ಸಮುದಾಯಕ್ಕೆ ಸೀಮಿತವಾಗಿರದೆ ಎಲ್ಲಾ ಸಮಾಜದವರು ಒಗ್ಗಟ್ಟಾಗಿ ಆಚರಿಸುವ ಅವಶ್ಯಕತೆ ಇದೆ. ಸರ್ಕಾರ ಎಲ್ಲ ಸಮಾಜದವರು ಕೂಡಿ ಮಾಡಬೇಕು ಎಂದು ಘೋಷಣೆ ಮಾಡಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಜಾತಿಗೊಬ್ಬ ಜಗದ್ಗುರು, ಜಾತಿಗೊಂದು ಜಯಂತಿ



> ಸಮಾಜ ನಮಗೇನು ಕೊಟ್ಟಿದೆ ಎನ್ನುವುದಕ್ಕಿಂತ ನಾವು ಸಮಾಜಕ್ಕೆ ಏನು ಕೊಡುಗೆ ಕೊಟ್ಟಿದ್ದೇವೆ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕು. ಸಮಾಜ ಬಾಂಧವರು ಎಲ್ಲರೂ ಒಗ್ಗಟ್ಟಾಗಿರಬೇಕು. ಶಿವಾಜಿಯವರ ಇತಿಹಾಸ ತಿಳಿದುಕೊಂಡು ಇತಿಹಾಸ ಸೃಷ್ಟಿಸಬೇಕು. ಫೆ.28ರಂದು ಪುರಸಿದ್ಧೇಶ್ವರ ದೇವಸ್ಥಾನದಿಂದ ನಗರದ ಹಲವೆಡೆ ಮೆರವಣಿಗೆ ನಡೆಯಲಿದ್ದು, ಸಮಾಜ ಬಾಂಧವರು ಪಾಲ್ಗೊಳ್ಳಬೇಕು.
> ■ ಶಂಕರ ಮೆಹರವಾಡೆ, ಕ್ಷತ್ರೀಯ ಸಮಾಜ ಜಿಲ್ಲಾಧ್ಯಕ್ಷರು.

> ಮರಾಠಾ ಸಮಾಜ 36 ಉಪ ಪಂಗಡಗಳನ್ನು ಹೊಂದಿರುವ ಸಣ್ಣ ಸಮಾಜ. ಸಮಾಜದ ಜನತೆಗೆ ಸಭೆ ಸಮಾರಂಭ ಮಾಡಲು ಸಮುದಾಯ ಭವನದ ಅಗತ್ಯವಿದ್ದು, ಪ್ರಾಧಿಕಾರಕ್ಕೆ ಮನವಿ ಮಾಡಿದ್ದಾಗ 10 ಗುಂಟೆ ಜಾಗ ಕೊಟ್ಟಿದೆ. ಆದರೆ ಜಾಗ ಖರೀದಿಯಾಗದೆ ಹಾಗೆಯೇ ಬಾಕಿ ಇದ್ದು, ಪ್ರಾಧಿಕಾರದ ಅಧ್ಯಕ್ಷರು ಖರೀದಿ ಮಾಡಿಸಿಕೊಡಬೇಕು.
> ■ ಎಂ.ಎಸ್ ವೆಂಕೋಜಿ, ಜಿಲ್ಲಾಧ್ಯಕ್ಷ, ಮರಾಠ ಸಮಾಜ

ಕಾರ್ಯಕ್ರಮ ಆಗಿವೆ ಎಂದು ವಿಷಾಧ ವ್ಯಕ್ತಪಡಿಸಿದರು. ಈಗಾಗಲೇ ಪ್ರಾಧಿಕಾರದಿಂದ ಸಮಾಜದ ಸಮುದಾಯ ಭವನಕ್ಕೆ ಜಾಗ ನೀಡಿದ್ದು, ಹಣಕಾಸಿನ ತೊಂದರೆಯಿಂದ ಸ್ಥಗಿತಗೊಂಡಿದೆ. ಶಾಸಕರ ಜತೆಗೆ ಚರ್ಚಿಸಿ ಸಮಸ್ಯೆ ಬಗೆಹರಿಸುವ ಪ್ರಯತ್ನ ಮಾಡುತ್ತೇನೆ ಎಂದರು.

ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕಾಧ್ಯಕ್ಷ ಎಂ.ಎಂ. ಮೈದೂರ ಮಾತನಾಡಿದರು. ರೇವತಿ ತಿಳವಳ್ಳಿ ಉಪನ್ಯಾಸ ನೀಡಿದರು. ನಗರಸಭೆ ಮಾಜಿ ಸದಸ್ಯೆ ಚೆನ್ನಮ್ಮ ಬ್ಯಾಡಗಿ, ಈರಪ್ಪ ಲಮಾಣಿ, ಸಮಾಜದ ಮುಖಂಡರಾದ ಉಮೇಶ ವಾಘ್, ಪ್ರಕಾಶ ಮುಂಜೋಜಿ, ನಾಗರಾಜ ಜೋರಾಪುರಿ, ರೇಖಾ ಮುಂಜೋಜಿ, ರಘುವೀರ ಚವ್ಹಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ ಮತ್ತಿತರರಿದ್ದರು.

ವಿವಿಧ ಕಾಮಗಾರಿಗೆ ಶಾಸಕ ಭೂಮಿಪೂಜೆ

ಹಾನಗಲ್ಲ: ತಾಲೂಕಿನ ಮಂತಗಿ ಗ್ರಾಪಂ ವ್ಯಾಪ್ತಿಯಲ್ಲಿ ಒಂದು ಕೋಟಿ 41 ಲಕ್ಷ ರೂ. ವೆಚ್ಚದಲ್ಲಿ ನಾನಾ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಶ್ರೀನಿವಾಸ ಮಾನೆ ಭೂಮಿಪೂಜೆ ನೆರವೇರಿಸಿದರು.

ಸಾಗರವಳ್ಳಿ ಗ್ರಾಮದಲ್ಲಿ 56 ಲಕ್ಷ ರೂ., ಮಂತಗಿ ಗ್ರಾಮದಲ್ಲಿ 31.30 ಲಕ್ಷ ರೂ., ಲಕ್ಷ್ಮೀಪುರ ಗ್ರಾಮದಲ್ಲಿ 22 ಲಕ್ಷ ರೂ., ಕಾಮನಹಳ್ಳಿ ಗ್ರಾಮದಲ್ಲಿ 14.20 ಲಕ್ಷ ರೂ., ಶಿವಪುರ ಗ್ರಾಮದಲ್ಲಿ 10.50 ಲಕ್ಷ ರೂ., ಕಾಮನಹಳ್ಳಿ ತಾಂಡಾದಲ್ಲಿ 7 ಲಕ್ಷ ರೂ. ವೆಚ್ಚದಲ್ಲಿ ಸಿಸಿರಸ್ತೆ, ಗಟಾರ, ರಸ್ತೆ ಅಭಿವೃದ್ಧಿ, ಸಿಡಿ ನಿರ್ಮಾಣ, ಕೆರೆ ಸುಧಾರಣೆ ಸೇರಿದಂತೆ ನಾನಾ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಯಿತು.

ನಂತರ ಮಾತನಾಡಿ, ರಾಜ್ಯ ಸರಕಾರ ಸಾರ್ಥಕ ಸಾವಿರ ದಿನಗಳನ್ನು ಪೂರೈಸಿದ್ದು, ನುಡಿದಂತೆ ನಡೆದಿದೆ. ಕಳೆದ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ತಾಲೂಕಿನ ಜನತೆಗೆ ಪಂಚ ಗ್ಯಾರಂಟಿಗಳ ಜೊತೆಗೆ 6 ನೇ ಗ್ಯಾರಂಟಿಯಾಗಿ ಹಕ್ಕುಪತ್ರದ ಭರವಸೆ ನೀಡಲಾಗಿತ್ತು. ಇದೀಗ ಆ ಭರವಸೆ ಸಹ ಈಡೇರಿಸಲಾಗಿದೆ. ಇಡೀ ರಾಜ್ಯದಲ್ಲಿಯೇ ಅತೀ ಹೆಚ್ಚು ಹಕ್ಕುಪತ್ರಗಳನ್ನು ವಿತರಿಸಿದ ಶ್ರೇಯಸ್ಸು ಹಾನಗಲ್ ತಾಲೂಕಿನದ್ದಾಗಿದೆ. ಜೊತೆಗೆ ತಾಲೂಕಿನ ಸರ್ವತೋಮುಖ ಪ್ರಗತಿಗೆ ಶ್ರಮಿಸಲಾಗಿದೆ ಎಂದರು.

ಕೆಪಿಸಿಸಿ ಸದಸ್ಯ ಖ್ವಾಜಾಮೊಹಿದ್ದೀನ್ ಜಮಾದಾರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹನುಮಂತಪ್ಪ ಮರಗಡಿ, ಮುಖಂಡರಾದ ಈರಣ್ಣ ಬೈಲವಾಳ, ಮಾರುತಿ ಕಮಾಟಿ, ರಾಜಕುಮಾರ ಜೋಗಪ್ಪನವರ, ತಿಮ್ಮಣ್ಣ ನೆಗಳೂರ, ಸಂತೋಷ ಹಣಜಿ, ಬಸವರಾಜ ಹಿರೋಜಿ, ಗಣೇಶ ಬಾಳಿಹಳ್ಳಿ, ತಿಮ್ಮಣ್ಣ ವಡ್ಡರ, ಜಾಫರಸಾಬ ಹಿರೂರ, ಜಗದೀಶ ಮಾಯಣ್ಣನವರ, ಫಕ್ಕೀರಪ್ಪ ಮಲ್ಲಿಗಾರ, ಮಹದೇವಪ್ಪ ಹರಿಜನ, ಶ್ರೀಕಾಂತ ತಳವಾರ, ಗಿರೀಶ ವಡ್ಡರ, ಮಕ್ಬೂಲ್ ಅಹ್ಮದ್, ಸುರೇಶ ವಡ್ಡರ, ಇಸಾಕಸಾಬ ಶಿವಪೂರ, ಅಶೋಕ ಪಾಟೀಲ, ರಾಮಚಂದ್ರ ಹೊಸಮನಿ, ಪರಮೇಶ ಹೊಸಮನಿ, ಮಲ್ಲೇಶ ವಗ್ಗಣ್ಣನವರ, ಬಸಣ್ಣ ಹೊಸಮನಿ, ಲೋಕಪ್ಪ ಲಮಾಣಿ ಇದ್ದರು.



ಕೆಲಸದಿಂದ ತೆಗೆದು ಹಾಕಿದಕ್ಕಾಗಿ ಪ್ರತಿಭಟನೆ

ರಾಣೇಬೆನ್ನೂರ: ತಾಲೂಕಿನ ಕುಮಾರ ಪಟ್ಟಣ ಆದಿತ್ಯ ಸ್ಕೂಲ್‌ನಲ್ಲಿ ಕಳೆದ 28 ವರ್ಷದಿಂದ ಶಿಕ್ಷಕ ಹಾಗೂ ಕಚೇರಿ ಆಡಳಿತಾಽಕಾರಿಯಾಗಿ ಕೆಲಸ ಮಾಡುತ್ತಿದ್ದ ಶಶಿಧರ ಶಿಗ್ಲಿ ಎಂಬುವರನ್ನು ಏಕಾಏಕಿ ಕೆಲಸದಿಂದ ತೆಗೆದು ಹಾಕಲಾಗಿದ್ದು, ಅವರಿಗೆ ನ್ಯಾಯ ಒದಗಿಸಿಕೊಡಬೇಕು ಎಂದು ಆಗ್ರಹಿಸಿ ರಾಜ್ಯ ರೈತ ಸಂಘ ನೇತೃತ್ವದಲ್ಲಿ ಶಿಕ್ಷಕ ಶಶಿಧರ ಶಿಗ್ಲಿ ಪ್ರತಿಭಟನೆ ನಡೆಸಿದರು.

ಶಶಿಧರ ಶಿಗ್ಲಿ ಮಾತನಾಡಿ, 1997ರಲ್ಲಿ ನಾನು ಕೆಲಸಕ್ಕೆ ಸೇರಿಕೊಂಡು ಈವರೆಗೂ ಸೇವೆ ಸಲ್ಲಿಸುತ್ತ ಬಂದಿದ್ದೇನೆ. ಆದಿತ್ಯ ಸ್ಕೂಲ್ನವರು ಇಷ್ಟು ವರ್ಷಗಳ ಕಾಲವಾದರೂ ಕೇವಲ 28 ಸಾವಿರ ರೂ. ಸಂಬಳ ನೀಡಿದ್ದಾರೆ. ನಾನು ಸಂಬಳ ಹೆಚ್ಚಳ ಮಾಡುವಂತೆ ಮನವಿ ಮಾಡಿರುವೆ. ಶಿಕ್ಷಣ ಇಲಾಖೆ ಮಾರ್ಗದರ್ಶಿ ಪ್ರಕಾರ ಸ್ಕೂಲ್ನವರು ನನಗೆ 55 ಸಾವಿರ ರೂ. ಸಂಬಳ ನೀಡಬೇಕು. ಇದನ್ನು ಕೇಳಿದ ನನ್ನನ್ನು ಇಲ್ಲಸಲ್ಲದ ಆರೋಪ ಮಾಡಿ ಕೆಲಸದಿಂದ ತೆಗೆದು ಹಾಕಿದ್ದಾರೆ.ಶಿಕ್ಷಣ ಸಂಸ್ಥೆಯಿಂದ ತೆಗೆದುಹಾಕಲು ಯಾವುದೆ ಕಾರಣವಿಲ್ಲ. ಆದ್ದರಿಂದ ನನಗೆ ನ್ಯಾಯ ಒದಗಿಸಿಕೊಡಬೇಕು. ಅಲ್ಲಿಯವರೆಗೆ ಪ್ರತಿಭಟನೆ ಹಿಂತೆಗೆದುಕೊಳ್ಳುವುದಿಲ್ಲ ಎಂದು ಪಟ್ಟುಹಿಡಿದರು.

ಸ್ಥಳಕ್ಕೆ ಬಂದ ಪೊಲೀಸರು ಹಾಗೂ ಅಧಿಕಾರಿಗಳು, ಮುಂದಿನ ಒಂದು ವಾರದೊಳಗೆ ಸಂಸ್ಥೆಯ ಮೇಲಾಧಿಕಾರಿಗಳನ್ನು ಕರೆಯಿಸಿ ಸಮಸ್ಯೆಗೆ ಪರಿಹಾರ ಸೂಚಿಸಲಾಗುವುದು ಎಂದು ಭರವಸೆ ನೀಡಿದರು. ನಂತರ ಪ್ರತಿಭಟನೆ ಹಿಂತೆಗೆದುಕೊಳ್ಳಲಾಯಿತು.

ರೈತರಾದ ಹನುಮಂತಪ್ಪ ಕಬ್ಬಾರ, ಹನುಮಂತಪ್ಪ ದಿವಗಿಹಳ್ಳಿ, ಚಂದ್ರಶೇಖರ ಕುದರಿಹಾಳ, ಶಿವಾನಂದ ಕೆಳಗಿನಮನಿ, ಬಸವಣೆಪ್ಪ ಹೊನ್ನಕ್ಕಳವರ, ಶೈಲಮ್ಮ ಹರನಗಿರಿ, ಪರಮೇಶಪ್ಪ ಚಿನ್ನಣ್ಣನವರ, ಬಸವರಾಜ ಲಗಿಬಗಿ, ಚಂದ್ರು ಸಣ್ಣಪ್ಪನವರ, ಸಿದ್ದಪ್ಪ ಕೋಡೇರ ಮತ್ತಿತರರಿದ್ದರು.



ಒಗ್ಗಟ್ಟಾಗಿ ಚುನಾವಣೆ ಎದುರಿಸಿ: ಮಂಜುನಾಥ

ರಾಣೇಬೆನ್ನೂರ: ಮುಂಬರುವ ನಗರಸಭೆ, ಗ್ರಾಪಂ ಸೇರಿ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಹಾವೇರಿ ಜಿಲ್ಲಾ ಜೆಡಿಎಸ್ ಕಾರ್ಯಕರ್ತರು, ಮುಖಂಡರು ಸಿದ್ಧತೆ ಮಾಡಿಕೊಂಡಿದ್ದು, ಸರ್ವರೂ ಒಗ್ಗೂಡಿ ಸಂಘಟನೆಗೆ ಮುಂದಾಗಬೇಕು ಹಾಗೂ ಚುನಾವಣೆ ಎದುರಿಸಬೇಕು ಎಂದು ಹಾವೇರಿ ಜಿಲ್ಲಾಧ್ಯಕ್ಷ ಮಂಜುನಾಥ.ಎಸ್.ಗೌಡಶಿವಣ್ಣನವರ ಹೇಳಿದರು.

ಗುರುವಾರ ನಗರದ ನಂದಿ ಹೊಟೇಲ್‌ನಲ್ಲಿ ಏರ್ಪಡಿಸಿದ್ದ ಜನತಾದಳ ಜಾತ್ಯಾತೀತ ಪಕ್ಷದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಪಕ್ಷದ ಹಿತದೃಷ್ಟಿಯಿಂದ ಹಾಗೂ ಸಂಘಟನೆಯ ಸಲುವಾಗಿ ಈ ಸ್ಥಳೀಯ ಸಂಸ್ಥೆಗಳು ಪಕ್ಷಕ್ಕೆ ಬಹಳಷ್ಟು ಅನುಕೂಲಕರವಾಗಿವೆ . ಪಕ್ಷದ ಕಾರ್ಯಕರ್ತರು ಒಟ್ಟಾಗಿ ಚುನಾವಣೆಯನ್ನು ಎದುರಿಸಬೇಕು ಎಂದರು. ಜೆಡಿಎಸ್ ಪಕ್ಷವು ಹಾವೇರಿ ಜಿಲ್ಲೆಯಲ್ಲಿ ಹೆಚ್ಚು ಬಲಿಷ್ಠವಾಗಿದ್ದು, ಹೆಚ್ಚಿನ ಸಂಘಟನೆಯಾಗಿದೆ. ಕಾರ್ಯಕರ್ತರು ಚುನಾವಣೆಗಾಗಿ ಉಸ್ತುಕರಾಗಿದ್ದಾರೆ. ಇಂತಹ ಸಂದರ್ಭದಲ್ಲಿ ಗ್ರಾಮ ಮಟ್ಟದಿಂದ ಪಕ್ಷವನ್ನು ಇನ್ನಷ್ಟು ಬಲವರ್ಧನೆಗೊಳಿಸಬೇಕಾಗಿದೆ ಎಂದರು.

ಜೆಡಿಎಸ್ ಜಿಲ್ಲಾ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನ ಬೇವಿನಮರದ, ರವಿ ಭತ್ತದ, ಸಿದ್ದಣ್ಣ ಗುಡಿಮುಂದ್ಲರ, ತಾಲೂಕಾಧ್ಯಕ್ಷ ನಿಂಗಪ್ಪ ಸತ್ಯಪ್ಪನವರ, ನಗರಾಧ್ಯಕ್ಷ ಲಿಂಗರಾಜ ಹೊನ್ನಾಳಿ, ಹಾನಗಲ್ ಅಧ್ಯಕ್ಷ ಆರ್.ಬಿ.ಪಾಟೀಲ, ಬ್ಯಾಡಗಿ ಅಧ್ಯಕ್ಷ ಮಲ್ಲಿಕಾರ್ಜುನ ಕೊಪ್ಪದ, ಅಮೀರಜಾನ್ ಬೇಪಾರಿ, ಮಹೇಶ ಕಂಬಳಿ ಮಾತನಾಡಿದರು. ಮಾಲತೇಶ ಶಿಡಗನಹಾಳ, ಎಸ್.ಡಿ.ಹಿರೇಮಠ, ಲಕ್ಷ್ಮಿ ಕದರಮಂಡಲಗಿ, ಉಷಾ ಜಾಡಮಲಿ, ತಮ್ಮಣ್ಣ ಮುದಕಣ್ಣನವರ, ಗಂಗಮ್ಮ ಉಚ್ಚಂಗಿ ಸೇರಿದಂತೆ ಹೆಚ್.ಡಿ.ಕುಮಾರಸ್ವಾಮಿಯವರ ಅಭಿಮಾನಿಗಳು ವಿವಿಧ ಜಿಲ್ಲೆಯ ಜೆಡಿಎಸ್ ಕಾರ್ಯಕರ್ತರು ಭಾಗವಹಿಸಿದ್ದರು.



ಶಿವಾಜಿ ಜಯಂತಿ ಆಚರಣೆ

ಬ್ಯಾಡಗಿ: ಯುವಕರಿಗೆ ಧೈರ್ಯ ಸಾಹಸ ಹಾಗೂ ಅಭಿಮಾನದ ಸಂಕೇತವಾಗಿರುವ ಶಿವಾಜಿ ಮಹಾರಾಜರು ಪ್ರತಿಯೊಬ್ಬರಿಗೂ ಆದರ್ಶವಾಗಿದ್ದಾರೆ ಎಂದು ತಹಶೀಲ್ದಾರ್ ಚಂದ್ರಶೇಖರ್ ನಾಯಕ್ ಹೇಳಿದರು.

ಪಟ್ಟಣದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ 396ನೇ ಜಯಂತಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು. ಇಂದಿನ ಯುವ ಪೀಳಿಗೆಗೆ ಛತ್ರಪತಿಯಂತೆ ಸಾಹಸ ಧೈರ್ಯ ಹೋರಾಟದ ಮನೋಭಾವವನ್ನು ಬೆಳೆಸಿಕೊಳ್ಳಬೇಕು ದೇಶ ಕಂಡ ಅಪ್ರತಿಮ ಹೋರಾಟಗಾರ ಅವರು ಅನೇಕ ವೈರಿಗಳನ್ನು ಹಿಮ್ಮಟ್ಟಿಸಿ ಸಾಮ್ರಾಜ್ಯ ಕಟ್ಟಿ ಹಿಂದುತ್ವ ಉಳಿಸಿದ ಹಿಂದುಗಳ ಹೃದಯ ಸಾಮ್ರಾಟವಾಗಿದ್ದಾರೆ ಯುದ್ಧ ಕಲೆಗಳನ್ನು ಕರಗತ ಮಾಡಿಕೊಂಡು ಏಕಾಂಗಿಯಾಗಿ ಹೋರಾಟ ಮಾಡಿದವರು ಸೈನ್ಯ ಕಟ್ಟಿಕೊಂಡು ದೊಡ್ಡ ದೊಡ್ಡ ಸೈನ್ಯ ಹೊಂದಿದ್ದ ದೇಶದ ವಿರೋಧಿಗಳಿಗೆ ಸೋಲಿನ ರುಚಿ ತೋರಿಸಿದವರು ಎಂದು ಸ್ಮರಿಸಿದರು, ಸಮಾಜದ ಮುಖಂಡ ನ್ಯಾಯವಾದಿ ಹಾಲೇಶ್ ಜಾಧವ್ ಮಾತನಾಡಿ, ಜಿಜಾಬಾಯಿ ಬಾಲ್ಯದಲ್ಲಿಯೇ ಶಿವಾಜಿಗೆ ಧಾರ್ಮಿಕ ಸಂಸ್ಕಾರದೊಂದಿಗೆ ಯುದ್ಧ ಕಲೆಗಳನ್ನು ಕರಗತ ಮಾಡಿಸಿದ್ದರು.ಇದರಿಂದಾಗಿ ಅವರು ಛತ್ರಪತಿಯಾಗಿ ಬಾನೆತ್ತರಕ್ಕೆ ಬೆಳೆದು ಅಜರಾಮರವಾಗಿದ್ದಾರೆ ಹಲವು ಕೋಟೆಗಳನ್ನು ನೀಡಿದ್ದಾರೆ ಅವರು ಹಾಕಿಕೊಟ್ಟ ಹಾದಿಯಲ್ಲಿ ನಾವೆಲ್ಲರೂ ಸಾಗಬೇಕು ಎಂದರು,

ಸಮಾಜದ ಮುಖಂಡರಾದ ಪುಂಡಲಿಕ್ ಅಚ್ಚಲ್ಕರ, ಎಸ್.ಟಿ.ಜಾದವ್, ಬಾಬು ಕಲಬುರ್ಗಿ, ಪ್ರದೀಪ್ ಜಾದವ, ಗಣೇಶ್ ಅಚಲ್ಕರ್, ಉದಯ್ ಚೌದರಿ, ರಾಘವೇಂದ್ರ ಧವಂಡೆ, ಮಹೇಶ್ ಚೌದರಿ, ಮಂಜುನಾಥ್ ಜಾಧವ, ವೈಭವ್ ವಾಳ್ವೇಕರ್ ಹಾಗೂ ಸಮಾಜದ ಅನೇಕ ಮುಖಂಡರು ಮತ್ತು ತಹಶೀಲ್ದಾರ್ ಕಚೇರಿಯ ಸಿಬ್ಬಂದಿ ಉಪಸ್ಥಿತರಿದ್ದರು.



ಎಲ್‌ಬಿಎಸ್ ಮಾರ್ಕೆಟ್ ಶಿಥಿಲ ಕಟ್ಟಡ ತೆರವು

ಹಾವೇರಿ: ಇಲ್ಲಿನ ಲಾಲ್ ಬಹಾದ್ದೂರ ಶಾಸ್ತ್ರೀ ಮಾರುಕಟ್ಟೆಯಲ್ಲಿ ಶಿಥಿಲಗೊಂಡಿದ್ದ, ಅಪಾಯದ ಅಂಚಿನಲ್ಲಿದ್ದ ಸುಮಾರು 3-4ದಶಕಗಳ ಕಟ್ಟಡಗಳನ್ನು ಮಂಗಳವಾರ ರಾತ್ರಿ ಜೆಸಿಬಿ ಮೂಲಕ ನಗರಸಭೆ ಕಾರ್ಯಾಚರಣೆ ನಡೆಸಿ ತೆರವುಗೊಳಿಸಿದೆ. ಆದಾಗ್ಯೂ ಇನ್ನೂ ಕೂಡ ಹಳೆಯದಾದ ಕೆಲವು ಕಟ್ಟಡಗಳು ಇನ್ನೂ ಇದ್ದು, ಈಗಾಗಲೇ ಅವುಗಳ ತೆರವಿಗೆ ಅಂಗಡಿಕಾರರಿಗೆ ಸೂಚನೆ ನೀಡಿದ್ದು, ಮುಂದಿನ ಕೆಲವೇ ದಿನಗಳಲ್ಲಿ ಅವುಗಳನ್ನೂ ಸಹ ತೆರವುಗೊಳಿಸಲು ಸಿದ್ಧತೆ ನಡೆಸಿದೆ.

ಲಾಲ್ ಬಹಾದ್ದೂರ ಶಾಸ್ತ್ರೀ ಮಾರುಕಟ್ಟೆಯಲ್ಲಿನ ತರಕಾರಿ ಅಂಗಡಿ ಮಳಿಗೆಗಳ ಹರಾಜು ಕುರಿತು ಹತ್ತು ಹಲವು ಬಾರಿ ನಗರಸಭೆಯಲ್ಲಿ ಚರ್ಚೆ ನಡೆದಿತ್ತಾದರೂ ಅವುಗಳ ವಾಸ್ತವಿಕ ಸ್ಥಿತಿ ಮತ್ತು ಶಿಥಿಲಾವಸ್ಥೇ ಹಿನ್ನೆಲೆಯಲ್ಲಿ ಅವುಗಳ ತೆರವಿಗೆ ಚಿಂತನೆ ನಡೆದಿತ್ತು. ಇದೀಗ ಅದಕ್ಕೆ ತಾರ್ಕಿಕ ಆರಂಭ ಸಿಕ್ಕಿದ್ದು, ತೆರವಾದ ಸ್ಥಳದಲ್ಲಿ ಹೊಸದಾದ ನವೀಕೃತ ಕಟ್ಟಡ ನಿರ್ಮಾಣದ ಚಿಂತನೆ ನಡೆದಿದೆ.



> ಈಗಾಗಲೇ ನಗರಸಭೆ ವ್ಯಾಪ್ತಿಯಲ್ಲಿನ ಲಾಲ್ ಬಹಾದ್ದೂರ ಶಾಸ್ತ್ರಿ ತರಕಾರಿ ಮಾರುಕಟ್ಟೆಯ ಶಿಥಿಲ ಕಟ್ಟಡಗಳ ತೆರವಿಗೆ ಮುಂದಾಗಿದ್ದೇವೆ. ಅಲ್ಲಿನ ವ್ಯಾಪಾರಿಗಳಿಗೆ ಪರ್ಯಾಯ ಮಾರ್ಗಕ್ಕೆ ಈ ಹಿಂದೆಯೇ ಸೂಚನೆ ನೀಡಲಾಗಿದೆ. ಇನ್ನು ನಗರಸಭೆ ವ್ಯಾಪ್ತಿಯ ಸುಮಾರು 64 ಮಳಿಗೆಗಳ ಟೆಂಡರ್ ಆಹ್ವಾನಿಸಿದ್ದು, ಆಸಕ್ತರು ಪಾಲ್ಗೊಂಡು ವ್ಯಾಪಾರ ಮುಂದುವರೆಸಬಹುದು.
> ■ ಎಚ್. ಕಾಂತರಾಜು, ಆಯುಕ್ತರು, ನಗರಸಭೆ.

ಈ ಕಟ್ಟಡಗಳು 40 ವರ್ಷದ ಹಿಂದೆ ಅಂದರೆ ಸುಮಾರು 1985-86ರಲ್ಲಿ ನಿರ್ಮಾಣವಾಗಿದ್ದು, 10-12 ವರ್ಷಗಳ ವ್ಯಾಪಾರದ ಹರಾಜು ಅಡಿ ಮಳಿಗೆಗಳನ್ನು ಟೆಂಡರ್ ನೀಡಲಾಗಿತ್ತು. ನಂತರ ಮತ್ತೆ 2018-19ರಲ್ಲಿ ಫೆಬ್ರವರಿ ಹರಾಜು ಪ್ರಕ್ರಿಯೆ ನಡೆದು ಮಳಿಗೆ ಬಾಡಿಗೆ ನೀಡಲಾಗಿತ್ತು. ಆದರೆ ಇಲ್ಲಿ ನೈಜವಾಗಿ ಟೆಂಡರ್ ಪಡೆದವರೊಬ್ಬರು, ಬಾಡಿಗೆ ಇದ್ದವರೊಬ್ಬರು ಎಂಬಂತಾಗಿದೆ. ಟೆಂಡರ್ ಪಡೆದವರು ಉಪಬಾಡಿಗೆ ಆಧಾರದ ಮೇಲೆ ಹೆಚ್ಚಿನ ಬಾಡಿಗೆಗೆ ಮೂರನೇ ವ್ಯಕ್ತಿಗೆ ನೀಡುತ್ತಾರೆ ಎಂಬ ಆರೋಪಗಳೂ ಕೇಳಿಬಂದಿದ್ದವು.

ಆದರೆ ಮಾರುಕಟ್ಟೆ ಆವರಣದಲ್ಲಿ ಒಟ್ಟು ನಾಲ್ಕು ಹಂತದಲ್ಲಿ ಶಿಥಿಲಗೊಂಡ ಕಟ್ಟಡಗಳಿದ್ದು, ಅವುಗಳನ್ನು ಬಳಸದಿರುವಂತೆ ಸ್ಥಳೀಯ ವ್ಯಾಪಾರಿಗಳಿಗೆ ಸೂಚನೆ ನೀಡಿದ್ದರೂ ಅಪಾಯದ ಹಂತದಲ್ಲಿದ್ದ ಶಿಥಿಲ ಕಟ್ಟಗಳಗಳನ್ನೇ ಗೋದಾಮುಗಳಂತೆ ಬಳಕೆ ಮಾಡಲಾಗುತ್ತಿತ್ತು.

ಮುಂದಿನ ಒಂದು ವಾರದಲ್ಲಿ ಎಲ್ಲಾ ಶಿಥಿಲ ಕಟ್ಟಗಳನ್ನು ತೆರವು ಮಾಡಲಾಗುವುದು, ಈಗಾಗಲೇ ಅಲ್ಲಿದ್ದ ವ್ಯಾಪಾರಿಗಳು ಸ್ಥಳಗಳನ್ನು ತೆರವು ಮಾಡುವಂತೆ ಸೂಚಿಸಿದ್ದು ಮೊದಲ ಹಂತದ ತೆರವು ಯಾವುದೇ ಗೊಂದಲವಿಲ್ಲದೇ ಪೂರ್ಣಗೊಂಡಂತಾಗಿದೆ.

ಹಿಂದೂಗಳು ಒಗ್ಗಟ್ಟಾಗಿರಲಿ: ಮೆಹರವಾಡೆ

ಗದಗ: ಪ್ರತಿಯೊಬ್ಬ ಹಿಂದೂಗಳು ಛತ್ರಪತಿ ಶಿವಾಜಿ ಮಹಾರಾಜರ ಜಯಂತಿಯನ್ನು ಆಚರಿಸುವ ಮೂಲಕ ಒಂದಾಗಬೇಕು ಎಂದು ಹಿರಿಯ ಉದ್ಯಮಿ ಈಶ್ವರಸಾ ಮೆಹರವಾಡೆ ಹೇಳಿದರು.

ಅವಳಿ ನಗರದ 31ನೇ ವಾರ್ಡ್‌ನ ಜೋಡ ಮಾರುತಿ ದೇವಸ್ಥಾನದ ಎದುರಿಗೆ ಇರುವ ಕಿಲ್ಲಾ ಓಣಿಯ ಎಸ್‌ಎಸ್‌ಕೆ ಸಮಾಜ ಬಾಂಧವರು ಹಮ್ಮಿಕೊಂಡ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು. ಅಖಂಡ ಹಿಂದೂ ಸಮಾಜ ನಿರ್ಮಾಣಕ್ಕಾಗಿ ಛತ್ರಪತಿ ಶಿವಾಜಿ ಮಹಾರಾಜರು ಸಾಕಷ್ಟು ಹೋರಾಟ ಮಾಡಿದ್ದಾರೆ. ಅವರ ಕನಸನ್ನು ನಾವೆಲ್ಲರೂ ನನಸು ಮಾಡಬೇಕಿದೆ. ನಾವೆಲ್ಲ ಹಿಂದೂಗಳು ಒಗ್ಗಟ್ಟಾಗದಿದ್ದರೆ ಮುಂದಿನ ದಿನಗಳಲ್ಲಿ ನಮ್ಮೆಲ್ಲರಿಗೂ ಕಷ್ಟದ ದಿನಗಳು ಬರಲಿವೆ ಎಂದರು.

ರಿಯಲ್ ಎಸ್ಟೇಟ್ ಉದ್ಯಮಿ ಸುಧೀರ ಕಾಟಿಗರ ಅಧ್ಯಕ್ಷತೆ ವಹಿಸಿದ್ದರು. ಇದಕ್ಕೂ ಮುನ್ನ ಛತ್ರಪತಿ ಶಿವಾಜಿ ಮಹಾರಾಜರ ಭಾವಚಿತ್ರಕ್ಕೆ ಜೋಡ ಮಾರುತಿ ದೇವಸ್ಥಾನದ ಅರ್ಚಕ ರಂಗಪ್ಪ ಪೂಜಾರಿ ಅವರು ವಿಶೇಷ ಪೂಜೆ ಸಲ್ಲಿಸಿದರು. ವಿಠ್ಠಲ ಬಾಂಡಗೆ, ಪರಶುರಾಮ ಬದಿ, ಪದ್ಮಾನಂದ ಬೇವಿನಕಟ್ಟಿ, ರಾಮಚಂದ್ರ ಶಿದ್ಲಿಂಗ, ಪರಶುರಾಮ ಮಿಸ್ಕಿನ್, ಶಿವಾನಂದ ಪೂಜಾರಿ, ನೇಮಚಂದ ಪವಾರ, ಸಂದೀಪ ಕಬಾಡಿ, ಸುನೀಲ ಬಸವಾ ಇತರರಿದ್ದರು. ಶ್ರೀಕಾಂತ ಬಾಕಳೆ ಸ್ವಾಗತಿಸಿ, ನಿರೂಪಿಸಿದರು. ರವಿ ಚವ್ಹಾಣ ವಂದಿಸಿದರು.



ಕಳ್ಳರ ಬಂಧನ: ಚಿನ್ನಾಭರಣ ವಶ



ರಾಣೇಬೆನ್ನೂರ: ಕದ್ದ ಬೈಕ್‌ಲ್ಲಿ ಓಡಾಡುತ್ತಿದ್ದ ಖದೀಮರನ್ನು ಬಂಧಿಸಿ, ಅವರಿಂದ 3.84 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಹಾಗೂ ಮೂರು ಬೈಕ್‌ಗಳನ್ನು ವಶಪಡಿಸಿಕೊಳ್ಳುವಲ್ಲಿ ಇಲ್ಲಿಯ ಶಹರ ಠಾಣೆ ಪೊಲೀಸರು ಗುರುವಾರ ಯಶಸ್ವಿಯಾಗಿದ್ದಾರೆ.

ನಗರದ ದೊಡ್ಡಪೇಟೆ ದುರ್ಗಾ ಮಸೀದಿ ಸಮೀಪದ ಗವಾರದವರ ಓಣಿ ನಿವಾಸಿ ಮುಬಾರಕ್ (ಮೋಟಿಯಾ) ಹುಸೇನ್ ಬ್ಯಾಡಗಿ (23) ಹಾಗೂ ಇಸ್ಲಾಂಪುರ ಓಣಿಯ ಮಹ್ಮದ್ ಕಲಂದರ (ಜಪಟ್ಟಿ ಶಾಹಿಲ್) ಹುಸೇನಸಾಬ ಹಾವೇರಿ (22) ಬಂಧಿತ ಆರೋಪಿತರು. ಇವರ ಸೆಂಟ್ರಿಂಗ್ ಕೆಲಸ ಮಾಡಿಕೊಂಡಿದ್ದು, ಮೋಜು ಮಸ್ತಿಗಾಗಿ ಬೈಕ್ ಹಾಗೂ ಮನೆ ಕಳ್ಳತನ ಮಾಡುತ್ತಿದ್ದರು. ಆರೋಪಿಗಳ ವಿರುದ್ಧ ಈ ಹಿಂದೆ 18 ಕಳ್ಳತನ ಪ್ರಕರಣ ಕೂಡ ದಾಖಲಾಗಿದ್ದವು. ಕಳೆದ ವಾರ ಬೈಕ್ ಕಳ್ಳತನ ಆರೋಪದಡಿ ಬಂಕಾಪುರ, ಹಾವೇರಿ, ರಾಣೆಬೆನ್ನೂರ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಾಗಿದ್ದವು. ಬುಧವಾರ ರಾತ್ರಿ ಇಬ್ಬರು ಬಂಕಾಪುರದಲ್ಲಿ ಕಳ್ಳತನ ಮಾಡಿದ್ದ ಸ್ಕೂಟಿ ಮೇಲೆ ನಗರದಲ್ಲಿ ಓಡಾಡುತ್ತಿದ್ದರು. ಈ ಕುರಿತು ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಪೊಲೀಸರು ಆರೋಪಿಗಳನ್ನು ವಶಪಡಿಸಿಕೊಂಡು ವಿಚಾರಣೆ ನಡೆಸಿದಾಗ ಕಳ್ಳತನ ಮಾಡಿರುವುದು ಬೆಳಕಿಗೆ ಬಂದಿದೆ. ಆರೋಪಿಗಳಿಂದ ಚಿನ್ನಾಭರಣ ಹಾಗೂ ಬೈಕ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಕಿರುಸುದ್ದಿ

ಗುಡ್ಡಗಾಡು ಓಟದ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ

ರಾಮದುರ್ಗ: ಸ್ಥಳೀಯ ಸಿ.ಎಸ್.ಬೆಂಬಳಗಿ ಕಲಾ, ಶಾ.ಎಂ.ಆರ್.ಪಾಲರೇಶಾ ವಿಜ್ಞಾನ ಹಾಗೂ ಜಿ.ಎಲ್.ರಾಠಿ ವಾಣಿಜ್ಯ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಕಾಗವಾಡದ ಶಿವಾನಂದ ಮಹಾವಿದ್ಯಾಲಯದಲ್ಲಿ ಜರುಗಿದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಏಕ ವಲಯ ಪುರುಷರ ಗುಡ್ಡಗಾಡ ಓಟದ ಸ್ಪರ್ಧೆಯಲ್ಲಿ ತಂಡವು ದ್ವಿತೀಯ ಸ್ಥಾನ ಪಡೆದುಕೊಂಡಿದೆ. ಸ್ಪರ್ಧೆಯಲ್ಲಿ ಮಹಾವಿದ್ಯಾಲಯದ ವಿದ್ಯಾರ್ಥಿಗಳಾದ ಸಿದ್ಲಿಂಗಪ್ಪ ಕ್ವಾರಿ, ಮಾರುತಿ ಯ. ಕಲ್ಲೇಶನವರ, ಗೋಪಾಲ ಲ. ಮಾದರ, ಯಲ್ಲಪ್ಪ ಯ. ಮರಡಿ, ಲಕ್ಷ್ಮಣ ಪೂಜೇರ, ಮಂಜುನಾಥ ಸೊಪ್ಪಡ್ಲ, ಪ್ರಶಾಂತ ಸಿ. ತಡಸಿ ಭಾಗವಹಿಸಿ ಪ್ರಶಸ್ತಿ ಗಳಿಸುವ ಮೂಲಕ ಮಹಾವಿದ್ಯಾಲಯಕ್ಕೆ ಕೀರ್ತಿ ತಂದಿದ್ದಾರೆ. ಕ್ರೀಡಾಪಟುಗಳಿಗೆ ವಿದ್ಯಾ ಪ್ರಸಾರಕ ಸಮಿತಿಯ ಅಧ್ಯಕ್ಷ ಎಸ್. ಎಸ್. ಸುಲ್ತಾನಪೂರ, ಉಪಾಧ್ಯಕ್ಷ ಪಿ. ಎಂ. ಪಟ್ಟಣ, ಗೌರವ ಕಾರ್ಯದರ್ಶಿ ಆರ್. ಪಿ. ಜಗತಾಪ, ಕಾಲೇಜು ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಪಿ. ಎಫ್. ಪಾಟೀಲ ಹಾಗೂ ಸದಸ್ಯರು, ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಪಿ. ಬಿ. ತೆಗ್ಗಿಹಳ್ಳಿ, ಮತ್ತು ದೈಹಿಕ ಶಿಕ್ಷಣ ನಿರ್ದೇಶಕ ಬಿ. ಬಿ. ಕಬಾಡಗಿ ಮತ್ತು ಸಿಬ್ಬಂದಿ ಅಭಿನಂದಿಸಿದ್ದಾರೆ.

ವಿದ್ಯುತ್ ವ್ಯತ್ಯಯ ಇಂದು

ಬೆಳಗಾವಿ: ಫೆ.20ರಂದು ಬೆಳಿಗ್ಗೆ 10ಗಂಟೆಯಿಂದ ಸಂಜೆ 5ರವರೆಗೆ ಹುವಿಸಕಂನಿ ವತಿಯಿಂದ ತುರ್ತು ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುತ್ತಿರುವುದರಿಂದ 33 ಕೆ.ವ್ಹಿ. ಗಂದಿಗವಾಡ ಉಪಕೇಂದ್ರದಿಂದ ಸರಬರಾಜು ಆಗುವ ಗಂದಿಗವಾಡ, ಹಿರೇ ಅಂಗ್ರೊಳ್ಳಿ, ಚಿಕ್ಕ ಅಂಗ್ರೊಳ್ಳಿ, ಹಂದೂರ, ಕೇರವಾಡ, ಹುಲಿಕೊತ್ತಲ, ಇಟಗಿ, ಬೋಗೂರ, ಬೇಡರಹಟ್ಟಿ, ತೊಲಗಿ, ಬಿಳಕಿ, ಅವರೊಳ್ಳಿ ಹಾಗೂ ಕಗ್ಗಣಗಿ ಗ್ರಾಮಗಳಿಗೆ ಹಾಗೂ ಸದರಿ ಗ್ರಾಮಗಳ ನೀರಾವರಿ ಪಂಪ್ಸೆಟ್ಗಳ ಏರಿಯಾಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಕಾರ್ಯನಿರ್ವಾಹಕ ಇಂಜಿನೀಯರರು (ವಿ), ಕಾ ಮತ್ತು ಪಾ ಗ್ರಾಮೀಣ ವಿಭಾಗ, ಹುವಿಸಕಂನಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯ ನಾಳೆ


ಬೆಳಗಾವಿ: ಫೆ.21ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 5ರವರೆಗೆ ಹುವಿಸಕಂನಿ ವತಿಯಿಂದ ತುರ್ತು ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುತ್ತಿರುವುದರಿಂದ 33ಕೆ.ವ್ಹಿ. ಲೋಂಡಾ ಉಪಕೇಂದ್ರದಿಂದ ಸರಬರಾಜು ಆಗುವ ನಾಗರಗಾಳಿ, ನಾಗರಗಾಳಿ ರೈಲ್ವೆ ಸ್ಟೇಶನ್, ಮುಂಡವಾಡ, ಕುಂಬರ್ಡಾ, ತಾರವಾಡ, ಲೋಂಡಾ, ಲೋಂಡಾ ರೈಲ್ವೆ ಸ್ಟೇಶನ್, ಗುಂಜಿ, ಮೋಹಿಶೇಟ, ವಾಟ್ರೆ, ಭಾಲ್ಕೆ ಬಿ.ಕೆ, ಭಾಲ್ಕೆ ಕೆ.ಎಚ್, ಶಿಂದೋಳ್ಳಿ, ಹೊನ್ನಲ, ಸಾವರಗಾಳಿ, ಅಂಬೇವಾಡಿ, ತಿವೋಳ್ಳಿ ಹಾಗೂ ಡೋಕೆಗಾಳಿ ಗ್ರಾಮಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಕಾರ್ಯನಿರ್ವಾಹಕ ಇಂಜಿನೀಯರರು(ವಿ), ಕಾ ಮತ್ತು ಪಾ ಗ್ರಾಮೀಣ ವಿಭಾಗ, ಹುವಿಸಕಂನಿ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯ ನಾಳೆ

ಕುಡಚಿ: ರಾಯಬಾಗ ತಾಲೂಕಿನ ಕುಡಚಿ 110/33/11 ಕೆವಿ ವಿದ್ಯುತ್ ವಿತರಣಾ ಉಪಕೇಂದ್ರದ ವ್ಯಾಪ್ತಿಯಲ್ಲಿ ಫೆ.21ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಉಪಕೇಂದ್ರದ ಉಪಕರಣಗಳ ಮತ್ತು ಪರಿವರ್ತಕಗಳ ತ್ರೈಮಾಸಿಕ ನಿರ್ವಹಣೆಯ ಕೆಲಸ ಕೈಗೊಳ್ಳುವವರಿದ್ದು ಉಪಕೇಂದ್ರದ ವ್ಯಾಪ್ತಿ ಮಾರ್ಗಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ. 11 ಕೆವಿ ಹೊರ ಹೋಗುವ ವಿದ್ಯುತ್ ಮಾರ್ಗಗಳಾದ ಎಫ್-1ಗುಂಡವಾಡ, ಎಫ್-2 ಕುಡಚಿ ಪಟ್ಟಣ, ಎಫ್-4 ಕವ್ವೆ ತೋಟ, ಎಫ್-5 ಧರಣ, ಎಫ್-7 ಶಿಡ್ಲಭಾವಿ, ಎಫ್-8 ವಾಟರ್ ಸಪ್ಲಾಯ್, ಎಫ್-9 ಲಂಗರ್ ತೋಟ, ಎಫ್-10 ಶಿಡ್ಲಭಾವಿ, ಎಫ್-11 ಗ್ರಾಮೀಣ ಎನ್. ಜೆ. ವೈ. 33 ಕೆವಿ ಹೊರ ಹೋಗುವ ವಿದ್ಯುತ್ ಮಾರ್ಗಗಳಾದ ಎಫ್-1 ಚಿಂಚಲಿ, ಎಫ್-2 ಶಿರಗೂರ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು ಗ್ರಾಹಕರು, ರೈತರು ಸಹಕರಿಸುವಂತೆ ಉಪ ಕೇಂದ್ರದ ಸಹಾಯಕ ಅಭಿಯಂತರರು ತಿಳಿಸಿದ್ದಾರೆ ಎಂದು ಎಸ್.ಓ. ಕುಬೇರ ನಾಗರಬೆಟ್ಟ ಮಾಹಿತಿ ನೀಡಿದ್ದಾರೆ.

ನಿಧನ ಸುದ್ದಿ

ಮಲ್ಲಪ್ಪ ಅವಟೆ



ಅಳಗವಾಡಿ: ಗ್ರಾಮದ ಬಣಜಿಗ ಸಮಾಜದ ಹಿರಿಯ ಮಲ್ಲಪ್ಪ ಶಂಕರ್ ಅವಟೆ (82) ನಿಧನರಾದರು. ಮೃತರಿಗೆ ಪತ್ನಿ, ಮೂವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.




ರಾಮದುರ್ಗ: ಸ್ಥಳೀಯ ಸಿ.ಎಸ್.ಬೆಂಬಳಗಿ ಕಲಾ, ಶಾ.ಎಂ. ಆರ್.ಪಾಲರೇಶಾ ವಿಜ್ಞಾನ ಹಾಗೂ ಜಿ.ಎಲ್.ರಾಠಿ ವಾಣಿಜ್ಯ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಕಾಗವಾಡದ ಶಿವಾನಂದ ಮಹಾವಿದ್ಯಾಲಯದಲ್ಲಿ ಜರುಗಿದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಏಕ ವಲಯ ಪುರುಷರ ಗುಡ್ಡಗಾಡ ಓಟದ ಸ್ಪರ್ಧೆಯಲ್ಲಿ ತಂಡವು ದ್ವಿತೀಯ ಸ್ಥಾನ ಪಡೆದುಕೊಂಡಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ತರಬೇತಿ ಶಿಬಿರ

ಬೆಳಗಾವಿ: ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಕುವೆಂಪು ಸಭಾಂಗಣದಲ್ಲಿ ಪಂ ದೀನದಯಾಳ ಉಪಾಧ್ಯಾಯ ಅಧ್ಯಯನ ಪೀಠ ಮತ್ತು ಎಸ್. ನಿಜಲಿಂಗಪ್ಪ ಸಕ್ಕರೆ ಸಂಶೋಧನಾ ಕೇಂದ್ರ ಬೆಳಗಾವಿ ಇವರ ಜೊತೆ ಒಡಂಬಡಿಕೆ ಮಾಡಿಕೊಳ್ಳಲಾಯಿತು.

ಈ ವೇಳೆ ರಾ.ಚ.ವಿಯ ಕುಲಪತಿ ಪ್ರೊ. ಸಿ. ಎಂ. ತ್ಯಾಗರಾಜ ಮಾತನಾಡಿ, ಪ್ರಸ್ತುತ ಗ್ರಾಮೀಣ ಪ್ರದೇಶಗಳಲ್ಲಿ ರೈತರಿಗೆ ಸಂಬಂಧಿಸಿದ ಕೃಷಿ ತರಬೇತಿ ಶಿಬಿರಗಳು, ತಂತ್ರಜ್ಞಾನ ಅಳವಡಿಕೆ ಕಾರ್ಯಕ್ರಮ ಮತ್ತು ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಕಬ್ಬು ಬೆಳೆಗಾರರಿಗೆ ಉತ್ಪಾದನಾ ವೆಚ್ಚ ಕಡಿಮೆ ಮಾಡುವುದು, ಉತ್ತಮ ಗುಣಮಟ್ಟದ ಬಿತ್ತನೆಯ ಬೀಜ ಸಸಿಗಳು ಮತ್ತು ಸಾಮಗ್ರಿಗಳ ಬಳಕೆ, ಜೈವಿಕ ಕೃಷಿ ವಿಧಾನಗಳು, ಸಾವಯವ ಕೃಷಿಯ ಮಾಹಿತಿ ನೀಡಿದರು. ಎಸ್. ನಿಜಲಿಂಗಪ್ಪ ಸಕ್ಕರೆ ಸಂಶೋಧನಾ ಕೇಂದ್ರದ ನಿರ್ದೇಶಕ ರಾಜಗೋಪಾಲ ಮಾತನಾಡಿ, ನಮ್ಮ ಭಾಗದ ರೈತರಿಗೆ ಸಾವಯವ ಕೃಷಿ, ಜೈವಿಕ ಕೃಷಿಯಲ್ಲಿ ತಂತ್ರಜ್ಞಾನಗಳ ಬಳಕೆಯಿಂದ ರೈತರ ಆದಾಯವನ್ನು ದ್ವಿಗುಣಗೋಳಿಸುವುದು. ನೀರಿನ ಸಮರ್ಪಕ ಬಳಕೆ, ಮಣ್ಣಿನ ಆರೋಗ್ಯ ಕಾಪಾಡುವ ವಿಧಾನಗಳನ್ನು ತಿಳಿಸುವುದು ನಮ್ಮ ಸಂಸ್ಥೆಯ ಪ್ರಮುಖ ಗುರಿಯಾಗಿದೆ ಎಂದರು. ಪಂ. ದೀನದಯಾಳ ಉಪಾಧ್ಯಾಯ ಅಧ್ಯಯನ ಪೀಠದ ನಿರ್ದೇಶಕ ಪ್ರೊ. ಬಿ. ಎಸ್. ನಾವಿ ಮಾತನಾಡಿದರು. ಎಂ. ಎ ಸಪ್ನಾ, ಪ್ರೊ. ಎಸ್.ಸಿ. ಪಾಟೀಲ, ಪ್ರೊ. ಎಸ್.ಬಿ ಆಕಾಶ ಪ್ರೊ. ನಂದಿನಿ ದೇವರಮನಿ, ಡಾ. ಶಿವಲಿಂಗಯ್ಯ ಗೋಠೆ, ಯಲ್ಲಪ್ಪಾ ಮೂಡಲಗಿ, ರಾಚಪ್ಪಾ ಸುತಗುಂಡಿ, ಬೋಧಕ, ಬೋಧಕೇತರ ಸೇರಿದಂತೆ ವಿದ್ಯಾರ್ಥಿಗಳು ಇದ್ದರು.



ರಾಯಬಾಗ: ಸ್ಥಳೀಯ ಸ್ವಾತಿ ಶಶಿಕಾಂತ ಕುರಾಡೆ ಮೆಹಂದಿಯಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಚಿತ್ರ ಬಿಡಿಸಿ ಏಷ್ಯನ್ ಬುಕ್ ಆಫ್ ರೆಕಾರ್ಡಿಗೆ ದಾಖಲಾಗಿದ್ದು, ಸ್ಥಳೀಯ ಮೆಕ್ಯಾನಿಕಲ್ ಅಸೋಸಿಯೇಷನ್‌ಯಿಂದ ಸನ್ಮಾನಿಸಲಾಯಿತು. ಅಸೋಸಿಯೇಷನ್ ಅಧ್ಯಕ್ಷ ರಮೇಶ ಜಾದವ, ಗೌರವಾಧ್ಯಕ್ಷ ಉಮೇಶ್ ಮಸಾಲಜಿ, ವಿನಾಯಕ ಕುಲಗೋಡೆ, ಸಂಜು ಹಿರೇಮಠ, ಇಸ್ಮಾಯಿಲ್ ದೇಸಾಯಿ, ಈರಣ್ಣ ಮುಗಳಖೋಡ, ಪ್ರಕಾಶ ಮಾಳಿ, ಮೋಹನ ಮೇತ್ರಿ, ಸುರೇಶ ಪರಿಟ, ಮೌಲಾ ನಾಯ್ಕೋಡಿ, ರಾಜು ಗೆನಣ್ಣನವರ, ಸಂಘದ ಸದಸ್ಯರು ಇದ್ದರು.

ಬಳ್ಳಾರಿ ನಾಲಾದಲ್ಲಿ ಸತ್ತ ಹಂದಿಗಳ ಕಳೇಬರ

ನಾಲಾ ದುರ್ನಾತಕ್ಕೆ ಜನ ಹೈರಾಣ

▸ ಬಾಳಗೌಡ ಪಾಟೀಲ

ದಿಗಂತ ವಿಶೇಷ

ಬೆಳಗಾವಿ: ಈಡೀ ಬೆಳಗಾವಿ ನಗರದ ಚರಂಡಿ ನೀರಿನ ಮೂಲವಾದ ಬಳ್ಳಾರಿ ನಾಲಾ ಇದೀಗ ದುರ್ನಾತದಕೇಂದ್ರವಾಗಿಮಾರ್ಪಟ್ಟು ಅನಾರೋಗ್ಯದ ಭೀತಿ ಜನತೆಯಲ್ಲಿ ಕಾಡುತ್ತಿದೆ. ಯಾರೋ ಕಿಡಿಗೇಡಿಗಳು ಸತ್ತ ಹಂದಿಗಳನ್ನು ನಾಲಾದಲ್ಲಿ ಎಸೆಯುತ್ತಿರುವುದರಿಂದ ಅಲಾರವಾಡ ಹಾಗೂ ಬೆಳಗಾವಿಯ ಜನತೆಯೂ ಹಾಗೂ ರೈತರಿಗೆ ಸಾಕಷ್ಟು ತೊಂದರೆ ಯಾಗುತ್ತಿದೆ ಎಂದುಗೋಳಾಡುತ್ತಿರುವುದು ಖೇದಕರ ಸಂಗತಿ.

ಕೆಲವು ದಿನಗಳಿಂದ ಬಳ್ಳಾರಿ ನಾಲಾದಲ್ಲಿ ಅಪರಿಚಿತರು ಸತ್ತ ಹಂದಿಗಳನ್ನು ಬಿಸಾಕಿರುವುದು ಸಾಕ್ಷೀಯಾಗಿದೆ. ಬೇಸಿಗೆಯ ಆರಂಭಕ್ಕೂ ಮುನ್ನವೇ ಹೆಚ್ಚಾಗಿರುವ ಉಷ್ಣಾಂಶದಿಂದಾಗಿ, ಸತ್ತ ಹಂದಿಗಳ ತುಂಡಾದ ಕಳೇಬರಗಳು ನೀರಿನಲ್ಲಿ ಕೊಳೆತು ಹರಡುತ್ತಿರುವ ವಿಪರೀತ ದುರ್ನಾತವು ಸುತ್ತಮುತ್ತಲಿನ ಕಿಲೋಮೀಟರ್‌ಗಟ್ಟಲೆ ಪ್ರದೇಶವನ್ನು ಆವರಿಸಿದೆ.

ಇದರಿಂದಾಗಿ ದಿನನಿತ್ಯ ಕೃಷಿಯನ್ನೇ ಅವಲಂಬಿಸಿರುವ ರೈತರಿಗೆ ಕೆಲಸ ಮಾಡುವುದಕ್ಕೆ ಹಾಗೂ ಬಳ್ಳಾರಿ ನಾಲಾದ ಅಕ್ಕ ಪಕ್ಕದಲ್ಲಿ ಓಡಾಡುವುದಕ್ಕೂ ಸಾಕಷ್ಟು ತೊಂದರೆಯಾಗುತ್ತಿದ್ದು, ಅದರಲ್ಲಿಯೂ ಹಿರಿಯ ನಾಗರಿಕರು ಉಸಿರಾಟದ ತೊಂದರೆ, ತಲೆನೋವು ಮತ್ತು ವಾಕರಿಕೆಯಂತಹ ಆರೋಗ್ಯ ಸಮಸ್ಯೆಗಳನ್ನು ಎದುರಿಸಬೇಕಾಗಿರುವ ಪರಿಸ್ಥಿತಿ ಎಂದುರಾಗಿದೆ ಎಂದು ನಗರದ ಜನತೆಯೂ ಆರೋಪಿಸುತ್ತಿದ್ದಾರೆ.



> ಈಗಾಗಲೇ ಈ ಕುರಿತು ಮಹಾನಗರ ಪಾಲಿಕೆ ಹಾಗೂ ಆರೋಗ್ಯ ಇಲಾಖೆಗೆ ಲಿಖಿತ ದೂರು ನೀಡಿದ್ದೇವೆ. ನಾಲಾವನ್ನು ತಕ್ಷಣವೇ ಸ್ವಚ್ಛಗೊಳಿಸಿ, ಸತ್ತ ಪ್ರಾಣಿಗಳ ವೈಜ್ಞಾನಿಕ ವಿಲೇವಾರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಲು ಸ್ಥಳೀಯರೆಲ್ಲ ಸೇರಿ ಒತ್ತಾಯಿಸುತ್ತಿದ್ದೇವೆ. ಒಂದು ವೇಳೆ ಆಡಳಿತ ಮಂಡಳಿಯು ಈ ಸಮಸ್ಯೆಗೆ ತಕ್ಷಣ ಸ್ಪಂದಿಸದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡಬೇಕಾಗುತ್ತದೆ.
> ■ ದೀಪಕರಾಜ್ ಬೆಳಗಾವಿ, ನಿವಾಸಿ

ಈ ಬಳ್ಳಾರಿ ನಾಲಾದಲ್ಲಿ ಕಸ ಮತ್ತು ಹೂಳು ತುಂಬಿಕೊಂಡಿರುವುದರಿಂದ ನೀರು ಹರಿಯದೆ ಅಲ್ಲೇ ತುಂಬಿಕೊಂಡಿರುವುದರಿಂದ ಮತ್ತಷ್ಟು ಸಾಂಕ್ರಾಮಿಕ ರೋಗಕ್ಕೆ ಕಾರಣವಾಗಿರುವುದಲ್ಲದೆ, ಸತ್ತ ಪ್ರಾಣಿಗಳನ್ನು ಎಸೆಯುತ್ತಿರುವುದು ಸಾಂಕ್ರಾಮಿಕ ರೋಗಗಳ ಭೀತಿಯನ್ನು ಹೆಚ್ಚಿಸಿದೆ. ಸೊಳ್ಳೆಗಳ ಕಾಟ ವಿಪರೀತವಾಗಿದ್ದು, ಡೆಂಗ್ಯೂ ಮತ್ತು ಮಲೇರಿಯಾದಂತಹ ರೋಗಗಳು ಹರಡುವ ಮುನ್ನವೇ ಮಹಾನಗರ ಪಾಕಲಿಕೆ ಹಾಗೂ ಆರೋಗ್ಯ ಇಲಾಖೆ ಎಚ್ಚೆತ್ತುಕೊಳ್ಳಬೇಕೆಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ.

ಒಟ್ಟಾರೆಯಾಗಿ ಬೆಳಗಾವಿ ನಗರದಾದ್ಯಂತ ಚರಂಡಿ ಸೇರಿದಂತೆ ಇನ್ನಿತರ ತ್ಯಾಜ ನೀರು ಸಂಗ್ರಹವಾಗುವ ಕೇಂದ್ರ ಬಳ್ಳಾರಿ ನಾಲಾವನ್ನು ಸಂಪೂರ್ಣವಾಗಿ ಸ್ವಚ್ಛತೆ ಮಾಡಿ ಸಾರ್ವಜನಿಕರಿಗೆ ಉತ್ತಮ ಆರೋಗ್ಯವನ್ನು ನೀಡುತ್ತಾರಾ ಎಂದು ಕಾದು ನೋಡಬೇಕಾಗಿದೆ.

» ಆರೋಗ್ಯಕ್ಕೆ ಕುತ್ತು ತಂದ ದುಷ್ಕರ್ಮಿಗಳ ಕೃತ್ಯ

» ಜಿಲ್ಲಾಡಳಿತದಿಂದ ಕಠಿಣ ಕ್ರಮಕ್ಕೆ ಸಾರ್ವಜನಿಕರ ಆಗ್ರಹ

> ಬೆಳಗಾವಿ ನಗರದಲ್ಲಿರುವ ಚರಂಡಿ ನೀರು ಇದೇ ಬಳ್ಳಾರಿ ನಾಲಾದಿಂದ ಹೋಗುವುದು ನಿಜ. ಆದರೆ ಈ ನಾಲಾದಲ್ಲಿ ತ್ಯಾಜ್ಯ ವಸ್ತುಗಳು, ಸತ್ತ ಪ್ರಾಣಿಗಳ ಕಳೆಬರಹ, ಮಾಂಸದ ಅಂಗಡಿಗಳಲ್ಲಿ ಕಟ್ ಮಾಡಿ ಬೀಸಾಕುವ ಮೂಳೆಗಳು, ಮಾಂಸದ ತುಂಡುಗಳನ್ನು ಯಾರು ಎಸೆಯುತ್ತಿದ್ದಾರೋ ಅಂತವರನ್ನ ಪತ್ತೆ ಹಚ್ಚಲಾಗುವುದು. ನಾಲಾಗೆ ನಮ್ಮ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ಮಾಡಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.
> ■ ಕಾರ್ತಿಕ್ ಎಂ., ಮಹಾನಗರ ಪಾಲಿಕೆಯ ಆಯುಕ್ತರು

ವಿದ್ಯಾರ್ಥಿಗಳಲ್ಲಿ ಉದ್ಯಮಶೀಲತೆಯ ಚಿಂತನೆ ಅಗತ್ಯ: ಕುಲಪತಿ ತ್ಯಾಗರಾಜ

ಬೆಳಗಾವಿ: ಸ್ವಾವಲಂಬನೆ ಉತ್ತೇಜಿಸಲು ವಿದ್ಯಾರ್ಥಿಗಳಲ್ಲಿ ಆರ್ಥಿಕ ಸಾಕ್ಷರತೆ ಮತ್ತು ಉದ್ಯಮಶೀಲತೆಯ ಚಿಂತನೆಯನ್ನು ಬಲಪಡಿಸುವ ತುರ್ತು ಅಗತ್ಯವಿದೆ ಎಂದು ಕುಲಪತಿ ಪ್ರೊ. ಸಿ. ಎಂ. ತ್ಯಾಗರಾಜ ಹೇಳಿದರು.

ಗುರುವಾರ ನಗರದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುವೆಂಪು ಸಭಾಂಗಣದಲ್ಲಿ ಬುಪಿಎಂ-ಉಷಾ (ಮೆರು) ಸಾಫ್ಟ್ ಕಾಂಪೊನೆಂಟ್ಸ್ ಉಪಕ್ರಮದ ಯೋಜನೆಡಿಯಲ್ಲಿ ವಾಣಿಜ್ಯ ಸ್ನಾತಕೋತ್ತರ ಅಧ್ಯಯನ ಮತ್ತು ಆಡಳಿತ ನಿರ್ವಹಣಾ ಇಲಾಖೆಯ ಸಹಯೋಗದೊಂದಿಗೆ, ಯೋಜನಾ ಉದ್ಯಮಶೀಲತೆ ಅಭಿವೃದ್ಧಿಗೆ ವೇಗ ವರ್ಧಕವಾಗಿ ಹಣಕಾಸು ಜಾಗೃತಿ ಕುರಿತು ಒಂದು ದಿನದ ರಾಷ್ಟ್ರೀಯ ಕಾರ್ಯಾಗಾರ ಉದ್ಘಾಟಿಸಿ, ಮಾತನಾಡಿ, ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗದಿಂದ ಪ್ರಸ್ತಾಪವನ್ನು ಸಲ್ಲಿಸಿದರೆ ಭಾರತೀಯ ಕಾರ್ಪೊರೇಟ್‌ಗಳ ಸಹಾಯದಿಂದ ವಾಣಿಜ್ಯ ಮತ್ತು ಆಡಳಿತ ನಿರ್ವಹಣೆ ವಿಭಾಗಕ್ಕೆ ಪ್ರತ್ಯೇಕ ಕಟ್ಟಡ ನಿರ್ಮಿಸಲು ಬೆಂಬಲ ನೀಡುವ ಭರವಸೆ ನೀಡಿದರು.

ಈ ರೀತಿಯ ಕಾರ್ಯಾಗಾರಗಳು ವಿದ್ಯಾರ್ಥಿಗಳಿಗೆ ತಮ್ಮ ವೈಯಕ್ತಿಕ ಬೆಳವಣಿಗೆಯಲ್ಲಿ ಅಳವಡಿಸಿಕೊಳ್ಳಲು ಹೊಸ ತಂತ್ರಗಳನ್ನು ಕಲಿಯಲು ಸಹಾಯ ಮಾಡುತ್ತವೆ. ಭಾರತೀಯ ಬಜೆಟಿನ ತಿಳುವಳಿಕೆಗಾಗಿ ಪರಿಗಣಿಸಲಾದ ಅಸ್ತಿರಗಳು, ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಅವುಗಳ ಮಹತ್ವ ತಿಳಿಸಿದರು.

ಈ ಕಾರ್ಯಕ್ರಮವು ವಿದ್ಯಾರ್ಥಿಗಳು ಮತ್ತು ಬೋಧಕ ಸಿಬ್ಬಂದಿಗಳ ಕಾರ್ಯತಂತ್ರದ ಆರ್ಥಿಕ ಮತ್ತು ವ್ಯವಹಾರ ಕೌಶಲ್ಯಗಳೊಂದಿಗೆ ಸಬಲೀಕರಣಗೊಳಿಸುವತ್ತ ಗಮನಹರಿಸಲಾಯಿತು. ವಿಕಸಿತ ಭಾರತ್ -2047ರ ದೃಷ್ಟಿಕೋನವನ್ನುರೂಪಿಸುವ ನಿಟ್ಟಿನಲ್ಲಿ ಉದ್ಯಮಶೀಲತೆ ಕೈಗೆತ್ತಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಈ ವೇಳೆ ಕುಲಸಚಿವ ಸಂತೋಷ ಕಾಮಗೌಡ, ಕುಲ ಸಚಿವ ಪ್ರೊ.ಡಿ. ಎನ್. ಪಾಟೀಲ್, ಹಣಕಾಸು ಅಧಿಕಾರಿ ಎಂ. ಎ. ಸಪ್ನ, ಪಿಎಂ- ಉಷಾನೋಡಲ್ ಅಧಿಕಾರಿ ಡಾ. ನಂದಿನಿ ದೇವರ ಮಣಿ ಮತ್ತು ಪ್ರೊ. ಎಸ್. ಸಿ. ಪಾಟೀಲ್, ವಾಣಿಜ್ಯ ವಿಭಾಗದ ಅಧ್ಯಕ್ಷ ಪ್ರೊ. ಬಿ. ಎಸ್. ನಾವಿ, ವಾಣಿಜ್ಯ ವಿಭಾಗದ ಅಧ್ಯಕ್ಷ ಪ್ರೊ. ಬಿ. ಎಸ್. ನಾವಿ, ಪ್ರೊ. ಎಸ್ .ಬಿ ಆಕಾಶ. ಪ್ರೊ.ಎಸ್ ಬಿ. ಆಕಾಶ, ಪಲ್ಲವಿ ಕುಲ್ಲುಡೆ ಮಹಾದೇವಿ ಹಳಿಜೋಳ, ಲಕ್ಷ್ಮೀ ಅವಾಲೆ, ಚಿನ್ನಾ ಬಡಿಗ್ ಮತ್ತು ಸ್ನೇಹಾ ಗುಜರ್ ಸೇರಿದಂತೆ ಹಲವರು ಇದ್ದರು.




ನಿರಂತರ ಅಧ್ಯಯನದಿಂದ ಸಾಧನೆ ಸಾಧ್ಯ

ಅಡಹಳ್ಳಿ: ದ್ವಿತೀಯ ಪಿಯುಸಂಘರ್ಷದಿಂದ ಕೂಡಿದ ಹೋರಾಟದ ಘಟ್ಟ, ವಿದ್ಯಾರ್ಥಿಗಳು ಭವಿಷ್ಯಕ್ಕಾಗಿ ನಿರಂತರ ಓದಿನೊಂದಿಗೆ ಗುರಿ ಸಾಧಿಸಬೇಕು ಎಂದು ಎಮ್‌ಜಿಪಿಯು ಕಾಲೇಜ ತೆಲಸಂಗ ನಿವೃತ್ತ ಪ್ರಚಾರ್ಯ ಡಿ. ಎಮ್. ಘೋರ್ಪಡೆ ಹೇಳಿದರು.

ಸಮೀಪದ ಕಕಮರಿ ಗ್ರಾಮದ ಶ್ರೀ ಸದ್ಗುರು ರಾಯಲಿಂಗೇಶ್ವರ ಸ್ವತಂತ್ರ ಪದವಿಪೂರ್ವ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಸಾಂಸ್ಕೃತಿಕ ಕ್ರೀಡಾ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಘಟಕಗಳ ಸಮಾರೋಪ ಸಮಾರಂಭ ಮತ್ತು ದ್ವಿತೀಯ ಪಿಯುಸಿ ವಿಧ್ಯಾರ್ಥಿಗಳ ಬೀಳ್ಕೊಂಡುಗೆ ಸಮಾರಂಭದಲ್ಲಿ ಮಾತನಾಡಿ, ಸಾಧನೆ ಸಾಧಕನ ಸ್ವತ್ತು. ಇದನ್ನು ಅರಿತು ಗುರಿ ಸಾಧಿಸಬೇಕು. ಪ್ರತಿ ಕ್ಷೇತ್ರದಲ್ಲಿ ಸ್ಪರ್ಧಾತ್ಮಕತೆ ಇದೆ. ಹೀಗಾಗಿ ಪ್ರತಿ ವಿದ್ಯಾರ್ಥಿ ಹೋರಾಟ ಮನೋಭಾವದೊಂದಿಗೆ ದ್ವಿತೀಯ ಪಿಯುಸಿಯಲ್ಲಿ ಉತ್ತಮ ಅಂಕ ಪಡೆದು ಸಂಸ್ಥೆಗೆಮತ್ತು ನಿಮ್ಮ ಹೆತ್ತತಂದೆ-ತಾಯಿವರಿಗೆ ಕೀರ್ತಿ ತರುವಂತಾಗಬೇಕು ಎಂದರು.

ಬಳ್ಳಿಗೇರಿ ಸರಕಾರಿ ಪ್ರೌಢಶಾಲೆಯ ಶಿಕ್ಷಕ ಎಸ್.ಪಿ.ಅಥಣಿ ಮಾತನಾಡಿ, ವಿದ್ಯಾರ್ಥಿಗಳು ಮನಸನ್ನು ಶುಭ್ರವಾಗಿಟ್ಟುಕೊಳ್ಳಬೇಕು. ಹಾಲು, ಮೊಸರು, ಮಜ್ಜಿಗೆಯಾಗಿ ಕೊನೆಗೆ ಬೆಣ್ಣೆಯಿಂದ ತುಪ್ಪವಾಗಿ ಮನೆಗೆ ನಂದಾದೀಪವಾಗುವಂತೆ ವಿದ್ಯಾರ್ಥಿಗಳು ತಮ್ಮನ್ನು ಪರಿವರ್ತಿಸಿಕೊಳ್ಳಬೇಕು ಎಂದರು.

ದಿವ್ಯಸಾನಿಧ್ಯ ಅಭಿನವ ಗುರುಲಿಂಗಜಂಗಮ ಸ್ವಾಮೀಜಿ ವಹಿಸಿ ಮಾತನಾಡಿದರು. ಅಧ್ಯಕ್ಷತೆ ಜಿ. ಆರ್. ಬಸರಗಿ ವಹಿಸಿದ್ದರು, ಅತಿಥಿಯಾಗಿ ಕಂಬಾಗಿ ಎಸ್ ಎಸ್‌ಎಮ್ ಸರಕಾರಿ ಪ್ರೌಢಶಾಲೆಯ ಶಿಕ್ಷಕ ಆರ್. ಎಮ್. ತೊದಲಬಾಗಿ, ಬ್ರಹ್ಮಾನಂದ ಬಸರಗಿ, ಪ್ರಾಚಾರ್ಯ ಮಾತೋಶ್ರೀ ನೀಲಮ್ಮಾ ಪ್ರಥಮ ದರ್ಜೆ ಕಾಲೇಜು ಕಕಮರಿ ಶಿವಗುರು ಬಸರಗಿ, ಪ್ರಾಚಾರ್ಯ ಶ್ರೀ ಸ. ರಾಯಲಿಂಗೇಶ್ವರ ಸ್ವ. ಪ. ಪೂ. ಕಾಲೇಜು ಕಕಮರಿ ಸಂಗಮೇಶಬಸರಗಿ, ಶಿಕ್ಷಕರಾದ ಬಿ. ಆರ್. ಪಾಟೀಲ, ಜಿ. ಆರ್. ಮಡ್ಡೆಪ್ಪಗೋಳ, ಡಿ. ಎಚ್. ಕಾರಜೋಳ, ಕೆ.ಬಿ. ನಾವಿ, ಎಂ. ಎಂ. ತೆಲಸಂಗ, ಬಿ. ಎಲ್. ಪೂಜಾರಿ, ಎ.ಎಸ್. ಮಲಾಬದಿ, ಎಸ್. ಎಸ್. ನಂದಗಾಂವ, ವಿಧ್ಯಾರ್ಥಿನಿ ಬೋರಮ್ಮ ನಗೋಳ ಸ್ವಾಗತಿಸಿ, ವಿದ್ಯಾರ್ಥಿನಿ ಸುಪ್ರೀತಾ ಕನಮಡಿ ನಿರೂಪಿಸಿ, ವಿದ್ಯಾರ್ಥಿನಿ ಸುಜಾತಾ ಜಾಧವ ವಂದಿಸಿದರು.



ಗ್ರಾಮದೇವತೆ ಜಾತ್ರೆ: ಮೂಲಭೂತ ಸೌಲಭ್ಯ ಕಲ್ಪಿಸಲು ಮನವಿ

ಹುಕ್ಕೇರಿ: ಹುಕ್ಕೇರಿ ಗ್ರಾಮದೇವತೆ ಜಾತ್ರೆ ಮಾ.10ರಿಂದ ಪ್ರಾರಂಭವಾಗಿ ಮಾ.14ರಂದು ಮುಕ್ತಾಯಗೊಳ್ಳಲಿದೆ. ಜಾತ್ರೆಗೆ ಲಕ್ಷಾಂತರಜನ ಭಕ್ತಾಧಿಗಳು ಆಗಮಿಸಲಿದ್ದಾರೆ. ಅವರಿಗೆ ಬೇಕಾದ ಮೂಲಭೂತ ಸೌಲಭ್ಯ ಕಲ್ಪಿಸಲು ಪುರಸಭೆ ನಿರ್ಲಕ್ಷ್ಯ ವಹಿಸಿದೆ ಎಂದು ರಾಮ ಸೇನಾ ಕಾರ್ಯಕರ್ತರು ತಹಶೀಲ್ದಾರರು ಮತ್ತು ಪುರಸಭೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಗುರುವಾರ ಸ್ಥಳೀಯ ತಹಶೀಲ್ದಾರ ಕಾರ್ಯಾಲಯಕ್ಕೆ ಆಗಮಿಸಿದ ರಾಮಸೇನಾ ಕಾರ್ಯಕರ್ತರು ಪಟ್ಟಣದಲ್ಲಿ ಒಳಚರಂಡಿ ಕಾಮಗಾರಿ ಪ್ರಾರಂಭವಾಗಿ 6 ತಿಂಗಳು ಗತಿಸಿದರು ಇನ್ನೂವರೆಗೆ ಪೂರ್ಣಗೊಂಡಿಲ್ಲ. ಅವರು ಅಗೆದ ರಸ್ತೆಗಳಲ್ಲಿ ಜನ ಸಂಚಾರಕ್ಕೆ ತೊಂದರೆಯಾಗುತ್ತಿದೆ.



ಜಾತ್ರೆ ನಿಮಿತ್ಯದೇವಿ ಸಂಚರಿಸುವ ಪ್ರದೇಶಗಳಲ್ಲಿ ಅಗೆದ ರಸ್ತೆ ದುರಸ್ತಿಗೊಳಿಸಿ ಡಾಂಬರೀಕರಣ ಮಾಡುವಂತೆ ಶಾಸಕ ನಿಖಿಲ ಕತ್ತಿ, ಮಾಜಿ ಸಂಸದ ರಮೇಶಕತ್ತಿ ಸಹ ತಿಳಿಸಿದ್ದಾರೆ.

ನಿಧಾನವೇಪ್ರಧಾನಎಂಬಘೋಷವಾಕ್ಯದೊಂದಿಗೆ ಒಳಚರಂಡಿ ಕಾಮಗಾರಿ ಕೈಗೊಂಡಿರುವ ಗುತ್ತಿಗೆದಾರರು ಇದರತ್ತ ಗಮನ ಹರಿಸುತ್ತಿಲ್ಲ, ಇವರಿಗೆ ತಿಳಿಸಿ ತ್ವರಿತ ಕಾಮಗಾರಿ ನಿರ್ವಹಿಸಲು ಪುರಸಭೆ ಅಧಿಕಾರಿಗಳು ನಿದ್ದೆಯಲ್ಲಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ತಾಲೂಕಾಡಳಿತ ತಕ್ಷಣ ಮಧ್ಯ ಪ್ರವೇಶಿಸಿ ಕಳಪೆ ಕಾಮಗಾರಿ,ಅಗೆದ ರಸ್ತೆಗಳ ದುರಸ್ತಿ ಪರಿಶೀಲಿಸಿ ಕ್ರಮ ಕೈಗೊಳ್ಳಬೇಕೆಂದು ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು. ಮನವಿ ಸ್ವೀಕರಿಸಿ ಮಾತನಾಡಿದ ತಹಶೀಲ್ದಾರರು, ಜಾತ್ರೆಗೆ ಯಾವ ಸಮಸ್ಯೆಆಗದಂತೆ ಕ್ರಮಕ್ಕೈಗೊಳ್ಳಲು ಪೌರಾಡಳಿತಕ್ಕೆ ಸೂಚಿಸುತ್ತೇನೆ. ಜತೆಗೆ ಸ್ವತಃ ಪರಿಶೀಲಿಸುವುದಾಗಿ ಭರವಸೆಯಿತ್ತರು.

ವಿವೇಕ ಪುರಾಣಿಕ, ಕಿರಣ ಶೆಟ್ಟಿ, ರಾಹುಲ ಅಂಕಲೆ, ಶಿವಾಜಿ ಘಾಟಗೆ, ಅವಧೇಶ ಅಂಕಲೆ ಸೇರಿದಂತೆ ರಾಮಸೇನಾ ಕಾರ್ಯಕರ್ತರಿದ್ದರು.

ಸೇತುವೆ ನಿರ್ಮಾಣ ಕಾಮಗಾರಿಗೆ ಚಾಲನೆ

ಬೆಳಗಾವಿ: ಗ್ರಾಮೀಣ ಕ್ಷೇತ್ರದ ಸಾವಗಾಂವ ಹಾಗೂ ಬೆನಕನಹಳ್ಳಿ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯ ಸೇತುವೆ ಕಾಮಗಾರಿಗೆ ಯುವ ಕಾಂಗ್ರೆಸ್ ಮುಖಂಡ ಮೃಣಾಲ್ ಹೆಬ್ಬಾಳ್ಕರ್ ಹಾಗೂ ಸ್ಥಳೀಯ ಜನಪ್ರತಿನಿಧಿಗಳು ಸೇರಿ ಗುರುವಾರ ಭೂಮಿಪೂಜೆ ನೆರವೇರಿಸಿ, ಕಾಮಗಾರಿಗೆ ಚಾಲನೆ ನೀಡಿದರು. ಕಾಂಗ್ರೆಸ್ ಮುಖಂಡ ಮೃಣಾಲ್ ಹೆಬ್ಬಾಳ್ಕರ್ ಮಾತನಾಡಿ, ಸುಮಾರು 30 ಲಕ್ಷ ರೂ.ಗಳ ವೆಚ್ಚದಲ್ಲಿ ಸೇತುವೆ ನಿರ್ಮಾಣಗೊಳ್ಳಲಿದೆ, ಜನರ ಬಹುದಿನದ ಬೇಡಿಕೆಯಾಗಿದ್ದ ಈ ಸೇತುವೆ ನಿರ್ಮಾಣದಿಂದ ಸಂಚಾರ ವ್ಯವಸ್ಥೆ ಸುಗಮವಾಗಲಿದ್ದು, ಗ್ರಾಮೀಣ ಭಾಗದ ಜನರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದರು. ಈ ವೇಳೆ ಕಾಡಾ ಅಧ್ಯಕ್ಷರಾದ ಯುವರಾಜ ಕದಂ, ಬಾಳು ದೇಸೂರಕರ್, ಎನ್.ಕೆ.ಪಾಟೀಲ, ಮಹೇಶ್ ಕೋಲಕಾರ್, ಬೋಸ್ಲೆ ,ಪಕ್ಷದ ಪ್ರಮುಖ ಮುಖಂಡರು ಸೇರಿದಂತೆ ಕಾರ್ಯಕರ್ತರು ಮತ್ತಿತರರು ಇದ್ದರು.



ಸಪ್ತಾಹದ ಆಮಂತ್ರಣ ಪತ್ರಿಕೆ ಬಿಡುಗಡೆ

ಹಾರೂಗೇರಿ: ಪಟ್ಟಣದ ವಿಠ್ಠಲ ದೇವಸ್ಥಾನಲ್ಲಿ 56ನೇ ವರ್ಷದ ಸಪ್ತಾಹ ಮತ್ತು ಗ್ರಂಥರಾಜ ಜ್ಞಾನೇಶ್ವರಿ ಪಾರಾಯಣ ಹಾಗೂ ಅಖಂಡ ಹರಿನಾಮ ಸಪ್ತಾಹ ಸಮಾ ರಂಭದ ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸ ಲಾಯಿತು. ಮಾ.10 ರಿಂದ ಮಾ.17ರವರೆಗೆ ಕಾಕಡಾರತಿ, ಭೂಪಾಳಿ, ಶ್ರೀ ಗ್ರಂಥ ರಾಜ, ಪಾರಾಯಣ, ಪ್ರವಚನ, ಹರಿ ಕೀರ್ತನೆ, ಜಾಗರಣೆ ಹಾಗೂ ಸಂತರಿಗೆ ವಸ್ತ್ರದಾನ, ಮಹಾಪ್ರಸಾದಮುಂತಾದ ಕಾರ್ಯಕ್ರಮಗಳು ಜರುಗಲಿವೆ ಎಂದು ಕಮೀಟಿ ಕಾರ್ಯದರ್ಶಿ ಪಾಂಡುರಂಗ ಧರ್ಮಟ್ಟಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಹಿರಿಯರಾದ ಮಾರುತಿ ಸಂತರು, ಶಿವಗೊಂಡ ಧರ್ಮಟ್ಟಿ, ಜ್ಞಾನೇಶ್ವರ ಧರ್ಮಟ್ಟಿ, ದಿವಾಕರ ಧರ್ಮಟ್ಟಿ, ಬಿ.ಎ. ಜಂಬಗಿ, ಬಸವರಾಜ ಮುಗಳಿಹಾಳ, ಮಹಾದೇವ ಪತ್ತಾರ, ಸದಾಶಿವ ಧರ್ಮಟ್ಟಿ, ದತ್ತಾ ಮುನಸೆ, ರಾಯಪ್ಪ ಧರ್ಮಟ್ಟಿ, ಪುಂಡಲೀಕ ಧರ್ಮಟ್ಟಿ, ಜ್ಯೋತೆಪ್ಪ ಉಮರಾಣಿ, ಎ.ಎಸ್. ಚವ್ಹಾಣ, ಪಿ.ಎಲ್. ಧರ್ಮಟ್ಟಿ, ಗೋಪಾಲ ಧರ್ಮಟ್ಟಿ, ಹಣಮಂತ ಧರ್ಮಟ್ಟಿ, ಅರುಣ್ ಧರ್ಮಟ್ಟಿ, ದ್ಯಾನು ಧರ್ಮಟ್ಟಿ ಉಪಸ್ಥಿತರಿದ್ದರು.



ಜೂಜು ಅಡ್ಡೆ ಮೇಲೆ ದಾಳಿ: 10 ಜನರ ಬಂಧನ

ಬೆಳಗಾವಿ: ಕ್ರಿಕೆಟ್ ಬೆಟ್ಟಿಂಗ್ ಮತ್ತು ಅಂದರ್ -ಬಾಹರ್ ಜೂಜಾಟದ ಅಡ್ಡಗಳ ಮೇಲೆ ಪೊಲೀಸರು ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿ ಒಟ್ಟು 10ಜನ ಆರೋಪಿಗಳನ್ನು ಬಂಧಿಸಿದ್ದಾರೆ.

ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ರೂ.68 ಸಾವಿರಕ್ಕೂ ಹೆಚ್ಚು ನಗದು ಹಣ ಜಪ್ತಿ ಮಾಡಲಾಗಿದೆ. ಉದ್ಯಮಬಾಗ ಪೊಲೀಸ್ ಠಾಣೆ ವ್ಯಾಪ್ತಿಯ ಇಂಡಸ್ಟ್ರಿಯಲ್ ಏರಿಯಾದ ಉತ್ಸವ ಡಬಲ್ ರೋಡ್, ಜೈನ್ ಕಾಲೇಜು ರಸ್ತೆಯ ಬಳಿ ಕ್ರಿಕೆಟ್ ಟಿ-20 ವಿಶ್ವಕಪ್ ಪಂದ್ಯಗಳ ಫಲಿತಾಂಶದ ಮೇಲೆ ಸಾರ್ವಜನಿಕರಿಂದ ಹಣ ಪಣಕ್ಕಟ್ಟಿ ಬೆಟ್ಟಿಂಗ್ ನಡೆಸುತ್ತಿದ್ದ ಆರೋಪದ ಮೇರೆಗೆ ಸಿಸಿಬಿ ತಂಡ ದಾಳಿ ನಡೆಸಿತು.

ಖಚಿತ ಮಾಹಿತಿ ಆಧರಿಸಿ ಪಿಐ ಮಂಜುನಾಥ ನಾಯಕ ಅವರ ಮಾರ್ಗದರ್ಶನದಲ್ಲಿ ಪಿಎಸ್ಐ ಮಂಜುನಾಥ ಜಿ. ಭಜಂತ್ರಿ ನೇತೃತ್ವದ ತಂಡ ದಾಳಿ ನಡೆಸಿ, ಪಂಕಜ ದಿಲೀಪ ನಾರಾಯಣಕರ (21), ಸಾ: ಉಪಾರ ಗಲ್ಲಿ, ಖಾಸಬಾಗ, ಬೆಳಗಾವಿ ಅವರನ್ನು ವಶಕ್ಕೆ ಪಡೆದಿದೆ. ಆರೋಪಿತನಿಂದ ರೂ.40,500 ರೂ.ಗಳ ನಗದು ಹಣವನ್ನು ಜಪ್ತಿ ಮಾಡಲಾಗಿದೆ. ಈ ಸಂಬಂಧ ಉದ್ಯಮಬಾಗ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ತನಿಖೆ ಮುಂದುವರಿಸಲಾಗಿದೆ.

ಯಳ್ಳೂರಿನಲ್ಲಿ 9 ಜನರ ಬಂಧನ

ಬೆಳಗಾವಿ: ಇನ್ನೊಂದೆಡೆ ಬೆಳಗಾವಿ ಗ್ರಾಮೀಣ ಠಾಣೆ ಪೊಲೀಸರು ಯಳ್ಳೂರ-ಅನಗೋಳ ರಸ್ತೆಯ ಹತ್ತಿರ ಖುಲ್ಲಾ ಜಾಗೆಯಲ್ಲಿ ಅಂದರ್-ಬಾಹರ್ ಜೂಜಾಟ ನಡೆಸುತ್ತಿದ್ದವರ ಮೇಲೆ ದಾಳಿ ನಡೆಸಿ 9 ಮಂದಿಯನ್ನು ವಶಕ್ಕೆ ಪಡೆದಿದ್ದಾರೆ. ವಶಕ್ಕೆ ಪಡೆದವರಲ್ಲಿ ವಿನಯ ನಾರಾಯಣ ಮೋರೆ (22), ಖಾನಾಪೂರ ರಾಜ ಸಂಭಾಜಿ ಮಾಪನಕರ (22), ಅನಗೋಳ ರೋಹಿತ್, ಅಲಿಯಾಸ್ ಸಾಹಿಲ್ ಶ್ರೀಕಾಂತ ಚೌಧರಿ (23), ಜೇರೆಗಲ್ಲಿ ಮೊಹಮ್ಮದ್ ಹನೀಫ್ ಬಾಬು ಮುಲ್ಲಾ (61), ಬಸವನ ಕುಡಚಿ ಫಕಿರಪ್ಪ ಬಸವಣ್ಣ ಕಿಲಾರಿ (60), ತಹಶೀಲ್ದಾರ ಗಲ್ಲಿ ನಾಗೇಶ ನಾರಾಯಣ ದೆಸೂರಕರ (34), ವಡಗಾಂವ ಪ್ರಕಾಶ ಮಹಾದೇವ ಸುತಾರ (34), ಕಾಮತ ಗಲ್ಲಿ ಸಾಗರ ಮನೋಹರ ರಾವುಳ (35), ತಾರಿಹಾಳ ವಿಜಯ ಸಿದ್ದಪ್ಪ ಮುತ್ತ್ಯಪ್ಪಗೋಳ, ರಾಜಹಂಸಗಲ್ಲಿ, ಅನಗೋಳ ಇವರಿಂದ ಒಟ್ಟು ರೂ.27,960 ರೂ. ನಗದು ಹಣ ಹಾಗೂ ಇಸ್ಪೀಟ್ ಎಲೆಗಳ ಪೆಟ್ಟಿಗೆಗಳನ್ನು ಜಪ್ತಿ ಮಾಡಲಾಗಿದೆ. ಗ್ರಾಮೀಣ ಠಾಣೆಯ ಪಿಐ ನಾಗನಗೌಡ ಕಟ್ಟಿಮನಿಗೌಡ ಹಾಗೂ ಸಿಬ್ಬಂದಿ ದಾಳಿ ನಡೆಸಿದ್ದಾರೆ. ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ. ಸಾರ್ವಜನಿಕ ಸ್ಥಳಗಳಲ್ಲಿ ಜೂಜಾಟ ಹಾಗೂ ಕ್ರಿಕೆಟ್ ಬೆಟ್ಟಿಂಗ್ ನಡೆಸುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ಎಚ್ಚರಿಕೆ ನೀಡಿದ್ದಾರೆ. ನಗರದ ವಿವಿಧ ಭಾಗಗಳಲ್ಲಿ ಇಂತಹ ಅಕ್ರಮ ಚಟುವಟಿಕೆಗಳ ವಿರುದ್ಧ ವಿಶೇಷ ನಿಗಾ ವಹಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸರ್ಕಾರಿ ಶಾಲೆಗೆ 100 ಕುರ್ಚಿ ದೇಣಿಗೆ



ರಾಯಬಾಗ: ತಾಲೂಕಿನ ಮೇಖಳಿ ಗ್ರಾಮದ ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಗೆ ಎಸ್‌ಡಿಎಂಸಿ ವತಿಯಿಂದ ಸಮಯ ಪಾಲನೆಗೆ ಸೈರಾನ ಹಾಗೂ 100 ಕುರ್ಚಿಗಳನ್ನು ದೇಣಿಗೆ ನೀಡಿದರು.

ಸಿಆರ್‌ಪಿ ಅಧಿಕಾರಿ ರಾಜು ಕುರಾಡೆ ಎಸ್‌ಡಿಎಂಸಿ ಕಾರ್ಯ ಮೆಚ್ಚಿ ಮಾತನಾಡಿ, ಶಾಲೆಗೆ ಎಸ್‌ಡಿಎಂಸಿಯವರು ನೀಡಿದ ಸೈರಾನ ಮತ್ತು ಕುರ್ಚಿಗಳು ಅನುಕೂಲವಾಗಲಿದ್ದು ಇದರ ಸದುಪಯೋಗವನ್ನು ವಿದ್ಯಾರ್ಥಿಗಳು, ಶಿಕ್ಷಕರು ಪಡೆದುಕೊಳ್ಳಬೇಕು ಎಂದ ಅವರು, ದೇಣಿಗೆ ನೀಡುವುದರಿಂದ ಸರ್ಕಾರಿ ಶಾಲೆಗಳು ಸುಧಾರಣೆಯಾಗುತ್ತವೆ ಎಂದು ಅವರು ಹರ್ಷ ವ್ಯಕ್ತಪಡಿಸಿದರು.

ಶಾಲೆಯ ಪ್ರಧಾನ ಗುರ ಕೆ.ಇ.ಪ್ರಕಾಶ ಮಾತನಾಡಿದರು. ಈ ಸಂದರ್ಭದಲ್ಲಿ ಎಸ್‌ಡಿಎಂಸಿಅಧ್ಯಕ್ಷರಾದ ಪ್ರಕಾಶ ಪೂಜೇರಿ, ವಿವೇಕ ಹಟ್ಟಿಕರ, ಬಸವರಾಜ ನಾಯಿಕ, ರಾಜು ರಾಮಾ ನಾಯಿಕ, ಸಿದ್ದು ಕಾಂಬಳೆ, ರಾಜು ಡೊಂಗ್ರೆ, ಲಕ್ಷ್ಮಣ ಮನಗುತ್ತಿ, ಬಸಪ್ಪ ಕದ್ದಿ, ಮಹಾಂತೇಶ ಪೂಜೆರಿ, ಹನುಮಂತ ಕುದುರೆ, ಭೀಮಪ್ಪ ಸುತಾರ, ಬಸಪ್ಪ ಕಿಚಡೆ, ಅಶ್ವಿನಿ ಕಾಂಬಳೆ, ಸಂಗೀತಾ ಸಂಜು ಕಾಂಬಳೆ, ಸುನಿಲ ಕಿಚಡೆ, ವಿಠ್ಠಲ ಪೂಜಾರಿ, ಸಂಜೀವ ಕಾಂಬಳೆ, ಅನಿಲ ಕಾಂಬಳೆ, ಸಹ ಶಿಕ್ಷಕ ವರ್ಗ, ಸಿಬ್ಬಂದಿ ಉಪಸ್ಥಿತರಿದ್ದರು.

ಮೇಖಳಿ: ಶಾಲೆಗೆ ಸೈರಾನ ಹಾಗು ಕುರ್ಚಿ ದೇಣಿಗೆ ನೀಡಿದ ಭಾವಚಿತ್ರ.

32ನೇ ಪುಣ್ಯ ಸ್ಮರಣಾರ್ಥ ಆಧ್ಯಾತ್ಮಿಕ ಪ್ರವಚನ

ಯಮಕನಮರಡಿ: ಸ್ಥಳೀಯ ಸುಕ್ಷೇತ್ರ ಶೂನ್ಯ ಸಂಪಾದನಾ ಹುಣಸಿಕೊಳ್ಳಮಠದ ಲಿಂಗೈಕ್ಯ ಗುರುಸಿದ್ಧ ಶ್ರೀಗಳ 32ನೇ ಪುಣ್ಯತಿಥಿ ಅಂಗವಾಗಿ ಮಠದಲ್ಲಿ ಒಂದು ವಾರದ ವರೆಗೆ ಪ್ರತಿನಿತ್ಯ ಆಧ್ಯಾತ್ಮಿಕ ಪ್ರವಚನ ಮತ್ತು ಅನೇಕ ಶ್ರೀಗಳ ಆಶೀರ್ವಚನ ದಾಸೋಹ ದಾನಿಗಳಿಗೆ ಸನ್ಮಾನ ಇತ್ಯಾದಿ ಕಾರ್ಯಕ್ರಮಗಳಿಗೆ ಬುಧವಾರ ಚಾಲನೆ ನೀಡಲಾಯಿತು.

ಕಾರ್ಯಕ್ರಮದ ಸಾನಿಧ್ಯವನ್ನು ಮಠದ ರಾಚೋಟೇಶ್ವರ ಶ್ರೀಗಳು ವಹಿಸಿ ಮಾತನಾಡಿ, ಮಠವು ಇನ್ನುಂದೆ ಬೆಳಗುವ ಜ್ಯೋತಿಯಂತೆ ಬೆಳಕಾಗಿ ನಾಡಿನ ಉದ್ದಕ್ಕೂ ಉಜ್ವಲ ಬೆಳಕನ್ನು ನಿಡುತ್ತದೆ. ಮಠದ ಉತ್ತರಾಧಿಕಾರಿಗಳು ಸಿದ್ಧ ಬಸವ ದೇವರು ನಿಜವಾಗಿ ಬೆಳಗುವ ಬೆಳಕಾಗಿ ಬಸವತತ್ವ ಪರಿಪಾಲಕರಾಗಿ ಮಠದ ಸಂಪೂರ್ಣ ಇತಿಹಾಸವನ್ನು ಲೋಕಕ್ಕೆ ಬೆಳಗುವವರಾಗಿ 12ನೇ ಶತಮಾನದಲ್ಲಿ ಆಗಿ ಹೋದ ಶರಣರ ಕುರಿತು ತಮಗೆಲ್ಲಾ ಮಾರ್ಮಿಕವಾಗಿ ಪ್ರವಚನದ ಮೂಲಕ ಪರಿಚಯಿಸುತ್ತಿರುವುದು ನಿಜವಾಗಿಯು ಹೆಮ್ಮೆ ಪಡುವಂತಾಗಿದೆ. ಮಠದಲ್ಲಿ ವಟುಗಳ ಓಡಾಟ ಬಡಮಕ್ಕಳಿಗೆ ಶಿಕ್ಷಣಬಗ್ಗೆ ಕಾಳಜಿ ಅಲ್ಲದೆ ನಾಡಿನ ಉದ್ದಕ್ಕೂ ಪ್ರಸಿದ್ಧ ಪ್ರವಚನಕಾರರಾಗಿ ಬೆಳೆಯುತ್ತಿದ್ದಾರೆ ಇಂತಹವರು ಈ ನಮ್ಮ ಮಠಕ್ಕೆ ಉತ್ತರಾಧೀಕಾರಿಗಳಾಗಿ ಸಿಕ್ಕಿರುವುದು ಲಿಂಗೈಕ್ಯ ಗುರುಸಿದ್ಧ ಶ್ರೀಗಳ ಕೃಪಾಶೀರ್ವಾದ ಎಂದರು.



ಇಂದಿನ ದಿನಮಾನಗಳಲ್ಲಿ ಮಠ ಮಾನ್ಯಗಳಿಗೆ ಉತ್ತರಾಧಿಕಾರಿಗಳು ಸಿಗುವುದು ಕಡು ಕಷ್ಟದ ಸಂಗತಿಯಾಗಿದೆ. ಇಂತಹವರನ್ನು ಸುತ್ತಮುತ್ತಲಿನ ಹಾಗೂ ಗ್ರಾಮದ ಭಕ್ತಾದಿಗಳು ಕಾಪಾಡಿಕೊಂಡು ಹೋಗಬೇಕೆಂದು ಹೇಳಿದರು.

ಸ್ಥಳೀಯ ಹರಿಮಂದಿರದ ಡಾ.ಆನಂದ ಮಹಾರಾಜ ಗೋಸಾವಿ ಮಾತನಾಡಿ, ಮಠಕ್ಕೆ ಮತ್ತೆ ಮೆರಗು ಬಂದತಾಗಿದೆ. ಇದಕ್ಕೆ ಎಲ್ಲ ಕಾರಣ ಲಿಂಗೈಕ್ಯ ಗುರುಸಿದ್ಧ ಶ್ರೀಗಳ ಆಶೀರ್ವಾದವೇ ಕಾರಣವಾಗಿದೆ. ನಾನು ಮಠಕ್ಕೆ ಯಾವತ್ತು ಬೆಂಬಲವಾಗಿರುತ್ತೇನೆಂದು ಹೇಳಿದರು.

ನಿಪ್ಪಾಣಿ ಸಮೀಪದ ಖಡಕಲಾಟದ ಶ್ರೀಗಳು ಆಶೀರ್ವಚನ ನೀಡಿದರು. ಕಲಾವಿದರಿಂದ ಸಂಗೀತ ಕಾರ್ಯಕ್ರಮ ಜರುಗಿತು. ಮಠದ ಆಡಳಿತ ಮಂಡಳಿ ಸದಸ್ಯರು ಮತ್ತು ಅಕ್ಕನ ಬಳಗದ ಮಹಿಳೆಯರು ಇದ್ದರು. ಉಪನ್ಯಾಸಕ ಎಸ್.ಆರ್.ತಬರೆಸ್ವಾಗತಿಸಿ, ವಂದಿಸಿದರು. ಭಕ್ತಾದಿಗಳಿಗೆ ಮಹಾಪ್ರಸಾದ ಆಯೋಜಿಸಲಾಗಿತ್ತು.

ಕಿರುಸುದ್ದಿ

ಕಾಮಗಾರಿಗೆ ಭೂಮಿಪೂಜೆ

ಯರಗಟ್ಟಿ: ರೈತರ ಅನುಕೂಲ ಹಾಗೂ ಮಾರುಕಟ್ಟೆ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ (ಎಪಿಎಂಸಿ) ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ 80 ಮೆಟ್ರಿಕ್ ಟನ್ ಸಾಮರ್ಥ್ಯದ ಆಧುನಿಕ ಎಲೆಕ್ಟ್ರಾನಿಕ್ ತೂಕದ ಯಂತ್ರ ನಿರ್ಮಾಣ ಕಾಮಗಾರಿಗೆ ಶಾಸಕ ವಿಶ್ವಾಸ ವೈದ್ಯ ಭೂಮಿಪೂಜೆ ನೆರವೇರಿಸಿ ಚಾಲನೆ ನೀಡಿದರು. ಶಾಸಕ ವಿಶ್ವಾಸ ವೈದ್ಯ ಮಾತನಾಡಿ, ಸುಮಾರು ರೂ.50.57 ಲಕ್ಷ ಅಂದಾಜು ವೆಚ್ಚದಲ್ಲಿ ಈ ಮಹತ್ವದ ಯೋಜನೆ ಕೈಗೊಳ್ಳಲಾಗುತ್ತಿದೆ. ರೈತರ ಹಿತದೃಷ್ಟಿಯಿಂದ ಮಾರುಕಟ್ಟೆಗಳಲ್ಲಿ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸುವುದು ಸರ್ಕಾರದ ಪ್ರಮುಖ ಉದ್ದೇಶವಾಗಿದೆ. ಆಧುನಿಕ ಇ-ತೂಕ ಯಂತ್ರದಿಂದ ವ್ಯಾಪಾರದಲ್ಲಿ ಪಾರದರ್ಶಕತೆ ಹೆಚ್ಚಿ ರೈತರಿಗೆ ನ್ಯಾಯಸಮ್ಮತ ವ್ಯವಹಾರಕ್ಕೆ ನೆರವಾಗಲಿದೆ ಎಂದರು. ಈ ಕಾರ್ಯಕ್ರಮದಲ್ಲಿ ಯರಗಟ್ಟಿ ತಾಲೂಕಾ ತಹಶೀಲ್ದಾರ ಎಮ್.ವ್ಹಿ. ಗುಂಡಪ್ಪಗೋಳ, ಎಇಇ ರಾಘವೇಂದ್ರ ಕೋರ್ತಿ, ಕಾರ್ಯದರ್ಶಿ ಕೃಷ್ಣನಾಯ್ಕ, ಎಂ. ಬಿ. ಚಬನೂರ, ಯರಗಟ್ಟಿ ಎಪಿಎಂಸಿ ಅಧ್ಯಕ್ಷರಾದ ಶಿದಬಸನ್ನವರ,ಪ.ಪಂ. ನಿಖಿಲ ಪಾಟೀಲ, ಶಿವಾನಂದ ಪಟ್ಟಣಶೆಟ್ಟಿ, ಪ್ರಕಾಶ ವಾಲಿ, ಬಂಗಾರೆಪ್ಪ ಹರಳಿ, ಮಲಿಕಸಾಬ ಬಾಗವಾನ, ಹೊನ್ನಪ್ಪ ಖಿಂಡ್ರಿ, ಪ್ರಕಾಶ ಸುಣದೋಳಿ, ಸುರೇಶ ಭಜಂತ್ರಿ, ಬಸಪ್ಪಗೌಡ ಪಾಟೀಲ, ಬಸವರಾಜ ಮಾಳಕ್ಕನವರ, ಲಕ್ಷ್ಮಣ ದಳವಾಯಿ, ಲಕ್ಕಪ್ಪ ಸಣ್ಣಲಿಂಗನವರ, ಉಮೇಶ ಮಾಗುಂಡನವರ, ಅಧಿಕಾರಿಗಳು, ಸ್ಥಳೀಯ ಜನಪ್ರತಿನಿಧಿಗಳು, ವ್ಯಾಪಾರಿಗಳು, ರೈತರು ಇದ್ದರು.

ಭೂದಾನಿ ಅಬ್ದುಲ್‌ರಜಾಕ್ ಗಡಕರಿಗೆ ಸನ್ಮಾನ



ಚನ್ನಮ್ಮನ ಕಿತ್ತೂರು: ಕಲಿಯುಗದಲ್ಲಿಯೂ ಒಂದು ಕೋಟಿಗೂ ಹೆಚ್ಚು ಬೆಲೆ ಬಾಳುವ ನಿವೇಶನವನ್ನು ಶಾಲೆಗೆ ದಾನವಾಗಿ ನೀಡಿದ ಇಂತಹ ದಾನಿಗಳಿದ್ದದ್ದರಿಂದಲೇ ನಾವೆಲ್ಲ ಸುಖ, ಶಾಂತಿ, ನೆಮ್ಮದಿಯಿಂದ ಇದ್ದೇವೆಂದು ಬೆಳಗಾವಿಯ ಅಲ್ಪ ಸಂಖ್ಯಾತ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಎಫ್.ಯು ಪೂಜೇರ ಹೇಳಿದರು. ಪಟ್ಟಣದ ಬೀಡಿ ರಸ್ತೆಯ ಪಕ್ಕಕ್ಕಿರುವ ಸರಕಾರಿ ಮೌಲಾನಾ ಆಜಾದ ಮಾದರಿ ಶಾಲೆಯಲ್ಲಿ ನಡೆದ ಶಾಲೆಗೆ ಭೂದಾನ ಮಾಡಿದ ಅಬ್ದುಲ್ ರಜಾಕ್ ಗಡಕರಿಗೆ ಸನ್ಮಾನ ಸಮಾರಂಭದಲ್ಲಿ ಮಾತನಾಡಿ, ಈ ಯುಗದಲ್ಲಿ ಮೋಸ, ವಂಚನೆ ಹೆಚ್ಚಿಗೆ ನಡೆಯುವ ಕಾಲಘಟ್ಟದಲ್ಲಿ ಗಡಕರಿಯವರು ಈ ಮಾದರಿ ಶಾಲೆಗೆ ಹೆಚ್ಚಿನ ಮೌಲ್ಯದ 10 ಗುಂಟೆ ನಿವೇಶನವನ್ನು ದಾನವಾಗಿ ನೀಡಿರುವುದು ಸಾಮಾನ್ಯ ಕೆಲಸವಲ್ಲ ಇವರಿಗೆ ಎಷ್ಟು ಕೃತಜ್ಞತೆ ಸಲ್ಲಿಸಿದರೂ ಕಡಿಮೆಯೇ ಎಂದರು. ನಿವೃತ್ತ ಶಿಕ್ಷಕ, ಪಪಂ ಸ್ಥಾಯಿ ಸಮಿತಿ ಅಧ್ಯಕ್ಷ ಎಂ.ಎಫ್.ಜಕಾತಿ ಮಾತನಾಡಿದರು. ಶಾಲೆಗೆ 10 ಗುಂಟೆ ಭೂದಾನ ನೀಡಿದ ಅಬ್ದುಲ್ ರಜಾಕ್ ಗಡಕರಿ ಇವರನ್ನು ಸನ್ಮಾನಿಸಲಾಯಿತು. ನಂತರ 10 ಗುಂಟೆ ನಿವೇಶನವನ್ನು ರಾಜ್ಯಪಾಲರ ಹೆಸರಿನಲ್ಲಿ ದಾಖಲಿಸಿ ಆದರ ಪತ್ರವನ್ನು ಅಧಿಕಾರಿಗಳಿಗೆ ಹಸ್ತಾಂತರಿಸಿದರು. ಜಾನಪದ ಕಲಾವಿದ, ರಾಜ್ಯಪ್ರಶಸ್ತಿ ವಿಜೇತ ಇಮಾಮ್ ಸಾಬ್ ಹುಲ್ಲೆಪ್ಪನವರ, ಭೂದಾನಿ ಅಬ್ದುಲ್ ರಜಾಕ್ ಗಡಕರಿ, ಶ್ಯಾಪೂರ, ಪಠಾನ್, ಮುಖ್ಯಾಧ್ಯಾಪಕಿ ಪದ್ಮಶ್ರೀ ಸಂಗೊಳ್ಳಿ ಮಾತನಾಡಿದರು. ಧರ್ಮಗುರು ಮುಫ್ತಿಇನಾಮುಲ್ ಹಸನ್, ರೆಹಮತ್ತುಲ್ಲಾ ಹೊಂಗಲ, ಅಮನುಲ್ಲಾ ಹೊಂಗಲ್, ಮಹಮ್ಮದ ಅಬ್ರಾಮ್ ಗಡಕರಿ,ಸೇರಿದಂತೆ ಹಲವಾರು ಮುಖಂಡರು, ಶಿಕ್ಷಕರು, ವಿದ್ಯಾರ್ಥಿಗಳು ಇದ್ದರು.

ವಿದ್ಯುತ್ ವ್ಯತ್ಯಯ ನಾಳೆ

ಬೆಳಗಾವಿ: ಫೆ.22 ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 5ರವರೆಗೆ ಕ.ವಿ.ಪ್ರ.ನಿ.ನಿ. ವತಿಯಿಂದ 110 ಕೆ.ವ್ಹಿ. ಕಣಬರ್ಗಿ ಉಪಕೇಂದ್ರದಲ್ಲಿ ನಾಲ್ಕನೇಯ ತ್ರೈಮಾಸಿಕ ಹಾಗೂ ಇತರೆ ತುರ್ತು ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುತ್ತಿರುವುದರಿಂದ ಸದರಿ ಉಪಕೇಂದ್ರದಿಂದ ಸರಬರಾಜು ಆಗುವ ಮುಚ್ಚಂಡಿ, ಅಷ್ಟೆ, ಕ್ಯಾಂಪ್ಬೆಲ್, ಮಾರಿಹಾಳ, ಕರಡಿಗುದ್ದಿ, ಪಂತಬಾಳೇಕುಂದ್ರಿ, ಬಾಳೇಕುಂದ್ರಿ, ಹೊನ್ನಿಹಾಳ, ಮಾವಿನಕಟ್ಟಿ, ತಾರಿಹಾಳ, ಚಂದನ ಹೊಸೂರ, ಎಂ.ಇ.ಎಸ್, ಸಾಂಬ್ರಾ, ಮುತಗಾ, ಸುಳೇಭಾವಿ, ಪಂತ ನಗರ, ಮೋದಗಾ, ಯದ್ದಲಭಾವಿಹಟ್ಟಿ, ಖನಗಾಂವ, ಚಂದೂರ, ಚಂದಗಡ, ಗಣಿಕೊಪ್ಪ, ಗುಂಜ್ಯಾನಟ್ಟಿ, ಕೇದನೂರ, ಮನ್ನಿಕೇರಿ, ಹಂದಿಗನೂರ, ಚೆಲುವ್ಯಾನಟ್ಟಿ, ಮಾಳೇನಟ್ಟಿ, ಅತಿವಾಡ, ಬೋಡಕ್ಯಾನಟ್ಟಿ, ಕುರಿಹಾಳ, ಕಟ್ಟಣಭಾವಿ, ನಿಂಗ್ಯಾನಟ್ಟಿ, ಗುರಾಮಟ್ಟಿ, ಹಳೇಇದ್ದಲಹೊಂಡ, ಶಿವಾಪೂರ, ಪರಶ್ಯಾನಟ್ಟಿ, ದಾಸರವಾಡಿ, ಕೆಂಚ್ಯಾನಟ್ಟಿ, ಸೋನಟ್ಟಿ, ಕಾಕತಿ, ಕಂಗ್ರಾಳಿ ಬಿ.ಕೆ, ಬೈಲೂರ, ಹೆಗ್ಗೇರಿ, ಹುಲ್ಯಾನೂರ, ಬುಡ್ರ್ಯಾನೂರ, ಧರನಟ್ಟಿ, ಭರನಟ್ಟಿ, ಗೌಂಡವಾಡ, ಕಡೋಲಿ, ಅಗಸಗಾ ಹಾಗೂ ಜಾಫರವಾಡಿ ಗ್ರಾಮಗಳಿಗೆ, ಸದರಿ ಗ್ರಾಮಗಳ ನೀರಾವರಿ ಪಂಪ್‌ಸೆಟ್‌ಗಳ ಏರಿಯಾಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಕಾರ್ಯನಿರ್ವಾಹಕ ಇಂಜಿನೀಯರರು (ವಿ),ಕಾ ಮತ್ತು ಪಾ ಗ್ರಾಮೀಣ ವಿಭಾಗ, ಹುವಿಸಕಂನಿ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಯರಗಟ್ಟಿ: ರೈತರ ಅನುಕೂಲ ಹಾಗೂ ಮಾರುಕಟ್ಟೆ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ (ಎಪಿಎಂಸಿ) ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ 80 ಮೆಟ್ರಿಕ್ ಟನ್ ಸಾಮರ್ಥ್ಯದ ಆಧುನಿಕ ಎಲೆಕ್ಟ್ರಾನಿಕ್ ತೂಕದ ಯಂತ್ರ ನಿರ್ಮಾಣ ಕಾಮಗಾರಿಗೆ ಶಾಸಕ ವಿಶ್ವಾಸ ವೈದ್ಯ ಭೂಮಿಪೂಜೆ ನೆರವೇರಿಸಿ ಚಾಲನೆ ನೀಡಿದರು.

ಮೂಲಭೂತ ಸೌಕರ್ಯ ಒದಗಿಸಲು ಮನವಿ

ಚಿಕ್ಕೋಡಿ: ತಾಲೂಕು ವ್ಯಾಪ್ತಿಯ ಸರ್ಕಾರಿ ಕನ್ನಡ ಮಾಧ್ಯಮದ ಶಾಲೆಗಳಿಗೆ ಮೂಲಭೂತ ಸೌಕರ್ಯಗಳನ್ನು ಸಂಬಂಧಿಸಿದ ಇಲಾಖೆ ಕಲ್ಪಿಸಿಕೊಡಬೇಕೆಂದು ಕಿತ್ತೂರ ಕರ್ನಾಟಕ ಸೇನೆಯ ಪದಾಧಿಕಾರಿಗಳು ಪಟ್ಟಣದ ಬಿಇಒ ಕಚೇರಿಯ ಅಧಿಕಾರಿಗಳಿಗೆ ಗುರುವಾರ ಮನವಿ ಸಲ್ಲಿಸಿದರು. ಕಿತ್ತೂರ ಕರ್ನಾಟಕ ಸೇನೆ ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆ ಅಧ್ಯಕ್ಷ ನಾಗೇಶ ಮಾಳಿ ಮಾತನಾಡಿ, ಕಳೆದ ಹಲವು ದಶಕಗಳಿಂದ ತಾಲೂಕು ವ್ಯಾಪ್ತಿಯಲ್ಲಿ ಸರ್ಕಾರಿ ಶಾಲೆಯಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಎದ್ದು ಕಾಣುತ್ತಿದೆ. ಅಕ್ಷರದಾಸೋಹ ಯೋಜನೆ ಅಡಿ ಪೂರೈಕೆಯಾಗುವ ಆಹಾರ ಧಾನ್ಯ ಕಳಪೆಯಿಂದ ಕೂಡಿದೆ. ಕೂಡಲೇ ಈ ಕುರಿತು ತನಿಖೆ ನಡೆಸಿ ಯೋಗ್ಯ ಕ್ರಮಕೈಗೊಳ್ಳಬೇಕೆಂದು ಒತ್ತಾಯಿಸಿದರು. ಚಿಕ್ಕೋಡಿ ನಗರಾಧ್ಯಕ್ಷ ಶ್ರವಣಕುಮಾರ ಗುಡೆ ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿ ಆಟದ ಮೈದಾನ, ಶೌಚಾಲಯ, ಕೊಠಡಿ ಕೊರತೆ ಇದೆ. ಮೂಲಸೌಕರ್ಯಗಳಿಲ್ಲದ ಶಾಲೆಗಳಲ್ಲಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯುವದು ಮರೀಚಿಕೆಯಾಗಿದೆ ಎಂದು ಕಿಡಿಕಾರಿದರು. ಚಿಕ್ಕೋಡಿ ಕ್ಷೇತ್ರ ಶಿಕ್ಷಣಾಧಿಕಾರಿ ಕಾರ್ಯಾಲಯ ವ್ಯವಸ್ಥಾಪಕ ಎಂ.ಆರ್ ಪಟ್ಟಣಕುಡಿ ಅವರಿಗೆ ಈ ಕುರಿತು ಕಿತ್ತೂರ ಕರ್ನಾಟಕ ಸೇನೆಯ ಪದಾಧಿಕಾರಿಗಳು ಮನವಿ ಸಲ್ಲಿಸಿದರು. ಚಿಕ್ಕೋಡಿ ಜಿಲ್ಲಾ ಹೋರಾಟ ಸಮಿತಿ ಪ್ರದಾನ ಕಾರ್ಯದರ್ಶಿ ಸುರೇಶ ಬ್ಯಾಕುಡೆ, ಕಿತ್ತೂರ ಕರ್ನಾಟಕ ಸೇನೆಯ ಮಹಿಳಾ ಘಟಕದ ಅಧ್ಯಕ್ಷೆ ಮುಸ್ಕಾನ ಮುಲ್ಲಾ, ಜಿಲ್ಲಾ ಉಪಾಧ್ಯಕ್ಷೆ ಪ್ರಿಯಾಂಕಾ ಕಾಡಾಪೂರೆ ಮುಂತಾದವರು ಇದ್ದರು.



ಚಿಕ್ಕೋಡಿ: ತಾಲೂಕು ವ್ಯಾಪ್ತಿಯ ಸರ್ಕಾರಿ ಕನ್ನಡ ಮಾಧ್ಯಮದ ಶಾಲೆಗಳಿಗೆ ಮೂಲಭೂತ ಸೌಕರ್ಯಗಳನ್ನು ಸಂಬಂಧಿಸಿದ ಇಲಾಖೆ ಕಲ್ಪಿಸಿಕೊಡಬೇಕೆಂದು ಕಿತ್ತೂರ ಕರ್ನಾಟಕ ಸೇನೆಯ ಪದಾಧಿಕಾರಿಗಳು ಪಟ್ಟಣದ ಬಿಇಒ ಕಚೇರಿಯ ಅಧಿಕಾರಿಗಳಿಗೆ ಗುರುವಾರ ಮನವಿ ಸಲ್ಲಿಸಿದರು. ಚಿಕ್ಕೋಡಿ ಜಿಲ್ಲಾ ಹೋರಾಟ ಸಮಿತಿ ಪ್ರದಾನ ಕಾರ್ಯದರ್ಶಿ ಸುರೇಶ ಬ್ಯಾಕುಡೆ, ಕಿತ್ತೂರ ಕರ್ನಾಟಕ ಸೇನೆಯ ಮಹಿಳಾ ಘಟಕದ ಅಧ್ಯಕ್ಷೆ ಮುಸ್ಕಾನ ಮುಲ್ಲಾ, ಜಿಲ್ಲಾ ಉಪಾಧ್ಯಕ್ಷೆ ಪ್ರಿಯಾಂಕಾ ಕಾಡಾಪೂರೆ ಮುಂತಾದವರು ಇದ್ದರು.

ಶಿವಾಜಿ ಮಹಾರಾಜರ ಜಯಂತಿ | ಶಾಸಕ ಲಕ್ಷ್ಮಣ ಸವದಿ ಭರವಸೆ

1 ಕೋಟಿ ರೂ. ವೆಚ್ಚದಲ್ಲಿ ಭವನ ನಿರ್ಮಾಣ

ಅಥಣಿ: ಜಗತ್ತಿನಲ್ಲಿಯೇ ಆದರ್ಶ ವ್ಯಕ್ತಿ, ಶಿವಾಜಿ ಮಹಾರಾಜರ ಜಯಂತಿ ಮಾಡುವ ಉದ್ದೇಶ ಶಿವಾಜಿ ಮಹಾರಾಜರ ಶೌರ್ಯ, ಪರಾಕ್ರಮ, ಧೈರ್ಯ ಆದರ್ಶ ಇಂದಿನ ಯುವಕರಿಗೆ ಪ್ರೇರಣೆಯಾಗಲಿ ಎಂದು ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಪಟ್ಟಣದ ಶಿವಾಜಿ ವೃತ್ತದಲ್ಲಿ ಶಿವಾಜಿ ಮಹಾರಾಜರ 396ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶಕ್ಕೆ ಅಮೂಲ್ಯ ರತ್ನವಾದ ಶಿವಾಜಿಯನ್ನು ನಮ್ಮ ನಾಡಿಗೆ ದೇಶಕ್ಕೆ ನೀಡಿದ ಮಹಾನ್ ತಾಯಿ ಜೀಜಾಮಾತೆಯನ್ನು ಈ ವೇಳೆ ಸ್ಮರಿಸಬೇಕು. ಅವರ ವೀರತನ ಪರಾಕ್ರಮ ನಮಗೆಲ್ಲ ಆದರ್ಶ. ಶಿವಾಜಿ ಮಹಾರಾಜರವರ ಪುತಳಿ ಅನಾವರಣ ಈಗಾಗಲೇ ಜರುಗಿದ್ದು ಹೆಮ್ಮೆಯ ಸಂಗತಿ. ಶಿವಾಜಿ ಪೂರ್ವಜರು ಕರ್ನಾಟಕದವರು ಎಂಬುದು ಹೆಮ್ಮೆಯ ಸಂಗತಿ ಎಂದು ಸ್ಮರಿಸಿದರು.

ಶಿವಾಜಿ ಅವರ ಪುತ್ಥಳಿ ನಿರ್ಮಾಣಕ್ಕೆ ಸಹಾಯ ಸಹಕಾರ ಸಲ್ಲಿಸಿದ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸಿದರು.

ಈ ವೇಳೆ ಮಾರಾಠಾ ಸಮಾಜಕ್ಕೆ 1 ಕೋಟಿ ರೂ.ಗಳ ವೆಚ್ಚದಲ್ಲಿ ಸಮಾಜ ಭವನ ನಿರ್ಮಾಣ ಮಾಡಿಕೊಡುವೆ ಆದಷ್ಟು ಶೀಘ್ರ ಸ್ಥಳ ಗುರುತಿಸಿ ಸಮಾಜದವರು ನನಗೆ ಸ್ಥಳದ ದಾಖಲೆ ನೀಡಬೇಕು. ಬರುವ ಶಿವಾಜಿ ಜಯಂತಿಯಂದು ಎಲ್ಲರೂ ಸೇರಿ ಭೂಮಿಪೂಜೆ ಮಾಡೋಣ ಎಂದು ಭರವಸೆ ನೀಡಿದರು.

ಈ ವೇಳೆ ಅಥಣಿ ಮಾತನಾಡಿದ ಆರ್‌ಎಸ್‌ಎಸ್ ಮುಖಂಡರಾದ ಅರವಿಂದರಾವ ದೇಶಪಾಂಡೆ ಮಾತನಾಡಿ, ಶಿವಾಜಿ ಭಾರತ ದೇಶದ ಹಿಂದೂ ಸಾಮ್ರಾಟ ಅಷ್ಟೇ ಅಲ್ಲದೆ ವಿದೇಶದಲ್ಲೂ ಗೌರವಿಸಲ್ಪಡುವಂತ ವ್ಯಕ್ತಿ ವಿಯೆಟ್ನಾಂ ದೇಶದಲ್ಲಿ ಅಮೆರಿಕ ವಿಯೆಟ್ನಾಂ ಮಧ್ಯದಲ್ಲಿ ಜರುಗಿದ ಯುದ್ಧದಲ್ಲಿ ಶಿವಾಜಿ ಮಹಾರಾಜರ ಯುದ್ಧ ತಂತ್ರವಾದ ಗೆರಿಲ್ಲ ಯುದ್ಧ ತಂತ್ರವನ್ನು ಉಪಯೋಗಿಸಿ ಅವರು ಬಲಿಷ್ಠ ಅಮೆರಿಕದ ವಿರುದ್ಧ ವಿಜಯ ಸಾಧಿಸಿದರು ವಿದೇಶದಲ್ಲೂ ಕೂಡ ಗೌರವಿಸಲ್ಪಡುವಂಥ ವ್ಯಕ್ತಿ ಶಿವಾಜಿ ಮಹಾರಾಜರ ಆದರ್ಶ ತತ್ವಗಳನ್ನು ನಾವು ನೀವೆಲ್ಲ ಇಂದಿನ ಯುವ ಪೀಳಿಗೆ ಆಚರಿಸುವ ಅಗತ್ಯವಿದೆ ಎಂದರು.



» ಮಾರಾಠಾ ಸಮಾಜಕ್ಕೆ ಸಮಾಜ ಭವನ ನಿರ್ಮಾಣಕ್ಕೆ ಸ್ಥಳ ಶೀಘ್ರ ಗುರುತಿಸಿ, ದಾಖಲೆ ಒದಗಿಸಲು ಸೂಚನೆ

ಈ ವೇಳೆ ಬಣಜವಾಡ ಶಿಕ್ಷಣ ಸಂಸ್ಥೆಯ ಮಕ್ಕಳಿಂದ ಶಿವಾಜಿ ಮಹಾರಾಜ್ ಹಾಗೂ ಸಂಭಾಜಿ ಮಹಾರಾಜರ ಹೋರಾಟದ ಸನ್ನಿವೇಶ ಸಾದರ ಪಡಿಸಿದರು.

ಈ ಕಾರ್ಯಕ್ರಮದಲ್ಲಿ ದಿಗ್ವಿಜಯಸಿಂಗ ಪವಾರ ದೇಸಾಯಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖಂಡರಾದ ಪ್ರಭಾಕರ ಚವ್ಹಾಣ ಪ್ರಾಸ್ತಾವಿಕವಾಗಿ ಮಾತನಾಡಿದರು.

ನಾನಾಸಾಬ ಅವತಾಡೆ, ಸಿದ್ದು ಪಾಟೀಲ, ರವಿ ಪೂಜಾರಿ, ಅರುಣ ಯಲಗುದ್ರಿ, ದತ್ತಾ ವಾಸ್ಟರ್, ಮುರುಗೇಶ ಕುಮಟಳ್ಳಿ, ರಾವಸಾಬ ಐಹೊಳೆ, ಸತ್ಯಪ್ಪ ಬಾಗೇನ್ನವರ, ಆರ್. ಎಂ. ಡಾಂಗೆ, ಉಮೇಶರಾವ ಬಂಟೋಡ್ಕರ, ಸಂಪತಕುಮಾರ ಶೆಟ್ಟಿ ಸೇರಿದಂತೆ ಹಲವು ಮುಖಂಡರು ಸಮಸ್ತ ಅಥಣಿ ಪಟ್ಟಣದ ಮರಾಠ ಸಮಾಜ ಬಾಂಧವರು ಹಿರಿಯರು ಉಪಸ್ಥಿತರಿದ್ದರು.

ಛತ್ರಪತಿ ಶಿವಾಜಿ ಜಯಂತ್ಯುತ್ಸವ

ಚಿಕ್ಕೋಡಿ: ತಾಯಿ ತನ್ನ ಮಕ್ಕಳಿಗೆ ಹೇಗೆಲ್ಲ ಸಂಸ್ಕಾರ ನೀಡುತ್ತಾಳೆಯೋ, ಆ ಮಾರ್ಗದಲ್ಲಿಯೇ ಮಕ್ಕಳು ಬೆಳೆಯುತ್ತಾರೆ ಎಂಬುವುದಕ್ಕೆ ಛತ್ರಪತಿ ಶಿವಾಜಿ ಮಹಾರಾಜರ ಜೀವನವೇ ನಿದರ್ಶನವಾಗಿದೆ ಎಂದು ಚಿಕ್ಕೋಡಿ ಉಪ ವಿಭಾಗಾಧಿಕಾರಿ ಸುಭಾಷ ಸಂಪಗಾವಿ ಹೇಳಿದರು.

ಪಟ್ಟಣದ ಪ್ರಭುವಾಡಿ ಬಡಾವಣೆಯಲ್ಲಿ ಮರಾಠಾ ಸಮಾಜ ಬಾಂಧವರು ಗುರುವಾರ ಹಮ್ಮಿಕೊಂಡಿದ್ದ ಶಿವಾಜಿ ಮಹಾರಾಜರ 396ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ, ಶಿವಾಜಿ ಮಹಾರಾಜರು ಮಹಿಳೆಯರಿಗೆ ಕೊಡುವ ಗೌರವ, ರೈತರಿಗೆ ಅನುಕೂಲವಾಗುವ ಕಂದಾಯ ನೀತಿ, ಗೆರಿಲ್ಲಾ ಮಾದರಿಯ ಯುದ್ಧ ನೀತಿಯಿಂದ ಜನರ ಮನದಲ್ಲಿ ಇಂದಿಗೂ ಅಚ್ಚಳಿಯದೇ ಉಳಿದಿದ್ದಾರೆ. ಭಾರತ ದೇಶವಷ್ಟೇ ಅಲ್ಲದೇ ಜಗತ್ತಿನ ಬೇರೆ ಬೇರೆ ರಾಷ್ಟ್ರಗಳು ಶಿವಾಜಿ ಅವರ ಯುದ್ಧ ಪ್ರಾವಿಣ್ಯತೆಯನ್ನು ಅನುಸರಿಸಿ ಜಯ ಸಾಧಿಸಿದ ಉದಾಹರಣೆಗಳು ಸಾಕಷ್ಟು ಇವೆ ಎಂದರು.

ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ ಮಾತನಾಡಿ, ಇತಿಹಾಸ ಪುರುಷರ ಜೀವನ ಚರಿತ್ರ ಮಕ್ಕಳಿಗೆ ಅರಿವಾಗಬೇಕು. ಪ್ರಬಂಧ, ರಸಪ್ರಶ್ನೆ, ಭಾಷಣ ಸ್ಪರ್ಧೆಗಳನ್ನು ವಿದ್ಯಾರ್ಥಿಗಳಿಗೆ ಆಯೋಜನೆ ಮಾಡಬೇಕು. ಶಿವಾಜಿ ಮಹಾರಾಜರ ಇತಿಹಾಸ ಪ್ರತಿಯೊಬ್ಬರೂ ತಿಳಿಯಬೇಕು ಎಂದರು.

ಪುರಸಭೆ ಮಾಜಿ ಸದಸ್ಯ, ಮರಾಠಾ ಸಮಾಜ ಮುಖಂಡ ರಾಮಾ ಮಾನೆ ಮಾತನಾಡಿ, ಇಂತಹ ಕಾರ್ಯಕ್ರಮಗಳನ್ನು ಆಯೋಜನೆ ಮಾಡಲು ಮರಾಠಾ ಸಮುದಾಯದ ಜನರಿಗೆ, ಅದರಲ್ಲೂ ಮಹಿಳೆಯರಿಗೆ ಸಭಾಭವನದ ಅವಶ್ಯಕತೆ ಇದೆ. ಪುರಸಭೆಯ ಆಡಳಿತಾಧಿಕಾರಿಯಾಗಿರುವ ಸುಭಾಷ ಸಂಪಗಾವಿ ಅವರು ಜೀಜಾಮಾತಾ ಮಹಿಳಾ ಸಂಘದವರಿಗೆ ನಿವೇಶನ ಮಂಜೂರು ಮಾಡಬೇಕೆಂದು ಮನವಿ ಮಾಡಿಕೊಂಡರು.

ಜಯಂತಿ ಹಿನ್ನೆಲೆಯಲ್ಲಿ ಜೀಜಾಮಾತಾ ಮಹಿಳಾ ಮಂಡಳದ ಸದಸ್ಯರು ಬಾಲ ಶಿವಾಜಿಯ ತೊಟ್ಟಿಲು ಕಾರ್ಯಕ್ರಮ ನೆರವೇರಿಸಿಕೊಟ್ಟರು. ಜಗಜ್ಯೋತಿ ಬಸವೇಶ್ವ ಹಾಗೂ ಛತ್ರಪತಿ ಶಿವಾಜಿ ಭಾವಚಿತ್ರಗಳಿಗೆ ಅಧಿಕಾರಿಗಳು, ಮುಖಂಡರು ಪೂಜೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ತಹಶೀಲ್ದಾರ ರಾಜೇಶ ಬುರ್ಲಿ, ಸಿಪಿಐ ವಿಶ್ವನಾಥ ಚೌಗಲಾ, ಪಿಎಸ್‌ಐ ಬಸಗೌಡ ನೇರ್ಲಿ, ಮುಖಂಡರಾದ ಅನಿಲ ಮಾನೆ, ಬಿ.ಆರ್. ಯಾದವ, ರಾಮಾ ಮಾನೆ, ಜ್ಯೋತಿಬಾ ಕಾಮಕರ, ಅನಿಲ ಯಾದವ, ವಿಠೋಬಾ ಜಾಧವ, ನಿವೃತ್ತಿ ಮಾನೆ, ಸೂರಜ ಜಾಧವ, ಸಚಿನ ಮಾನೆ, ದತ್ತು ಭೋಸಲೆ, ಸುರೇಶ ಮಾನೆ, ಅಪ್ಪಾ ಕಾಮಕರ, ಧನಜಿ ಚವ್ಹಾಣ, ಶಬ್ಬೀರ ಧನವಾಡೆ ಇತರರು ಇದ್ದರು.



ಹಳೆಯ ಪಿಂಚಣಿ ವಂಚಿತರ ಪೂರ್ವಭಾವಿ ಸಭೆ

ಹಾರೂಗೇರಿ: 1-04-2006 ರ ಪೂರ್ವ ನೇಮಕಾತಿಯಾಗಿ ನಂತರ ಅನುದಾನಕ್ಕೊಳಪಟ್ಟ ಶಾಲಾ ಕಾಲೇಜುಗಳ ನೌಕರ ಸಿಬ್ಬಂದಿಗೆ ಹಳೆಯ ಪಿಂಚಣಿ ಜಾರಿಗೊಳಿಸುವಂತೆ ಒತ್ತಾಯಿಸಲು ಪೂರ್ವಭಾವಿ ಸಭೆ ಶ್ರೀ ಕರೇಸಿದ್ದೇಶ್ವರ ಅನುದಾನಿತ ಪ್ರೌಢ ಶಾಲೆಯಲ್ಲಿ ಕರೆಯಲಾಗಿತ್ತು.

ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ಪೂರ್ವಭಾವಿಸಭೆಯನ್ನು ಶನಿವಾರ ಫೆ.21ರಂದು ಮಧ್ಯಾಹ್ನ1ಕ್ಕೆ ಹಾರೂಗೇರಿಯ ಶ್ರೀ ಕರೇಸಿದ್ದೇಶ್ವರ ಅನುದಾನಿತ ಪ್ರೌಢ ಶಾಲೆಯಲ್ಲಿ ಹಾಗೂ ಫೆ. 22ರಂದು ಬೆಳಗಾವಿ ಜಿಲ್ಲೆಯ ಸಭೆಯನ್ನು ಮಧ್ಯಾಹ್ನ 1:00 ಗಂಟೆಗೆ ಬೆಳಗಾವಿ ನಗರದ ಲೇಕ್ ವ್ಯೂವ್ ಆಸ್ಪತ್ರೆಯ ಸಮೀಪವಿರುವ ಬೇಗಂ ಲತೀಪ ಬಾಲಕಿಯರ ಪ್ರೌಢ ಶಾಲೆ, ಆಝಾದ ನಗರ ಇಲ್ಲಿ ಕರೆಯಲಾಗಿದೆ.

ಈ ಎರಡು ಸಭೆಗಳಿಗೆ ಪಿಂಚಣಿ ವಂಚಿತರ ವೇದಿಕೆಯ ರಾಜ್ಯಾಧ್ಯಕ್ಷ ಡಾ. ಪಿ ಎಸ್ ಕೊಕಟನೂರ ಇರಲಿದ್ದು, ರಾಜ್ಯ ವೇದಿಕೆಯ ಮುಂದಿನ ನಡೆ ಹಾಗೂ ಇಲ್ಲಿಯವರೆಗೆ ಆದ ಬೆಳವಣಿಗೆಗಳ ಕುರಿತು ವಿವರಣೆ ನೀಡಲಿದ್ದಾರೆ. ಕಾರಣ 01-04-2006 ರ ಪೂರ್ವ ನೇಮಕಾತಿಯಾಗಿ ನಂತರ ಅನುದಾನಕ್ಕೊಳಪಟ್ಟ ನಿವೃತ್ತಿ ಹೊಂದಿದ ಹಾಗೂ ಹಾಲಿ ಸೇವೆಯಲ್ಲಿರುವ ನೌಕರರು ತಪ್ಪದೇ ಈ ಸಭೆಗಳಿಗೆ ಹಾಜರಿರಬೇಕೆಂದು ಪಿಂಚಣಿ ವಂಚಿತರ ರಾಜ್ಯ ಕಾನೂನು ಸಲಹೆಗಾರರಾದ ಎಸ್ ಎಲ್ ಜಾಧವ ಕರೆ ನೀಡಿದ್ದಾರೆ. ಈ ಸಂದರ್ಭದಲ್ಲಿ ವಿಭಾಗೀಯ ಅಧ್ಯಕ್ಷರಾದ ಡಾ. ಆರ್ ಎಂ. ಸನದಿ, ಬೆಳಗಾವಿ ಜಿಲ್ಲಾಧ್ಯಕ್ಷ ಆಯ್.ಬಿ. ಬಿರಾದಾರ, ಚಿಕ್ಕೋಡಿ ಶೈಕ್ಷಣಿಕ ಜಿಲ್ಲಾಧ್ಯಕ್ಷ ಬಿ.ಎ. ನಿವಲಗಿ ಹಾಗೂ ಆರ್.ವೈ.ಬೆಳಗಲಿ , ಕೆ.ವೈ.ನಾಯಿಕ, ಎಸ್. ಎಲ್. ತಟ್ಟಿಮನಿ, ಮಹಾದೇವ ಹಾಡಕಾರ, ಜಲಗೇರಿ ಹಾಜರಿದ್ದರು.

> **ರಾಜ್ಯ ಸರ್ಕಾರ ಕೊಟ್ಟ ಮಾತಿನಂತೆ ನಡೆದುಕೊಂಡಿಲ್ಲ, ಅವರು ತಮ್ಮ ಪ್ರಣಾಳಿಕೆಯಲ್ಲಿ ಮೊದಲು ಪಿಂಚಣಿ ವಂಚಿತರಿಗೆ ಅವಕಾಶ ನೀಡಿ ನ್ಯಾಯ ಒದಗಿಸುತ್ತೇನೆ ಎಂದಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯನವರು ವಿರೋಧ ಪಕ್ಷದ ನಾಯಕರಿದ್ದಾಗ ಇದೇ ವಿಷಯವನ್ನು ಸರ್ಕಾರಕ್ಕೆ ಪ್ರಸ್ತಾಪಿಸಿದ್ದರು. ಆದರೆ ಈಗ ಅವರೇ ಮುಖ್ಯಮಂತ್ರಿಯಾಗಿದ್ದು, ಈ ಕೂಡಲೇ ಹಳೆಯ ಅನುದಾನಿತ ಶಾಲೆಗಳ ಪಿಂಚಣಿ ವಂಚಿತರಿಗೆ ನ್ಯಾಯ ಒದಗಿಸಲಿ ಎಂಬುದೇ ನಮ್ಮ ಆಶಯ.**
> ■ ಎಸ್ ಎಲ್ ಜಾಧವ ಕಾನೂನು ಸಲಹೆಗಾರರು, ಪಿಂಚಣಿ ವಂಚಿತರ ಸಂಘ.



ಐತಿಹಾಸಿಕ ಊರುಗಳ ಸಂಶೋಧನೆ ಅಗತ್ಯ

ಯರಗಟ್ಟಿ: ಯರಗಟ್ಟಿ ತಾಲೂಕು ಸಂಸ್ಕೃತಿಕವಾಗಿ ಅಪರೂಪದ ಅಸ್ಮಿತೆಯನ್ನು ಒಳಗೊಂಡ ಊರುಗಳ ತಾಣವಾಗಿದ್ದು ತಲ್ಲೂರು ಸೇರಿದಂತೆ ಐತಿಹಾಸಿಕ ಊರುಗಳ ಕುರಿತ ಸಂಶೋಧನೆ ಆಗತ್ಯವಾಗಿದೆ ಎಂದು ವಿಶ್ರಾಂತ ಪ್ರಾಂಶುಪಾಲ ಡಾ. ವೈ. ಎಂ. ಯಾಕೊಳ್ಳಿ ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಯರಗಟ್ಟಿ ತಾಲೂಕು ಘಟಕದಿಂದ ತಲ್ಲೂರು ಗ್ರಾಮದಲ್ಲಿ ನಡೆದ ಯರಗಟ್ಟಿ ತಾಲೂಕು ಮೂರನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪದಲ್ಲಿ ಮಾತನಾಡಿ, ತಾಲೂಕಿನ ಯುವ ಸಂಶೋಧಕರು ಈ ಕುರಿತು ಗಂಭೀರ ಅಧ್ಯಯನದಲ್ಲಿ ತೊಡಗಬೇಕು ಎಂದರು.

ಸಮ್ಮೇಳನದಲ್ಲಿ ನಡೆದ ಕವಿಗೋಷ್ಠಿಯಲ್ಲಿ ತಾಲೂಕಿನ 35ಕ್ಕೂ ಹೆಚ್ಚು ಹಿರಿ ಕಿರಿಯ ಕವಿಗಳು ತಮ್ಮ ಸ್ವಾರಚಿತ ಕವನಗಳನ್ನು ವಾಚಿಸಿದರು. ಶಿಕ್ಷಕ ಎಂ.ಪಿ. ತೋರಣಗಟ್ಟಿಯವರು ಕವಿಗೋಷ್ಠಿಯಲ್ಲಿ ಮಾತನಾಡಿದರು. ಉಮಾರುತ ತಲ್ಲೂರ ಅಧ್ಯಕ್ಷತೆ ವಹಿಸಿದ್ದರು.

ಕವಿಗೋಷ್ಠಿಯಲ್ಲಿ ಮಹಾರುದ್ರಪ್ಪ ಉಪ್ಪಿನ ಅವರು ರಾಣಿ ರುದ್ರಮ್ಮ ಅವರ ಜೀವನ ಹಾಗೂ ಸಾಧನೆಗಳ ಕುರಿತು,ಉಪನ್ಯಾಸಕ ಮಹಾಂತೇಶ ಸರ್ದಾರ ತಲ್ಲೂರಿನ ಸ್ವಾತಂತ್ರ್ಯ ಹೋರಾಟಗಾರರ ಕುರಿತು ಉಪನ್ಯಾಸ ನೀಡಿದರು.



ಯರಗಟ್ಟಿ ತಾಲೂಕಿನ ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವೆಂಕನಗೌಡ ಪಾಟೀಲ್ ಚಿಂತನಗೋಷ್ಠಿಯಲ್ಲಿ ಮಾತನಾಡಿದರು. ಪ್ರಾಂಶುಪಾಲ ಡಾ. ಮಲ್ಲಿಕಾರ್ಜುನ ಇಂಚಲ ಚಿಂತನಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ದೀಪಕ್ ತೋರಗಲ್ಲಮಠ ಸಾನಿಧ್ಯ ವಹಿಸಿದ್ದರು. ಯರಗಟ್ಟಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ತಮ್ಮಣ್ಣ ಕಾಮಣ್ಣವರ, ಪ್ರಭು ಕಮ್ಮಾರ, ಶಂಕರಗೌಡ ಪಾಟೀಲ, ದೇವೇಂದ್ರ ಕಮ್ಮಾರ, ಡಾ. ವಿಶ್ವನಾಥ ತಾವಂಶಿ, ಈರಣ್ಣ ಹುದ್ದಾರ, ಡಾ. ರಾಜಶೇಖರ ಬಿರಾದಾರ, ಶಂಕರ ಲಗಳಿ, ಬಸವರಾಜ್ ಬಡಿಗೇರ, ಡಿ.ಡಿ. ಭೋವಿ, ಎಲ್.ಕೆ.ಪೂಜೇರ, ರವಿಕುಮಾರ ಅಣ್ಣಿಗೇರಿ, ಈರಣ್ಣಾ ಹೂಲ್ಲೂರ ಇತರರಿದ್ದರು. ಬಸನಗೌಡ ಅಣ್ಣಿಗೇರಿ ನಿರೂಪಿಸಿ, ವಿಷಯ ಅಂಗಡಿ ವಂದಿಸಿದರು.

ಬಾಡಿ ಬಿಲ್ಡಿಂಗ್ ಸ್ಪರ್ಧೆ: ನಗದು ಬಹುಮಾನ

ಸಂಕೇಶ್ವರ: ಇಂದಿನ ಯುವ ಪೀಳಿಗೆಯಲ್ಲಿ ಕ್ರೀಡಾ ಮನೋಭಾವನೆ ಹಾಗೂ ದೈಹಿಕ ಕ್ಷಮತೆ ಬೆಳೆಸುವ ಉದ್ದೇಶದಿಂದ ಶಿವಜಯಂತಿ-2026 ಪ್ರಯುಕ್ತ ಫೆ. 20ರಂದು ಪಟ್ಟಣದಲ್ಲಿ ಬಾಡಿ ಬಿಲ್ಡಿಂಗ್ ಸ್ಪರ್ಧೆಯನ್ನು ಆಯೋಜಿಸಲಾಗಿದೆ ಎಂದು ಮರಾಠಾ ಸಮಾಜ ಸೊಸೈಟಿ ಅಧ್ಯಕ್ಷ ಅಮರ ನಲವಡೆ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಛತ್ರಪತಿ ಶಿವಾಜಿ ಮಹಾರಾಜ ಸೇವಾ ಸಂಘ ಮತ್ತು ಕರ್ನಾಟಕ ಬಾಡಿ ಬಿಲ್ಡರ್ಸ್ ಅಸೋಸಿಯೇಷನ್ ಸಹಯೋಗದಲ್ಲಿ ಸ್ಪರ್ಧೆಗಳು ನಡೆಯಲಿವೆ ಎಂದರು.

ಸ್ಪರ್ಧೆಗಳು ಬೆಳಗಾವಿ ಮತ್ತು ಕೊಲ್ಹಾಪುರ ಜಿಲ್ಲಾ ಮಟ್ಟ ಹಾಗೂ ಸಂಕೇಶ್ವರ ಪಟ್ಟಣ ಮಟ್ಟದ ಟಾಪ್ 10 ಬಾಡಿ ಬಿಲ್ಡಿಂಗ್ ಚಾಂಪಿಯನ್‌ಶಿಪ್ ಎಂಬ ಎರಡು ವಿಭಾಗಗಳಲ್ಲಿ ನಡೆಯಲಿವೆ. ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ವಿಜೇತರಿಗೆ ಛತ್ರಪತಿ ಶ್ರೀ ಟ್ರೋಫಿ ಪ್ರಧಾನ ಮಾಡಲಾಗುವುದು. ಪ್ರಥಮ ಬಹುಮಾನ-21,000, ರನ್ನರ್-ಅಪ್ 15,000 ಹಾಗೂ ಬೆಸ್ಟ್ ಪೋಸರ್‌ಗೆ 5,000 ನಗದು ಬಹುಮಾನ ನೀಡಲಾಗುತ್ತದೆ.ಸಂಕೇಶ್ವರ ಮಟ್ಟದ ಟಾಪ್ 10 ಸ್ಪರ್ಧೆಯಲ್ಲಿ ವಿಜೇತರಿಗೆ ಧರ್ಮವೀರ ಶ್ರೀ ಟ್ರೋಫಿ ನೀಡಲಾಗುವುದು. ಈ ವಿಭಾಗದ ವಿಜೇತರಿಗೆ ಪ್ರಥಮ-5,000, ದ್ವಿತೀಯ-4,000, ತೃತೀಯ-3,000, ನಾಲ್ಕು ಮತ್ತು ಐದನೇಯ ಸ್ಥಾನಗಳಿಗೆ ತಲಾ 2,00) ನಗದು ಬಹುಮಾನ ಸೇರಿದಂತೆ, ಉಳಿದ 5 ಜನ ಸ್ಪರ್ಧಿಗಳಿಗೆ ಪ್ರಶಸ್ತಿ ಹಾಗೂ ಪಾರಿತೋಷಕಗಳನ್ನು ವಿತರಿಸಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು. ಎಲ್ಲ ಸ್ಪರ್ಧೆಗಳು ಐಬಿಬಿಎಫ್ ನಿಯಮಾವಳಿಗಳ ಅನುಸಾರ ನಡೆಯಲಿದ್ದು, ಸುಮಾರು 150ರಿಂದ 200ರವರೆಗೆ ಸ್ಪರ್ಧಿಗಳು ಭಾಗವಹಿಸುವ ನಿರೀಕ್ಷೆಯಿದೆ. ಹೆಚ್ಚಿನ ವಿವರಗಳಿಗೆ 8883279777 ಹಾಗೂ 8884506352 ಸಂಖ್ಯೆಗಳ ಮೂಲಕ ಸಂಪರ್ಕಿಸಬಹುದಾಗಿದೆ ಎಂದು ಸಂಘದವರು ತಿಳಿಸಿದ್ದಾರೆ. ಪುರಸಭೆ ಮಾಜಿ ಅಧ್ಯಕ್ಷ ಶ್ರೀಕಾಂತ ಹತನೂರಿ, ಮುಖಂಡರಾದ ಅವಿನಾಶ ನಲವಡೆ, ಅಭಿಜಿತ ಕುರಣಕರ, ಜಯಪ್ರಕಾಶ ಸಾವಂತ, ಶಿವರಾಮ ಶೇಲಾರ, ಭರತ ನಲವಡೆ ಇದ್ದರು.



ಬೀದಿ ನಾಯಿಗಳ ಹಾವಳಿ ತಡೆಗಟ್ಟಲು ಮನವಿ

ಕುಡಚಿ: ರಾಯಬಾಗ ತಾಲೂಕಿನ ಕುಡಚಿ ಪಟ್ಟಣದಾದ್ಯಂತ ಶ್ವಾನಗಳ ಕಾಟ ಹೆಚ್ಚಾಗಿದ್ದು, ಮಂಗಳವಾರ ವಾರ್ಡ್ ಸಂಖ್ಯೆ 22 ರಲ್ಲಿ ಬೆಳಿಗ್ಗೆ ಶಾಲೆಗೆ ಹೋಗುತ್ತಿದ್ದ ಜಯನ್ ಎಂಬ ವಿದ್ಯಾರ್ಥಿನಿಯ ಮೇಲೆ ಬೀದಿ ನಾಯಿಯೊಂದು ದಾಳಿ ಮಾಡಿ ಗಂಭೀರವಾಗಿ ಗಾಯಗೊಳಿಸಿದ ಘಟನೆ ಜರುಗಿದೆ.

ಪಟ್ಟಣಕ್ಕೆ ರೈಲು ಸಂಪರ್ಕ ಇದ್ದು ಕುಡಚಿ ಬಾಗಲಕೋಟೆ ಜಂಕ್ಷನ್ ಕಾಮಗಾರಿಯು ಪ್ರಗತಿಯಲ್ಲಿರುವುದರಿಂದ 24ಗಂಟೆಗಳಲ್ಲಿ ನಿಯಮಿತವಾಗಿ ರೈಲುಗಳು ನಿಲುಗಡೆ ಇದ್ದು, ಕಾಗವಾಡ-ಕಲಾದಗಿ ರಾಜ್ಯ ಹೆದ್ದಾರಿ ಸಂಪರ್ಕವನ್ನು ಹೊಂದಿರುವುದರಿಂದ ಪ್ರಯಾಣಿಕರು ಹಗಲು-ರಾತ್ರಿ ಅನಿಯಮಿತಸಮಯದಲ್ಲಿಸಂಚಾರಮಾಡುವುದರಿಂದ ಮನೆಗೆ ಹೋಗುವಾಗ ಅಥವಾ ರೈಲು, ಬಸ್ಸು ನಿಲ್ದಾಣಗಳಿಗೆ ಒಬ್ಬರೆ ನಡೆದುಕೊಂಡು ಹೋಗುವಾಗ ನಾಯಿಗಳು ಅವರ ಮೇಲೆ ಗುಂಪುಗುಂಪಾಗಿ ದಾಳಿ ಮಾಡುವ ಆತಂಕ ಹೆಚ್ಚಾಗಿದೆ. ಕುಡಚಿ ಪಟ್ಟಣವು 23 ವಾರ್ಡ್‌ಗಳ ಸುಮಾರು 50 ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿದ್ದು ನಾಯಿಗಳ ಸಂಖ್ಯೆಯು ಐದು ನೂರಕ್ಕೂ ಹೆಚ್ಚಾಗಿದ್ದು, ಜನರಲ್ಲಿ ಭಯದ ವಾತಾವರಣ ಸೃಷ್ಟಿಯಾಗಿದೆ.

ಪಟ್ಟಣದ ವಾರ್ಡ್ ಸಂಖ್ಯೆ 22ರ ಬದರ ಮಸೀದಿ ಬಳಿಯ ಬದರ್ ಮೊಹಲ್ಲಾ ನಿವಾಸಿ ಇಲಿಯಾಸ್ ಜಾತಗಾರ ಅವರ ಐದು ವರ್ಷದ ಮಗಳು ಶಾಹಿದಾ ಜಾತಗಾರ ಶಾಲೆಗೆ ಹೋಗುತ್ತಿದ್ದ ಸಮಯದಲ್ಲಿ ದಾಳಿ ಮಾಡಿ ಮುಖಕ್ಕೆ ಗಂಭೀರವಾಗಿ ಗಾಯಗೊಳಿಸಿದ ಪರಿಣಾಮ ಮಗುವನ್ನು ಚಿಕಿತ್ಸೆಗೆ ಮಹಾರಾಷ್ಟ್ರದ ಮಿರಜದ ಖಾಸಗಿ ಆಸ್ಪತ್ರೆಯಲ್ಲಿ ದಾಖಲಿಸಿದ್ದಾರೆ.

ಸುದ್ದಿ ತಿಳಿದ ಪಟ್ಟಣದ ಎಸಡಿಪಿಐ, ಎಐಎಂಐ ಕಾರ್ಯಕರ್ತರು ಕಾಂಗ್ರೆಸ್ ಮಾಜಿ ಪುರಸಭೆ ಸದಸ್ಯರು ನಾಯಿಗಳ ಉಪಟಳದಿಂದ ತಪ್ಪಿಸಲು ಕ್ರಮ ಜರುಗಿಸುವಂತೆ ಹಾಗೂ ಹಲ್ಲೆಗೊಳಗಾದ ಮಗುವಿಗೆ ಪುರಸಭೆಯಿಂದ ಚಿಕಿತ್ಸೆಗೆ ಪರಿಹಾರ ಒದಗಿಸುವಂತೆ ಪುರಸಭೆ ಮುಖ್ಯಾಧಿಕಾರಿಗಳ ಅನುಪಸ್ಥಿತಿಯಲ್ಲಿ ಕಂದಾಯ ನಿರೀಕ್ಷಕರಾದ ಬಸವರಾಜ ಹಳ್ಳಿ ಅವರಿಗೆ ಮನವಿ ಸಲ್ಲಿಸಿದರು. ಸಮಾಜ ಸೇವಕ ಜಹೂರ ಸಂದರವಾಲೆ, ಬೆಹೆಲುಲ್ ರೆಡ್ಡಿ, ಸಾಹೇಬಜಾದೆ ಪೀರ್ ಜಾದೆ, ನವಿದ ಜಿನಾಬಡೆ, ವಾಜಿದ ಅಲಂದ, ಇಮ್ರಾನ್ ಅಲಾಲಖಾನ, ಪುರಸಭೆ ಮಾಜಿ ಅಧ್ಯಕ್ಷ ಹಮಿದೋದಿನ ರೋಹಿಲೆ ಒಳಗೊಂಡಂತೆ, ಪುರಸಭೆ ಮಾಜಿ ಸದಸ್ಯರು, ಕಾಂಗ್ರೆಸ್ ಕಾರ್ಯಕರ್ತರು ಉಪಸ್ಥಿತರಿದ್ದರು.



> **ಪಟ್ಟಣದಲ್ಲಿ ಅಂದಾಜು ಐದು ನೂರಕ್ಕೂ ಹೆಚ್ಚು ಬೀದಿ ನಾಯಿಗಳಿದ್ದು, ಸರ್ಕಾರಿ ಈ ಕುರಿತು ಚಿಂತನೆ ತುರ್ತು ಸಮಸ್ಯೆ ಎಂದು ಪರಿಗಣಿಸಿ ಜನರನ್ನು ನಾಯಿಗಳ ಕಾಟದಿಂದ ರಕ್ಷಿಸಲು ಹೆಚ್ಚಿನ ಅನುದಾನ ನೀಡಿ ಪರಿಹಾರ ನೀಡಲು ಕ್ರಮ ಕೈಗೊಳ್ಳಬೇಕು. ಜೊತೆಗೆ ಈ ಕಾರ್ಯದಲ್ಲಿ ಬೀದಿ ನಾಯಿಗಳನ್ನು ಪಾಲನೆ ಪೋಷಣೆ ಮಾಡಲು, ದತ್ತು ಪಡೆಯಲು ಶ್ವಾನ ಪ್ರೀಯರು ಸಂಘ ಸಂಸ್ಥೆಗಳು ಮುಂದೆ ಬರಬೇಕು.**
> ■ ಹಮಿದೋದಿನ ರೋಹಿಲೆ, ಮಾಜಿ ಪುರಸಭೆ ಅಧ್ಯಕ್ಷರು, ಕುಡಚಿ

ಸಾಮಾಜಿಕ, ನ್ಯಾಯ ಸಮ್ಮತ ಕೊಡುಗೆ ನೀಡಿದ ಶಿವಾಜಿ

ಸವದತ್ತಿ: ಛತ್ರಪತಿ ಶಿವಾಜಿ ಮಹಾರಾಜರು ಧರ್ಮ ರಕ್ಷಣೆಯ ಜೊತೆಗೆ ರಾಷ್ಟ್ರ ಪ್ರೇಮವನ್ನು ಮೈಗೂಡಿಸಿಕೊಂಡು ಹಿಂದವೀ ಸಾಮ್ರಾಜ್ಯವನ್ನು ಸ್ಥಾಪಿಸಿ ಸಾಮಾಜಿಕ ಹಾಗೂ ನ್ಯಾಯ ಸಮ್ಮತವಾದ ಅನೇಕ ಕೊಡುಗೆಗಳನ್ನು ಸಮಾಜಕ್ಕೆ ನೀಡಿದ್ದಾರೆ ಎಂದು ಡಾ.ನರಸಿಂಹ ಕುಲಕರ್ಣಿ ಹೇಳಿದರು.

ಪಟ್ಟಣದಲ್ಲಿ ತಾಲೂಕು ಆಡಳಿತ ಮತ್ತು ಮರಾಠ ಸಮಾಜ ಬಾಂಧವರಿಂದ ಹಮ್ಮಿಕೊಂಡ ಛತ್ರಪತಿ ಶಿವಾಜಿ ಮಹಾರಾಜರ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ, ಛತ್ರಪತಿ ಶಿವಾಜಿ ಮಹಾರಾಜರು ಕೇವಲ ಒಂದು ಜಾತಿಗೆ ಸೀಮಿತವಾಗಿಲ್ಲ, ಅವರು ದೇಶದ ಸಮಸ್ತ ಬಾಂಧವರ ಆಸ್ತಿ ಎಂದರು.

ಅಶ್ವತ ವೈದ್ಯ, ತಹಶೀಲ್ದಾರ ಮಲ್ಲಿಕಾರ್ಜುನ ಹೆಗ್ಗಣ್ಣವರ, ಜಯಶಂಕರ ವಣ್ಣೂರ ಮಾತನಾಡಿದರು.

ಮುಂಜಾನೆ ಉದಯಗಿರಿ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಮರಾಠ ಸಮಾಜ ಬಾಂಧವರು, ಸುಮಂಗಲೆಯರಿಂದ ಬಾಲ ಶಿವಾಜಿಯನ್ನು ತೊಟ್ಟಿಲಲ್ಲಿ ಹಾಕಿ ಪೂಜೆ ಸಲ್ಲಿಸಲಾಯಿತು. ಛತ್ರಪತಿ ಶಿವಾಜಿ ಮಹಾರಾಜರ ವೃತ್ತದಲ್ಲಿ ತಾಲೂಕು ಆಡಳಿತ, ಸಮಸ್ತ ಸಮಾಜ ಬಾಂಧವರಿಗೆ ಛತ್ರಪತಿ ಶಿವಾಜಿ ಮಹಾರಾಜರ ಪುತ್ಥಳಿಗೆ ಪೂಜೆ ಸಲ್ಲಿಸಿ ಮಿನಿವಿಧಾನಸೌಧದಲ್ಲಿ ತಾಲೂಕು ಆಡಳಿತದಿಂದ ನಡೆದ ಕಾರ್ಯಕ್ರಮದಲ್ಲಿ ಸಕಲರು ಪಾಲ್ಗೊಂಡರು.

ನಗರಸಭೆ ಪೌರಾಯುಕ್ತ ಸಂಗನಬಸಯ್ಯ ಗದಿಗಮಠ, ತಾ.ಪಂ ಇಒ ಆನಂದ ಬಡಕುಂದರಿ, ಸರಕಾರಿ ನೌಕರರ ಸಂಘದ ಅಧ್ಯಕ್ಷ ಅಶೋಕ ಮುರಗೋಡ, ಆರ್.ಆರ್.ಕುಲಕರ್ಣಿ, ಎಪಿಎಂಸಿ ಅಧ್ಯಕ್ಷ ಚಂದ್ರು ಜಂಬ್ರಿ, ಶ್ರೇಯಸ್ ಮಾಮನಿ, ಎಚ್.ಎ.ಕದರಾಪುರ, ಕೃಷಿ ಅಧಿಕಾರಿ, ಶಿವಪ್ರಕಾಶ ಪಾಟೀಲ, ಚಂದ್ರು ಸುತಗಟ್ಟಿ, ಸಿಡಿಪಿಒ ಅಮೃತ ಸಾಣಿಕೊಪ್ಪ, ಶ್ರೀ ರಾಮಲಿಂಗೇಶ್ವರ ಅರ್ಬನ ಸೊಸೈಟಿ ಅಧ್ಯಕ್ಷ ಪುಂಡಲೀಕ ಭೀ. ಬಾಳೋಜಿ, ಲಿಂಗಾಯತ ಪಂಚಮಸಾಲಿ ಜಾಗೃತಿ ವೇದಿಕೆ ಅಧ್ಯಕ್ಷ ಅಲ್ಲಮಪ್ರಭು ಪ್ರಭುನವರ, ವಿ.ಜೆ.ಪವಾರ, ತಾನಾಜಿರಾವ್ ಮುರಂಕರ, ತಾನಾಜಿ ಶಿಂಧೆ, ಬಸವರಾಜ ಕಪ್ಪಣ್ಣವರ, ಲಕ್ಷ್ಮಣ ಕಿಟದಾಳ, ಅಣ್ಣಪ್ಪ ಪವಾರ, ಕುಮಾರಸ್ವಾಮಿ ತಲ್ಲೂರಮಠ, ಸುರೇಶ ಬಾಳೋಜಿ, ಮಲ್ಲೇಶ ರಾಜನಾಳ, ಕೇದಾರ ಮೊಕಾಶಿ, ಸಿ.ಬಿ.ದೊಡಗೌಡರ, ಮಂಜುನಾಥ ಡಬಕೆ, ರಾವ್‌ಸಾಹೇಬ ಜಾಮದಾರ, ಡಾ.ಹೇಮಂತ ಭಸ್ಮೆ, ಎಫ್.ವೈ.ಗಾಜಿ, ಬಸವರಾಜ ಅರಮನಿ, ಸುನೀಲ ತಾರಿಹಾಳ, ಮಂಜು ಪಾಚಂಗಿ, ಅಂದುಸಿಂಗ್ ರಜಪುತ, ರಾಜಶೇಖರ ನಿಡವಣಿ, ಮಲ್ಲಿಕಾರ್ಜುನ ಬೀಳಗಿ, ಅಶೋಕ ಕದಮ, ಐ.ಪಿ.ಪಾಟೀಲ, ಅಯ್ಯಪ್ಪ ಹಿರೇಮಠ, ಆನಂದ ಜಾನ್ವೇಕರ, ಸುಭಾಸ ಪವಾರ, ಸಂಗಯ್ಯ ಕಳ್ಳಿಮಠ, ಬಸವರಾಜ ಸುಣಗಾರ, ವಿಠ್ಠಲ ಜಾಮದಾರ, ಸುಧೀಂದ್ರ ಬಂಗಲೇದಾರ, ಅಶೋಕ ಶಿಂಧೆ, ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಮತ್ತು ಮರಾಠ ಸಮಾಜದ ಮುಖಂಡರು ಉಪಸ್ಥಿತರಿದ್ದರು. ಶಿವಾನಂದ ತಾರೀಹಾಳ ನಿರೂಪಿಸಿ ವಂದಿಸಿದರು.



ಕಿರುಸುದ್ದಿ



ಗಲಗಲಿ: ಬಸವೇಶ್ವರ ಕೋ ಆಪರೇಟಿವ್ ಸೊಸೈಟಿಯಲ್ಲಿ ಗುರುವಾರ ಶಿವಾಜಿ ಜಯಂತಿ ಆಚರಿಸಲಾಯಿತು. ಅಧ್ಯಕ್ಷ ನಿಂಗಣ್ಣ ಗೋಳಿಪಲ್ಲೆ, ಪ್ರಕಾಶ ಮೆಳ್ಳಿಗೇರಿ, ಮಾರುತಿ ಮಂಟೂರ, ಸಂದೀಪ ಗೋಡ್ಸೆ ಹಾಗೂ ಪ್ರಮುಖರು ಉಪಸ್ಥಿತರಿದ್ದರು.

ಹಳ್ಳಿ ಹೆಜ್ಜೆ ಬಣ್ಣದ ಗೆಜ್ಜೆ ಕಾರ್ಯಕ್ರಮ ನಾಳೆ

• **ಕಮತಗಿ:** ಪಟ್ಟಣದ ವಿಜನ್ ಪೂರ್ವ ಪ್ರಾಥಮಿಕ ಹಾಗೂ ಪ್ರಾಥಮಿಕ ಆಂಗ್ಲ ಮಾಧ್ಯಮ ಶಾಲೆ, ಕಮತಗಿ ಇದರ 12ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಹಳ್ಳಿ ಹೆಜ್ಜೆ ಬಣ್ಣದ ಗೆಜ್ಜೆ ಎಂಬ ಕಾರ್ಯಕ್ರಮ ನಡೆಯಲಿದೆ. ತಂತ್ರಜ್ಞಾನ ಅಧಿಕಾರಿಗಳು ಡಿಆರ್‌ಡಿಒ ಬೆಂಗಳೂರು ಬಿ.ವೈ.ಬಂದಿಕೇರಿ ಅಧ್ಯಕ್ಷತೆ ವಹಿಸಲಿದ್ದು, ಕಮತಗಿಯ ಹುಚ್ಚೇಶ್ವರ ಸ್ವಾಮಿಗಳು, ಶಿವಕುಮಾರ ಶಿವಾಚಾರ್ಯ ಸ್ವಾಮಿಗಳು, ಯಲ್ಲಮ್ಮದೇವಿ ಮಾತೋಶ್ರೀ ಬಸವಣ್ಣೆಮ್ಮತಾಯಿ ಬಸರಕೋಡ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ನಿವೃತ್ತ ಶಿಕ್ಷಕ ಎಸ್.ಸಿ.ಚಲವಾದಿ ಉದ್ಘಾಟಿಸಲಿದ್ದಾರೆ. ಬಾಗಲಕೋಟೆ ಸ್ತ್ರೀರೋಗ ಖ್ಯಾತ ತಜ್ಞರು ಧನುಷ್ ಆಸ್ಪತ್ರೆಯ ಡಾ.ಭಾಗ್ಯ ದೇ. ಪಾಟೀಲ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಹುನಗುಂದ ಕ್ಷೇತ್ರ ಶಿಕ್ಷಣಾಧಿಕಾರಿ ಜಾಸ್ಮಿನ್ ಕಿಲ್ಲೇದಾರ, ಕಮತಗಿ ಖ್ಯಾತ ವೈದ್ಯ, ಹುಚ್ಚೇಶ ಕಲ್ಯಾಣಮಠ, ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿ ಭಾಗವಹಿಸುವರು ಎಂದು ಶಾಲೆಯ ಮುಖ್ಯ ಗುರುಮಾತೆ ಕಾವೇರಿ ಕಡ್ಲಿಮಟ್ಟಿ ತಿಳಿಸಿದ್ದಾರೆ.

ಬೀರಲಿಂಗೇಶ್ವರ ಜಾತ್ರೆ

• **ಕಲಾದಗಿ:** ಸಮೀಪದ ಗೋವಿಂದಕೊಪ್ಪ ಗ್ರಾಮದ ಆರಾಧ್ಯ ದೈವ ಬೀರಲಿಂಗೇಶ್ವರನ ಪಲ್ಲಕ್ಕಿ ಮಹೋತ್ಸವದ ಜಾತ್ರೆಯಲ್ಲಿ ನೈವೇದ್ಯಗಾಗಿ ತಯಾರಿಸುವ ಬೃಹತ್ ಪಾತ್ರೆಯೊಳಗಿನ ಕುದಿಯುತ್ತಿರುವ ಹುಗ್ಗಿ ಪಲ್ಲಕ್ಕಿಗಳನ್ನು ಹೊತ್ತು ಬಂದ ಹತ್ತಾರು ಪೂಜಾರರು ಒಡಬಡನೆ ಐದಾರು ಬಾರಿ ಕುದಿಯುತ್ತಿರುವ ಹುಗ್ಗಿಯ ಪಾತ್ರೆಯೊಳಗೆ ಕೈಹಾಕಿ ನೈವೇದ್ಯ ಸಮರ್ಪಿಸುವ ಹುಗ್ಗಿ ತೆಗೆಯುವ ದೃಶ್ಯದ ಭಕ್ತಿ ಪರಾಕಾಷ್ಠೆ ನೋಡುಗರನ್ನು ವಿಸ್ಮಯಗೊಳಿಸಿತು. ಶಿವಾಪುರ, ಮಂಟೂರ, ಅನವಾಲ, ಸೊಪ್ಪಡ್ಲ, ಬೂದಿಹಾಳ ಗ್ರಾಮಗಳಿಂದ ಭಕ್ತರು ಆಗಮಿಸಿದ್ದರು.



ಐಟಿಇಪಿ ಕೋರ್ಸ್ ಆರಂಭ: ಎ.ಸಿ.ಪಟ್ಟಣದ

• **ಬಾದಾಮಿ:** ಬಹು ವರ್ಷಗಳಿಂದ ಈ ಭಾಗದ ಶೈಕ್ಷಣಿಕ ಅಭಿವೃದ್ಧಿಯಲ್ಲಿ ವೀರಪುಲಿಕೇಶಿ ವಿದ್ಯಾಸಂಸ್ಥೆಯ ಕೊಡುಗೆ ಅಪಾರ. ಮಕ್ಕಳ ಭವಿಷ್ಯ ರೂಪಿಸುವ ಸಂಸ್ಥೆಯ ಮೂಲ ಉದ್ದೇಶದೊಂದಿಗೆ ಈ ವರ್ಷದಿಂದ ನಾಲ್ಕು ವರ್ಷಗಳ ಐಟಿಇಪಿ ಕೋರ್ಸ್ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಸಂಸ್ಥೆ ಚೇರಮನ್ ಎ.ಸಿ.ಪಟ್ಟಣದ ಹೇಳಿದರು. ನಗರದ ಪ್ರತಿಷ್ಠಿತ ವೀರಪುಲಿಕೇಶಿ ವಿದ್ಯಾವರ್ಧಕ ಸಂಸ್ಥೆಯ ಆಡಳಿ ಮಂಡಳಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಎಸ್.ಬಿ.ಮಮದಾಪೂರ ಕಲಾ ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯದಲ್ಲಿ 2026-27 ಸಾಲಿನಲ್ಲಿ ಪ್ರಾರಂಭವಾಗುವ ನಾಲ್ಕು ವರ್ಷಗಳ ಸಂಯುಕ್ತ ಶಿಕ್ಷಕರ ಕೋರ್ಸ್ (ಐಟಿಇಪಿ) ಬಿಎ, ಬಿಎಡ್, ಬಿ.ಕಾಂ ಬಿ.ಎಡ್ ಹಾಗೂ ಬಿ.ಎಸ್ಸಿ ಬಿಎಡ್ ತರಗತಿಗೆ 2026-2027 ನೇ ಶೈಕ್ಷಣಿಕ ಸಾಲಿನ ಪ್ರವೇಶ ಪರೀಕ್ಷೆಗೆ ಅರ್ಜಿ ಆಹ್ವಾನಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಪಿಯುಸಿಯಲ್ಲಿ ಶೇ 50 ಅಂಕ ಪಡೆದ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಗ್ರಾಮೀಣ ಹಾಗೂ ಇತರೆಡೆಯ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಲು ಇಲ್ಲಿಯೇ ಉಚಿತವಾಗಿ ಅರ್ಜಿ ಸಲ್ಲಿಕೆ ಮಾಡಲಾಗುವುದು. ಮೂರು ವಿಭಾಗಗಳಲ್ಲಿ ತಲಾ 50 ಸೀಟುಗಳು ಮಾತ್ರ ಅವಕಾಶವಿದೆ. ಬಾಲಕಿಯರ ವಸತಿ ನಿಲಯಕ್ಕೂ(ಹಾಸ್ಟೆಲ್) ವ್ಯವಸ್ಥೆ ಮಾಡಲಾಗುತ್ತಿದೆ. ವಿದ್ಯಾರ್ಥಿಗಳು 4 ವರ್ಷದಲ್ಲೆ ಇಂಟಿಗ್ರೇಟೆಡ್ ಡಿಗ್ರಿ ಮಾಡುವ ಅವಕಾಶವನ್ನು ವಿದ್ಯಾರ್ಥಿಗಳು ಸದುಪಯೋಗ ಪಡೆಯಬೇಕು ಎಂದರು. ಎನ್.ಟಿ.ಎ.ನವದೆಹಲಿ ಇವರು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಂದ ಆನಲೈನ್ ಮೂಲಕ ಅರ್ಜಿ ಸಲ್ಲಿಸಲು ಮಾ.10 ಕೊನೆಯ ದಿನ. ಪ್ರವೇಶ ಪರೀಕ್ಷೆ ಹುಬ್ಬಳ್ಳಿ, ಬೆಳಗಾವಿ, ಮಂಗಳೂರು, ಶಿವಮೊಗ್ಗ ಹಾಗೂ ಬೆಂಗಳೂರು ಕೇಂದ್ರಗಳಲ್ಲಿ ಎಪ್ರಿಲ್ 17 ರಂದು ನಡೆಯಲಿದೆ. ಪರೀಕ್ಷೆ ಮೂಲಕವೇ ಆಯ್ಕೆಯಾಗುವ ಕಾರಣ ವಿದ್ಯಾರ್ಥಿಗಳು ಕಡ್ಡಾಯವಾಗಿ ಅರ್ಜಿ ಸಲ್ಲಿಸಿ ಪರೀಕ್ಷೆ ಬರೆದಲ್ಲಿ ಮಾತ್ರ ಪ್ರವೇಶವಿದೆ. ಪದವಿ ಕಾಲೇಜಿನ ಪ್ರಾಚಾರ್ಯ ಎ.ಎ.ತೋಪಲಕಟ್ಟಿ ಇದ್ದರು.





ಕೆರೂರ : ಪಟ್ಟಣದ ಗ್ರಾಮ ದೇವತೆಗಳ ಜಾತ್ರೆಯು ಎಪ್ರಿಲ್‌ನಲ್ಲಿ ನಡೆಯಲಿದ್ದು, ದೇವಿಯ ರಥಕ್ಕೆ ಕಟ್ಟಿಗೆ ಕಡಿದು ಜಾತ್ರೆ ಮಹೋತ್ಸವಕ್ಕೆ ಚಾಲನೆ ನೀಡಲಾಯಿತು. ಪಟ್ಟಣದ ಹಿರಿಯರಾದ ಮಾಂತೇಶ ಮೇಣಸಗಿ, ಪಪಂ ಮಾಜಿ ಅಧ್ಯಕ್ಷ ಸದಾನಂದ ಮದಿ, ಬಸವರಾಜ ಹುಂಡೇಕಾರ, ಚನ್ನಪ್ಪ ಶಿರೋಳ, ಸಂಕಣ್ಣ ಹೊಸಮನಿ, ಧನಂಜಯ ಕಂದಕೂರ, ಜಗದೀಶ ಯಂಡಿಗೇರಿ, ಮಲ್ಲಪ್ಪ ಅಜ್ಜೋಡಿ, ಲಕ್ಷ್ಮಣ ಕಟ್ಟಿಮನಿ, ಬಸವರಾಜ ಹರಣಶಿಕಾರಿ ಇದ್ದರು.

ಮಕ್ಕಳ ಭವಿಷ್ಯಕ್ಕೆ ಸರ್ಕಾರ ಬದ್ಧ: ಚಿಮ್ಮನಕಟ್ಟಿ

• **ಬಾದಾಮಿ:** ಸರ್ಕಾರಿ ಶಾಲಾ ಪ್ರತಿಭಾವಂತ ಮಕ್ಕಳು ಉತ್ತಮ ವಾತಾವರಣದಲ್ಲಿ ಅತ್ಯುತ್ತಮ ಶಿಕ್ಷಣ ಪಡೆಯಬೇಕು ಎಂಬುದು ಸರ್ಕಾರದ ಸದುದ್ದೇಶದಿಂದ ಮೌಲಾನಾ ಆಜಾದ್ ಮಾದರಿ ಶಾಲೆಗೆ ಕಟ್ಟಡ ನಿರ್ಮಾಣಕ್ಕೆ 5 ಕೋಟಿ ರೂ.ಅನುದಾನ ಮಂಜೂರಿ ಮಾಡಿದ್ದು, ವಿದ್ಯಾರ್ಥಿಗಳು ಸದುಪಯೋಗ ಪಡೆದು ಉಜ್ವಲ ಭವಿಷ್ಯ ನಿರ್ಮಾಣ ಮಾಡಿಕೊಳ್ಳಬೇಕು ಎಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಹೇಳಿದರು. ಇಲ್ಲಿಯ ಬಸವನ ನಗರದ ಸಾಯಿಬಾಬಾ ದೇವಸ್ಥಾನ ಹಿಂಬದಿಯಲ್ಲಿ ಮೌಲಾನಾ ಆಜಾದ್ ಮಾದರಿ ಶಾಲೆ(ಆಂಗ್ಲ ಮಾಧ್ಯಮ) ಕಟ್ಟಡದ ಭೂಮಿ ಪೂಜೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿ, ಸಿಎಂ ಸಿದ್ದರಾಮಯ್ಯ ಮತ್ತು ಸಚಿವ ಜಮೀರ್ ಅಹ್ಮದ್ ಖಾನ್ ಅವರ ಶ್ರಮದಿಂದ ಮಕ್ಕಳ ಶೈಕ್ಷಣಿಕ ಅಭಿವೃದ್ಧಿ ಸಾಕಾರಗೊಂಡಿದೆ. ರಾಜ್ಯದಲ್ಲಿಯೇ ಬಾದಾಮಿಯಲ್ಲಿ ಮೌಲಾನಾ ಆಜಾದ್ ಮಾದರಿ ಶಾಲೆಗೆ ಕಟ್ಟಡಕ್ಕೆ ಅನುದಾನ ಮತ್ತು ಕೆರೂರ ಪಟ್ಟಣಕ್ಕೆ ನೂತನ ಶಾಲೆ ಕಟ್ಟಡದ ಅನುದಾನ ಸಮೇತ ಮಂಜೂರು, ಬಾದಾಮಿ ತಾಲೂಕಿಗೆ ಎರಡು ಶಾಲೆಗೆ 10 ಕೋಟಿ ರೂ ಅನುದಾನ ಮಾಡಿದ್ದು ಶ್ಲಾಘನೀಯ ಎಂದರು. ಅಂಜುಮನ್ ಇಸ್ಲಾಂ ಸಮಿತಿ ಅಧ್ಯಕ್ಷ ಯುಸೂಫ್ ಪೀರಜಾದೆ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸದಸ್ಯ ಶೌಕತಲಿ ವಾಚಮೇಕರ ಮಾತನಾಡಿದರು. ಈ ಸಂದರ್ಭದಲ್ಲಿ ಶಿವುಕುಮಾರ ಹಿರೇಮಠ, ಬಸವರಾಜ ತಳವಾರ, ಅಲ್ಪಸಂಖ್ಯಾತ ಇಲಾಖಾಧಿಕಾರಿ ಪಟ್ಟಣಶೆಟ್ಟಿ, ಬಿ.ಎಚ್.ಹಳಗೇರಿ, ಅಶೋಕ ಕೋಟನಕರ, ಭೀಮಸಿ ಕಮ್ಮಾರ, ಮಂಜುನಾಥ ಹೊಸಮನಿ, ಇಲಿಯಾಸ್ ಜಮಾದಾರ, ಶಂಕರ ಕನಕಗಿರಿ, ಪ್ರಾಚಾರ್ಯ ಎಸ್.ಎಂ.ನದಾಫ ಶಿಕ್ಷಕರು ಇದ್ದರು.



ಬಾದಾಮಿ: ಇಲ್ಲಿನ ಬಸವನ ನಗರದ ಸಾಯಿಬಾಬಾ ದೇವಸ್ಥಾನ ಹಿಂಬದಿಯಲ್ಲಿ ಮೌಲಾನಾ ಆಜಾದ್ ಮಾದರಿ ಶಾಲೆ(ಆಂಗ್ಲ ಮಾಧ್ಯಮ) ಕಟ್ಟಡದ ಭೂಮಿಪೂಜೆಯನನು ಶಾಸಕ ಭೀಮಸೇನ ಚಿಮ್ಮನಕಟ್ಟಿ ನೆರವೇರಿಸಿದರು.

ಸ್ವಾಭಿಮಾನದ ಪ್ರತೀಕ ಛತ್ರಪತಿ ಶಿವಾಜಿ



• **ಬಾಗಲಕೋಟೆ:** ಧೈರ್ಯ, ಶೌರ್ಯ ಮತ್ತು ಸ್ವಾಭಿಮಾನಕ್ಕೆ ಪ್ರತೀಕರಾದವರು ಛತ್ರಪತಿ ಶಿವಾಜಿ ಮಹಾರಾಜರು ಎಂದು ರಾಜ್ಯಸಭಾ ಸದಸ್ಯ ನಾರಾಯಣಶಾ ಭಾಂಡಗೆ ಹೇಳಿದರು.

ನವನಗರದ ಡಾ.ಬಿ.ಆರ್.ಅಂಬೇಡ್ಕರ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಶಿವಾಜಿ ಮಹಾರಾಜ ಸಾಮಾನ್ಯ ವ್ಯಕ್ತಿಯಾಗಿದ್ದುಕೊಂಡು ಅಸಾಮಾನ್ಯ ಸಾಧನೆ ಮಾಡಿದ್ದಾರೆ. ತಾಯಿ ಜೀಜಾಬಾಯಿ ನೀಡಿದ ಶಿಕ್ಷಣ, ಬೆಳೆದ ವಾತಾವರಣ, ಜೀವನಾನುಭವ ಶಿವಾಜಿಗೆ ಪ್ರೇರಣೆ ನೀಡಿತ್ತು ಎಂದರು.

ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಅನೀಲಕುಮಾರ ದಡ್ಡಿ ಮಾತನಾಡಿ, ಮಹಾತ್ಮರ ಜಯಂತಿಗಳನ್ನು ಕೇವಲ ಆಚರಣೆ ಮಾಡಿದರೆ ಸಾಲದು ಅವರು ಹಾಕಿಕೊಟ್ಟ ತತ್ವ, ಸಿದ್ಧಾಂತ ಮೌಲ್ಯಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕಿದೆ. ಅಂದಾಗ ಮಾತ್ರ ಮಹಾತ್ಮರ ಜಯಂತಿಯನ್ನು ಆಚರಿಸಿದಕ್ಕೂ ಸಾರ್ಥಕತೆ ಬರುತ್ತದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಸಂಗಪ್ಪ ಮಾತನಾಡಿ, ಶಿವಾಜಿ ಮಹಾರಾಜ ಕೇವಲ ಒಬ್ಬ ರಾಜನಲ್ಲ, ಅವರು ಸ್ವರಾಜ್ಯದ ಕನಸನ್ನು ಸಾಕಾರಗೊಳಿಸಿದ ಮಹಾನ್ ನಾಯಕ. ಎಂದು ತಿಳಿಸಿದರು.

ಸಮುದಾಯದ ಮುಖಂಡ ಶೇಖರ ಮಾನೆ ಮಾತನಾಡಿ ,ಶಿವಾಜಿ ಮಹಾರಾಜರು ಅವರ ಆಡಳಿತ ಕಾಲದಲ್ಲೇ ಜಾರಿಗೆ ತಂದ ರಾಜನೀತಿಗಳು ಇಂದಿನ ಆಡಳಿತ ವ್ಯವಸ್ಥೆಗೆ ಮಾದರಿಯಾಗಿವೆ. ಅಂದಿನ ಯುದ್ಧ ತಂತ್ರಗಳ ನೀತಿಯನ್ನು ಇಟ್ಟುಕೊಂಡೆ ಸರ್ಜಿಕಲ್ ಸ್ಟ್ರೈಕ್ ಮಾಡಲಾಗಿದೆ ಎಂದರು. ಒಟ್ಟಾರೆಯಾಗಿ ಶಿವಾಜಿ ಮಹಾರಾಜರ ರಾಜನೀತಿಗಳು ಕೇವಲ ಇತಿಹಾಸವಲ್ಲ, ಇಂದಿನ ಆಡಳಿತ ವ್ಯವಸ್ಥೆಯ ಆಧಾರವಾಗಿದೆ ಎಂದು ತಿಳಿಸಿದರು.

ನವನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಉಪನ್ಯಾಸಕ ಡಾ.ಚಂದ್ರಶೇಖರ ಕಾಳನ್ನವರ ಅತಿಥಿ ಉಪನ್ಯಾಸ ನೀಡಿದರು. ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ತಹಶೀಲ್ದಾರ ವಾಸುದೇವಸ್ವಾಮಿ ಸೇರಿದಂತೆ ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

ಶಿವಾಜಿ ಮಹಾನ್ ದೇಶಭಕ್ತ

• **ಗುಳೇದಗುಡ್ಡ:** ಛತ್ರಪತಿ ಶಿವಾಜಿ ಮಹಾರಾಜ ಒಬ್ಬ ವ್ಯಕ್ತಿಯಲ್ಲ, ಅವರೊಬ್ಬ ದೈತ್ಯ ಶಕ್ತಿ. ಹಿಂದವಿ ಸ್ವರಾಜ್ಯ ಸ್ಥಾಪಕ ಛತ್ರಪತಿ ಶಿವಾಜಿ ಮಹಾರಾಜರು ಹಿಂದೂ ಧರ್ಮ ರಕ್ಷಣೆಗೆ ತಮ್ಮ ಪ್ರಾಣವನ್ನೇ ಮುಡುಪಾಗಿಟ್ಟ ಮಹಾನ್ ದೇಶಭಕ್ತರು. ಅಂತಹ ವೀರಶೂರರ ಆದರ್ಶ ಗುಣಗಳನ್ನು, ಅವರ ಶೂರತನದ ವ್ಯಕ್ತಿತ್ವವನ್ನು ಮಕ್ಕಳಿಗೆ ಕಲಿಸಬೇಕಾಗಿದೆ ಎಂದು ಸಾಮಾಜಿಕ ಕಾರ್ಯಕರ್ತ ರಾಜು ಶಿಂಧೆ ಹೇಳಿದರು. ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಗುರುವಾರ ತಾಲೂಕು ಆಡಳಿತದ ವತಿಯಿಂದ ಹಮ್ಮಿಕೊಂಡ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಆಚರಣೆಯಲ್ಲಿ ಮಾತನಾಡಿ, ಹಿಂದೂ ರಾಷ್ಟ್ರ ಉಳಿಯಬೇಕು. ಧರ್ಮ, ದೇಶ, ಸಮಾಜ ರಕ್ಷಣೆಗಾಗಿ ಛತ್ರಪತಿ ಶಿವಾಜಿ ಮಹಾರಾಜರ ಕೊಡುಗೆ ಅಪಾರವಾಗಿದೆ ಎಂದರು. ಉಪತಹಸಿಲ್ದಾರ್ ಗಂಗಾರಾಮಸಿಂಗ್ ರಜಪೂತ ಶಿವಾಜಿ ಮಹಾರಾಜರ ಭಾವಚಿತ್ರಕ್ಕೆ ವಿಶೇಷ ಪೂಜೆ ನೆರವೇರಿಸಿದರು. ರಾಜು ಶಿಂಧೆ, ಗಂಗಾರಾಮ್‌ಸಿಂಗ್ ರಜಪೂತ ಅವರನ್ನು ಸನ್ಮಾನಿಸಲಾಯಿತು. ಶಿವಾಜಿ ಸೇಲಾರ, ಮಹಾದೇವ ಜಗತಾಪ, ವಿನಾಯಕ ಶಿಂಧೆ, ರವಿ ಪಾಚಂಗೆ, ವಿದ್ಯಾ ಜಗತಾಪ, ತುಕಾರಾಮ ಸುಗತೆ, ನಂದಪ್ಪ ಉಣಚಗಿ, ರವಿ ಪಾಚಂಗೆ, ಸಿಸ್ಟರ್ ಮಿಷನ್, ಹನುಮಂತ ದಾಸರ, ಕೆಂಚಪ್ಪ ಇಂಗಳೆ, ಸಿಸ್ಟರ್ ರೇಚಲ್, ಪರಶುರಾಮ ಜಾದವ, ಶಶಿಕಲಾ ಜಗತಾಪ, ಮಹಾದೇವಿ ಅಡ್ವಾನಿ, ಮಲ್ಲಿಕಾರ್ಜುನ್ ತುಪ್ಪದ, ಆಕಾಶ ಉದಗಟ್ಟಿ, ನವೀನ್ ಮಾನುಟಗಿ, ಶಿವಕುಮಾರ್ ಆಚನೂರ, ಶಶಿಕಲಾ ಭಾವಿ ಇತರರು ಇದ್ದರು.



ಶ್ರೇಷ್ಠ ಆಡಳಿತಗಾರರಾಗಿದ್ದ ಛತ್ರಪತಿ ಶಿವಾಜಿ: ವಿನೋದ



• **ಕಲಾದಗಿ:** ಛತ್ರಪತಿ ಶಿವಾಜಿ ಮಹಾರಾಜರು ಭಾರತದ ಅತ್ಯಂತ ಗೌರವಾನ್ವಿತ ಅಪ್ರತಿಮ ಯೋಧ ಮತ್ತು ಶ್ರೇಷ್ಠ ಆಡಳಿತಗಾರರಲ್ಲಿ ಒಬ್ಬರಾಗಿದ್ದ ಅವರ ವ್ಯಕ್ತಿತ್ವ ಸಮಸ್ತ ಭಾರತಕ್ಕೆ ಹೆಮ್ಮೆಯ ವಿಷಯವಾಗಿದೆ ಎಂದು ಕಲಾದಗಿ ಮರಾಠಾ ಸಮಾಜದ ಯುವ ಮುಖಂಡ ವಿನೋದ ದೇಶಮುಖ ಹೇಳಿದರು.

ಗ್ರಾಮದ ಮರಾಠಾ ಸಮುದಾಯ ಭವನದಲ್ಲಿ ನಡೆದ ಛತ್ರಪತಿ ಶಿವಾಜಿ ಮಹಾರಾಜರ 396ನೇ ಜಯಂತಿ ಕಾರ್ಯಕ್ರಮದಲ್ಲಿ ಶಿವಾಜಿ ಮಹಾರಾಜರ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಿ ಮಾತನಾಡಿದ ಅವರು ಶಿವಾಜಿ ಮಹಾರಾಜರು ಮತ್ತೊಬ್ಬ ರಾಜರ ಅಡಿಯಾಳಾಗದೇ ತಮ್ಮ ನಾಯಕತ್ವದಲ್ಲಿ ಬಲಿಷ್ಟ ಸೇನೆಯನ್ನು ಕಟ್ಟಿ ಸ್ವರಾಜ್ಯದ ಕಲ್ಪನೆಯನ್ನು ಭಾರತದಲ್ಲಿ ಹುಟ್ಟು ಹಾಕಿದ ಮೊದಲ ವ್ಯಕ್ತಿ ಶಿವಾಜಿಯಾಗಿದ್ದರು. ಶಿವಾಜಿ ಮಹಾರಾಜರದು ಒಂದು ಜಾತಿ, ಧರ್ಮಕ್ಕೆ ಸೀಮಿತವಾದ ವ್ಯಕ್ತಿತ್ವ ಅವರದ್ದಾಗಿರಲಿಲ್ಲ ತಮ್ಮ ಸೈನ್ಯ ಕಟ್ಟುವಲ್ಲಿ ಚತುರ ಸಂಘಟಕರಾಗಿದ್ದ ಅವರು ಅತ್ಯಂತ ಬಲಿಷ್ಠ ಮರಾಠಾ ಸಾಮ್ರಾಜ್ಯವನ್ನು ನಿರ್ಮಿಸುವುದರೊಂದಿಗೆ ಭಾರತದ ಅಧಿಪತ್ಯವನ್ನು ಹೊಂದಿದ್ದರು. ಶಿವಾಜಿಯವರನ್ನು ಇವತ್ತಿಗೂ ಶೌರ್ಯ, ನಾಯಕತ್ವ, ಧರ್ಮದ ಬಗೆಗಿನ ಗೌರವ ಹಾಗೂ ದೇಶಭಕ್ತಿಯ ಸಂಕೇತವಾಗಿ ದೇಶ್ಯಾದ್ಯಂತ ಪೂಜಿಸಲಾಗುತ್ತಿದೆ. ಅಷ್ಟೇ ಅಲ್ಲದೇ ಇವತ್ತಿಗೂ ಅವರ ಗೇರಿಲ್ಲಾ ಯುದ್ಧ ತಂತ್ರಗಳನ್ನು ಭಾರತೀಯ ಸೇನೆಯಲ್ಲಿ ಅಳವಡಿಸಿಕೊಳ್ಳುತ್ತಿರುವುದು ಹೆಮ್ಮೆಯ ಸಂಗತಿ ಎಂದು ಹೇಳಿದರು. ಈ ಸಂದರ್ಭದಲ್ಲಿ ಸಮಾಜದ ಹಿರಿಯರಾದ ರಾಜೇಂದ್ರ ಜಾಧವ, ಆನಂದ ವಾಘ, ದಯಾನಂದ ವಾಘ, ಗಣಪತಿ ದೇಶಮುಖ, ಮಹದೇವ ಕರ್ಣೆ, ಕೃಷ್ಣಾಜೀ ಜಾಧವ, ಸಂಜಯ ಕಲವಾರ, ಸುರೇಶ ಮಾನೆ, ಪರಶುರಾಮ ಪವಾರ, ಗಣಪತಿ ಚವಾಣ, ಪಾಂಡುರಂಗ ಪವಾರ, ಶ್ರೀಪಾದ ವಾಘ, ಶಿವಾಜಿ ಚವಾಣ, ಪವನ ಜಾಧವ, ಸಚೀನ ದೇಶಮುಖ, ದರ್ಶನ ಪವಾರ ಸೇರಿದಂತೆ ಸಮಾಜದ ಹಿರಿಯರು, ಯುವಕರು ಉಪಸ್ತಿತರಿದ್ದರು.

ರಾಜ್ಯಮಟ್ಟದ ಚಿತ್ರಕಲಾ ಶಿಬಿರ, ಪ್ರದರ್ಶನ ನಾಳೆ

• **ಬಾಗಲಕೋಟೆ:** ನಮನ ಫೌಂಡೇಶನ್ ವತಿಯಿಂದ ಫೆ.21 ಮತ್ತು 22 ರಂದು ನವನಗರದ ಕಲಾಭವನದ ಆವರಣದಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ರಾಜ್ಯಮಟ್ಟದ ಚಿತ್ರಕಲಾ ಶಿಬಿರ ಹಾಗೂ ಪ್ರದರ್ಶನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಫೌಂಡೇಶನ್ ಅಧ್ಯಕ್ಷ ಹಾಗೂ ಬಿಜೆಪಿ ಅಲ್ಪಸಂಖ್ಯಾತ ಘಟಕ ಮುಖಂಡ ಅನಗವಾಡಿ ನಭೀ ನದಾಫ್ ತಿಳಿಸಿದರು.

ನವನಗರದ ಪತ್ರಿಕಾ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿತ್ರಕಲಾ ಶಿಬಿರದಲ್ಲಿ ಭಾಗವಹಿಸಲು ನೂರಕ್ಕೂ ಹೆಚ್ಚು ಕಲಾವಿದರು ಈಗಾಗಲೇ ನೋಂದಣಿ ಮಾಡಿಕೊಂಡಿದ್ದಾರೆ, ಇದೊಂದು ದೊಡ್ಡಮಟ್ಟದ ಕಾರ್ಯಕ್ರಮವಾಗಿದೆ ಎಂದು ಹೇಳಿದರು.

21ರಂದು ಬೆಳಿಗ್ಗೆ 10.30ಕ್ಕೆ ಮಾಜಿ ಶಾಸಕ ವೀರಣ್ಣ ಚರಂತಿಮಠ ಚಿತ್ರಕಲಾ ಶಿಬಿರವನ್ನು ಉದ್ಘಾಟಿಸುವರು. ಅಧ್ಯಕ್ಷತೆಯನ್ನು ನಮನ ಪೌಂಡೇಶನ್ ಅಧ್ಯಕ್ಷ ನಭಿ ನದಾಫ್ ವಹಿಸುವರು. ಮುಖ್ಯ ಅತಿಥಿಗಳಾಗಿ ಸಂಸದ ಪಿ.ಸಿ.ಗದ್ದಿಗೌಡರ, ರಾಜ್ಯ ಸಭೆ ಸದಸ್ಯ ನಾರಾಯಣಸಾ ಭಾಂಡಗೆ, ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ, ಹನಮಂತ ನಿರಾಣಿ, ಮಾಜಿ ಸಚಿವ ಮುರಗೇಶ ನಿರಾಣಿ, ಚಿತ್ರಕಲಾವಿದ ಬಸವರಾಜ ಗವಿಮಠ, ಪುಣೆಯ ರೈಜನಿ ಇಂಟರ್‌ನ್ಯಾಶನಲ್ ಸ್ಕೀಲ್‌ಟೆಕ್ ಉಪ ಕುಲಪತಿ ಡಾ.ಆರ್.ಡಿ.ಕರೇಡಕರ, ಪುಣೆಯ ಉಪನ್ಯಾಸಕ ಡಾ.ಅವಿನಾಶ ಕಾಟೇ ಭಾಗವಹಿಸುವರು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜ್ಯೋತಿಷ್ ಬಸಪ್ಪ ಕುರಿ, ಕಲಾವಿದ ಶಿವಪ್ಪ ಕರಿಗಾರ, ಸಮಾಜಸೇವಕ ಡಾ.ಸುರೇಶ ವಸ್ತ್ರದ, ಮುದ್ರಣದ ಶಿವಾನಂದ ಕಂಬಾರ, ಶಿಲ್ಪಕಲೆಯ ಅಲ್ಲಿಸಾಬ ನದಾಫ, ಆಶುಕವಿ ಗುರಮ್ಮ ಸಂಕೀನಮಠ, ಗೋಂದಳಿ ಪದ ಯಂಕಪ್ಪ ಸುಗತೇಕರ ಅವರಿಗೆ ಸನ್ಮಾನಿಸಿ ಗೌರವಿಸಲಾಗುವುದು ಎಂದು ಹೇಳಿದರು.

ಚಿತ್ರಕಲಾ ಪ್ರದರ್ಶನವನ್ನು ಫೆ.22ರಂದು ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಮಾಜಿ ಶಾಸಕ ದೊಡ್ಡನಗೌಡ ಪಾಟೀಲ ಉದ್ಘಾಟಿಸುವರು. ಸಮಾಜ ಸೇವಕ ಸುರೇಶ ವಸ್ತ್ರದ ವಹಿಸುವರು. ಮುಖ್ಯ ಅತಿಥಿಗಳಾಗಿ ಧರ್ಮದರ್ಶಿ ಪ್ರಭುಸ್ವಾಮಿ ಸರಗಣಾಚಾರಿ, ಡಾ.ಎಚ್.ಡಿ.ಪಾಟೀಲ ಆಗಮಿಸುವರು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸುರೇಶ ವಸ್ತ್ರದ, ಮುನ್ನಾ ಚಿಕ್ಕಾಲಗುಂಡಿ, ವಿಠ್ಠಲ ಇದ್ದರು.



ಕಾರ್ಮಿಕರಿಂದ ಶಾಸಕ ಜಗದೀಶ ಗುಡಗುಂಟಿಗೆ ಸನ್ಮಾನ

• **ಜಮಖಂಡಿ:** ಸರ್ಕಾರಿ ಆಸ್ಪತ್ರೆ ಗುತ್ತಿಗೆ ಆಧಾರಿತ ನೌಕರರು ಇತ್ತೀಚೆಗೆ ಆತ್ಮಹತ್ಯೆಗೆ ಪ್ರಯತ್ನಿಸಿದ್ದು, ಅವರ ಯೋಗಕ್ಷೇಮ ವಿಚಾರಿಸಿ ಅವರ ನೌಕರಿ ಮರಳಿ ಕೊಡಿಸುವಲ್ಲಿ ಸಫಲರಾದ ಹಿನ್ನೆಲೆ ಕಾರ್ಮಿಕರು ಶಾಸಕರ ಗೃಹ ಕಚೇರಿಯಲ್ಲಿ ಶಾಸಕ ಜಗದೀಶ ಗುಡಗುಂಟಿಯವರಿಗೆ ಸನ್ಮಾನ ಮಾಡಿದರು.

ನಂತರ ಮಾತನಾಡಿದ ಶಾಸಕ ಜಗದೀಶ ಗುಡಗುಂಟಿ, ಇಂತಹ ಘಟನೆಗಳು ಮತ್ತೆ ಆಗಬಾರದು. ಹಾಗೇನಾದರೂ ನಿಮಗೆ ತೊಂದರೆ ಯಾದರೆ ನಾವಿದ್ದೇವೆ. ದುಡುಕಬಾರ ದು ಆದರಿಂದ ಕುಟು ಂಬದ ಹೊಣೆ ಯಾರು. ಯಾರದೋ ಮಾತು ಕೇಳಿ ಬದಲಾವಣೆ ಮಾಡಿದ್ದು ಅಧಿಕಾರಿಗಳ ತಪ್ಪು. ಮೊದಲೇ ತಿಳಿದು ಮಾಡಬೇಕಿತ್ತು. ನೌಕರರನ್ನು ತೆಗೆಯಬಾರದಿತ್ತು ಮತ್ತೇ ಹೀಗಾಗದ ಹಾಗೆ ನೋಡುತ್ತೇವೆ ಎಂದರು.

ನೀವೂ ನಿಷ್ಟೆಯಿಂದ ಕಾರ್ಯ ಮಾಡಿ. ಕೆಲವೊಂದು ಜನರ ದೂರು ಇರಬಹುದು. ಬೇರೊಬ್ಬರ ಮಾತು ಕೇಳಿದವರನ್ನು ಬಿಟ್ಟು ನಿಮ್ಮ ಕೆಲಸ ಮಾಡಿ. ಇಲ್ಲಿ ಎಲ್ಲರನ್ನೂ ಸಮಾಧಾನ ಮಾಡುವದೇ ಸರಿಯಾಗಿದೆ. ಇಲ್ಲದಿ ದ್ದರೆ ವಿನಾಕಾರಣ ಗೊಂದಲ ಏರ್ಪಡು ತ್ತದೆ. ನಿಮ್ಮ ಕೆಲಸದಲ್ಲಿ ಮನಸ್ಸು ಕೊಟ್ಟು ಮಾಡಿ. ನಿಜವಾದ ಸಮಾಜ ಸೇವೆಯೇ ನಿಮ್ಮದಾಗಿದರ. ಜಿಲ್ಲೆ ಮತ್ತು ತಾಲೂಕು ಅಧಿಕಾರಿಗಳಿಗೂ ಸೂಚನೆ ನೀಡಿದ್ದೇನೆ ಮತ್ತೊಮ್ಮೆ ಹೀಗಾಗದ ಹಾಗೆ ನೋಡಿಕೊಳ್ಳಲು ತಿಳಿಸಿದೆ ಎಂದು ಹೇಳಿದರು. ಕಾರ್ಮಿಕರ ಮುಖಂಡ ವಿಜು ಕಾಂಬಳೆ ಮಾತನಾಡಿ, ನೌಕರಿಯಿಂದ ತೆಗೆದ ಮೇಲೆ ಈ ಕೃತ್ಯಕ್ಕೆ ಬಂದು ನಿಂತಿದ್ದೇವೆ. ಕುಟುಂಬದ ಸಮಸ್ಯೆಗೆ ಸಹ ಸ್ಪಂದಿಸದೇ ಇದು ನಡೆದು ಹೋಯಿತು. 25 ದಿನ ಕೆಲಸ ಮಾಡಿದ್ದರೂ ಹಾಜರಿ ಹಾಕಿಸಿಲ್ಲ. ತಾವು ನಮಗೆ ಸಹಾಯ ಸಹಕಾರ ನೀಡಿದ್ದೀರಿ ಎಂದು ಹೇಳಿದರು.



ಪ್ರವಚನ ಆಲಿಸುವುದರಿಂದ ಮನಸ್ಸಿಗೆ ನೆಮ್ಮದಿ: ನಿರಾಣಿ

• **ಬೀಳಗಿ:** ಮಠ-ಮಂದಿರಗಳಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳು ಮತ್ತು ಪ್ರವಚನಗಳನ್ನು ಆಲಿಸುವುದರಿಂದ ಹೊಸ ಚೈತನ್ಯ ಹಾಗೂ ನೆಮ್ಮದಿ ಲಭಿಸುತ್ತದೆ ಎಂದು ವಿಧಾನ ಪರಿಷತ್ ಸದಸ್ಯ ಎಚ್.ಆರ್.ನಿರಾಣಿ ಹೇಳಿದರು.

ಪಟ್ಟಣದ ಕಾಟಕರ ಓಣಿಯಲ್ಲಿ ನಡೆದ ಹುಚ್ಚೇಶ್ವರ ಜಾತ್ರಾ ಮಹೋತ್ಸವದ ನಿಮಿತ್ತ ಏರ್ಪಡಿಸಿದ್ದ ಹುಚ್ಚೇಶ್ವರ ಚರಿತಾಮೃತ ಪ್ರವಚನ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಮನಸ್ಸಿಗೆ ಶಾಂತಿ ದೊರಕಬೇಕಾದರೆ ಮಠ-ಮಂದಿರಗಳಂತಹ ಆಧ್ಯಾತ್ಮಿಕ ಕೇಂದ್ರಗಳೆ ಪ್ರಮುಖ. ಮಕ್ಕಳಿಗೆ ಕೇವಲ ಶಿಕ್ಷಣ ನೀಡುವುದಷ್ಟೇ ಸಾಲದು; ಅವರ ವ್ಯಕ್ತಿತ್ವದ ರೂಪುಗೊಳಿಸುವಿಕೆಯಲ್ಲಿ ಪಾಲಕರು ವಿಶೇಷ ಕಾಳಜಿ ವಹಿಸಬೇಕು. ಇಂದಿನ ಪರಿಸ್ಥಿತಿಯಲ್ಲಿ ಮಕ್ಕಳ ಕೈಯಲ್ಲಿ ಮೊಬೈಲ್ ನೀಡುವುದು ಸರಿಯಲ್ಲ, ಅದು ಅವರ ಮನೋವಿಕಾಸದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಎಚ್ಚರಿಸಿದರು.



ಶಿಕ್ಷಕರ ಪಾತ್ರ ಎಷ್ಟು ಮಹತ್ವದ್ದೋ, ಅಷ್ಟೇ ಮಹತ್ವ ತಂದೆ-ತಾಯಿಯದ್ದೂ ಆಗಿದೆ. ಸಂಸ್ಕಾರಯುತ ಶಿಕ್ಷಣ ನೀಡುವುದರ ಜೊತೆಗೆ ಮನೆಯಲ್ಲೇ ಉತ್ತಮ ಮೌಲ್ಯಗಳು ಬೆಳೆಯಬೇಕು. ತಂದೆ-ತಾಯಿ ಹೇಗೆ ನಡೆದುಕೊಳ್ಳುತ್ತಾರೋ, ಮಕ್ಕಳು ಕೂಡ ಅದೇ ರೀತಿಯಲ್ಲಿ ಬೆಳೆದು ಬರುತ್ತಾರೆ. ಮೊಬೈಲ್ ಹಾವಳಿಯಿಂದ ಒಳ್ಳೆಯ ಮಾತು ಕೇಳಲು ಮತ್ತು ಮಾತನಾಡಲು ಸಮಯ ಇಲ್ಲದಂತಾಗಿದೆ ಎಂದರು.

ಹುಚ್ಚೇಶ್ವರ ಮಠದ ಫಕೀರಯ್ಯಸ್ವಾಮೀಜಿ ಮಾತನಾಡಿ, ಈ ನಾಡು ಸರ್ವ ಜನಾಂಗದ ಶಾಂತಿಯ ತೋಟವಾಗಿರಬೇಕು ಎನ್ನುವುದು ಹುಚ್ಚೇಶ್ವರ ಶ್ರೀಗಳ ಆಶಯವಾಗಿತ್ತು. ಆ ದಿಶೆಯಲ್ಲಿ ಭಕ್ತರಲ್ಲಿ ಸಾಮರಸ್ಯ ಬೆಳೆಸುವಲ್ಲಿ, ಧರ್ಮ ಸಂವರ್ಧನೆ ಮಾಡುವಲ್ಲಿ ಹುಚ್ಚೇಶ್ವರ ಜಾತ್ರಾ ಮಹೋತ್ಸವ ಮಹತ್ವದ ಪಾತ್ರ ವಹಿಸುತ್ತಿದೆ ಎಂದರು. ಬೀಳಗಿ ಸೋಮಪ್ಪಯ್ಯನ ಮಠದ ಚೆನ್ನಬಸವ ಸ್ವಾಮೀಜಿ, ಮಾತೋಶ್ರೀ ಶಿವಶರಣೆ ನಾಗಮನಿ ಅಮ್ಮನವರು, ಹನಮಂತ ಮೆಳ್ಳಿಗೇರಿ, ಶಿಕ್ಷಕರಾದ ಗುರುರಾಜ ಲೂತಿ, ಎಂ.ಆರ್.ಕಲ್ಗುಡಿ, ವಿ.ಆರ್.ಪೂಜಾರಿ ಇದ್ದರು.

ನಾಟಕಗಳಿಂದ ಸಮಾಜಕ್ಕೆ ಉತ್ತಮ ಸಂದೇಶ

• **ಲೋಕಾಪುರ:** ನಾಟಕಗಳು ಸಮಾಜಕ್ಕೆ ಒಳ್ಳೆಯ ಸಂದೇಶ ನೀಡುತ್ತವೆ. ಮತ್ತು ರಂಗಭೂಮಿ ಮೂಲಕ ಸಮಾಜವು ಬೆಳಗಬೇಕಾಗಿದೆ ಎಂದು ಜ್ಞಾನೇಶ್ವರ ಮಠದ ಪೀಠಾಧಿಕಾರಿ ಬ್ರಹ್ಮಾನಂದ ಶ್ರೀಗಳು ಹೇಳಿದರು.

ಪಟ್ಟಣದಲ್ಲಿ ಲೋಕೇಶ್ವರ ಜಾತ್ರೆ ನಿಮಿತ್ತ ಹಮ್ಮಿಕೊಂಡ ಜ್ಞಾನೇಶ್ವರ ನಾಟ್ಯ ಸಂಘ ಲೋಕಾಪುರ, ಲೋಕೇಶ್ವರ ಸಾಂಸ್ಕೃತಿಕ ಕಲಾ ಅಭಿವೃದ್ಧಿ ಸಂಘ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರ ಸಹಯೋಗದಲ್ಲಿ ಹಮ್ಮಿಕೊಂಡ ನೇಗಿಲಿಗೆ ಸಿಂಗಾರ ರೈತನಿಗೆ ಬಂಗಾರ ಎಂಬ ನಾಟಕ ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿದ ಶ್ರೀಗಳು, ವೃತ್ತಿ ರಂಗಭೂಮಿ ನಾಟಕಗಳು ನಶಿಸಿ ಹೋಗುತ್ತಿರುವ ಇಂದಿನ ದಿನಗಳಲ್ಲಿ ನಾಟಕಗಳು ಪುನ: ಜೀವಂತಿಕೆ ಪಡೆದುಕೊಳ್ಳಬೇಕೆಂಬ ಸುದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಂಡಿದ್ದು ಸಂತಸ ತಂದಿದೆ ಎಂದರು.

ಬಿಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಶಿವಾನಂದ ಉದಪುಡಿ ಮಾತನಾಡಿ, ನಾಟಕಗಳು ನಮ್ಮ ಕಲೆ, ಸಂಸ್ಕೃತಿಯ ಪ್ರತೀಕವಾಗಿದ್ದು, ರಂಗಭೂಮಿ ಚಟುವಟಿಕೆಗಳಿಗೆ ಸಮಾಜ ಹಾಗೂ ಸರ್ಕಾರಗಳು ಹೆಚ್ಚಿನ ಪ್ರೋತ್ಸಾಹ ನೀಡಬೇಕು. ನಿರಂತರ ರಂಗಚಟುವಟಿಕೆಗಳಿಂದ ಉತ್ತಮ ಸಮಾಜದ ನಿರ್ಮಾಣ ಸಾಧ್ಯ ಎಂದರು.



ಹಿರಿಯ ಕಲಾವಿದ ಹಾಗೂ ಗಣಿ ಉದ್ಯಮಿ ಎಂ.ಎಂ.ವಿರಕ್ತಮಠ ಮಾತನಾಡಿ, ಸಮಾಜದಲ್ಲಿ ಉತ್ತಮ ವಾತಾವರಣ ನಿರ್ಮಿಸಲು ಸಂಗೀತ, ನಾಟಕ, ಮತ್ತು ಸಾಂಸ್ಕೃತಿಕ ಹಬ್ಬಗಳು ಪೂರಕವಾಗುತ್ತವೆ. ಯುವ ಪೀಳಿಗೆಯಿಂದ ನಾವು ಏನನ್ನಾದರೂ ನಿರೀಕ್ಷಿಸಬೇಕೆಂದರೆ ಮೊದಲು ಅವರನ್ನು ಸುಸಂಸ್ಕೃತರನ್ನಾಗಿ ರೂಪಿಸಬೇಕು ಎಂದು ತಿಳಿಸಿದರು.

ಮುಖಂಡರಾದ ಪಿಕೆಪಿಎಸ್ ಮಾಜಿ ಅಧ್ಯಕ್ಷ ಲಿಂಗಾನಂದ ಹಿರೇಮಠ, ಶಿವಪ್ಪ ಚೌಧರಿ, ಸುಭಾಸ ಗಸ್ತಿ, ಬಿ.ಬಿ.ಮಾಯಣ್ಣವರ, ರಮೇಶ ಕಂಬಾರ, ಸಿ.ಎಲ್.ಪಾಟೀಲ, ಡಾ.ಮಹೇಶ ಜಾಡಗೌಡರ, ವಿನೋದ ಘೋರ್ಪಡೆ, ಬಸಲಿಂಗಪ್ಪ ಮುದಕವಿ, ಬಸವಪ್ರಭು ಕಾತರಕಿ, ಸದಾಶಿವ ಉದಪುಡಿ, ಚನ್ನಯ್ಯ ಗಣಾಚಾರಿ, ದಾದಾಪೀರ ನಧಾಪ, ಪಾಂಡಪ್ಪ ಭಜಂತ್ರಿ, ಲೋಕಣ್ಣ ಗಣಾಚಾರಿ, ಸಂಘದ ಅಧ್ಯಕ್ಷ ಕೃಷ್ಣಾ ಭಜಂತ್ರಿ, ಕೆ.ಪಿ.ಯಾದವಾಡ ಇದ್ದರು.

ಫೆ.27ಕ್ಕೆ ಜೆಡಿಎಸ್ ಬೆಳ್ಳಿ ಮಹೋತ್ಸವ

• **ಬಾಗಲಕೋಟೆ:** ರಾಜ್ಯದಲ್ಲಿ ಪ್ರಾದೇಶಿಕ ಪಕ್ಷವೊಂದು 25 ವರ್ಷ ಪೂರೈಸಿರುವ ಏಕೈಕ ಪಕ್ಷವೆಂದರೆ ಜೆಡಿಎಸ್ ಪಕ್ಷವಾಗಿದ್ದು, ಪಕ್ಷದ ಬೆಳ್ಳಿ ಮಹೋತ್ಸವ ಕಾರ್ಯಕ್ರಮವನ್ನು ಫೆ.27ರಂದು ವಿಜಯಪುರದಲ್ಲಿ ಅದ್ದೂರಿಯಾಗಿ ಆಚರಿಸಲು ಸಿದ್ಧತೆ ಮಾಡಲಾಗಿದೆ ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ಹಣಮಂತ ಮಾವಿನಮರದ ತಿಳಿಸಿದರು.

ನವನಗರದ ಪತ್ರಿಕಾಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಜಯಪುರದಲ್ಲಿ ನಡೆಯುವ ಜೆಡಿಎಸ್ ಪಕ್ಷದ ಬೆಳ್ಳಿ ಮಹೋತ್ಸವ ಕಾರ್ಯಕ್ರಮದಲ್ಲಿ ಕಿತ್ತೂರ ಕರ್ನಾಟಕದ ಏಳು ಜಿಲ್ಲೆಯಿಂದ 1 ಲಕ್ಷ ಜನ ಕಾರ್ಯಕರ್ತರು, ಮುಖಂಡರು ಸೇರುವ ನಿರೀಕ್ಷೆ ಇದೆ. ಜಿಲ್ಲೆಯಿಂದ 10 ಸಾವಿರ ಕಾರ್ಯಕರ್ತರು ಭಾವಹಿಸಲಿದ್ದಾರೆ ಎಂದು ತಿಳಿಸಿದರು.

ಬೆಳ್ಳಿ ಮಹೋತ್ಸವ ಕಾರ್ಯಕ್ರಮದಲ್ಲಿ ಜೆಡಿಎಸ್ ವರಿಷ್ಠ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಪಕ್ಷದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಕೃಷ್ಣಾ ರೆಡ್ಡಿ, ಸುರೇಶ ಬಾಬು, ಸೇರಿದಂತೆ ರಾಜ್ಯದ ನಾಯಕರು ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.



ರಾಜ್ಯದ ಅಭಿವೃದ್ಧಿಯಲ್ಲಿ ಜೆಡಿಎಸ್ ಪಕ್ಷದ ಪಾತ್ರ ಪ್ರಮುಖವಿದೆ. ರಾಜ್ಯ ರಾಜಕೀಯದಲ್ಲಿ ಪಕ್ಷವು ಮಹತ್ವ ಪಡೆದುಕೊಂಡಿದೆ. ದೇವೇಗೌಡರು ಪಕ್ಷ ಕಟ್ಟಿ ಪ್ರಧಾನಿಯಾಗಿ, ಕುಮಾರಸ್ವಾಮಿ ಯವರು ರಾಜ್ಯದ ಮುಖ್ಯಮಂತ್ರಿಯಾಗಿ, ಕೇಂದ್ರ ಮಂತ್ರಿಗಳಾಗಿದ್ದಾರೆ. ಪಕ್ಷ ಸ್ಥಾಪನೆಯಾದ ದಿನದಿಂದಲೇ ರೈತರು, ಬಡವರು ಮತ್ತು ಸಾಮಾನ್ಯ ಜನರ ಪರವಾಗಿ ಕೆಲಸ ಮಾಡುತ್ತಾ ಬಂದಿದೆ ಎಂದು ಹೇಳಿದರು.

ಜೆಡಿಎಸ್ ಜಿಲ್ಲಾ ಕಾರ್ಯಾಧ್ಯಕ್ಷ ಸಲೀಂ ಮೋಮಿನ್, ಕೃಷ್ಣಾ ಪಾಟೀಲ, ಚನ್ನಬಸಪ್ಪ ಕತಾಟೆ, ಸುಭಾಸ ಲಗಳಿ, ಪ್ರಭುರಾಜ್ ಪಾಟೀಲ, ಹುಚ್ಚೇಶ ಕಂಬಾರ ಇದ್ದರು.

ಕುಂದುಕೊರತೆ ಆಲಿಸಿದ ಶಾಸಕ ಸಿದ್ದು ಸವದಿ

• **ಮಹಾಲಿಂಗಪುರ:** ಶಾಸಕ ಸಿದ್ದು ಸವದಿ ನಗರದ ಹುಲಕುಂದ ಓಣಿ, ಪೋಸ್ಟ್ ಓಣಿ, ಬ್ಯಾಳಿ ಓಣಿ, ಬರಗಿ ಓಣಿಗಳಲ್ಲಿ ಬುಧವಾರ ಕಾರ್ಯಕರ್ತರೊಂದಿಗೆ ಸಂಚರಿಸಿ ಸಾರ್ವಜನಿಕರ ಕುಂದುಕೊರತೆ ಆಲಿಸಿದರು.

ನಂತರ ಮಾತನಾಡಿದ ಶಾಸಕರು, ಕುಡಿಯುವ ನೀರು ಸರಿಯಾಗಿ ಬರುತ್ತಿಲ್ಲ, ಗಟಾರ ಸ್ವಚ್ಚತೆ ಇಲ್ಲ ಕೆಲವೊಂದು ಓಣಿಯಲ್ಲಿ ನಡೆದಾಡಲು ಪರದಾಡುವ ಪರಿಸ್ಥಿತಿ ಇದದ್ದು ಕಂಡು ಬಂತು, ಕೆಲವೊಂದಿಷ್ಟು ಜನ ತಮ್ಮ ಅವಶ್ಯಕತೆ ಮುಗಿದ ಮೇಲೆ ನೀರನ್ನು ಗಟಾರಕ್ಕೆ ಬಿಟ್ಟು ಮುಂದಿನವರಿಗೆ ನೀರು ಹೋಗಲಿ ಎನ್ನುವ ಕನಿಷ್ಠ ಮಾನವೀಯತೆ ಕಳೆದುಕೊಂಡಿದ್ದು ಕಂಡುಬಂದಿತು. ಸಾರ್ವಜನಿಕರು ಸಹಕಾರ ಮನೋಭಾವನೆ ಬೆಳೆಸಿ ಕೊಂಡು ತಮ್ಮ ಅವಶ್ಯಕತೆ ಮುಗಿದ ಮೇಲೆ ಮುಂದಿನವರಿಗೆ ಅನುಕೂಲ ಆಗುವಂತೆ ನಲ್ಲಿಗಳನ್ನು ಬಂದ ಮಾಡಿ ಸಹಕರಿಸಬೇಕು ಎಂದು ಹೇಳಿದರು.

ಅವಶ್ಯಕತೆ ಇಲ್ಲದ ಜಾಗೆಯಲ್ಲಿರುವ ನೀರಿನ ಟ್ಯಾಂಕಗಳನ್ನು ಅವಶ್ಯಕತೆ ಇರುವ ಕಡೆಗೆ ಸ್ಥಳಾಂತರಿಸಿ. ಮತ್ತು 24★7 ನೀರಿನ ಜೋಜನೆಯವರು ಪೈಪ್ ಅಳವಡಿಕೆ ಸಲುವಾಗಿ ಸಿಕ್ಕ ಸಿಕ್ಕಲ್ಲಿ ರಸ್ತೆ ಅಗೆದು ಹಾಗೆ ಬಿಟ್ಟಿದ್ದಾರೆ. ಇದರಿಂದ ರಸ್ತೆಯಲ್ಲಿ ಜನರಿಗೆ ತಿರುಗಾಡಲು ತೊಂದರೆಯಾಗುತ್ತದೆ ಕಾರಣ ಎಲ್ಲ ರಸ್ತೆಗಳನ್ನು ಸ್ವಚ್ಚಗೋಳಿಸುವಂತೆ ಸಂಭಂದ ಪಟ್ಟ ಅಧಿಕಾರಿಗೆ ಸೂಚಿಸಿದರು. ಮತ್ತು ನಗರದಲ್ಲಿ ಕುಡಿಯುವ ನೀರು ಮತ್ತು ಗಟಾರ ಸ್ವಚ್ಚವಾಗಿರುವಂತೆ ನೋಡಿಕೊಳ್ಳಲು ಮುಖ್ಯಾಧಿಕಾರಿಯವರಿಗೆ ತಿಳಿಸಿದರು.



ಬಿಜೆಪಿ ನಗರ ಘಟಕದ ಅಧ್ಯಕ್ಷ ಶಂಕರಗೌಡ ಪಾಟೀಲ, ಪುರಸಭೆ ಮುಖ್ಯಾಧಿಕಾರಿ ನಾಮದೇವ ಲಮಾಣಿ, ಮಾಜಿ ಸದಸ್ಯರಾದ ಶೇಖರ ಅಂಗಡಿ, ಚನ್ನಬಸು ಯರಗಟ್ಟಿ, ಮುಖಂಡರಾದ, ಶಿವಾನಂದ ಅಂಗಡಿ, ಈರಪ್ಪ ದಿನ್ನಿಮನಿ,ಮಲ್ಲು ದಲಾಲ, ಪ್ರಶಾಂತ ಮುಖ್ಯನ್ನವರ, ಮಹೇಶ ಜಿಡ್ಡಿಮನಿ, ರಾಮು ಪಾತ್ರೋಟ, ಪುರಸಭೆ ಸಿಬ್ಬಂದಿ, ಉಪ ಸಿಬ್ಬಂದಿ, ನೀರು ಸರಬುರಾಜ ವಿಭಾಗ, ಸ್ವಚ್ಚತಾ ಸಿಬ್ಬಂದಿ ಇದ್ದರು.

ಕಿರುಸುದ್ದಿ

ಇಂದಿನಿಂದ ಸ್ಮರಣೋತ್ಸವ

ಸಿಂದಗಿ: ಪಟ್ಟಣದ ಊರಿನ ಹಿರಿಯ ಮಠದ ಲಿಂ.ಶಾಂತವೀರ ಪಟ್ಟಾಧ್ಯಕ್ಷರ 46ನೇ ಸ್ಮರಣೋತ್ಸವ ಹಾಗೂ ಗದುಗಿನ ತೋಂಟದಾರ್ಯ ಮಠದ ಡಾ.ತೊಂಟದ ಸಿದ್ದಲಿಂಗ ಸ್ವಾಮಿಗಳ 8ನೇ ಗುರುಸ್ಮರಣೆ ಸಮಾರಂಭವು ಫೆ.20ರಿಂದ ಫೆ.27ರವರೆಗೆ ಪ್ರತಿದಿನ ಸಂಜೆ 7ಗಂಟೆಗೆ ಊರಿನ ಹಿರಿಯ ಮಠದಲ್ಲಿ ಜರುಗಲಿದೆ. ಫೆ.20ರಂದು ಜಂಜೆ 7'ಂಟೆಗೆ ಊರಿನ ಹಿರಿಯ ಮಠದ ಪೀಠಾಧ್ಯಕ್ಷ ಶಿವಾನಂದ ಶಿವಾಚಾರ್ಯರ ಅಧ್ಯಕ್ಷತೆಯಲ್ಲಿ ಪುರಾಣ ಪ್ರವಚನ ಉದ್ಘಾಟನೆ ನಡೆಯಲಿದೆ. ಫೆ.22ರಂದು ಭಾನುವಾರ ಬೆಳಗ್ಗೆ 10ಗಂಟೆಯಿಂದ ಮಧ್ಯಾಹ್ನ 4ಗಂಟೆಯವರೆಗೆ ನೇತ್ರ, ಎಲುಬು ಕೀಲು ಮತ್ತು ಚರ್ಮ ರೋಗಕ್ಕೆ ಸಂಬಂಧಿಸಿದ ಉಚಿತ ವೈದ್ಯಕೀಯ ತಪಾಸಣಾ ಶಿಬಿರ ನಡೆಯಲಿದೆ. ಫೆ.23ರಂದು ಸಂಜೆ 7ಗಂಟೆಗೆ ಶಿಕ್ಷಕ ಎಂ.ಬಿ.ಅಲ್ದಿ ಅವರು ರಚಿಸಿದ ಲಿಂ.ಶಾಂತವೀರ ಪಟ್ಟಾಧ್ಯಕ್ಷರ ಧ್ವನಿ ಸುರಳಿ ಬಿಡುಗಡೆ ಹಾಗೂ ಗಾನ-ಕುಂಚ-ನೃತ್ಯ ಸಮಾರಂಭ ನೆರವೇರಲಿದೆ. ಫೆ.24 ರಂದು ಸಂಜೆ 7ಗಂಟೆಗೆ ಡಾ.ಸೀಮಾ ವಾರದ ಮತ್ತು ನಾಗರತ್ನ ಮನಗೂಳಿ ಅವರು ಮಹಿಳಾ ಜಾಗೃತಿಯ ಬಗ್ಗೆ ಉಪನ್ಯಾಸ ನೀಡಲಿದ್ದಾರೆ. ಫೆ.25ರಂದು ಶಿವಾನುಭವ ಮಂಟಪದ ನೂತನ ಪ್ರಾಂಗಣದ ಉದ್ಘಾಟನೆಯನ್ನು ಶಾಸಕ ಅಶೋಕ ಮನಗೂಳಿ ಉದ್ಘಾಟನೆ ನೆರವೇರಿಸಲಿದ್ದಾರೆ. ಅಂದು ಸಿಂದಗಿಯ ಆದರ್ಶ ಶಿಕ್ಷಕ ಎಚ್.ಟಿ.ಕುಲಕರ್ಣಿ ಗುರುಗಳಿಗೆ ಶಾಂತಸಿರಿ ಪ್ರಶಸ್ತಿ ಪ್ರದಾನ ನೆರವೇರಲಿದೆ. ಫೆ.26 ರಂದು ಬೆಳಗ್ಗೆ 7ಗಂಟೆಗೆ ಲಿಂ.ಶಾಂತವೀರ ಪಟ್ಟಾಧ್ಯಕ್ಷರ ರಜತ ಮೂರ್ತಿಗೆ ರುದ್ರಾಭಿಷೇಕ ಹಾಗೂ ರಾಜೋಪಚಾರ ಪೂಜೆ ನಡೆಯಲಿದೆ. ಫೆ.27ರಂದು ಬೆಳಗ್ಗೆ 8 ಗಂಟೆಗೆ ಲಿಂ.ಶಾಂತವೀರ ಪಟ್ಟಾಧ್ಯಕ್ಷರ ರಜತ ಮೂರ್ತಿಯ ಮೆರವಣಿಗೆ ಜರುಗಲಿದೆ. ಅಂದು ಸಂಜೆ 7ಗಂಟೆಗೆ ನಾಡಿನ ಅನೇಕ ಹರಗುರು ಚರಮೂರ್ತಿಗಳ ಸಾನಿಧ್ಯದಲ್ಲಿ ಮಹಾ ಮಂಗಲೋತ್ಸವ ಜರುಗಲಿದೆ ಎಂದು ಶ್ರೀಮಠ ಪ್ರಕಟಣೆಯಲ್ಲಿ ತಿಳಿಸಿದೆ.

ಉಚಿತ ಶಿಬಿರ ನಾಳೆ

ಇಂಡಿ: ಲೈನ್ಸ್ ಸೇವಾ ಸಂಸ್ಥೆ ಇಂಡಿ, ಜಿಲ್ಲಾ ಅಂಧತ್ವ ನಿವಾರಣಾ ಸಂಸ್ಥೆ ವಿಜಯಪುರ, ಎಂ.ಎಂ.ಜೋಶಿ ನೇತ್ರ ವಿಜ್ಞಾನ ಸಂಸ್ಥೆ ಹುಬ್ಬಳ್ಳಿ ಮತ್ತು ತಾಲೂಕು ಆಸ್ಪತ್ರೆ ಇಂಡಿ ಸಹಯೋಗದಲ್ಲಿ ಫೆ21.ರಂದು ಉಚಿತ ನೇತ್ರ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಲೈನ್ಸ್ ಸೇವಾ ಸಂಸ್ಥೆಯ ಅಧ್ಯಕ್ಷ ನಿವೃತ್ತ ಪ್ರಾಚಾರ್ಯ ಐ.ಬಿ.ಸುರಪುರ ತಿಳಿಸಿದ್ದಾರೆ. ಶಿಬಿರವು ನಗರದ ಸರ್ಕಾರಿ ಆಸ್ಪತ್ರೆಯಲ್ಲಿ ಬೆಳಗ್ಗೆ 9ರಿಂದ 1 ಗಂಟೆವರೆಗೆ ನಡೆಯುವುದು. ಶಿಬಿರದಲ್ಲಿ ಉಚಿತ ಕಣ್ಣಿನ ತಪಾಸಣೆ ಮತ್ತು ಶಸ್ತ್ರ ಚಿಕಿತ್ಸೆ ಲೆನ್ಸ್ ಅಳವಡಿಕೆ ಮಾಡುವರು. ಶಿಬಿರದಲ್ಲಿ ತಾಲೂಕು ಆರೋಗ್ಯ ಅಧಿಕಾರಿ ಡಾ.ರಾಜೇಶ ಕೋಳೆಕರ, ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿ ಆರ್.ಎಸ್.ಇಂಗಳೆ ಭಾಗವಹಿಸುವರು. ಹೆಸರು ನೊಂದಾಯಿಸುವವರು ಚಂದ್ರಶೇಖರ ಶೆಟ್ಟಿ 9448012924 ಗೆ ಸಂಪರ್ಕಿಸಲು ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯ ನಾಳೆ

ಮುದ್ದೇಬಿಹಾಳ: ಜಿಲ್ಲೆಯ ಬಾಗೇವಾಡಿ, ಮುದ್ದೇಬಿಹಾಳ ಹಾಗೂ ತಾಳಿಕೋಟಿ ಭಾಗದ ಹೆಸ್ಕಾಂನ 11 ಮಾರ್ಗ ಘಟಕಗಳ ವಿದ್ಯುತ್ ಕೇಂದ್ರಗಳ ಮಾಸಿಕ ನಿರ್ವಹಣೆ ಕೆಲಸದ ಪ್ರಯುಕ್ತ ಫೆ.21ರಂದು ಶನಿವಾರ ವಿದ್ಯುತ್ ಪೂರೈಕೆಯಲ್ಲಿ ಅಡಚಣೆ ಉಂಟಾಗಲಿದೆ ಎಂದು ಇಲಾಖೆಯ ಪ್ರಕಟಣೆ ತಿಳಿಸಿದೆ. ಈ ಪ್ರಮುಖ ಬಾಗೇವಾಡಿ ಹೊರತುಪಡಿಸಿ ಎರಡು ತಾಲೂಕು ಮುಖ್ಯ ಕೇಂದ್ರಗಳಲ್ಲಿ ವಿದ್ಯುತ್ ವ್ಯವಸ್ಥೆಯ ಉಂಟಾಗುವುದು ಅಲ್ಲದೆ ಉಪ ಕೇಂದ್ರಗಳಾದ ಬಸರಕೋಡ, ಹುಲ್ಲೂರ, ಕೋಳೂರು, ಹಿರೇಮುರಾಳ, ವನಹಳ್ಳಿ, ದವಳಗಿ, ತಂಗಡಗಿ, ನಾಲತವಾಡ ಹಾಗೂ ಬಾಗೇವಾಡಿ ತಾಲೂಕಿನ ಕಣಕಾಲ, ಅಸ್ಕಿ, ಬಂಟನೂರು ಉಪ ಕೇಂದ್ರಗಳಲ್ಲಿ ಕಾಮಗಾರಿ ನಿಮಿತ್ತ ಮಾರ್ಗ ಮುಕ್ತತೆ ಅವಶ್ಯಕತೆ ಇರುವುದರಿಂದ ಗ್ರಾಹಕರು ಸಹಕರಿಸಬೇಕು ಎಂದು ಇಲಾಖೆ ಪ್ರಕಟಣೆ ತಿಳಿಸಿದೆ.

ನಾಳೆ ಕಾರ್ಯಾಗಾರ

ಕೊಲ್ಹಾರ: ವಿಜಯಪುರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಫೆ.21ರಂದು ಶನಿವಾರ ಬೆಳಗ್ಗೆ 11 ಗಂಟೆಗೆ ಪಂಚ ಗ್ಯಾರಂಟಿ ಅನುಷ್ಠಾನ ಕಾರ್ಯಾಗಾರ ಮತ್ತು ಗ್ಯಾರಂಟಿ ಉತ್ಸವ, ಪ್ರಗತಿ ಪರಿಶೀಲನೆ ಹಾಗೂ ಆರ್ಥಿಕ ತಜ್ಞರಿಂದ ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಾಲ್ಲೂಕು ಪಂಚ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಸಂತೋಷ ಗಣಾಚಾರಿ ಹೇಳಿದರು. ಪಟ್ಟಣದಲ್ಲಿ ಗುರುವಾರ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಕುರಿತು ಕಾರ್ಯಾಗಾರ ಮತ್ತು ಗ್ಯಾರಂಟಿ ಉತ್ಸವ, ಪ್ರಗತಿ ಪರಿಶೀಲನಾ ಸಭೆ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಸಚಿವರಾದ ಎಂ.ಬಿ.ಪಾಟೀಲ, ಶಿವಾನಂದ ಎಸ್ ಪಾಟೀಲ, ರಾಜ್ಯ ಪಂಚ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರ ರಾಜ್ಯಾಧ್ಯಕ್ಷ ಎಚ್.ಎಂ.ರೇವಣ್ಣ, ಜಿಲ್ಲೆಯ ಶಾಸಕರು, ನಿಗಮ ಮಂಡಳಿಗಳ ಅಧ್ಯಕ್ಷರು ಹಾಗೂ ಎಲ್ಲಾ ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷರು ಪದಾಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಪಾಲ್ಗೊಳ್ಳುವರು.



ಕೊಲ್ಹಾರ: ಭಾರತೀಯ ಜನತಾ ಪಾರ್ಟಿ ಬಸವನಬಾಗೇವಡಿ ಮಂಡಲದಿಂದ ಸಮೀಪದ ಅಂಗಡಗೇರಿ ಗ್ರಾಮದ ಪವಾಡ ಬಸವೇಶ್ವರ ಮಠದಲ್ಲಿ ನಡೆದ ಕಾರ್ಯಕರ್ತರ ಸಂಘಟನಾತ್ಮಕ ಸಭೆ ಮತ್ತು ಬಿಎಲ್‌ಎ-2 ಗಳ ಕಾರ್ಯಾಗಾರ ಹಾಗೂ ಮತದಾರರ ಪಟ್ಟಿ ಪರಿಷ್ಕರಣೆ ಸಭೆಯಲ್ಲಿ ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಅವರನ್ನು ಸನ್ಮಾನಿಸಲಾಯಿತು. ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ, ಜಿಲ್ಲಾ ಬಿಜೆಪಿ ಅಧ್ಯಕ್ಷ ಗುರಲಿಂಗಪ್ಪ ಅಂಗಡಿ, ಬಿಎಲ್‌ಎ-1 ಚಂದ್ರಶೇಖರ ಬೆಳ್ಳುಬ್ಬಿ, ಮಂಡಲ ಅಧ್ಯಕ್ಷ ಸಿದ್ದರಾಮ ಕಾಖಂಡಕಿ, ಮಲ್ಲಿಕಾರ್ಜುನ ದೇವರಮನಿ, ಪ್ರಶಾಂತ ಪವಾರ್ ವಿಠಲ ಕುರುಬರದಿನ್ನಿ, ಶಾಂತಾ ಬೀಳಗಿ ಕಾರ್ಯಕರ್ತರು ಉಪಸ್ಥಿತರಿದ್ದರು.

ಸಹಸ್ರಫಣಿ ಪಾರ್ಶ್ವನಾಥ ಮಾರ್ಗ ಲೋಕಾರ್ಪಣೆ

ವಿಜಯಪುರ: ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು, ಲೋಕೋಪಯೋಗಿ ಇಲಾಖೆಯ ಎಸ್‌ಎಚ್‌ಡಿಪಿ ಯೋಜನೆಯಡಿ ಮಂಜೂರಿಸಿದ 10 ಕೋಟಿ ರೂ. ಅನುದಾನದಲ್ಲಿ ಸೊಲ್ಲಾಪುರ ರಸ್ತೆಯಿಂದ ಇಟ್ಟಂಗಿಹಾಳ ಹೋಗುವ ರಿಂಗ್ ರಸ್ತೆ ವರೆಗೆ ಕೇವಲ 6 ತಿಂಗಳಲ್ಲಿ ಅಭಿವೃದ್ಧಿ ಪಡಿಸಲಾದ ಸಿಸಿ ರಸ್ತೆ 1008 ಸಹಸ್ರಫಣಿ ಪಾರ್ಶ್ವನಾಥ ಮಾರ್ಗವನ್ನು ಲೋಕಾರ್ಪಣೆಗೊಳಿಸಿದರು. 2 ಕೋಟಿ ರೂ. ಮೊತ್ತದಲ್ಲಿ ವಾರ್ಡ್ ನಂ.9ರಲ್ಲಿ ಬರುವ ಸರಾಫ್ ಬಜಾರದ ಕಪಿಲ್ ಕಲೆಕ್ಷನ್‌ದಿಂದ ರಾಮಮಂದಿರ ವರೆಗೆ ಡೆಕ್ಟ್, ಫುಟ್‌ಪಾತ್ ಮಾದರಿ ದೀಪ ಅಳವಡಿಸಿ, ಸಿಸಿ ರಸ್ತೆ ಅಭಿವೃದ್ಧಿ ಪಡಿಸುವ ಕಾಮಗಾರಿಗೆ ಕಪಿಲ್ ಕಲೆಕ್ಷನ್ ಹತ್ತಿರ ಭೂಮಿಪೂಜೆ ನೆರವೇರಿಸಿ, ನಂತರ 2 ಕೋಟಿ ರೂ. ಮೊತ್ತದಲ್ಲಿ ವಾರ್ಡ್ ನಂ.9ರಲ್ಲಿ ಬರುವ ರಾಮಮಂದಿರ ದಿಂದ ಮಠಪತಿ ಗಲ್ಲಿ ಕ್ರಾಸ್ ವರೆಗೆ ಡೆಕ್ಟ್, ಫುಟ ಪಾತ್, ಮಾದರಿ ದೀಪ ಅಳವಡಿಸಿ, ಸಿಸಿ ರಸ್ತೆ ಅಭಿವೃದ್ಧಿ ಪಡಿಸುವ ಕಾಮಗಾರಿಗೆ ಶ್ರೀರಾಮ ಮಂದಿರ ಹತ್ತಿರ ಭೂಮಿಪೂಜೆ ನೆರವೇರಿಸಿದರು. ಭೂಮಿಪೂಜೆ ವೇಳೆ ಜಮಾಯಿಸಿದ ಅಲ್ಲಿನ ಸ್ಥಳೀಯ ನಾಗರಿಕರಿಂದ ಅಹವಾಲು ಆಲಿಸಿದರು. ಪಾಲಿಕೆ ಮೇಯರ್ ಎಂ.ಎಸ್.ಕರಡಿ, ಸದಸ್ಯರಾದ ರಾಜಶೇಖರ ಮಗಿಮಠ, ರಾಹುಲ್ ಜಾಧವ, ಪ್ರೇಮಾನಂದ ಬಿರಾದಾರ, ವಿಠ್ಠಲ ಹೊಸಪೇಟ, ರಾಜಶೇಖರ ಕುರಿಯವರ, ಮಳುಗೌಡ ಬಿರಾದಾರ, ಸಿದ್ದೇಶ್ವರ ಸಹಕಾರಿ ಬ್ಯಾಂಕ್ ನಿರ್ದೇಶಕ ಗುರುಪಾದಯ್ಯ ಗಚ್ಚಿನಮಠ, ಸಾಯಿಬಣ್ಣ ಭೋವಿ, ಶೀತಲಕುಮಾರ್ ಓಗಿ, ಪಾರೀಶ ಶಿರಹಟ್ಟಿ, ರಾಜಶೇಖರ ಭಜಂತ್ರಿ, ವಿಠ್ಠಲ ನಡುವಿನಕೇರಿ, ನಾಗರಾಜ ಮುಳವಾಡ, ಸಂತೋಷ ಕವಟೇಕರ ಇದ್ದರು.



ವಿಜಯಪುರ: ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು, ಲೋಕೋಪಯೋಗಿ ಇಲಾಖೆಯ ಎಸ್‌ಎಚ್‌ಡಿಪಿ ಯೋಜನೆಯಡಿ ಮಂಜೂರಿಸಿದ 10 ಕೋಟಿ ರೂ. ಅನುದಾನದಲ್ಲಿ ಸೊಲ್ಲಾಪುರ ರಸ್ತೆಯಿಂದ ಇಟ್ಟಂಗಿಹಾಳ ಹೋಗುವ ರಿಂಗ್ ರಸ್ತೆವರೆಗೆ ಕೇವಲ 6 ತಿಂಗಳಲ್ಲಿ ಅಭಿವೃದ್ಧಿಪಡಿಸಲಾದ ಸಿಸಿ ರಸ್ತೆ 1008 ಸಹಸ್ರಫಣಿ ಪಾರ್ಶ್ವನಾಥ ಮಾರ್ಗ ಲೋಕಾರ್ಪಣೆಗೊಳಿಸಿದರು.

ಬಸವನಬಾಗೇವಾಡಿ ತಾಲೂಕಿಗೆ ಜಿಲ್ಲಾಧಿಕಾರಿ ಡಾ.ಆನಂದ ಕೆ. ಭೇಟಿ

ವಿವಿಧ ಕಾಮಗಾರಿ ಪರಿಶೀಲನೆ

ವಿಜಯಪುರ: ಜಿಲ್ಲಾಧಿಕಾರಿ ಡಾ.ಆನಂದ ಕೆ. ಅವರು ಬಸವನಬಾಗೇವಾಡಿ ತಾಲೂಕಿನ ವಿವಿಧ ಕಚೇರಿ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ತಾಲೂಕಿನ ಆಡಳಿತ ಸೌಧಕ್ಕೆ ಭೇಟಿ ನೀಡಿ ತಹಶೀಲ್ದಾರ್ ಕಾರ್ಯಾಲಯದ ಪ್ರಗತಿ ಪರಿಶೀಲನೆ ನಡೆಸಿದ ಅವರು, ಕಡತಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಹಾಗೂ ಸಾರ್ವಜನಿಕರೊಂದಿಗೆ ಸೌಜನ್ಯಯುತವಾಗಿ ನಡೆದುಕೊಳ್ಳುವಂತೆ ಎಲ್ಲ ಸಿಬ್ಬಂದಿಗಳಿಗೆ ಸೂಕ್ತ ಸೂಚನೆಗಳನ್ನು ನೀಡಿದರು.

ಕಂದಾಯ ಇಲಾಖೆಯ ಭೂ ಸುರಕ್ಷಾ ಕಾರ್ಯದ ಆಧುನಿಕ ಅಭಿಲೇಖಾಲಯಕ್ಕೆ ಭೇಟಿ ನೀಡಿ ಕಡತ-ವಹಿಗಳ ಸ್ಕ್ಯಾನಿಂಗ್ ಅಪಲೋಡಿಂಗ್, ಡಾಟಾ ಎಂಟ್ರಿ ಹಾಗೂ ಶಿರಸ್ತೇದಾರರ ಅನುಮೋದನೆ ಪ್ರಗತಿ ವಿವರ, ಡಿಜಿಟಲ್ ದಾಖಲೆಗಳ ವಿತರಣೆಯ ಕುರಿತು ಪರಿಶೀಲಿಸಿ ಸಾರ್ವಜನಿಕರಿಗೆ ಅನುಕೂಲಕರವಾಗುವ ದೃಷ್ಟಿಯಿಂದ ಎಲ್ಲ ಡಾಟಾ ಎಂಟ್ರಿ ಆಪರೇಟರಗಳಿಗೆ ಪ್ರತಿದಿನ 15000 - 20000 ಪುಟಗಳ ಸ್ಕ್ಯಾನಿಂಗ್ ಕಾರ್ಯ ನಿರ್ವಹಿಸುವಂತೆ ಸೂಚಿಸಿದರು. ಸ್ಕ್ಯಾನಿಂಗ್ ಕಾರ್ಯವನ್ನು ಮಾ. 31, 2026ರೊಳಗಾಗಿ ಪೂರ್ಣಗೊಳಿಸಲು ನಿರ್ದೇಶನ ನೀಡಿದರು.

ಬಸವನಬಾಗೇವಾಡಿ ಪಟ್ಟಣದಲ್ಲಿರುವ ಮೆಗಾ ಮಾರುಕಟ್ಟೆಗೆ ಭೇಟಿ ನೀಡಿದ ಜಿಲ್ಲಾಧಿಕಾರಿಗಳು ಮೆಗಾ ಮಾರುಕಟ್ಟೆಯಲ್ಲಿ ಇನ್ನೂ ಖಾಲಿ ಉಳಿದಿರುವ 54 ಅಂಗಡಿ ಮುಂಗಟ್ಟುಗಳ ಹರಾಜು ಪ್ರಕ್ರಿಯ ತ್ವರಿತವಾಗಿ ಮಾಡಲು ಹಾಗೂ ಸ್ವಚ್ಛತೆಗೆ ಆದ್ಯತೆಯನ್ನು ನೀಡಲು ಸಹ ತಿಳಿಸಿದರು.



ಇಂಗಳೇಶ್ವರ ರಸ್ತೆಯ ಮಾರ್ಗವಾಗಿ ನಿರ್ಮಿಸಲಾದ ಗುಂಪು ಮನೆಗಳ ಕಾಮಗಾರಿಯನ್ನು ವೀಕ್ಷಣೆ ಮಾಡಿ ಪುರಸಭೆಯ ಅಧಿಕಾರಿಗಳಿಗೆ ಕೂಡಲೇ ಈ ಮನೆಗಳಿಗೆ ಮೂಲ ಸೌಕರ್ಯಗಳನ್ನು ಕಲ್ಪಿಸಿ 500 ಮನೆಗಳ ಪೈಕಿ 109 ಮನೆಗಳ ಫಲಾನುಭವಿಗಳು ಈಗಾಗಲೇ ಫಲಾನುಭವಿಯ ವಂತಿಕೆಯ ಮೊತ್ತ ಭರಿಸಿರುವುದರಿಂದ ಅವರಿಗೆ ಮನೆಗಳನ್ನು ಹಸ್ತಾಂತರಿಸಲು ಸೂಚನೆ ನೀಡಿದರು.

ನಂತರ ನಂದಿ ಮಾರುಕಟ್ಟೆ, ಬಸವನಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಿಸುತ್ತಿರುವ ಮಂಗಲ ಕಾರ್ಯಾಲಯ, ಗಾಂಧಿನಗರಕ್ಕೆ ಹೊಂದಿಕೊಂಡಿರುವ ಶಾದಿಮಹಲ್ ಕಾಮಗಾರಿಯನ್ನು ಪರಿಶೀಲನೆ ಮಾಡಿ, ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಸೂಚನೆ ನೀಡಿದರು.

ನಂತರ ಮನಗೂಳಿಗೆ ಭೇಟಿ ನೀಡಿ ಮನಗೂಳಿಯ ಸರ್ಕಾರಿ ಡಿಗ್ರಿ ಕಾಲೇಜಿನಲ್ಲಿ ಕೈಗೊಳ್ಳಲಾದ ಆಟದ ಮೈದಾನದ ಕಾಮಗಾರಿ ಪರಿಶೀಲಿಸಿ, ಚಿಕ್ಕನೀರಾವರಿ ಇಲಾಖೆಯಿಂದ ಕೆರೆ ಅಭಿವೃದ್ಧಿ ಪಡಿಸುತ್ತಿರುವ ಕಾಮಗಾರಿಯನ್ನು ಕೂಡಲೇ ಮುಗಿಸಲು ಸೂಚನೆ ನೀಡಿದರು. ಮನಗೂಳಿಯ ಪಟ್ಟಣ ಪಂಚಾಯತಿ ಅಧಿಕಾರಿಗಳಿಗೆ ಮನಗೂಳಿ ಗ್ರಾಮದಲ್ಲಿನ ಚರಂಡಿಗಳ ಸ್ವಚ್ಛತೆಗೆ ಕ್ರಮಕ್ಕಾಗಿ ನಿರ್ದೇಶನ ನೀಡಿದರು.

ಬಸವನಬಾಗೇವಾಡಿ ತಹಶೀಲ್ದಾರ್ ವೈ.ಎಸ್. ಸೋಮನಕಟ್ಟೆ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಿ.ಎ.ಸೌದಾಗರ, ಎಇಇ ವಿಲಾಸ ರಾಠೋಡ, ಪುರಸಭೆಯ ಕಚೇರಿ ವ್ಯವಸ್ಥಾಪಕ ಸುರೇಶ ಬಾಗೇವಾಡಿ, ಪುರಸಭೆ ಕಂದಾಯ ಅಧಿಕಾರಿ ಶಬ್ಬಿರ್ ರೇವೂರಕರ, ಆರೋಗ್ಯ ನಿರೀಕ್ಷಕ ಮಹೇಶ ಹಿರೇಮಠ, ಕಂದಾಯ ನಿರೀಕ್ಷಕ ಸಿದ್ದು ಶಿರಶ್ಯಾಡ ಇದ್ದರು.

ಸೈನಿಕರ ಹೋರಾಟದ ಮನೋಭಾವ ಪ್ರತಿಯೊಬ್ಬರಲ್ಲೂ ಬರಲಿ: ನಾಯಕ

ಮುದ್ದೇಬಿಹಾಳ: ದೇಶದ ಯುವ ಜನತೆ ಉದ್ಯೋಗ ಕೈಗೊಳ್ಳುವ ಮೊದಲು ಸೈನಿಕ ತರಬೇತಿ ಕಡ್ಡಾಯ ಮಾಡಬೇಕು. ಸೈನಿಕರ ಧೈರ್ಯ, ತ್ಯಾಗ, ಹೋರಾಟದ ಮನೋಭಾವ ಪ್ರತಿಯೊಬ್ಬರಲ್ಲೂ ಬರಬೇಕು ಅಂದಾಗ ಸೈನಿಕರ ನಿಜವಾದ ಕಷ್ಟ ಸುಖದ ಅರಿವು ಆಗುತ್ತದೆ ಎಂದು ಜಲಸೇನಾ ನಿವೃತ್ತ ಸೈನಿಕ ಸತೀಶ ನಾಯಕ್ ಹೇಳಿದರು.

ತಾಲೂಕಿನ ಜಟ್ಟಗಿ ಗ್ರಾಮದ ಸತೀಶ ರಾಥೋಡ್ ಜಲ ಸೇನಾ ಸೇವೆಯನ್ನು ಪೂರ್ಣಗೊಳಿಸಿ ನಿವೃತ್ತಿ ಹೊಂದಿದ ಪ್ರಯುಕ್ತ ಪತ್ನಿ ಸವಿತಾ ರಾಥೋಡ್ ದಂಪತಿಗಳಿಗೆ ತೆರೆದ ವಾಹನದಲ್ಲಿ ಮೆರವಣಿಗೆ ಹಾಗೂ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು. ಸೈನಿಕರ ತ್ಯಾಗದಲ್ಲಿ ಕುಟುಂಬದ ಸಮಾಜದ ಹಾಗೂ ದೇಶದ ಪ್ರಗತಿ ಇರುತ್ತದೆ. ಸೈನಿಕರು ದೇಶವನ್ನು ಕಾಯುವ ನಿಜವಾದ ನಾಯಕರು. ಸಮುದ್ರದ ಆಳದಲ್ಲಿ 30 ಕೆಜಿ ಒತ್ತಡ ಇರುವ ಪರಿಸರದಲ್ಲಿ, ಆಳದ ಗಂಡಾಂತರಗಳನ್ನು ಎದುರಿಸಿ ದೇಶಕ್ಕೆ ಭದ್ರತೆ ನೀಡುವ ಕೆಲಸವನ್ನು ನಾವು ಮಾಡುತ್ತೇವೆ. ನೀವು ಮಾಡಿದ ಸನ್ಮಾನ ನನ್ನಲ್ಲಿ ಸಾರ್ಥಕತೆ ಮೂಡಿಸಿದೆ ಎಂದರು.

ತಾಲೂಕು ದಂಡಾಧಿಕಾರಿ ಕೀರ್ತಿ ಚಾಲಕ ಮಾತನಾಡಿ, ಯುವಕರು ಪರಿಶ್ರಮದಿಂದ ದೇಶ ಸೇವೆ ಮಾಡಬೇಕು ಎಂದು ಮುಂದಾದರೆ ರಾಷ್ಟಕ್ಕೆ ಉಜ್ವಲವಾದ ಭವಿಷ್ಯವಿದೆ. ಅವರಲ್ಲಿರುವ ಉತ್ಸಾಹ ಹಾಗೂ ದೇಶಪ್ರೇಮ ದೇಶದ ಹಾಗೂ ವ್ಯಕ್ತಿಗತ ಕುಟುಂಬದ ಉದ್ಧಾರ ಮಾಡಬಲ್ಲದು ಎಂದು ಹೇಳಿದರು.

ಹೊಸ ಮಠದ ಅಮರೇಶ್ವರ ದೇವರು ಸಾನಿಧ್ಯ ವಹಿಸಿದ್ದರು. ಕಾರ್ಗಿಲ್ ಸೈನಿಕ ಮೈದಾನದ ಸಮಿತಿಯ ಅಧ್ಯಕ್ಷ ಶ್ರೀಕಾಂತ ಹಿರೇಮಠ, ಮುನ್ನಾಧಣಿ ನಾಡಗೌಡ, ಸೋಮನಗೌಡ ಪಾಟೀಲ್, ಕಾಶಿಬಾಯಿ ರಾಂಪುರ ಇದ್ದರು. ಉದಯ ರಾಯಚೂರು, ಬಸಯ್ಯ ನಂದಿಕೇಶ್ವರಮಠ, ಸಂತೋಷ್ ಬಿದರಕುಂದಿ, ರವಿ ನಾಲತವಾಡ, ರಾಚಯ್ಯ ಹಿರೇಮಠ, ಚಂದ್ರು ಕಲಾಲ, ರಾಜು ಬಳ್ಳೊಳ್ಳಿ ಸಂಗಮ್ಮ ದೇವರಳ್ಳಿ ಇದ್ದರು. ಟಿ.ಡಿ ರಾಠೋಡ್ ನಿರ್ವಹಣೆ, ಸಂಗಮೇಶ ಶಿವಣಗಿ ಸಂಗೀತ ಸೇವೆ ನೀಡಿದರು.



ಶಿವಾಜಿ ಮಾತೃಪ್ರೇಮ ಅನುಸರಿಸಿ: ಬಂಟನೂರ

ತಾಳಿಕೋಟೆ: ಅತ್ಯುತ್ತಮ ಹಾಗೂ ಪ್ರಬುದ್ಧ ಆಡಳಿತಗಾರ ಎಂದೆನಿಸಿದ ಮರಾಠ ಸಾಮ್ರಾಜ್ಯ ಸಂಸ್ಥಾಪಕ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಆಚರಣೆಯನ್ನು ಖಾಸ್ಗತೇಶ್ವರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಐಕ್ಯೂಎಸಿ ಹಾಗೂ ಇತಿಹಾಸ ವಿಭಾಗದ ಅಡಿಯಲ್ಲಿ ಆಚರಿಸಲಾಯಿತು. ಶಿವಾಜಿ ಮಹಾರಾಜರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು.

ಬಳಿಕ ಮಾತನಾಡಿದ ಪ್ರಾಚಾರ್ಯ ಡಾ.ಆರ್.ಎಂ.ಬಂಟನೂರ ಶಿವಾಜಿ ಮಹಾರಾಜರ ಜನ್ಮದಿನ ಪ್ರತಿ ವರ್ಷ ಫೆ.19ರಂದು ಎಲ್ಲೆಡೆ ಆಚರಿಸಲಾಗುತ್ತಿದೆ. ಅವರ ತತ್ವ ಆದರ್ಶ ಅಳವಡಿಸಿಕೊಂಡು ಅವರ ಸ್ಮರಣೆಯಿಂದಲೇ ಧೈರ್ಯ ತುಂಬಿಕೊಳ್ಳುವ ಕೆಚ್ಚು ಬರುತ್ತದೆ. ಹಿಂದೂ ಧರ್ಮದ ಉಳಿಸಲು ಕಟ್ಟುನಿಟ್ಟಿನ ಕ್ರಮ ವಹಿಸಿ ಮಾತೃಪ್ರೇಮ, ಮಾತೃಭಾಷೆ ಬಗ್ಗೆ ವಿಶೇಷ ಗುಣವನ್ನು ಬೆಳೆಸಿಕೊಳ್ಳಲು ಶಿವಾಜಿ ಅವರೇ ಆದರ್ಶಪ್ರಾಯರು. ಇಂದಿನ ಯುವ ಪೀಳಿಗೆ ಶಿವಾಜಿ ಮಹಾರಾಜರ ಜೀವನ ಚರಿತ್ರೆ ತಿಳಿಯಬೇಕು ಎಂದು ಹೇಳಿದರು.

ಇತಿಹಾಸ ವಿಭಾಗದ ಮುಖ್ಯಸ್ಥ ಹಾಗೂ ಐಕ್ಯೂಎಸಿ ಸಂಯೋಜಕ ಉಮೇಶ ಮಂಗೊಂಡ ಮಾತನಾಡಿ, 1630 ರಲ್ಲಿ ಜನಿಸಿದ ಶಿವಾಜಿ ಮಹಾರಾಜರು ಉತ್ತಮ ನಾಯಕತ್ವ ಆಡಳಿತ ತಂತ್ರ ಮೂಲಕ ಮರಾಠ ಸಾಮ್ರಾಜ್ಯ ಸ್ಥಾಪಿಸಿದ್ದರು. ಮರಾಠಿ ಹಾಗೂ ಸಂಸ್ಕೃತ ಭಾಷೆಗೆ ಹೆಚ್ಚು ಮಾನ್ಯತೆ ನೀಡಿ ನಮ್ಮ ಸಾಂಸ್ಕೃತಿಕ ರಾಷ್ಟ್ರೀಯತೆ ಬಗ್ಗೆ ಆದ್ಯತೆ ನೀಡಿದ ಬಗೆ ತಿಳಿಯುತ್ತದೆ. ದಾರ್ಶನಿಕ ಆಡಳಿತ ಶೈಲಿಯಲ್ಲಿ ಬ್ರಿಟಿಷರ ಪ್ರಭಾವದ ನಡುವೆ ಹಿಂದೂ ಪದ್ಧತಿ ರಕ್ಷಣೆ ಮಾಡಿದ್ದರು. ಸಣ್ಣ ಸೈನ್ಯದಲ್ಲೇ ಬ್ರಿಟಿಷರನ್ನು ಹಿಮ್ಮೆಟ್ಟಿಸಿದ ಶಿವಾಜಿ ಅವರು ಸ್ವಾತಂತ್ರ್ಯ ಹೋರಾಟಗಾರರಿಗೆ ಮುನ್ನುಡಿ ಹಾಡಿದ್ದರು ಎಂದು ಇವರ ಆದರ್ಶವನ್ನು ಪಾಲಿಸಿ ನಮ್ಮ ಪರಂಪರೆ ಉಳಿಸೋಣ ಎಂದು ಕರೆ ನೀಡಿದರು.

ಪ್ರಶಿಕ್ಷಣಾರ್ಥಿ ಅಕ್ಷತಾ ಬಡಿಗೇರ ಮತ್ತು ಸಂತೋಷ್ ಬಿರಾದಾರ ಪಿಪಿಟಿ ಮೂಲಕ ಶಿವಾಜಿ ಮಹಾರಾಜರ ಜೀವನ ಚರಿತ್ರೆ ಪ್ರತಿ ಚಿತ್ರಗಳನ್ನು ಪ್ರದರ್ಶಿಸುತ್ತಾ ಅವರ ಚರಿತ್ರೆಯನ್ನು ವಿವರಿಸಿದರು. ಪ್ರಶಿಕ್ಷಣಾರ್ಥಿ ಶಿವರಾಜ್ ಉಪ್ಪಾರ ಮತ್ತು ಮಲ್ಲಿಕಾರ್ಜುನ ಶಿವಾಜಿ ಜಯಂತಿ ಕುರಿತು ಅನಿಸಿಕೆ ವ್ಯಕ್ತಪಡಿಸಿದರು. ಪಾರ್ವತಿ ಹಾಗೂ ಸಂಗಡಿಗರು ಪ್ರಾರ್ಥನಾ ಗೀತೆಯನ್ನು ಹಾಡಿದರು. ನಕ್ಷತ್ರ ಅಚನೂರ ಸ್ವಾಗತಿಸಿದರು. ಸೌಜನ್ಯ ದೇಸಾಯಿ ವಂದಿಸಿದರು. ಸುಮಾ ನಿರೂಪಿಸಿದರು. ಮಹಾವಿದ್ಯಾಲಯದ ಸಿಬ್ಬಂದಿ ಹಾಗೂ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.



ಭಾರತದ ಸಂಸ್ಕೃತಿಗೆ ವಿಶೇಷ ಗೌರವ

ಇಂಡಿ: ಭಾರತೀಯ ಸಂಸ್ಕೃತಿ ವಿಶೇಷವದದ್ದು. ಜಗತ್ತಿನಲ್ಲಿರುವ ಎಲ್ಲ ರಾಷ್ಟಗಳು ನಮ್ಮ ದೇಶದ ಸಂಸ್ಕೃತಿ ಗೌರವಿಸುತ್ತವೆ. ಆದರಿಂದ ಹಿಂದು ನಾವೆಲ್ಲ ಒಂದು ಎನ್ನುವ ರೀತಿಯಲ್ಲಿ ಸಾಗಬೇಕಾಗಿದೆ ಎಂದು ಹಿಂದೂ ಸಂಘಟನೆ ಜಿಲ್ಲಾ ಪ್ರಮುಖ ಡಾ.ಸಂಜೀವ ಜೋಶಿ ಹೇಳಿದರು.

ತಾಲೂಕಿನ ಅಗರಖೇಡ ಗ್ರಾಮದ ಸಂತೆ ಕಟ್ಟಿ ಆವರಣದಲ್ಲಿ ಹಮ್ಮಿಕೊಂಡ ವಿರಾಟ ಹಿಂದು ಸಮಾವೇಶದ ಬೃಹತ್ ಶೋಭಾಯಾತ್ರೆ ನಂತರ ಸಮಾವೇಶವನ್ನುದ್ದೆಶಿಸಿ ಮಾತನಾಡಿದರು. ಪಕ್ಷಭೇದ ಮರೆತು ಜಾತ್ಯಾತೀತವಾಗಿ ಈ ರಾಷ್ಟವನ್ನು ಕಟ್ಟುವುದಕ್ಕಾಗಿ ಅಗರಖೇಡ ಸೇರಿದಂತೆ ತಾಲುಕಿನಾದ್ಯಂತ ವಿರಾಟ್ ಹಿಂದೂ ಸಮಾವೇಶ ಹಮ್ಮಿಕೊಳ್ಳಲಾಗುತ್ತದೆ ಎಂದರು.

ಜಮಖಂಡಿ ತಾಲೂಕಿನ ಮೈಗೂರ ಗ್ರಾಮದ ಗುರು ಪ್ರಸಾದ ಸ್ವಾಮಿಜಿಗಳು, ಮಾಶ್ಯಾಳದ ಮರುಳರಾಧ್ಯ ಶಿವಾಚಾರ್ಯರರು ಶ್ರೀಗಳು, ಅನೀಲ ಜಮಾದಾರ, ಭೀಮಾಶಂಕರ ಆಳೂರ, ಸ್ವತಂತ್ರ ಶಿಂಧೆ, ಶಿವಬಸವ ತೋಳನೂರ ಮಾತನಾಡಿ ಹಿಂದುಗಳು ತಮ್ಮಲ್ಲಿರುವ ಸಮಾಜದ ಒಳ ಪಂಗಡ ಮರೆತು ಒಂದಾಗಬೇಕಿದೆ. ಸಮಾಜದ ಒಳ ಪಂಗಡಗಳನ್ನು ಮರೆತು ಹಿಂದುಗಳೆಲ್ಲ ಒಗ್ಗಟ್ಟು ತೋರಿಸಬೇಕಾಗಿದೆ ಎಂದರು.



ವಿರಾಟ ಹಿಂದು ಸಮಾವೇಶದ ಮೆರವಣಿಗೆ ನಿಮಿತ್ಯ ಬೃಹತ್ ಶೋಭಾಯಾತ್ರೆಯು ಗ್ರಾಮದ ಸಿದ್ಧಾರೂಢ ವೃತ್ತದಿಂದ ಗ್ರಾಮದ ಪ್ರಮುಖ ಬೀದಿಗಳಲ್ಲಿ ಹಾಯ್ದು ಸಂತೆ ಕಟ್ಟಿ ಆವರಣದಲ್ಲಿ ಸಮಾವೇಶ ನಡೆಯಿತು.

ಬಿ.ಎಸ್.ಪಾಟೀಲ ಹಿರೇಬೇವನೂರ, ಕಾಂತುಗೌಡ ಪಾಟೀಲ, ಅಂಬಣ್ಣ ಸಾವಳೆ, ಪಂಚಪ್ಪ ಮರಗೂರ ಗುಬ್ಬೇವಾಡ, ಗೇನು ಗಿರಣಿವಡ್ಡರ, ಶ್ರೀಶೈಲ ಸಾವಳಗಿ, ಸ್ವತಂತ್ರ ಶಿಂಧೆ, ಭೀಮಾಶಂಕರ ಆಳೂರ, ಭಿಮಾಶಂಕರ ತೋಳನೂರ, ದಶರಥ ಕೋಟೆ, ಮಲ್ಲಣ್ಣ ತೋಳನೂರ, ಸಿದ್ದಾರಾಮ ತೇಲಿ, ವಿವೇಕ ಹಂಜಗಿ, ರವಿ ಶಿಂಧೆ ಸೇರಿದಂತೆ ಮಹಿಳೆಯರು ಭಾಗವಹಿಸಿದ್ದರು.

ಶಿವಾಜಿ ದೇಶಾಭಿಮಾನ ಸ್ಫೂರ್ತಿದಾಯಕ

ಚಡಚಣ: ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಂ-2, ಮರಡಿ ಶಾಲೆಯಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಜಯಂತ್ಯುತ್ಸವ ಆಚರಿಸಲಾಯಿತು.

ಈ ವೇಳೆ ಮಾತನಾಡಿದ ಶಿಕ್ಷಕ ಬಸವರಾಜ ಕರಜಗಿ, ಶಿವಾಜಿಯ ಆದರ್ಶ ವ್ಯಕ್ತಿತ್ವ, ಸಾಹಸ ಹಾಗೂ ದೇಶಪ್ರೇಮವನ್ನು ಇಂದಿನ ಪೀಳಿಗೆಗೆ ಪರಿಣಾಮಕಾರಿಯಾಗಿ ಪರಿಚಯಿಸುವ ಅಗತ್ಯವಿದೆ ಎಂದು ಹೇಳಿದರು. ಮಕ್ಕಳಲ್ಲಿ ಧೈರ್ಯ, ಸ್ಥೈರ್ಯ ಮತ್ತು ದೇಶಾಭಿಮಾನ ಮೂಡಿಸಲು ಶಿವಾಜಿ ಮಹಾರಾಜರ ಜೀವನ ಚರಿತ್ರೆ ಸ್ಫೂರ್ತಿದಾಯಕವಾಗಿದೆ ಎಂದರು.

ಬಲಿಷ್ಠ ಭಾರತ ನಿರ್ಮಾಣದಲ್ಲಿ ಅವಿರತ ಶ್ರಮಿಸಿದವರಲ್ಲಿ ಶಿವಾಜಿ ಮಹಾರಾಜರು ಪ್ರಮುಖರು. ಸೇವೆ ಮತ್ತು ಹೋರಾಟದ ಮೂಲಕ ಎಲ್ಲರ ಮನಗೆದ್ದ ಅವರು ಸದ್ಗುಣಗಳ ಸಾಕಾರಮೂರ್ತಿಯಾಗಿದ್ದರು. ಮಹಿಳೆಯರಿಗೆ ಪ್ರಥಮ ಆದ್ಯತೆ ನೀಡಿದ ಶಿವಾಜಿಯ ಮಾತೃಪ್ರೇಮ ಹಾಗೂ ದೇಶಭಕ್ತಿ ಎಲ್ಲರಿಗೂ ಮಾದರಿಯಾಗಿದೆ ಎಂದು ಶಿಕ್ಷಕ ಕರಜಗಿ ಹೇಳಿದರು.

ಶಿಕ್ಷಕ ಜಗದೀಶ ಚಲವಾದಿ ಮಾತನಾಡಿ, ದೇಶದ ಎಲ್ಲ ಧರ್ಮಗಳನ್ನು ಗೌರವದಿಂದ ಕಾಣುತ್ತಿದ್ದ ಶಿವಾಜಿ ಮಹಾರಾಜರ ಶೌರ್ಯ ಮತ್ತು ದಕ್ಷ ಆಡಳಿತ ಎಲ್ಲರಿಗೂ ಪ್ರೇರಣೆಯಾಗಿದೆ. ಭಾರತದ ಸಂಸ್ಕೃತಿ ಪರಂಪರೆಗೆ ಧಕ್ಕೆಯುಂಟಾದಾಗ ಅದನ್ನು ರಕ್ಷಿಸಿದ ಕೀರ್ತಿ ಶಿವಾಜಿ ಮಹಾರಾಜರಿಗೆ ಸಲ್ಲುತ್ತದೆ ಎಂದು ಹೇಳಿದರು.



ಜಯಂತಿ ಅಂಗವಾಗಿ ವಿದ್ಯಾರ್ಥಿಗಳಾದ ಜಕರಾಯ ಕೋಳಿ, ಶ್ರಾವಣಿ ಕೋಳಿ, ಚಂದ್ರಿಕಾ ಮಾಳಕೊಟಗಿ, ಶ್ರದ್ಧಾ ಬುರುಡ, ವೃತಿಕಾ ಮಾನೆ, ಸಮಿಕ್ಷಾ ಕೋಟಿ, ಭೂಮಿಕಾ ಕ್ಷತ್ರಿ, ಅಕ್ಷತಾ ಕೋಳಿ ಹಾಗೂ ಗಗನ ಶಂಖು ಸೇರಿದಂತೆ ಅನೇಕರು ಶಿವಾಜಿ ಮಹಾರಾಜರ ಜೀವನ ಚರಿತ್ರೆ ಕುರಿತು ಭಾಷಣ ಮಾಡಿದರು.

ಶಾಲಾ ಮುಖ್ಯ ಶಿಕ್ಷಕ ಮಹಾಂತೇಶ ಉಮರಾಣಿ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕಿ ಜಯಶ್ರೀ ಗೋಟ್ಯಾಳ ಪ್ರಾರ್ಥಿಸಿದರು. ಶಿಕ್ಷಕರಾದ ಡಿ.ಎಸ್. ಬಗಲಿ, ಮಹಾದೇವ ಆದಿಗೊಂಡೆ, ಎಚ್.ಜೆ. ಲೋಣಿ, ವಿ.ಎಸ್. ಪತ್ತಾರ, ಸುನಂದಾ ಕೋಟಿ, ಪ್ರೇಮಾ ಧೋತ್ರೆ, ವಿಜಯಲಕ್ಷ್ಮಿ ಕೋಳಿ ಹಾಗೂ ಅಡುಗೆ ಸಹೋದರಿಯರಾದ ಮಹಾನಂದಾ ಧೋತ್ರೆ, ಸಪೂರಾ ಲಟೋರಿ, ಸವಿತಾ ವಾಲಿಕಾರ, ರಕಮಾ ವಾಘಮೋರೆ, ಕಸ್ತೂರಿ ಸಾಲಮಂಟಪ ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಗ್ರಾಮೀಣ ಭಾಗದ ಕಲೆ ಉಳಿಸಿ



ಝುಳಕಿ: ಗ್ರಾಮೀಣ ಭಾಗದಲ್ಲಿ ಕಲೆ ಕಲೆಯಾಗಿ ಉಳಿಸಿ ಎಂದು ಮಾಜಿ ಗ್ರಾಪಂ ಅಧ್ಯಕ್ಷ ಸಣ್ಣಪ್ಪ ತಳವಾರ ಹೇಳಿದರು.

ಸಮೀಪದ ಅರ್ಜನಾಳ ಗ್ರಾಮದಲ್ಲಿ ನಡೆದ ರೇವಣಸಿದ್ದೇಶ್ವರ ದೇವರ ಜಾತ್ರಾ ಮಹೋತ್ಸವ ಪ್ರಯುಕ್ತ ಸೋನು ಡೈಮಂಡ್ ಮೇಲೋಡಿಸ್ ಕಲಾ ತಂಡಯಿಂದ ಹಾಸ್ಯ ರಸಮಂಜರಿ ಕಾರ್ಯಕ್ರಮ ದಲ್ಲಿ ಉಧ್ಘಾಟಿಸಿ ಮಾತನಾಡಿದರು ಗ್ರಾಮೀಣ ಭಾಗ ಒಳ್ಳೆಯ ಸಂಸ್ಕೃತಿಕ ನಾಟಕ ಹಾಗೂ ದೇವರ ಭಕ್ತಿ ಗೀತೆಗಳನ್ನು ಹಾಡುಗಳನ್ನು ಕೇಳುವದರಿಂದ ಈಗೀನ ಯುವ ಪೀಳಿಗೆಗೆ ಒಳ್ಳೆಯದು ಆಗುತ್ತದೆ ಗ್ರಾಮೀಣ ಭಾಗ ಕಲೆ ಕಲೆಯಾಗಿ ಉಳಿಸಿ ಬೆಳಿಸಿರಿ ಯುವಕರು ಒಳ್ಳೆಯ ಶಿಕ್ಷಣವಂತ ಒಳ್ಳೆಯ ಉದ್ಯೋಗದಲ್ಲಿ ತೋಡಗಿಸಿಕೊಳಿರಿ ದುಷ್ಠ ಚಟಕೆ ಬಲಿಯಾಗದೆ ಇರಿ ಎಂದು ಹೇಳಿದರು.

ಜಾತ್ರಾ ಕಮಿಟಿ ಅಧ್ಯಕ್ಷ ಮಲ್ಲಿಕಾರ್ಜುನ ಬಿರಾದಾರ, ನಿರಂಜ ಪೂಜಾರಿ, ಅಣ್ಣಾರಾಯಗೌಡ ಪಾಟೀಲ, ರತ್ನಾಕರ ಕ್ಷತ್ರಿ, ಚಂದ್ರಕಾಂತ ಮೇತ್ರಿ,ಶೇಬ್ಬೀರ ಮುಲ್ಲಾ, ಬಸವರಾಜ ಲೋಣಿ, ಬಸಗೊಂಡ ಪಾಟೀಲ, ದಯಗೊಂಡ ಕನ್ನೂರ, ಎನ್.ಟಿ.ಬಿರಾದಾರ, ಆರ್.ಎಸ್.ಗೋಡೆಕಾರ, ಕಲ್ಲಪ್ಪ ಬೂದಿಹಾಳ, ಉಪೇಂದ್ರ ಕ್ಷತ್ರಿ, ಮಲ್ಲು ಕೆಂಗಾರ, ಸಿದ್ದಾರಾಮ ಕೆಂಗಾರ, ದರೇಪ್ಪ ಕೆಂಗಾರ, ಶರಣಪ್ಪ ಕೆಂಗಾರ, ಭೀಮಾಶಂಕರ ಕೋಳರಗಿ ಇದ್ದರು.

ಶಿವಾಜಿ ಮಹಾರಾಜರ ಜಯಂತ್ಯುತ್ಸವ

ಬಸವನಬಾಗೇವಾಡಿ: ಛತ್ರಪತಿ ಶಿವಾಜಿ ಮಹಾರಾಜರ 396ನೇ ಜಯಂತ್ಯುತ್ಸವ ನಿಮಿತ್ತ ಪಟ್ಟಣದ ಶಿವಾಜಿ ಮಹಾರಾಜರ ವೃತ್ತದ ಸಮೀಪದಲ್ಲಿರುವ ವಿಠ್ಠಲ ಮಂದಿರದಲ್ಲಿ ತೊಟ್ಟಿಲೋತ್ಸವ ಸೇರಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಸಂಭ್ರಮದಿಂದ ಜರುಗಿದವು. ನಂತರ ವಿಠ್ಠಲ ಮಂದಿರದ ಮುಂಭಾಗದಲ್ಲಿ ತಹಶೀಲ್ದಾರ್ ವೈ.ಎಸ್.ಸೋಮನಕಟ್ಟಿ ಅವರು ಮೆರವಣಿಗೆಗೆ ಚಾಲನೆ ನೀಡಿದರು.

ಬಸವ ಸ್ಮಾರಕ ದ್ವಾರಬಾಗಿಲ ಮುಖಾಂತರ ಬಸವ ಜನ್ಮಸ್ಮಾರಕ, ಅಗಸಿ ಮಾರ್ಗವಾಗಿ ವಿವಿಧ ಕಡೆಗಳಲ್ಲಿ ಶಿವಾಜಿ ಮಹಾರಾಜರ ಮೂರ್ತಿಯೊಂದಿಗೆ ಮೆರವಣಿಗೆ ಸಂಭ್ರಮದಿಂದ ಜರುಗಿತು.

ಮರಾಠ ಸಮಾಜದ ತಾಲೂಕಾಧ್ಯಕ್ಷ ಬಸವರಾಜ ಬಿಜಾಪುರ, ಪುರಸಭೆ ಸದಸ್ಯ ಪ್ರವೀಣ ಪವಾರ, ಮುಖಂಡರಾದ ಅನಿಲ ಪವಾರ, ಅಶೋಕ ಹಾರಿವಾಳ, ಡಾ.ಕರುಣಾಕರ ಚೌಧರಿ, ಸಂಗಮೇಶ ಓಲೇಕಾರ, ಬಾಬು ನಿಕ್ಕಮ್, ಕಲ್ಲು ಸೊನ್ನದ, ದಯಾನಂದ ಸಾರವಾಡ, ಅಮರ ಗಾಯಕವಾಡ, ವೆಂಕಟೇಶ ಕರಾಡೆ, ಯೋಗೇಶ ಜಾಧವ ವಿಶಾಲ ಗಾಯಕವಾಡ, ಶಿವು ರಜಪೂತ, ರವಿ ಕಾಡೆ, ಮಹೇಶ ಜಗದಾಳಿ, ರಾಹುಲ ಜಗತಾಪ, ರೂಪಾ ಜಾಧವ, ಪ್ರಿಯಾ ರಜಪೂತ ಸೇರಿದಂತೆ ನೂರಾರು ಜನರು ಇದ್ದರು.



ಛತ್ರಪತಿ ಶಿವಾಜಿ ಜಯಂತಿ ಆಚರಣೆ



ದೇವರಹಿಪ್ಪರಗಿ: ತಾಯಿಯಿಂದ ಪ್ರೇರೆಪಿತನಾಗಿ, ಕೇವಲ ಮರಾಠಾ ಸಮುದಾಯಕ್ಕೆ ಸೀಮಿತನಾಗದೇ ಸಮಸ್ತ ಭಾರತೀಯರ ಹೃದಯ ಸಿಂಹಾಸನಾಧೀಶ್ವರನಾಗಿರುವ ಶಿವಾಜಿ ಮಹಾರಾಜರ ದಿಟ್ಟತನದ ಜೀವನಶೈಲಿ ಸದಾಕಾಲವೂ ಸರ್ವರಿಗೂ ಮಾದರಿಯಾಗಿದೆ ಎಂದು ತಹಶೀಲದಾರ ನಿಂಗಣ್ಣ ಬಿರಾದಾರ ಹೇಳಿದರು.

ಪಟ್ಟಣದ ತಹಶೀಲ್ದಾರ್ ಕಾರ್ಯಾಲಯದಲ್ಲಿ ಆಯೋಜಿಸಿದ್ದ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಶಿಕ್ಷಕ ಅರುಣ ಕೋರವಾರ ಉಪನ್ಯಾಸ ನೀಡಿ, ದಿಟ್ಟತನದ ಗಟ್ಟಿ ವ್ಯಕ್ತಿತ್ವದ ಶಿವಾಜಿ ಮಹಾರಾಜರ ಧೈರ್ಯ,ಸಾಹಸ ಹಾಗೂ ದೇಶಭಕ್ತಿಯ ಯಶೋಗಾಥೆ ನಾವೆಲ್ಲರೂ ಮೈಗೂಡಿಸಿಕೊಳ್ಳಬೇಕಾಗಿದೆ ಎಂದರು.

ಉಪತಹಶೀಲ್ದಾರ್ ರಿಜಾದೇವಿ ಸಜ್ಜನ, ಶಿರಸ್ತೇದಾರರಾದ ಸುರೇಶ ಮ್ಯಾಗೇರಿ, ದಶರಥ ಭೋವಿ, ಕಂದಾಯ ನಿರೀಕ್ಷಕ ಶಿವಶಂಕರ ಜಾಧವ, ಜಿ.ಪಿ.ಬಿರಾದಾರ ನಾಗೇಂದ್ರ ಗಾಂಗಜಿ, ದೇವೇಂದ್ರ ಬಾಸುತ್ಕರ, ಪಿಂಟು ಬಾಸುತ್ಕರ, ಮಲಕಪ್ಪ ಕುಳಗೇರಿ, ರಾವುತ ಅಗಸರ,ಈಶ್ವರ ಬಾಸುತ್ಕರ, ನರಸಪ್ಪ ಕುಳಗೇರಿ, ಶಿಲ್ಪಾ ಸಿಂಪಿ, ರೇವಣಸಿದ್ದ ಅವರಾದಿ, ಚನಬಸು ಹೊಸಮನಿ, ಆಕಾಶ ಮೇತ್ರಿ, ರಮಾನಂದ ಚಕ್ಕಡಿ, ರಾಜು ಕಂಠಿ, ಅಬುಲಕಲಾಮ್ ಮೋಮಿನ್, ಕಿಶೋರ ಪೂಜಾರಿ, ವಿಟ್ಠಲ ವಾಲೀಕಾರ, ಪ್ರವೀಣ ಹೂಗಾರ, ಸುರೇಶ ಭಜಂತ್ರಿ, ಸಂತೋಷ ತಳವಾರ, ನಾಗರಾಜ ಹಳ್ಳಿ ಉಪಸ್ಥಿತರಿದ್ದರು.

ಶಿವಾಜಿ ಆದರ್ಶ ಬೆಳೆಸಿಕೊಳ್ಳಿ

ಆಲಮೇಲ: ಛತ್ರಪತಿ ಶಿವಾಜಿ ಮಹಾರಾಜರು ಧರ್ಮ ಸಂರಕ್ಷಣೆ ಆದರ್ಶವನ್ನು ಇಂದಿನ ಯುವಕರು ತಮ್ಮ ಜೀವನದಲ್ಲಿ ಬೆಳೆಸಿಕೊಳ್ಳಬೇಕು ಎಂದು ಯುವ ನಾಯಕ ಕಮಲಾಕರ ಪತ್ತಾರ ಹೆಳಿದರು.

ಗುರುವಾರ ಪಟ್ಟಣದ ಮೇನ ಬಜಾರ ದೇವಿ ಗುಡಿಯಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಆಚರಿಸಿ ಮಾತನಾಡಿ, ಜಗತ್ತಿನಲ್ಲೆ ಅತ್ಯಂತ ಶ್ರೇಷ್ಠ ಧರ್ಮ ಹಿಂದೂ ಧರ್ಮ, ಹಿಂತಹ ಧರ್ಮ ರಕ್ಷಣೆ ಮಾಡಲು ತಮ್ಮ ಜೀವನವನ್ನೆ ಮುಡಿಪಾಗಿಟ್ಟ ಛತ್ರಪತಿ ಶಿವಾಜಿ ಮಾಹಾರಜ, ಮಹಾರಾಣ ಪ್ರತಾಪ ಸಿಂಹ ಅವರಂತ ಮಾಹನ ರಾಜ ಮಾರಾಜರು ಜಯಂತಿಗಳು ಯಾವುದೆ ಜಾತಿಗೆ ಸಿಮಿತಗೊಳಿಸದೆ ನಾವೆಲ್ಲರು ಹಿಂದೂಗಳು ಒಂದಾಗಿ ಆಚರಿಸಿ ಅವರ ಆದರ್ಶಗಳು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಧರ್ಮ ಸೌರಕ್ಷಣೆಗೆ ಮುಂದಾಗಬೇಕು ಎಂದು ಹೆಳಿದರು.

ಧನಗರ ಮರಾಠ ಸಮಾಜದ ಮುಖಂಡರಾದ ಅಂಭೋಜಿ ಮಡಗಾರ, ರವಿ ಬಂಡಗಾರ, ಕುಮಾರ ಬಂಡಗಾರ, ಸಂಘ ಪರಿವಾರದ ಮುಖಂಡ ಮಲ್ಲಿಕಾರ್ಜುನ ರಾಂಪೂರಮಠ, ಪುಂಡು ಜೋಶಿ, ಚಿಟ್ಟು ರಜಪೂತ, ಚೇರು ದೇವಕತ್ತೆ, ಅಭಿ ಅಲೋಣಿ, ಮಾಂತು ಹೊಸಮನಿ, ಆಕಾಶ ಗಂದಗೆ, ಸಂಗೀತಾ ಮರಾಠೆ, ವಿನೋದ ನಲವಡೆ, ಆನಂದ ಸೋಲಂಕರ ಇದ್ದರು.



ಕಿರುಸುದ್ದಿ

ಶಿವಾಜಿ ಜಯಂತ್ಯುತ್ಸವ

◆**ರಾಯಚೂರು:** ಇಲ್ಲಿನ ಜಿಲ್ಲಾಡಳಿತ, ಜಿಪಂ, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಜಯಂತ್ಯುತ್ಸವ ನಡೆಯಿತು.

ಗುರುವಾರ ನಗರದ ಮಾವಿನಕೆರೆ ಹತ್ತಿರ ಇರುವ ಶ್ರೀಛತ್ರಪತಿ ಶಿವಾಜಿ ಮಹಾರಾಜರ ಪುತ್ಥಳಿಗೆ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಭೋಸರಾಜು ಪೂಜೆ ನೆರವೇರಿಸಿ ಮೆರವಣಿಗೆಗೆ ಚಾಲನೆ ನೀಡಿದರು. ಮೆರವಣಿಗೆಯು ಮಾವಿನಕೆರೆ ಪ್ರದೇಶದಿಂದ ಆರಂಭವಾಗಿ ಗಂಗಾ ನಿವಾಸ, ಪೇಟ್ಲಾ ಬ್ರಿಜ್, ಭಗತ್ ಸಿಂಗ್ ವೃತ್ತ, ಏಕಮಿನಾರ್, ಜಾಕೀರ ಹುಸೇನ ವೃತ್ತ, ಜೈಲ್ ರಸ್ತೆ, ಬಸ್ ನಿಲ್ದಾಣ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದ ಮಾರ್ಗವಾಗಿ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರಕ್ಕೆ ಬಂದು ಸೇರಿತು. ಮುಖಂಡರಾದ ಜಯಣ್ಣ, ರವಿ ಭೋಸರಾಜು, ಜಯವಂತರಾವ್ ಪತಂಗೆ, ದರೂರ ಬಸವರಾಜ ಪಾಟೀಲ, ನರಸಪ್ಪ ಯಕ್ಲಾಸಪುರ, ಅಂಬಾಜಿರಾವ್ ಉಪಸ್ಥಿತರಿದ್ದರು.

ವಿವಿಧ ಗ್ರಾಮಗಳಿಗೆ ಜಿಪಂ ಸಿಇಒ ಭೇಟಿ



◆**ಸಿಂಧನೂರು:** ತಾಲೂಕಿನ ಗೊರೆಬಾಳ ಗ್ರಾಪಂ ಗ್ರಂಥಾಲಯ ಕಟ್ಟಡಕ್ಕೆ ಭೇಟಿ ನೀಡಿ ಕಟ್ಟಡ ಕಾಮಗಾರಿ ಮಾರ್ಚ್ ಅಂತ್ಯದೊಳಗೆ ಪೂರ್ಣಗೊಳಿಸಬೇಕು ಎಂದು ಜಿಪಂ ಸಿಇಒ ಈಶ್ವರ ಕುಮಾರ ಕಾಂದೂ ತಿಳಿಸಿದರು.

ಗುರುವಾರು ವಿವಿಧ ಗ್ರಾಮಗಳಿಗೆ ಕ್ಷೇತ್ರ ಭೇಟಿ ನೀಡಿದ ವೇಳೆ ಮಾತನಾಡಿದ ಅವರು, ಅಂಬಾ ಮಠದಲ್ಲಿರುವ ವಸತಿ ನಿಲಯಕ್ಕೆ ಭೇಟಿ ನೀಡಿ ಕೊಠಡಿಯಲ್ಲಿ ಮಕ್ಕಳ ಸಂಖ್ಯೆಯನ್ನು ಆಲಿಸಿ ಮಕ್ಕಳಿಗೆ ಯಾವ ರೀತಿ ತೊಂದರೆ ಆಗದಂತೆ ನೋಡಿಕೊಳ್ಳಲು ಉಪನ್ಯಾಸಕರಿಗೆ ತಿಳಿಸಿ ರೌಡಕುಂದಾ ಗ್ರಾಮ ಪಂಚಾಯಿತಿಗೆ ಅಮೃತ ಸರೋವರ ಕೆರೆಯ ಸುತ್ತ ಉದ್ಯಾನವನ ನಿರ್ಮಾಣ,ಮಾಡಲು ಸೂಚನೆ,ಹಾಗೂ ಅಂಗನವಾಡಿ ಮತ್ತು ಶಾಲೆಗಳಿಗೆ ಸರಬರಾಜು ಮಾಡಲು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮೊಟ್ಟೆ,ಸರ್ಕಾರಿ ಪ್ರೌಢಶಾಲೆಯ ಕಟ್ಟಡ ಕಾಮಗಾರಿ, ಶಾಲೆಯ ಅಡುಗೆ ಕೋಣೆ ಹಾಗೂ ಮೂಲ ಸೌಲಭ್ಯಗಳ ಮಾಹಿತಿ, ಸಾಲಗುಂದ ಸರ್ಕಾರಿ ಪ್ರೌಢಶಾಲೆಯ ಮಕ್ಕಳ ಹಾಜರಾತಿ ಮಕ್ಕಳ ಸಮಸ್ಯೆ ಹಾಗೂ ಎಸ್ಸೆಸ್ಸೆಲ್ಸಿ ನೂರಕ್ಕೆ ನೂರರಷ್ಟು ಫಲಿತಾಂಶ ಬರಬೇಕು ಎಂದರು.

ಅಂಬಾ ಮಠ ಕುಡಿಯುವ ನೀರಿನ ಗುಣಮಟ್ಟ ಮತ್ತು ಕೆರೆಯ ಸುರಕ್ಷತೆ,ಮುಕ್ಕುಂದ ವ್ಯಾಪ್ತಿಯ, ಹುಡಾ ಗ್ರಾಮದಲ್ಲಿ ಜಲಜೀವನ ಮಿಷನ್ ಯೋಜನೆ ಅಡಿಯಲ್ಲಿ ಆಗಿರುವ ಕಾಮಗಾರಿ ಪ್ರಾಥಮಿಕ ಶಾಲೆಯ ತಡೆಗೋಡೆ ಕಾಮಗಾರಿಯನ್ನು ಕಡತಗಳನ್ನು ಪರಿಶೀಲಿಸಿದರು. ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

ಚಿಕಮ್ಯಾಗೇರಿಯ ಸಿದ್ಧಾರೂಢರ ಜಾತ್ರೆ ಸಂಪನ್ನ



◆**ಯಲಬುರ್ಗಾ:** ತಾಲೂಕಿನ ಚಿಕ್ಕಮ್ಯಾಗೇರಿ ಗ್ರಾಮದ ಮ್ಯಾಗಳಮಠದ ಶ್ರೀಸಿದ್ಧಾರೂಢರ ಜಾತ್ರಾ ಮಹೋತ್ಸವ ಅದ್ಧೂರಿಯಿಂದ ಜರುಗಿತು. ಶಿವರಾತ್ರಿಯ ನಿಮಿತ್ತ ಬೆಳಗ್ಗೆ ಮಠದಲ್ಲಿರುವ ಸಿದ್ಧಾರೂಢರ ಮೂರ್ತಿಗೆ ರುದ್ರಾಭಿಷೇಕ, ಬಿಲ್ವಪತ್ರೆ ಅರ್ಚನೆ, ಸೇರಿದಂತೆ ವಿವಿಧ ಧಾರ್ಮಿಕ ಪೂಜಾ ಕಾರ್ಯಗಳು ಜರುಗಿದವು. ಯಲಬುರ್ಗಾ ಪಟ್ಟಣದ ಶ್ರೀಧರ ಮುರಡಿ ಹಿರೇಮಠದ ಬಸವಲಿಂಗೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಆಗಮಿಸಿ, ಪ್ರಸಾದ ಸೇವೆಗೆ ಚಾಲನೆ ನೀಡಿದರು. ಸಂಜೆ ಅಪಾರ ಭಕ್ತರ ಸಮ್ಮುಖದಲ್ಲಿ ಡೊಳ್ಳು, ಭಜನೆಯೊಂದಿಗೆ ಮಠದಿಂದ ಪಾದಗಟ್ಟೆಯವರೆಗೂ ಉಚ್ಛಾಯ ಸೇವೆ ಸಾಗಿತು. ಗ್ರಾಮದ ಭಕ್ತರು ಉತ್ತುತ್ತಿ, ಬೆಲ್ಲದಚ್ಚು ಎಸೆಯುವ ಮೂಲಕ ಭಕ್ತಿ ಸಮರ್ಪಿಸಿದರು. ಅಪಾರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು.



ರಾಯಚೂರ: ಇಲ್ಲಿನ ಜಿಲ್ಲಾಡಳಿತ, ಜಿಪಂ, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಜಯಂತ್ಯುತ್ಸವ ನಡೆಯಿತು.

ಕಾಮಗಾರಿ ಪರಿಶೀಲಿಸಿದ ಕೇಂದ್ರ ತಂಡ

◆**ಮಾನ್ವಿ:** ತಾಲೂಕಿನ ಮದ್ಲಾಪುರ ಹಾಗೂ ಪೋತ್ನಾಳ್ ಗ್ರಾಪಂ ವ್ಯಾಪ್ತಿಯಲ್ಲಿ ನರೇಗಾ ಯೋಜನೆಯಡಿ ಅನುಷ್ಠಾನಗೊಂಡ ವಿವಿಧ ಕಾಮಗಾರಿಗಳನ್ನು ಕೇಂದ್ರ ಆಡಿಟ್ ಅಧಿಕಾರಿ ಕುಮುದ್ ದುಬೆ ನೇತೃತ್ವದ ತಂಡ ಪರಿಶೀಲನೆ ನಡೆಸಿ ತಾಪಂ ಇಒ ಖಾಲಿದ್ ಅಹ್ಮದ್‌ರಿಂದ ಮಾಹಿತಿ ಪಡೆದುಕೊಂಡರು.

ನಂತರ ಗ್ರಾಪಂಗಳಲ್ಲಿನ 7 ರಿಜಿಸ್ಟರ್ ದಾಖಲೆಗಳನ್ನು ಹಾಗೂ ಎನ್ಎಂಎಂಎಸ್ ಹಾಜರಾತಿ ಕಡತಗಳನ್ನು, ದೂರು ದಾಖಲೆಗಳ ರಿಜೀಸ್ಟರ್, ಆಸ್ತಿವಹಿ ರಿಜಿಸ್ಟರ್, ಸಮಾಜಿಕ ಲೆಕ್ಕ ಪರಿಶೋದನ ವಹಿ, ಗ್ರಾಮ ಸಭೆ, ಗ್ರಾಪಂ ನಡಾವಳಿಗಳು, ಕಾಮಗಾರಿ ಪಟ್ಟಿಯನ್ನು ಪರಿಶೀಲಿಸಿದರು. ಗ್ರಾಮದಲ್ಲಿ ನರೇಗಾ ವತಿಯಿಂದ ಕೈಗೊಳ್ಳಲಾದ ಕಾಮಗಾರಿಗಳಾದ ಅಬ್ಬಯ್ಯನ ಹೊಲದಿಂದ ಬಸಯ್ಯನ ಹೊಲದವರೆಗೆ ನಾಲಾ ಅಭಿವೃದ್ಧಿ, ಚಿಕಲ್ಪರ್ವಿ ಗ್ರಾಮದ ಸೀನಪ್ಪ ಹೊಲದಿಂದ ಕೊಡಗಿಡ್ಡ ಹಳ್ಳದವರೆಗೆ ಕೈಗೊಂಡ ನಾಲಾ ಅಭಿವೃದ್ಧಿ ಕಾಮಗಾರಿ ಹಾಗೂ ಅಳತೆ ಪ್ರಮಾಣ ಪರಿಶೀಲಿಸಿದರು.

ಪೋತ್ನಾಳ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಜೀನೂರು ಕ್ಯಾಂಪಿನ ರಸ್ತೆಯಿಂದ ನರಸಯ್ಯನ ಹೊಲದವರೆಗೆ ನಾಲಾ ಹೂಳು ಎತ್ತುವ ಕಾಮಗಾರಿಯ ಕಡತಗಳನ್ನು ಪರಿಶೀಲನೆ ನಡೆಸಿ ಕಾಮಗಾರಿ ಗುಣ ಮಟ್ಟ ಪರಿಶೀಲಿಸಿದರು.

ತಾಪಂ ಇಒ ಖಾಲೀದ್ ಅಹ್ಮದ್, ಮದ್ಲಾಪುರ ಗ್ರಾಪಂ ಪಿಡಿಒ ಅಸ್ರಾ ಜಬೀನಾ ಖಾನ್ ಮತ್ತು ಪೋತ್ನಾಳ್ ಗ್ರಾಪಂ ಪಿಡಿಒ ಅಕ್ತರ ಪಾಷ ಸೇರಿದಂತೆ ಗ್ರಾಪಂ ಸಿಬ್ಬಂದಿ ಇದ್ದರು.



ರಾಯಚೂರು: ನಗರದಲ್ಲಿ ವಿಜೃಂಭಣೆಯಿಂದ ನಡೆದ ಛತ್ರಪತಿ ಶಿವಾಜಿ ಮಹಾರಾಜ್ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡ ರವಿ ಭೋಸರಾಜು ಸೇರಿದಂತೆ ಮುಖಂಡರಾದ ಮಹಮ್ಮದ್ ಶಾಲಂ, ಕೆ.ಶಾಂತಪ್ಪ, ಜಯಣ್ಣ ರುದ್ರಪ್ಪ ಅಂಗಡಿ, ಶಿವಮೂರ್ತಿ, ಜಯಂತ್ ರಾವ್ ಪತಂಗಿ, ಶ್ರೀನಿವಾಸ್ ರೆಡ್ಡಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

ತರಬೇತಿ ಕಾರ್ಯಾಗಾರ | ಡಿಎಚ್‌ಒ ಡಾ.ಲಿಂಗರಾಜು ಸಲಹೆ

ತಂಬಾಕು ಸೇವನೆಯಿಂದ ದೂರವಿರಿ

◆**ಕೊಪ್ಪಳ:** ಇಂದಿನ ಯುವ ಪೀಳಿಗೆ ತಂಬಾಕು ಸೇವನೆಯಿಂದ ದೂರವಿದ್ದು, ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಟಿ.ಲಿಂಗರಾಜು ಹೇಳಿದರು.

ಕೊಪ್ಪಳ ನಗರದಲ್ಲಿನ ಹಳೇ ಜಿಲ್ಲಾಸ್ಪತ್ರೆಯ ಸಭಾಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದಡಿ ತಂಬಾಕು ಸೇವನೆಯಿಂದ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮಗಳು ಮತ್ತು ಕೋಟ್ಪಾ-2003 ಕಾಯ್ದೆ ಅನುಷ್ಠಾನ ಕುರಿತು 'ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿಗಳಿಗೆ' ಹಮ್ಮಿಕೊಂಡಿದ್ದ ಒಂದು ದಿನ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ತಂಬಾಕು ಸೇವನೆಯಿಂದ ಆರೋಗ್ಯದ ಮೇಲೆ ಹಲವಾರು ದುಷ್ಪರಿಣಾಮಗಳು ಉಂಟಾಗುತ್ತವೆ. ಸಿಗರೇಟ್, ಬೀಡಿ, ಸಿಗಾರ್, ಹುಕ್ಕಾ ತಂಬಾಕು ವಿಧಗಳಾಗಿವೆ. ತಂಬಾಕು ಸೇವನೆಯಿಂದ ಕ್ಯಾನ್ಸರ್, ಹೃದಯ ಸಂಬಂಧಿ ಕಾಯಿಲೆ, ಶ್ವಾಸಕೋಶದ ಕಾಯಿಲೆ, ಲಕ್ವಾ ಇತರೆ ಕಾಯಿಲೆಗಳು ಸಂಭವಿಸುತ್ತವೆ. ಪ್ರತಿ ಸಿಗರೇಟ್,ಬೀಡಿ ಸೇವನೆಯಿಂದ 7 ನಿಮಿಷ ಆಯಸ್ಸು ಕಡಿಮೆ ಮಾಡುತ್ತದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ತಿಳಿಸುತ್ತದೆ. ತಂಬಾಕಿನಲ್ಲಿ ನಿಕೋಟಿನ್ ಎಂಬ ವಿಷಕಾರಕ ಪದಾರ್ಥ ಇದ್ದು, ಇದರಲ್ಲಿ 3000 ದಿಂದ 7000 ಅಪಾಯಕಾರಿ ರಾಸಾಯನಿಕ ವಿಷಾನಿಲಗಳು ಇರುತ್ತವೆ. ಮಹಿಳೆಯರಲ್ಲೂ ತಂಬಾಕು ಸೇವನೆಯಿಂದ ಗರ್ಭಪಾತ, ಗರ್ಭಕಂಠದ ಕ್ಯಾನ್ಸರ್, ಕಡಿಮೆ ತೂಕವಿರುವ ಮಗುವಿನ ಜನನ ಹಾಗೂ ಶಿಶುಮರಣ ಸಂಭವಿಸುವ ಸಾಧ್ಯತೆ ಇರುತ್ತದೆ. ಪ್ರತಿ ವರ್ಷ



> **ತಂಬಾಕು ತ್ಯಜಿಸುವುದರಿಂದ ಮತ್ತು ವ್ಯಸನಿಗಳು ನಿಲ್ಲಿಸಿದ ಕ್ಷಣದಿಂದ ಶ್ವಾಸಕೋಶ ಮತ್ತು ಹೃದಯ ಉತ್ತಮವಾಗಿ ಕಾರ್ಯನಿರ್ವಹಿಸಲು ಸಹಾಯ ಮಾಡುತ್ತದೆ. ಹಾಗಾಗಿ ಪೌಷ್ಟಿಕ ಆಹಾರ ಸೇವನೆಯನ್ನು ನಮ್ಮ ಜೀವನ ಶೈಲಿಯಲ್ಲಿ ಅಳವಡಿಸಿಕೊಳ್ಳಬೇಕು. ವಿದ್ಯಾರ್ಥಿಗಳು ತಂಬಾಕು ಸೇವನೆಯಂತಹ ದುಶ್ಚಟದಿಂದ ದೂರವಿರಬೇಕು ಮತ್ತು ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಗಮನ ಹರಿಸಿ ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕು.**
>
> ■ **ಡಾ.ರವೀಂದ್ರನಾಥ್ ಎಂ.ಎಚ್., ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಅನುಷ್ಠಾನಾಧಿಕಾರಿ**

ವಿಶ್ವದಾದ್ಯಂತ 60 ಲಕ್ಷಕ್ಕಿಂತ ಹೆಚ್ಚು ಜನರು ತಂಬಾಕು ಸೇವನೆಯಿಂದ ಉಂಟಾಗುವ ಕಾಯಿಲೆಗಳಿಂದ ಸಾವನ್ನಪ್ಪುತ್ತಿದ್ದಾರೆ. ಇದನ್ನು ಅರಿತುಕೊಂಡ ಸಾರ್ವಜನಿಕರು, ವಿಶೇಷವಾಗಿ ಯುವ ಜನರು ತಂಬಾಕು ಸೇವನೆಯಿಂದ ದೂರವಿರಬೇಕು ಎಂದರು.

ರಾಜ್ಯ ತಂಬಾಕು ನಿಯಂತ್ರಣ ಕೋಶದ ವಿಭಾಗೀಯ ಸಂಯೋಜಕ ಮಹಾಂತೇಶ್ ಬಿ. ಉಳ್ಳಾಗಡ್ಡಿ ಅವರು ಮಾತನಾಡಿ, ಭಾರತ ಸರ್ಕಾರವು ರಾಷ್ಟ್ರೀಯ ತಂಬಾಕು ನಿಯಂತ್ರಣ ಬಗ್ಗೆ 2003ರಲ್ಲಿ ಕೋಟ್ಪಾ ಕಾಯ್ದೆಯನ್ನು ಜಾರಿಗೊಳಿಸಿದೆ. ಸೆಕ್ಷನ್-4 ಪ್ರಕಾರ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುವುದು ನಿಷೇಧ, ಸೆಕ್ಷನ್-5ರ ಪ್ರಕಾರ ತಂಬಾಕು ಉತ್ಪನ್ನಗಳ ನೇರ ಹಾಗೂ ಪರೋಕ್ಷ ಜಾಹೀರಾತು, ಉತ್ತೇಜನ ಪ್ರಯೋಜಕತೆ ನಿಷೇಧ, ಸೆಕ್ಷನ್-6(ಎ) ತಂಬಾಕು ಉತ್ಪನ್ನಗಳು ಅಪ್ರಾಪ್ತ ವಯಸ್ಕರಿಗೆ (21 ವರ್ಷದೊಳಗಿನ ಮಕ್ಕಳು) ಸಿಗದಂತೆ ನಿಯಂತ್ರಣ ಮಾಡುವುದು, ಸೆಕ್ಷನ್-6ಬಿ ಪ್ರಕಾರ ಶಿಕ್ಷಣ ಸಂಸ್ಥೆಗಳ 100 ಅಂತರ ಗಜಗಳ ವ್ಯಾಪ್ತಿಯಲ್ಲಿ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುವುದು ಶಿಕ್ಷಾರ್ಹ ಅಪರಾಧ, ಸೆಕ್ಷನ್-7 ಪ್ರಕಾರ ಸಿಗರೇಟ್ ಮತ್ತು ಇತರೆ ತಂಬಾಕು ಉತ್ಪನ್ನಗಳ ಮೇಲೆ ನಿರ್ದಿಷ್ಟ ಆರೋಗ್ಯ ಎಚ್ಚರಿಕೆಗಳ ಸಂದೇಶಗಳಿಲ್ಲದೆ ಮಾರುವುದನ್ನು ನಿಷೇಧಿಸಲಾಗಿದೆ. ಜಿಲ್ಲಾ ಸರ್ವೇಕ್ಷಣಾ ಮತ್ತು ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ. ನಂದಕುಮಾರ ಎಚ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಿವಾನಂದ ವಿ.ಪಿ., ತಂಬಾಕು ನಿಯಂತ್ರಣ ಕೋಶದ ಜಿಲ್ಲಾ ಸಲಹೆಗಾರ ಸಂಗಪ್ಪ ಮಮಟಗೇರಿ, ಸೈಕಾಲಾಜಿಸ್ಟ್ ಶಾಂತಮ್ಮ ಕಟ್ಟಿಮನಿ, ಸಮಾಜ ಕಾರ್ಯಕರ್ತೆ ಸರಸ್ವತಿ ಹಾಗೂ ಎನ್.ಎಸ್.ಎಸ್ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಪಾಲಿಕೆಯಲ್ಲಿ ಲೋಗೋ ಕದನ

ಕಾಂಗ್ರೆಸ್ ನಡೆಗೆ ಬಿಜೆಪಿ ಕೆಂಡಾಮಂಡಲ

◆**ಕಲಬುರಗಿ:** ಮಹಾನಗರ ಪಾಲಿಕೆಯ ಅಧಿಕೃತ ಲೋಗೋದಲ್ಲಿದ್ದ ಕಮಲದ ಚಿಹ್ನೆ ಕಿತ್ತೊಗೆಯಲು ಕಾಂಗ್ರೆಸ್ ಆಡಳಿತ ಮಂಡಳಿ ಮುಂದಾಗಿರುವುದು ನಗರದಲ್ಲಿ ಭಾರಿ ರಾಜಕೀಯ ಕಿಚ್ಚು ಹಚ್ಚಿದೆ. ಅಭಿವೃದ್ಧಿ ಮರೆತು ಚಿಹ್ನೆ ರಾಜಕೀಯಕ್ಕೆ ಕೈ ಹಾಕಿದ ಮೇಯರ್ ನಡೆಗೆ ಬಿಜೆಪಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ಪಾಲಿಕೆ ಅಕ್ಷರಶಃ ರಣಾಂಗಣವಾಗಿ ಮಾರ್ಪಟ್ಟಿದೆ.

ಮೇಯರ್ ವರ್ಷಾ ಜಾನೆ ನೇತೃತ್ವದಲ್ಲಿ ಬುಧವಾರ ನಡೆದ ಸಾಮಾನ್ಯ ಸಭೆಯಲ್ಲಿ, ಲೋಗೋದಲ್ಲಿದ್ದ ಕಮಲದ ಹೂವಿನ ಗುರುತನ್ನು ಕೈಬಿಟ್ಟು ಹೊಸ ವಿನ್ಯಾಸಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ನಿರ್ಣಯಿಸಲಾಗಿದೆ.ಶರಣಬಸವೇಶ್ವರ ದೇವಸ್ಥಾನ ಹಾಗೂ ಖ್ವಾಜಾ ಬಂದೇ ನವಾಜ್ ದರ್ಗಾದೊಂದಿಗೆ ಸಮನ್ವಯದ ಸಂಕೇತವಾಗಿದ್ದ ಕಮಲವನ್ನು ಬಿಜೆಪಿ ಚಿಹ್ನೆ ಎಂಬ ಕಾರಣಕ್ಕೆ ತೆಗೆಯಲು ಹೊರಟಿರುವುದು ಕೇಸರಿ ಪಡೆಯನ್ನು ಕೆರಳಿಸಿದೆ.

ಸದಸ್ಯರ ಗೈರನ್ನೇ ಬಳಸಿಕೊಂಡ 'ಕೈ' ತಂತ್ರ: ಬಿಜೆಪಿ ಸದಸ್ಯರು ಸಭೆಗೆ ಬಾರದಿದ್ದ ಸಮಯವನ್ನೇ ನೋಡಿಕೊಂಡು ಆಡಳಿತ ಪಕ್ಷ ಕಾಂಗ್ರೆಸ್ ಈ ನಿರ್ಧಾರ ಕೈಗೊಂಡಿದೆ ಎಂಬ ಆರೋಪ ಕೇಳಿಬಂದಿದೆ. ಅಭಿವೃದ್ಧಿ ಕೆಲಸ ಮಾಡಲು ಯೋಗ್ಯತೆ ಇಲ್ಲದ ಕಾಂಗ್ರೆಸ್, ಇತಿಹಾಸ ಅಳಿಸಲು ಹೊರಟಿದೆ ಎಂದು ಬಿಜೆಪಿ ಸದಸ್ಯರು ಹರಿಹಾಯ್ದಿದ್ದಾರೆ. ಇದಕ್ಕೆ ಪ್ರತಿಯಾಗಿ, ಸಾರ್ವಜನಿಕ ಲೋಗೋದಲ್ಲಿ ಒಂದು ಪಕ್ಷದ ಚಿಹ್ನೆ ಇರುವುದು ಸರಿಯಲ್ಲ ಎಂದು ಕಾಂಗ್ರೆಸ್ ಸಮರ್ಥಿಸಿಕೊಂಡಿದೆ.

ಕಲಬುರಗಿ ಪಾಲಿಕೆಯಲ್ಲಿ ಈಗ ಜನರ ಸಮಸ್ಯೆಗಿಂತ ಲೋಗೋ ಕಿತ್ತಾಟವೇ ಮುಂಚೂಣಿಗೆ ಬಂದಿದ್ದು, ಈಗಾಗಲೇ ಲೋಗೋ ಬದಲಾವಣೆ ಪ್ರಸ್ತಾವನೆ ಸರ್ಕಾರದ ಅಂಗಳ ತಲುಪಿದ್ದು, ರಾಜ್ಯ ಸರ್ಕಾರದ ಮುಂದಿನ ನಡೆ ಕುತೂಹಲ ಮೂಡಿಸಿದೆ.



> **ಪಾಲಿಕೆ ಲೋಗೋದಲ್ಲಿನ ಕಮಲ ಸೌಂದರ್ಯ ಮತ್ತು ಸಂಸ್ಕೃತಿಯ ಸಂಕೇತವೇ ಹೊರತು ಕೇವಲ ರಾಜಕೀಯವಲ್ಲ. ಅಭಿವೃದ್ಧಿ ಮರೆತು ಲೋಗೋ ರಾಜಕೀಯ ಮಾಡುತ್ತಿರುವ ಕಾಂಗ್ರೆಸ್‌ನ ಈ ತುಘಲಕ್ ನಿರ್ಧಾರ ಖಂಡನೀಯ. ಸನಾತನ ಸಂಸ್ಕೃತಿಯ ವಿರೋಧಿಯಾಗಿರುವ ಆಡಳಿತ ಮಂಡಳಿಯ ಈ ಏಕಪಕ್ಷೀಯ ನಡೆಯ ವಿರುದ್ಧ ಬಿಜೆಪಿ ಬೀದಿಗಿಳಿದು ಹೋರಾಟ ಮಾಡುವುದರ ಜೊತೆಗೆ ಕಾನೂನು ಹೋರಾಟ ಕೂಡ ಮಾಡಲಿದೆ.**
>
> ■ **ಚಂದು ಪಾಟೀಲ, ಬಿಜೆಪಿ ಮಹಾನಗರ ಅಧ್ಯಕ್ಷ**

ಶಿಕ್ಷಣದ ಜೊತೆಗೆ ಸೇವಾ ಮನೋಭಾವ ಮುಖ್ಯ

◆**ಕುಷ್ಟಗಿ:** ಸಮಾಜದಲ್ಲಿ ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಸಮಾಜದ ಸೇವಾ ಮಾಡುವ ಮನೋಭಾವನೆ ಹೊಂದಿಬೇಕು ಎಂದು ವಿರೋಧ ಪಕ್ಷದ ಮುಖ್ಯ ಸಚೇತಕ ಹಾಗೂ ಶಾಸಕ ದೊಡ್ಡನಗೌಡ ಎಚ್.ಪಾಟೀಲ ಹೇಳಿದರು.

ತಾಲೂಕಿನ ಅಡವಿಬಾವಿ ಗ್ರಾಮದ ಮಾರುತೇಶ್ವರ ದೇವಸ್ಥಾನದ ಆವರಣದಲ್ಲಿ ಮಾತೋಶ್ರೀ ಹೊಳೆಯಮ್ಮ ಮಹಿಳಾ ಪದವಿ ಕಲಾ ಮಹಾವಿದ್ಯಾಲಯ ಹಾಗು ಶ್ರೀಅಕ್ಕ-ಬುಕ್ಕ ವಿದ್ಯಾವರ್ಧಕ ಸಂಸ್ಥೆ ನೇತೃತ್ವದಲ್ಲಿ ಏರ್ಪಡಿಸಿದ್ದ ಎನ್ಎಸ್ಎಸ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಅಡವಿಬಾವಿ ಗ್ರಾಮದಲ್ಲಿ ಮಾತೃಶ್ರೀ ಹೊಳಿಯಮ್ಮ ಕಾಲೇಜಿನ ವಿದ್ಯಾರ್ಥಿಗಳಿಂದ ಸ್ವಚ್ಛತಾ ಮತ್ತು ಸಂಸ್ಕøತಿಕ ಕಾರ್ಯಕ್ರಮ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಿ ಜನ ಜಾಗೃತಿ ಮಾಡುತ್ತಿರುವುದು ಇದು ಒಂದು ಸಂತೋಷದ ಸಂಗತಿ ಎಂದು ಬಣ್ಣಿಸಿದರು.

ಗ್ರಾಪಂ ಮಾಜಿ ಅಧ್ಯಕ್ಷರಾದ ಶರಣಪ್ಪ ಮದ್ದೂರು ಅಧ್ಯಕ್ಷತೆ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಕ್ಷೇತ್ರ ಶಿಕ್ಷಣಾಧಿಕಾರಿ ಉಮಾದೇವಿ ಬಸಾಪುರ ಗ್ರಾಪಂ ಪಿಡಿಒ ಹರೀಶ್, ಯುವ ಮುಖಂಡರಾದ ಮಹಾಲಿಂಗಪ್ಪದೋಟಿಹಾಳ,ಮರಸಣ್ಣತಾಳದ ನಿವೃತ್ತ ಅಧಿಕಾರಿ ಸಿದ್ದರಾಮಪ್ಪ ವಂದಾಲಿ, ಗಿರಿಜಾ ಮಾಲಿಪಾಟೀಲ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ಸರ್ಕಾರಿ ಪ್ರೌಢ ಮತ್ತು ಪ್ರಾಥಮಿಕ ಶಾಲಾ ಮುಖ್ಯಗುರು ಬಸವರಾಜಮಡಿವಾಳ,ಶಂಕ್ರಪ್ಪ ರಾಠೋಡ, ಗ್ರಾಪಂ ಮಾಜಿ ಸದಸ್ಯರಾದ ಮುತ್ತಪ್ಪ ಬಳೂಟಗಿ, ಸುರೇಶಗೌಡ ಮಾಲಿ ಪಾಟೀಲ, ಮಲ್ಲಿಕಾರ್ಜುನ ದೋಟಿಹಾಳ, ಪ್ರಮುಖರಾದ ಭೀಮಪ್ಪ ಕುಮಟಗಿ, ಶಿವಮೂರ್ತಪ್ಪ ಹರ್ಯಾಳ, ಶರಣಪ್ಪ ಮಾದರ, ಸತ್ಯಪ್ಪ ಹಿರೇಮನಿ, ಮಾತೃಶ್ರೀ ಸಂಸ್ಥೆಯ ಸುಂದರೇಶ್ ಚೌಡ್ಕಿ, ತಿಪ್ಪಣ್ಣ ಬಿಜಕಲ್, ಗ್ರಾಮದ ವಿವಿಧ ಸಂಘ ಸಂಸ್ಥೆಗಳ ಅಧ್ಯಕ್ಷರು ಉಪಾಧ್ಯಕ್ಷರು ಸರ್ವ ಸದಸ್ಯರು ಗುರು ಹಿರಿಯರು ಮತ್ತು ಮಹಿಳೆಯರು ಅಕ್ಕ ಬುಕ್ಕ ಸಂಸ್ಥೆಯ ಪದಾಧಿಕಾರಿಗಳು ಭಾಗವಹಿಸಿದ್ದರು ರಾಮಕೃಷ್ಣ ಬೇವೂರು ಸ್ವಾಗತಿಸಿದರು ನಾಗರಾಜ್ ಹಳ್ಳಿಗುಡಿ ವಂದಿಸಿದರು.



ಪಾಲಕರಲ್ಲಿ ಕ್ರೀಡಾ ಮನೋಭಾವ ಮೂಡಲಿ: ಶ್ರೀದೇವಿ

◆**ಗಂಗಾವತಿ:** ಕಾರಟಗಿ ನವನಗರದ ಕಮ್ಮವಾರಿ ಶಿಕ್ಷಣ ಸಂಸ್ಥೆ ರೆಡ್ಡಿ ವೀರಣ್ಣ ಸಂಜೀವಪ್ಪ ವಸತಿ ಶಾಲೆಯಲ್ಲಿ ಪಾಲಕರಿಗೆ ಕ್ರೀಡಾಕೂಟ ಮತ್ತು ಯುಕೆಜಿ ವಿದ್ಯಾರ್ಥಿಗಳಿಗೆ ಗ್ರಾಜುಯೇಷನ್ ಡೇ ಕಾರ್ಯಕ್ರಮ ಜರಗಿತು.

ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ, ರಾಮಕೃಷ್ಣ ಪರಮಹಂಸರ ಜಯಂತಿ ನಿಮಿತ್ತ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು.

ಈ ವೇಳೆ ಐಸಿಎಸ್‌ಇ ಪ್ರಾಂಶುಪಾಲರು ಶ್ರೀದೇವಿ ಕೊಲ್ಲಾ ಮಾತನಾಡಿ, ಪಾಲಕರಲ್ಲಿ ಕ್ರೀಡಾ ಮನೋಭಾವ ಮೂಡಿಸಲು, ಒತ್ತಡ ಕಡಿಮೆ ಮಾಡಲು ಮತ್ತು ಶಾಲೆ-ಪಾಲಕರ ನಡುವಿನ ಬಾಂಧವ್ಯವನ್ನು ಹೆಚ್ಚಿಸಲು ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತದೆ. ಇವುಗಳಲ್ಲಿ ಓಟ, ಗ್ಲಾಸ್ ಜೋಡಣೆ, ಚಂಡು ಎಸೆತ,ರಿಂಗ್ ಸ್ಪರ್ಧೆ ಮೋಜಿನ ಆಟಗಳನ್ನು ಆಯೋಜಿಸಲಾಗಿದೆ, ಪಾಲಕರು ಉತ್ಸಾಹದಿಂದ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದಾರೆ ಅವರಿಗೆ ಧನ್ಯವಾದಗಳು. ಅದೇ ರೀತಿ ಕೆಜಿ ಗ್ರಾಜುಯೇಷನ್ ಡೇ ಯುಕೆಜಿ ಮುಗಿಸಿ ಪ್ರಾಥಮಿಕ ಶಾಲೆಗೆ ಕಾಲಿಡುತ್ತಿರುವ ಪುಟಾಣಿಗಳ ಕಲಿಕೆಯ ಮೊದಲ ಮೈಲಿಗಲ್ಲನ್ನು ಆಚರಿಸುವ ವಿಶೇಷ ಸಮಾರಂಭವಾಗಿದೆ. ಇದು ಮಕ್ಕಳಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಲು, ಪದವಿ ಪ್ರಮಾಣಪತ್ರಗಳನ್ನು ನೀಡಿ ಅವರ ಸಾಧನೆಯನ್ನು ಸಂಭ್ರಮಿಸುವ ಸಂತೋಷದ ದಿನವಾಗಿದೆ ಎಂದರು.



ಕೆಜಿ ವಿದ್ಯಾರ್ಥಿಗಳು ಮಾರ್ಚ್ ಫಾಸ್ಟ್, ಕ್ರೀಡಾ ಜ್ಯೋತಿ ತರುವುದು ವಿಶೇಷವಾಗಿತ್ತು ಪಾಲಕರು ಮೆಚ್ಚಿ ಪ್ರಶಂಶಿಸಿದರು. ನಂತರ ಸ್ಪರ್ಧೆಯಲ್ಲಿ ವಿಜೇತರಾದ ಪಾಲಕರಿಗೆ ಬಹುಮಾನಗಳನ್ನು ವಿತರಿಸಲಾಯಿತು.


ಆಡಳಿತ ಅಧಿಕಾರಿ ಶ್ರೀಮನ್ ನಾರಾಯಣ, ಪ್ರಾಂಶುಪಾಲರು ಡಾ.ಮಹಮ್ಮದ್‌ರಫೀಕ್,ಸಾಜಿದಬೇಗಂ,ಸೌಮ್ಯದೇವಿ,ಗಂಗಮ್ಮ,ಶಿಕ್ಷಕಿಯರು ಅಪರ್ಣ, ಶ್ವೇತಾ, ಪ್ರತಿಭಾ, ಹೇಮಾ, ಮೇರಿ, ರಮಾದೇವಿ, ಗೋಪಿಕೃಷ್ಣ ಬಸವರಾಜ್, ಶಿಕ್ಷಕ ವೃಂದ ವಿದ್ಯಾರ್ಥಿ ವಿದ್ಯಾರ್ಥಿನಿಯರಿದ್ದರು.

ಹಸಿದವರಿಗೆ ಇಂದಿರಾ ಕ್ಯಾಂಟೀನ್ ಹುಡುಕುವ ಸವಾಲು

▸**ಸಿದ್ದಯ್ಯ ಹೆಸರೂರು**

◆**ಮಸ್ಕಿ:** ಇಂದಿರಾ ಕ್ಯಾಂಟೀನ್ ಪಟ್ಟಣದ ಹೃದಯಭಾಗದಲ್ಲೇ ಇದ್ದರೂ ಸಾರ್ವಜನಿಕರಿಗೆ ಕಾಣದಂತಾಗಿದೆ! ಮಸ್ಕಿಯ ಇಂದಿರಾ ಕ್ಯಾಂಟೀನ್ ಹೊಸ ಬಸ್ ನಿಲ್ದಾಣದ ಹತ್ತಿರ ಕಳೆದ ವರ್ಷ ಅಂದರೆ, 2025 ಫೆ.23ರಂದು ಮಸ್ಕಿಯಲ್ಲಿ ಪ್ರಾರಂಭಿಸಲಾಯಿತು.

ಅಂದಿನಿಂದ ಅಲ್ಲಿನ ಹೊರಗೋಡೆಗೆ ಸಣ್ಣ ಅಕ್ಷರದಲ್ಲಿ ಇಂದಿರಾ ಕ್ಯಾಂಟೀನ್ ಎಂದು ಬರೆಯಲಾಗಿದೆ. ವಿವಿಧ ಹಳ್ಳಿಗಳಿಂದ ಬರುವ ಸಾರ್ವಜನಿಕರಿಗೆ ಇಲ್ಲಿ ಇಂದಿರಾ ಕ್ಯಾಂಟೀನ್ ಎಲ್ಲಿದೆ ಎನ್ನುವುದೇ ಸಿಗುವುದಿಲ್ಲ. ಅವರು ಸ್ಥಳೀಯರ ಬಳಿ ಕೇಳಿ ಕ್ಯಾಂಟೀನ್ ವಿಳಾಸ ಹುಡುಕುವುದು ಅನಿವಾರ್ಯ.



ಇಂದಿರಾ ಕ್ಯಾಂಟೀನ್ ಬೋರ್ಡ್ ಮತ್ತೆ ಎದ್ದು ನಿಲ್ಲುವ ಭಾಗ್ಯ ಇನ್ನೂ ಸಿಕ್ಕಿಲ್ಲ. ಪುರಸಭೆ ಅಧಿಕಾರಿಗಳು, ಜನಪ್ರತಿನಿಧಿಗಳು ಈ ಬಗ್ಗೆ ಗಮನಹರಿಸಿಲ್ಲ. ಪ್ರಶ್ನಿಸಿದರೆ ಅಧಿಕಾರಿಗಳು ಕುಂಟು ನೆಪ ಹೇಳುತ್ತಾರೆ ಎನ್ನುತ್ತಾರೆ ಸಾರ್ವಜನಿಕರು.

ಶಾಸಕ ಆರ್.ಬಸನಗೌಡ ತುರವಿಹಾಳ, ಕ್ಯಾಂಟಿನ್ ಒಳಗಡೆ ಗೋಡೆಗೆ ಇಂದಿರಾ ಗಾಂಧಿ ಫೋಟೋ ಹಾಗೂ ಮೆನು ಇದೆ. ಆದಷ್ಟು ಬೇಗನೆ ಬೋರ್ಡ್ ಹಾಕಿಸುವ ಕೆಲಸ ಮಾಡುತ್ತೇನೆ ಎಂದರು.

ಪುರಸಭೆ ಮುಖ್ಯಾಧಿಕಾರಿ ನರಸರೆಡ್ಡಿ, ಇಂದಿರಾ ಕ್ಯಾಂಟೀನ್‌ನ ನಾಮಫಲಕ ಜಿಲ್ಲಾಧಿಕಾರಿ ಕಾರ್ಯಾಲಯದಿಂದ ಅಳವಸಲಾಗುತ್ತಿದ್ದು, ಇದರ ಬಗ್ಗೆ ನಮ್ಮ ಸಿಬ್ಬಂದಿಯನ್ನು ಕಳಿಸಿ ನಾಮಫಲಕ ಹಾಕಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

ಮಾ.15ಕ್ಕೆ ರೇಣುಕಾಚಾರ್ಯರ ಮೂರ್ತಿ ಪ್ರತಿಷ್ಠಾಪನೆ

◆**ಯಲಬುರ್ಗಾ:** ವೀರಮಹೇಶ್ವರ ಜಂಗಮ ಜಂಗಮ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ತಾಲೂಕಿನ ಕಲ್ಲೂರು ಗ್ರಾಮದಲ್ಲಿ ಮಾ.15ರಂದು ಶ್ರೀಜಗದ್ಗುರು ರೇಣುಕಾಚಾರ್ಯರ ಮೂರ್ತಿ ಪ್ರತಿಷ್ಠಾಪನೆ, ಜಯಂತ್ಯುತ್ಸವ, ತಾಲೂಕು ಸಮಾವೇಶ, ಜಂಗಮ ವಟುಗಳಿಗೆ ಅಯ್ಯಾಚಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ಜಂಗಮ ಸಮಾಜ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹಂಪಯ್ಯಸ್ವಾಮಿ ಹಿರೇಮಠ ಹೇಳಿದರು.

ಪಟ್ಟಣದ ಸರ್ಕಿಟ್ ಹೌಸ್‌ನಲ್ಲಿ ಗುರುವಾರ ನಡೆದ ತಾಲೂಕು ಜಂಗಮ ಸಮಾಜದ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು ಪ್ರತಿ ವರ್ಷದಂತೆ ಈ ವರ್ಷ ಕೂಡ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಅತ್ಯಂತ ವಿಜೃಂಬಣೆಯಿಂದ ಆಚರಿಸಲಾಗುತ್ತಿದೆ ಎಂದರು.

ಮಾ.11ರಿಂದ 15ರವರೆಗೆ ಒಟ್ಟು ಐದು ದಿನಗಳ ಕಾಲ ಪ್ರತಿ ಸಂಜೆ ಶಿರಕೋಳದ ಗುರುಸಿದ್ದೇಶ್ವರ ಸ್ವಾಮೀಜಿಗಳಿಂದ ಆಧ್ಯಾತ್ಮಿಕ ಪ್ರವಚನ ಜೀವನ ದುರುಶನ ನಡೆಯಲಿದೆ. ಅಂದು ಗ್ರಾಮದಲ್ಲಿ ಜಗದ್ಗುರು ರೇಣುಕಾಚಾರ್ಯರರ ಮೂರ್ತಿ ಪ್ರತಿಷ್ಠಾಪನೆಯನ್ನು ಬೆಳಿಗ್ಗೆ ನಡೆಯಲಿದೆ. ಜಂಗಮ ವಟುಗಳಿಗೆ ಶಿವದೀಕ್ಷಾ ನಡೆಯಲಿದೆ ಎಂದು ಹೇಳಿದರು.

ಮಾ.15ರಂದು ಕಲ್ಲೂರಿನಲ್ಲಿ ನಡೆಯುವ ರೇಣುಕಾಚಾರ್ಯರರ ಜಯಂತ್ಯುತ್ಸವ, ತಾಲೂಕು ಮಟ್ಟದ ಸಮಾವೇಶ, ಬೆಳಿಗ್ಗೆ ಜಗದ್ಗುರ ಭಾವಚಿತ್ರ ಮೆರವಣಿಗೆಯೊಂದಿಗೆ ಕುಂಭ ಮೆರವಣಿಗೆ ವಿವಿಧ ವಾದ್ಯ ಮೇಳದೊಂದಿಗೆ ನಡೆಯಲಿದೆ ಎಂದರು.



ಪಪಂ ಮಾಜಿ ಅಧ್ಯಕ್ಷ ಅಂದಯ್ಯ ಕಳ್ಳಿಮಠ, ಡಾ.ಅಂದಾನಯ್ಯ ಶ್ಯಾಡ್ಲಗೇರಿಮಠ, ಬಸವರಾಜ ಮಠದ, ಡಾ.ನಾಗಯ್ಯ ಗುರುಮಠ, ವೀರುಪಾಕ್ಷಯ್ಯ ಪರಯ್ಯನಮಠ, ವಿರುಪಾಕ್ಷಯ್ಯ ಗಂದಧ, ಗವಿಸಿದ್ದಯ್ಯ ಹಿರೇಮಠ ಸೇರಿದಂತೆ ಮತ್ತಿತರರು ಮಾತನಾಡಿದರು.

ವರದಯ್ಯ ಹಿರೇಮಠ, ಅಂದಾನಯ್ಯ ಹಿರೇಮಠ, ಶರಣಯ್ಯ ಮೂಳ್ಳೂರುಮಠ, ಶಿವಮೂರ್ತಯ್ಯ ಪುರಾಣಿಕಮಠ, ಕಳಕಯ್ಯ ಶಿವಪ್ಪಯ್ಯನಮಠ, ಬಸವಲಿಂಗಯ್ಯ ಜಡಿಮಠ, ಅಜ್ಜಯ್ಯ ಹಿರೇಮಠ, ಬಸಯ್ಯ ಮೈಸೂರುಮಠ, ಶರಣಯ್ಯ ಕೊತಬಾಳ, ಸಿದ್ರಾಮಯ್ಯ ಹಿರೇಗೌಡ್ರ, ಶಿವಮೂರ್ತಯ್ಯ ಗುರುಮಠ, ಶಂಕ್ರಯ್ಯ ಚೌಕಿಮಠ, ಕುಮಾರ ಬಳಗೇರಿಮಠ, ಪಂಚಾಕ್ಷರಯ್ಯ ಕಾಟ್ರಳ್ಳಿಮಠ, ಕುಮಾರಸ್ವಾಮಿ ಕಲ್ಯಾಣಮಠ, ಗವಿಸಿದ್ದಯ್ಯ ಹಿರೇಗೌಡ್ರ,ಮಲ್ಲಯ್ಯ ಸರಗಣಾಚಾರ, ಮಲ್ಲಿಕಾರ್ಜುನಯ್ಯ ಗಣಚಾರಿ, ಮಂಜುನಾಥ ಶಾಸ್ತ್ರಿಮಠ, ಕಲ್ಲಯ್ಯ ಹಿರೇಮಠ, ಸಿದ್ದಯ್ಯ ಹಿರೇಮಠ, ಬಸವರಾಜಯ್ಯ ಹಿರೇಮಠ, ಕಲ್ಲಯ್ಯ ಸಂಗನಾಳಮಠ, ಸಿದ್ದಲಿಂಗಯ್ಯ ಸಸಿಮಠ ಮತ್ತಿತರರು ಇದ್ದರು.

ಪೈಪ್ ನೀರು ಸೋರಿಕೆ ಸರಿಪಡಿಸಿ

◆**ಯಲಬುರ್ಗಾ:** ತಾಲೂಕಿನ ಮಾರನಾಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕಶಾಲೆಯಹತ್ತಿರಸಾರ್ವಜನಿಕರಕುಡಿಯುವನೀರಿನಸಿಸ್ಟನಿನ್ ಪೈಪ್ ನೀರು ಸೋರಿಕೆ ವ್ಯರ್ಥವಾಗಿ ಹರಿದುಹೋಗುತ್ತಿದ್ದು ಕೂಡಲೇ ತುಮ್ಮರಗುದ್ದಿ ಗ್ರಾಮ ಪಂಚಾಯಿತಿಯವರು ಇತ್ತ ಗಮನಹರಿಸಿ ನೀರು ಸೋರಿಕೆ ತಡೆಗಟ್ಟಿ ಸ್ವಚ್ಛತೆಗೆ ಮುಂದಾಗಬೇಕು ಎಂದು ಗ್ರಾಮದ ಮುಖಂಡರಾದ ರಾಮಣ್ಣ ನಾಯಕ, ಶಂಕ್ರಪ್ಪ ನಾಯಕ ಮತ್ತಿತರರು ಆಗ್ರಹಿಸಿದ್ದಾರೆ.



ಸುಮಾರು ಒಂದೆರೆಡು ತಿಂಗಳಿನಿಂದಲೂ ಈ ಪೈಪ್‌ನಿಂದ ನೀರು ಸೋರಿಕೆಯಾಗಿ ಸಾಕಷ್ಟು ಪ್ರಮಾಣದಲ್ಲಿ ನೀರು ವ್ಯರ್ಥವಾಗಿ ಹರಿದುಹೋಗುತ್ತಿದೆ ಈಗಗಲೇ ಬೇಸಿಗೆ ಕಾಲ ಪ್ರಾರಂಭವಾಗಿರುವುದರಿಂದ ನೀರಿನ ಸಮಸ್ಯೆ ಉಲ್ಬಣವಗುವ ಮುನ್ನ ಗ್ರಾಪಂದವರು ಈ ಸೋರಿಕೆಯನ್ನು ತಡೆಯಬೇಕಿದೆ.ನಿತ್ಯ ವ್ಯರ್ಥ ನೀರು ಹರಿದು ಇನ್ನೊಂದಡೆ ಸಂಗ್ರಹಗೊಂಡು ಕೊಳಚೆಯಾಗಿ ಶಾಲೆಯ ಹತ್ತಿರ ದುರ್ವಾಸನೆ ಬೀರುತ್ತಿದೆ ಇದರಿಂದ ಶಾಲಾ ವಿದ್ಯಾರ್ಥಿಗಳಿಗೆ ಸಾಕಷ್ಟು ತೊಂದರೆ ಜತೆಗೆ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಹೆಚ್ಚಿದೆ ಕೂಡಲೇ ಗ್ರಾಪಂದವರು ಒಡೆದು ನೀರು ಸೋರುತ್ತಿರುವ ಪೈಪ್‌ನನ್ನು ದುರಸ್ತಿಗೊಳಿಸಿ ಸ್ವಚ್ಛತೆ ಹಾಗೂ ನೀರು ವ್ಯರ್ಥವಾಗಿ ಹರಿದುಹೋಗದಂತೆ ಸರಿಪಡಿಸಿ ಸಾರ್ವಜನಿಕರಿಗೆ ನೀರು ಸಮರ್ಪಕವಾಗಿ ಬಳಕೆಗೆ ಅನುಕೂಲ ಕಲ್ಪಿಸಿಕೊಡಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಅಂತಾರಾಜ್ಯ ಬೈಕ್ ಖದೀಮರ ಬಂಧನ

◆**ಕಲಬುರಗಿ:** ನಗರದ ಸಬ್ ಅರ್ಬನ್ ಪೊಲೀಸ್ ಠಾಣೆ ಪೊಲೀಸರು ನಡೆಸಿದ ಭರ್ಜರಿ ಕಾರ್ಯಾಚರಣೆಯಲ್ಲಿ ಇಬ್ಬರು ಅಂತರರಾಜ್ಯ ಕುಖ್ಯಾತ ಬೈಕ್ ಕಳ್ಳರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.ಬಂಧಿತರಿಂದ ಒಟ್ಟು 12.60 ಲಕ್ಷ ರೂ. ಮೌಲ್ಯದ 14 ವಿವಿಧ ಕಂಪನಿಗಳ ಬೈಕ್‌ಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಕಲಬುರಗಿ ನಗರ ಪೋಲಿಸ್ ಆಯುಕ್ತ ಡಾ.ಶರಣಪ್ಪ ಢಗೆ ತಿಳಿಸಿದರು.





ನಗರದ ಪೋಲಿಸ್ ಆಯುಕ್ತರ ಕಚೇರಿಯಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಮೊಹಮದ್ ನಾಸೀರ್ ತಂದೆ ಮೊಹಮ್ಮದ್ ಇಸ್ಮಾಯಿಲ್ (24), ಮೊಹಮದ್ ಆರೀಫ್ ತಂದೆ ಮೊಹಮ್ಮದ್ ಜಾಕೀರ್ ಬಂಧಿತ ಆರೋಪಿಗಳಿದ್ದು, ರೂಡಿಗತ ಬೈಕ್ ಕಳ್ಳರಾದ ಈ ಆರೋಪಿಗಳು ನಗರದ ರೋಜಾ ಬಡಾವಣೆಯ ನಿವಾಸಿಗಳಾಗಿದ್ದಾರೆ. ಡುಬ್ಲಿಕೇಟ್ ಕೀಗಳನ್ನು ಮಾಡಿ ಕಳ್ಳತನ ಮಾಡಿದ ಬೈಕ್,ಗಳನ್ನು ತರಕಾರಿ ಮಾರುವವರಿಗೆ ಸೇರಿದಂತೆ ಇನ್ನೀತರರಿ ಕಡಿಮೆ ದರದಲ್ಲಿ ಮಾರಾಟ ಮಾಡುತ್ತಿದ್ದರು ಎಂಬುದು ತನಿಖೆ ವೇಳೆ ತಿಳಿದುಬಂದಿದೆ ಎಂದು ಹೇಳಿದರು.

ಆರೋಪಿಗಳನ್ನು ಕುಲಂಕೂಷವಾಗಿ ವಿಚಾರಣೆಗೆ ಒಳಪಡಿಸಿದಾಗ ಹಲವು ರಾಜ್ಯಗಳಲ್ಲಿ ಬೈಕ್ ಕಳವು ಪ್ರಕರಣಗಳಲ್ಲಿ ಭಾಗಿಯಾಗಿರುವುದು ತನಿಖೆಯಿಂದ ಬೆಳಕಿಗೆ ಬಂದಿದ್ದು,ಕಲಬುರಗಿ ನಗರದಲ್ಲಿ ಕಳ್ಳತನವಾದ 3 ಬೈಕ್,ಜಿಲ್ಲೆಯಾದ್ಯಂತ ಕಳ್ಳತನವಾದ 2 ಬೈಕ್, ಬೀದರ್‌ನಲ್ಲಿ ಕಳ್ಳತನವಾದ 2 ಬೈಕ್, ನೆರೆಯ ಮಹಾರಾಷ್ಟ್ರದ ಸೋಲಾಪುರದಲ್ಲಿ 1, ತೆಲಂಗಾಣದ ಸಂಗಾರೆಡ್ಡಿಯಲ್ಲಿ 2, ಹೈದರಾಬಾದನಲ್ಲಿ 4 ಬೈಕ್ ಹೀಗೆ ಒಟ್ಟು 12.60 ಲಕ್ಷ ರೂಪಾಯಿ ಮೌಲ್ಯದ ವಿವಿಧ ಕಂಪನಿಗಳ 14 ಬೈಕ್ ವಶಕ್ಕೆ ಪಡೆಯಲಾಗಿದೆ ಎಂದು ಮಾಹಿತಿ ನೀಡಿದರು.

ಇಬ್ಬರು ರೂಢಿಗತ ಬೈಕ್ ಕಳ್ಳರಾಗಿದ್ದು,ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸರಣಿ ಕಳ್ಳತನ ಪ್ರಕರಣಗಳಿಗೆ ಇವರ ಸಂಪರ್ಕವಿರುವ ಸಾಧ್ಯತೆಯನ್ನೂ ಪೊಲೀಸರು ಪರಿಶೀಲಿಸುತ್ತಿದ್ದಾರೆ ಎಂದರು.

ಕಳೆದ ಅ.28ರಂದು ದೂರುದಾರರಾದ ರೋಹಿತ್ ಪ್ರಕಾಶ್ ಕೋಲಾರಕರ್ ಎಂಬುವವರು ಮನೆಯ ಮುಂದೆ ನಿಲ್ಲಿಸಿದ್ದ ಬೈಕ್ ಯಾರೋ ಕಳ್ಳತನ ಮಾಡಿಕೊಂಡು ಹೋಗಿದ್ದಾರೆ ಎಂದು ಸಬ್ ಅರ್ಬನ್ ಪೋಲಿಸ್ ಠಾಣೆಯಲ್ಲಿ 311/2025 ಕಲಂ 303(2) ಬಿಎನ್‌ಎಸ್ 2023ರಡಿ ಪ್ರಕರಣ ದಾಖಲಿಸಿಕೊಂಡು ಆರೋಪಿಗಳ ಪತ್ತೆಗಾಗಿ ನಗರ ಪೋಲಿಸ್ ಆಯುಕ್ತ ಡಾ.ಶರಣಪ್ಪ ಎಸ್ ಡಿ ಮಾರ್ಗದರ್ಶನದಲ್ಲಿ ಉಪ ಪೋಲಿಸ್ ಆಯುಕ್ತ ಪ್ರವೀಣ್ ನಾಯಕ್,ಸಹಾಯಕ ಪೋಲಿಸ್ ಆಯುಕ್ತ ಬಸವೇಶ್ವರ ಹೀರಾ, ಸಬ್ ಅರ್ಬನ್ ಪಿಎಸ್‌ಐ ನಟರಾಜ ಲಾಡೆ ಸೇರಿದಂತೆ ಇತರೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ತಂಡವು ಆರೋಪಿಗಳ ಬಂಧಿಸುವಲ್ಲಿ ಯಶಸ್ವಿಯಾಗಿದೆ ಎಂದರು.

ಕಿರುಸುದ್ದಿ

ಸರ್ಕಾರದಿಂದ ಮಾಧ್ಯಮದ ಮೇಲೆ ಸವಾರಿ ಸರಿಯಲ್ಲ



ಯಾದಗಿರಿ: ರಾಜ್ಯ ಸರ್ಕಾರ ವಿಧಾನಸೌಧದ ಅಂಗಳದಲ್ಲಿ ಮಾಧ್ಯಮಗಳು ಹೀಗೆ ಇರಬೇಕು ಎಂದು ನಿಯಾಮವಳಿ ರೂಪಿಸಿರುವುದು ಮಾಧ್ಯಮಗಳ ಮೇಲಿನ ಹತ್ತಿಕ್ಕುವ ಕೆಲಸವಾಗಿದೆ. ಇದು ಪ್ರಜಾಪ್ರಭುತ್ವ ವಿರೋಧಿ ನಡೆಯಾಗಿದ್ದು ಸರ್ಕಾರ ತನ್ನ ಆದೇಶವನ್ನು ಕೂಡಲೇ ವಾಪಸ್ಸು ಪಡೆಯಬೇಕು ಎಂದು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಮಲ್ಲಪ್ಪ ಸಂಕೀನ್ ಆಗ್ರಹಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಪ್ರಜಾಪ್ರಭುತ್ವದ ಪವಿತ್ರ ಸ್ಥಳದಲ್ಲಿಯೇ ಮಾಧ್ಯಮಗಳಿಗೆ ಮೂಗುಧಾರ ಹಾಕುವಂತಹ ಕೆಲಸ ಮಾಡುತ್ತಿರುವುದು ಆಘಾತಕಾರಿಯಾಗಿದೆ. ಇದು ಜನರ ಧ್ವನಿಯನ್ನೇ ಕಸಿಯುವಂತಹ ಕುತಂತ್ರವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದನ್ನು ಗಂಭೀರವಾಗಿ ಪರಿಗಣಿಸಲು ಮುಂದಾಗಬೇಕಿದೆ. ಮಾಧ್ಯಮದ ಮೇಲೆ ಸವಾರಿ ಮಾಡಲು ಹೊರಟಿರುವ ಮತ್ತು ವಿವಾದಿತ ಆದೇಶ ಹೊರಡಿಸಿದ ಅಧಿಕಾರಿಗಳ ಮೇಲೆ ಕಠಿಣ ಕ್ರಮಕೈಗೊಳ್ಳಬೇಕು ಎಂದು ಹೇಳಿದರು. ಭದ್ರತೆ ಸಮಸ್ಯೆಗಳು ಇದ್ದರೇ ಸರಕಾರ ಇರುವ ಲೋಪವನ್ನು ಸರಿಪಡಿಸುವಂತಹ ಕೆಲಸ ಮಾಡಬೇಕು. ಅದು ಬಿಟ್ಟು ಮಾಧ್ಯಮಗಳ ಮೇಲೆ ಸವಾರಿ ಮಾಡಲು ಸರಕಾರ ಹೊರಟಿರುವುದು ನಿಜಕ್ಕೂ ಹಾಸ್ಯಾಸ್ಪದವಾಗಿದೆ.

ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ



ಹಗರಿಬೊಮ್ಮನಹಳ್ಳಿ: ಜಿ ರಾಮ ಜಿ ಯೋಜನೆ ವಿರೋಧಿಸಿ ಮಹಾತ್ಮ ಗಾಂಧೀಜಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಉಳಿಸಬೇಕು ಎಂದು ಒತ್ತಾಯಿಸಿ ಅಂಬೇಡ್ಕರ್ ವೃತ್ತದಿಂದ ಬಸವೇಶ್ವರ ಸರ್ಕಲ್ ವರೆಗೆ ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಪ್ರತಿಭಟನಾ ಮೆರವಣಿಗೆ ನಡೆಸಿದರು. ಈ ವೇಳೆ ಮುಖಂಡರಾದ ಜಿಪಂ ಮಾಜಿ ಸದಸ್ಯರಾದ ಅಕ್ಕಿ ತೋಟೇಶ್, ಹೆಗ್ಡಾಳು ರಾಮಣ್ಣ, ಎಚ್.ಎಂ.ನೂರಿಸಾಬ್, ಆನಂದ ದೇವನಹಳ್ಳಿ ಪ್ರಭಾಕರ, ಪುರಸಭೆ ಅಧ್ಯಕ್ಷ ಎಂ.ಮರಿರಾಮಣ್ಣ, ನಾ.ನಿ.ಸದಸ್ಯರಾದ ಬಾಳಪ್ಪ ಮಂಜಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋಣಿ ಬಸಪ್ಪ, ಕಾಂಗ್ರೆಸ್ ವಕ್ತಾರ ಪತ್ರೆಶ್ ಹಿರೇಮಠ್, ಒಬಿಸಿ ಅಧ್ಯಕ್ಷ ಹ್ಯಾಳೆದು ಚನ್ನಬಸಪ್ಪ, ಗ್ಯಾರಂಟಿ ಅನುಷ್ಠಾನ ಸಮಿತಿಯ ಜಿಲ್ಲಾ ಅಧ್ಯಕ್ಷ ಕುರಿ ಶಿವಮೂರ್ತಿ, ತಾಲೂಕು ಅಧ್ಯಕ್ಷ ಸೊನ್ನದ ಗುರು ಬಸವರಾಜ, ಗ್ಯಾರಂಟಿ ಸಮಿತಿಯ ಪರುಶುರಾಮ, ಯುವ ಮುಖಂಡರಾದ ಜೆಸಿಬಿ ಮಾಬುಸಾಬು ಫೋಟೋ ವೀರೇಶ್ ಇತರರಿದ್ದರು.

ಫೆ.21ರಂದು ಕೌಶಲ್ಯ ಮೇಳ

ಸಿರುಗುಪ್ಪ: ನಗರದ ಎಸ್.ಇ.ಎಸ್.ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಬೆಂಗಳೂರಿನ ಗ್ರಾಮ ವಿಕಾಸ ಸೊಸೈಟಿ, ಸಿರುಗುಪ್ಪ ವಿದ್ಯಾಸಂಸ್ಥೆಯ ಎಸ್.ಇ.ಎಸ್.ಪಾಲಿಟೆಕ್ನಿಕ್ ಕಾಲೇಜ್ ಸಹಯೋಗದಲ್ಲಿ ಫೆ.21ರಂದು ಕೌಶಲ್ಯ ಹಾಗೂ ಉದ್ಯೋಗ ಮೇಳವನ್ನು ಆಯೋಜಿಸಲಾಗುತ್ತಿದೆ.

ಬೆಂಗಳೂರಿನ ಪ್ರತಿಷ್ಠಿತ ಕಂಪನಿಗಳು ಈ ಉದ್ಯೋಗ ಮೇಳದಲ್ಲಿ ಭಾಗವಹಿಸಲಿದ್ದು, ಅರ್ಹತೆ ಮತ್ತು ಅವಶ್ಯಕತೆಗನುಗುಣವಾಗಿ ಸೂಕ್ತ ಅಭ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುವುದು.

5ನೇ ತರಗತಿಯಿಂದ, ಎಸ್ಸೆಸ್ಸೆಲ್ಸಿ, ಪಿಯುಸಿ, ಪದವಿ, ಐಟಿಐ, ಡಿಪ್ಲೋಮಾ, ಎಂಜಿನಿಯರಿಂಗ್ (ಬಿ.ಇ) ವಿದ್ಯಾರ್ಹತೆ ಪಡೆದವರು ಭಾಗವಹಿಸಬಹುದು. 18-40 ವರ್ಷದ ಒಳಗಿನ ಅಭ್ಯಾರ್ಥಿಗಳು ತಮ್ಮ ಸ್ವವಿವರದೊಂದಿಗೆ ಮೂಲ ದಾಖಲೆಗಳು, ಆಧಾರ್ ಕಾರ್ಡ್, ಇತ್ತೀಚಿನ ಪಾಸ್ ಫೋಟೋ ಸೈಜ್ ಭಾವಚಿತ್ರ ಒಂದು ತರಬೇಕು ಎಂದು ಸಿರುಗುಪ್ಪ ವಿದ್ಯಾಸಂಸ್ಥೆಯ ಆಡಳಿತ ಮಂಡಳಿಯ ಅಧಿಕಾರಿಗಳು ತಿಳಿಸಿದ್ದಾರೆ.

ನಿಧನ ಸುದ್ದಿ

ಆಶಾಪುರ ಚಂದ್ರಶೇಖರ



ಕುರುಗೋಡು: ಪಟ್ಟಣದ ನಿವಾಸಿ ಪ್ರಜಾವಾಣಿ ಪತ್ರಿಕೆ ವರದಿಗಾರ ವಾಗೀಶ್ ಎ.ಕುರುಗೋಡು ಅವರ ಹಿರಿಯ ಸಹೋದರ ಆಶಾಪುರ ಚಂದ್ರಶೇಖರ (66) ಬುಧವಾರ ನಿಧನರಾಗಿದ್ದಾರೆ. ಮೃತರಿಗೆ ಪತ್ನಿ ಮತ್ತು ಪುತ್ರ ಇದ್ದಾರೆ. ಗುರುವಾರ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ಜರುಗಿದೆ.



ಕುರುಗೋಡು: ಪಟ್ಟಣದ ತಾಲೂಕು ಕಚೇರಿಯಲ್ಲಿ ಛತ್ರಪತಿ ಶಿವಾಜಿ ಅವರ ಜಯಂತಿ ಆಚರಿಸಲಾಯಿತು. ಗ್ರೇಡ್-2 ತಹಶೀಲ್ದಾರ್ ಮಲ್ಲೇಶಪ್ಪ, ವಿಜಯಕುಮಾರ್, ಶಿಕ್ಷಕರಾದ ನಾಗರಾಜ್ ಮಸೂತಿ ಬಸವರಾಜ ಹಾಗೂ ಸಿಬ್ಬಂದಿ ಮುಖಂಡರಿದ್ದರು.

ಆಸ್ಪತ್ರೆಯ ಕಾಮಗಾರಿ ಪರಿಶೀಲನೆ

ಕೆಂಭಾವಿ: ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ನಡೆಯುತ್ತಿರುವ 50 ಹಾಸಿಗೆಯಾಗಿ ಮೇಲ್ದರ್ಜೆಗೇರಿಸಿದ ಆಸ್ಪತ್ರೆಯ ಕಾಮಗಾರಿಯನ್ನು ಜಿಲ್ಲಾ ಉಸ್ತುವಾರಿ ಶರಣಬಸಪ್ಪ ದರ್ಶನಾಪುರ ಪರಿಶೀಲನೆ ನಡೆಸಿದರು. ಬಳಿಕ ಮಾತನಾಡಿದ ಅವರು, ಕೆಕೆಆರ್‌ಡಿಬಿ ಅನುದಾನದ ಆರೋಗ್ಯ ಆವಿಷ್ಕಾರ ಯೋಜನೆಯಡಿಯಲ್ಲಿ 6.45 ಕೋಟಿ ರೂಪಾಯಿ ವೆಚ್ಚದಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿ ಇದಾಗಿದ್ದು, ಕ್ಷಿಪ್ರಗತಿಯಲ್ಲಿ ಸಾಗಿದ್ದು, ಇನ್ನೇನು ಮರ್ನಾಲ್ಕು ತಿಂಗಳ ಒಳಗೆ ಲೋಕಾರ್ಪಣೆಗೊಳ್ಳಲಿದೆ ಎಂದರು. ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡು ಕ್ಷೇತ್ರದಲ್ಲಿ ಆರೋಗ್ಯ, ಶಿಕ್ಷಣ, ರಸ್ತೆಗಳಿಗೆ ಬಳಸಿಕೊಂಡಿರುವ ತೃಪ್ತಿ ನನ್ನಗಿದೆ ಎಂದವರು, ಆಸ್ಪತ್ರೆಗೆ ತಜ್ಞವೈದ್ಯರು ನೇಮಕ ಮತ್ತು ಕೆಂಭಾವಿ ಆಸ್ಪತ್ರೆಗೆ ಹೆಚ್ಚಿನ ರೋಗಿಗಳು ಬರುವುದರಿಂದ ಔಷಧಿ ಕೊರತೆ ಉಂಟಾಗುತ್ತಿದೆ. ಈ ಬಗ್ಗೆ ಆರೋಗ್ಯ ಸಚಿವರ ತರುವುದಾಗಿ ತಿಳಿಸಿದರು. ನಂತರ ಅಧಿಕಾರಿಗಳಿಂದ ಕಾಮಗಾರಿ ಮಾಹಿತಿ ಪಡೆದು ಶೀಘ್ರವೇ ಸಾರ್ವಜನಿಕ ಸೇವೆಗೆ ಕಟ್ಟಡ ನೆರವಾಗುವಂತೆ ಮಾಡಲು ಸೂಚಿಸಿದರು. ಈ ವಿಭಾಗದಲ್ಲಿ ಮಹಿಳೆಯರ ಹೆರಿಗೆ ವಿಭಾಗ, ದಂತ ವಿಭಾಗ, ಆರ್ಥೋಪಿಡಿಕ್ ಹಾಗೂ ಶಸ್ತ್ರಚಿಕಿತ್ಸ, ಸಭಾಂಗಣ ಸೇರಿದಂತೆ 12 ಹೊರರೋಗಿ ವಿಭಾಗ ಒಳಗೊಂಡಿದೆ ಮಾಹಿತಿ ನೀಡಿದರು. ಆರೋಗ್ಯ ಇಲಾಖೆಯ ಎಇ ಬಸವರಾಜ, ಗುತ್ತಿಗೆದಾರರ ಇಂಜನೀಯರ್ ರಾಕೇಶ, ಮಹೇಂದ್ರ, ಡಾ.ಬಸನಗೌಡ ಬೆಕ್ಕಿನಾಳ ಸೇರಿ ಹಲವರಿದ್ದರು.



ಕೆಂಭಾವಿ: ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ನಡೆಯುತ್ತಿರುವ 50 ಹಾಸಿಗೆಯಾಗಿ ಮೇಲ್ದರ್ಜೆಗೇರಿಸಿದ ಆಸ್ಪತ್ರೆಯ ಕಾಮಗಾರಿಯನ್ನು ಜಿಲ್ಲಾ ಉಸ್ತುವಾರಿ ಶರಣಬಸಪ್ಪ ದರ್ಶನಾಪುರ ಪರಿಶೀಲನೆ ನಡೆಸಿದರು.

ದ್ವಿತೀಯ ಪಿಯುಸಿ-15,652, ಎಸ್ಸೆಸ್ಸೆಲ್ಸಿ-23,271 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಣಿ

ವಿದ್ಯಾರ್ಥಿಗಳಿಗೆ ಸ್ನೇಹಮಯಿ ವಾತಾವರಣ

ಬಳ್ಳಾರಿ: ಜಿಲ್ಲೆಯಲ್ಲಿ ಈ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಗೆ 15,652 ಹಾಗೂ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ 23,271 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದು, ವಿದ್ಯಾರ್ಥಿಗಳಿಗೆ ಪರೀಕ್ಷಾ ಹಿತದೃಷ್ಟಿಯಿಂದ ಜಿಲ್ಲಾಡಳಿತ ವತಿಯಿಂದ ಸ್ನೇಹಮಯಿ ವಾತಾವರಣ ಕಲ್ಪಿಸಲಾಗಿದೆ ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಹೇಳಿದರು.

ನಗರದ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ದ್ವಿತೀಯ ಪಿಯುಸಿ ಪರೀಕ್ಷೆ-1 ಫೆ.28ರಿಂದ ಮಾ.17ರವರೆಗೆ ನಡೆಯಲಿದೆ. ಜಿಲ್ಲೆಯಲ್ಲಿ ಒಟ್ಟು 15,652 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲಿದ್ದು, ಇವರಲ್ಲಿ 13,286 ಹೊಸ ಅಭ್ಯರ್ಥಿಗಳು(ಬಾಲಕ-5,580 ಮತ್ತು ಬಾಲಕಿಯರು-7,706), 1,899 ಮರು ಪರೀಕ್ಷಾರ್ಥಿಗಳು, 467 ಖಾಸಗಿ ಅಭ್ಯರ್ಥಿಗಳು ಒಳಗೊಂಡಿದ್ದಾರೆ. ಬಳ್ಳಾರಿ ನಗರ-12, ಸಿರುಗುಪ್ಪ-03, ಸಂಡೂರು-02, ಕಂಪ್ಲಿ-02 ಮತ್ತು ಕುರುಗೋಡು-01 ಸೇರಿದಂತೆ ಒಟ್ಟು 20 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿವೆ ಎಂದರು.

ಎಸ್ಸೆಸ್ಸೆಲ್ಸಿ ಪರೀಕ್ಷೆ-1 ಮಾ.18ರಿಂದ ಏ.2ರವರೆಗೆ ನಡೆಯಲಿವೆ. ಜಿಲ್ಲೆಯಲ್ಲಿ ಒಟ್ಟು 326 ಹತ್ತನೆಯ ಶಾಲೆಗಳಿಂದ ಒಟ್ಟು 23,271 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲಿದ್ದು, ಇವರಲ್ಲಿ 19,722 ಹೊಸ ಅಭ್ಯರ್ಥಿಗಳು, 2,009 ಮರು ಪರೀಕ್ಷಾರ್ಥಿಗಳು, 1,328 ಖಾಸಗಿ ಅಭ್ಯರ್ಥಿಗಳು, 212 ಖಾಸಗಿ ಮರು ಪರೀಕ್ಷಾರ್ಥಿಗಳು ಒಳಗೊಂಡಿದ್ದಾರೆ. ಒಟ್ಟು ಜಿಲ್ಲೆಯ 65 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಜರುಗಲಿವೆ ಎಂದು ತಿಳಿಸಿದರು.



> ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ತಪ್ಪು ಮಾಹಿತಿಯನ್ನು ತಡೆಯಲು ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ನಿಗಾವಹಿಸಿದೆ. ಸಾಮಾಜಿಕ ಜಾಲತಾಣಗಳಲ್ಲಿ ಪ್ರಶ್ನೆಪತ್ರಿಕೆ ಸೋರಿಕೆಯ ಸುಳ್ಳು ಪ್ರಚಾರ ಮಾಡುವ ಖಾತೆಗಳನ್ನು ಗುರುತಿಸಿ ತಡೆದು ಕಾನೂನು ಕ್ರಮ ಕೈಗೊಳ್ಳಲಾಗುವುದು. ಪರೀಕ್ಷೆಗಳು ಸುರಕ್ಷಿತವಾಗಿ ನಡೆಯಲು ಎಲ್ಲರ ಸಹಕಾರ ಅಗತ್ಯವಾಗಿದೆ.
>
> ■ ಡಾ.ಸುಮನ್ ಡಿ.ಪೆನ್ನೇಕರ್, ಎಸ್ಪಿ

ವಿದ್ಯಾರ್ಥಿಗಳಿಗೆ ಸ್ನೇಹಮಯಿ ವಾತಾವರಣ: ಪ್ರತಿ ಪರೀಕ್ಷಾ ಕೇಂದ್ರಕ್ಕೆ ಒಬ್ಬ ಅಧಿಕಾರಿಯನ್ನು ವೀಕ್ಷಕರನ್ನಾಗಿ ನೇಮಕ ಮಾಡಲಾಗಿದೆ. ವಿದ್ಯಾರ್ಥಿಗಳಿಗೆ ಪರೀಕ್ಷಾ ಹಿತದೃಷ್ಟಿಯಿಂದ ಜಿಲ್ಲಾಡಳಿತ ವತಿಯಿಂದ ಸ್ನೇಹಮಹಿ ವಾತಾವರಣ ಕಲ್ಪಿಸಲಾಗಿದೆ. ಪರೀಕ್ಷೆಗೆ ಹಾಜರಾಗುವ ಎಲ್ಲಾ ವಿದ್ಯಾರ್ಥಿಗಳಿಗೆ ಪರೀಕ್ಷಾ ಪ್ರವೇಶ ಪತ್ರವನ್ನು ತೋರಿಸಿ, ಕೆಕೆಆರ್‌ಟಿಸಿ ಮತ್ತು ನಗರ ಸಾರಿಗೆ ಬಸ್‌ಗಳಲ್ಲಿ ಪರೀಕ್ಷಾ ಕೇಂದ್ರಕ್ಕೆ ತೆರಳಲು ಮತ್ತು ಹಿಂತಿರುಗಲು ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಲಾಗಿದೆ ಎಂದರು.

ವಿದ್ಯಾರ್ಥಿಗಳಿಗೆ ಉಚಿತ ಸಾರಿಗೆ: ಪರೀಕ್ಷಾ ಅವಧಿಯಲ್ಲಿ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಕೇಂದ್ರಗಳಿಗೆ ಸುಲಭವಾಗಿ ಹೋಗಲು ಕೆಕೆಆರ್‌ಟಿಸಿ ಬಸ್ಸುಗಳಲ್ಲಿ ಉಚಿತ ಪ್ರಯಾಣ ಸೌಲಭ್ಯ ಒದಗಿಸಲಾಗಿದೆ. ವಿದ್ಯಾರ್ಥಿಗಳು ಪ್ರವೇಶ ಪತ್ರ ತೋರಿಸಿ ಪ್ರಯಾಣಿಬಹುದು . ಎಲ್ಲ ಪರೀಕ್ಷಾ ಕೇಂದ್ರಗಳಲ್ಲಿ ಸೂಕ್ತ ಗಾಳಿ, ಬೆಳಕು, ಸ್ವಚ್ಛತೆ, ಕುಡಿಯುವ ನೀರಿನ ವ್ಯವಸ್ಥೆ ಸಮರ್ಪಕವಾಗಿರುವಂತೆ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಗೆ ಸೂಚಿಸಲಾಗಿದೆ ಎಂದರು.

ಜಿಪಂ ಸಿಇಒ ಮಹಮ್ಮದ್ ಹಾರೀಸ್ ಸುಮೇರ್ ಅವರು ಮಾತನಾಡಿ, ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಪರೀಕ್ಷಾ ಕೇಂದ್ರಗಳಲ್ಲಿ ವೆಬ್ ಕಾಸ್ಟಿಂಗ್ ಮೂಲಕ ಕಣ್ಗಾವಲು ಇಡಲಾಗುತ್ತದೆ. ಪರೀಕ್ಷಾ ಕೇಂದ್ರಗಳ ಒಳಗಡೆ, ಹೊರಗಡೆ ಮತ್ತು ಪ್ರಾಚಾರ್ಯರ ಕೊಠಡಿಗಳಲ್ಲಿಯೂ ಸಹ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗುತ್ತದೆ ಎಂದರು. ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಎನ್. ಇದ್ದರು.

ಶಿಕ್ಷಣಕ್ಕೆ ಪ್ರತಿಭಾ ಕಾರಂಜಿ ಪೂರಕ

ಹಗರಿಬೊಮ್ಮನಹಳ್ಳಿ: ತಾಲೂಕಿನ ತಂಬ್ರಹಳ್ಳಿ ಗ್ರಾಮದ ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಸೋಮವಾರ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಜಿಪಂ ಮಾಜಿ ಸದಸ್ಯ ಅಕ್ಕಿ ತೋಟೇಶ, ಮಕ್ಕಳ ಸಂಪೂರ್ಣ ಪ್ರಗತಿಗೆ ಶಾಲಾ ವಾರ್ಷಿಕೋತ್ಸವ ಪ್ರತಿಭಾ ಕಾರಂಜಿಯಂತಹ ಕಾರ್ಯಕ್ರಮಗಳು ಶಿಕ್ಷಣ ಪೂರಕವಾಗಿವೆ. ಮಕ್ಕಳ ಕಲಿಕೆಯಲ್ಲಿ ಉರ್ದು ಶಾಲೆಯು ಪ್ರಗತಿ ಸಾಧಿಸಿದ್ದು ಇಲ್ಲಿನ ಎಲ್ಲಾ ಶಿಕ್ಷಕರ ಪಾಲ್ಗೊಳ್ಳುವಿಕೆಯ ಫಲವಾಗಿದೆ ಎಂದರು.

ಸಿಆರ್‌ಪಿ ಕನಕಪ್ಪ ಮಾತನಾಡಿ, ತಂಬ್ರಹಳ್ಳಿ ಉರ್ದು ಶಾಲೆಯು ಜಿಲ್ಲೆಯಲ್ಲಿಯೇ ಮಾದರಿ ಎನಿಸಿದೆ ತರಗತಿ ಪಠ್ಯದ ಸಹ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಕೊಂಡಿದೆ ಶೈಕ್ಷಣಿಕ ಪ್ರಗತಿ ಉತ್ತಮವಾಗಿದೆ ಎಂದರು.

ಗ್ರಾಪಂ ಮಾಜಿ ಸದಸ್ಯ ಸಂಡೂರು ಮೆಹಬೂಬ ಭಾಷಾ ಮಾತನಾಡಿ, ಉರ್ದು ಶಾಲೆಯಲ್ಲಿ ಮಕ್ಕಳ ಕಲಿಕೆಯ ಪ್ರಗತಿಗೆ ಆದ್ಯತೆ ನೀಡುತ್ತಿದ್ದಾರೆ. ಇದರಿಂದಾಗಿಯೇ ಉರ್ದು ಶಾಲೆಯ ಮುಖ್ಯ ಗುರುಗಳಾದ ಎಲ್.ರೆಡ್ಡಿ ನಾಯಕ್ ಅವರು ರಾಜ್ಯ ಪ್ರಶಸ್ತಿ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ ಎಂದರು.

ಮುಖಂಡ ಬಣಕಾರ ಕೊಟ್ರೇಶಪ್ಪ ವಿ.ಎಸ್.ಎಸ್.ಎನ್ ಅಧ್ಯಕ್ಷ ಮಾಬು ಬಾಷಾ, ಎಸ್‌ಡಿಎಂಸಿ ಅಧ್ಯಕ್ಷ ಟಪಾಲ್ ರಾಜ ಸಾಬಾ, ಗ್ರಾಪಂ ಮಾಜಿ ಸದಸ್ಯರಾದ ಕಮಲಾಕ್ಷಿ, ಸಲೀಮಾ ಬೇಗಮ್, ಎಸ್‌ಡಿಎಂಸಿಆರ್ ಸದಸ್ಯರಾದ ಮಹಮದ್ ರಫಿ ಕೊಪ್ಪಳದ ರಫಿ ಲಾಡಂನವರ ಶಬೀರ ಗಂಗಮ್ಮ ಮೈಲಮ್ಮ ಪಾರ್ವತಮ್ಮ ಕೌಸರ್ ಬಾನು, ಶಿಕ್ಷಕರಾದ ಮಿಟ್ಯ ನಾಯಕ್, ಯಂಕರೆಡ್ಡಿ ಮುಖಂಡರಾದ ತರಕಾರಿ ರಾಜ ಸಾಬ್, ನೀಲ ಗಿರಿಯಪ್ಪ, ಅಂಜನಪ್ಪ ಇತರರು ಉಪಸ್ಥಿತರಿದ್ದರು. ಚಂದ್ರಶೇಖರ್ ಮಡ್ಡಿ ರವಿಕುಮಾರ ಸಕ್ರಹಳ್ಳಿ, ದುರ್ಗಾದಾಸ, ಅಶ್ವಿನಿ, ಶ್ರೀದೇವಿ ನಿರ್ವಹಿಸಿದರು.



ಪದ್ಮಶಾಲಿ ಸಮಾಜದವರಿಗೆ ಹೆಚ್ಚಿನ ಸೌಲಭ್ಯ ಸಿಗಲಿ

ಕೊಟ್ಟೂರು: ಪದ್ಮಸಾಲಿ ಸಮುದಾಯಕ್ಕೆ ಹೆಚ್ಚಿನ ಸೌಲಭ್ಯ ನೀಡಲು ಸರ್ಕಾರದ ಮೇಲೆ ಹೆಚ್ಚಿನ ಒತ್ತಡ ತರಲಾಗುವುದು ಎಂದು ಶಾಸಕ ಕೆ.ನೇಮಿರಾಜ್ ನಾಯ್ಕ ತಿಳಿಸಿದರು.

ಪಟ್ಟಣದಲ್ಲಿನ ನೇಕಾರ ಓಣಿಯಲ್ಲಿನ ಶ್ರೀಶಿವಭಕ್ತ ಮಾರ್ಕಂಡೇಶ್ವರ ಸ್ವಾಮೀಯ ಪ್ರತಿಷ್ಠಾಪನೆಯ ಶತಮಾನೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಎಲ್ಲ ಸಮಾಜಗಳಿಗೆ ನೀಡುವ ಪ್ರಾತಿನಿಧ್ಯತೆಯ ಲಾಭ ಪದ್ಮಶಾಲಿ ಸಮಾಜಕ್ಕೂ ದೊರಕಬೇಕು. ಸಣ್ಣ ಸಮಾಜವೆಂದು ನಿರ್ಲಕ್ಷ್ಯ ಮಾಡುವುದು ಸರಿಯಲ್ಲ. ಈ ನಿಟ್ಟಿನಲ್ಲಿ ಮಾಜಿ ಸಚಿವ ಸಿದ್ದು ಸವದಿ ಮತ್ತು ಮಾಜಿ ಸಂಸದ ಕೆ.ಸಿ.ಕೊಂಡಯ್ಯನವರೊಂದಿಗೆ ಪದ್ಮಶಾಲಿ ಸಮಾಜದವರಿಗೆ ಅಗತ್ಯವಾಗಿ ದೊರಕಬೇಕಿರುವ ಎಲ್ಲ ಪ್ರಯೋಜನೆಗಳನ್ನು ದೊರಕಿಸಿ ಕೊಡಲು ಸರ್ಕಾರದ ಮೇಲೆ ಒತ್ತಡ ತರುತ್ತೇನೆ ಎಂದು ಹೇಳಿದರು.

ಉಜ್ಜಯನಿ ಜಗದ್ಗುರು ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿ, ಬಹೂಪಯೋಗಿ ಸಮಾಜ ಪದ್ಮಶಾಲಿ ಯವರಾಗಿದ್ದು ಯಾವುದೇ ಕಾರಣಕ್ಕೆ ತಮ್ಮ ಧಾರ್ಮಿಕ ಸಂಸ್ಕಾರ ಸಂಸ್ಕೃತಿಗಳನ್ನು ಮರೆಯದೇ ಪೋಷಿಸಿಕೊಂಡು ಬರುವ ಮೂಲಕ ಸಮಾಜಕ್ಕೆ ಮೇಲ್ಪಂಕ್ತಿ ಯಾಗಿದ್ದಾರೆ ಎಂದರು.

ಜಿಪಂ ಮಾಜಿ ಸದಸ್ಯ ಎಂ.ಎಂ.ಜೆ.ಹರ್ಷವರ್ಧನ್, ರೂಪ ಉದಯ ಸಿಂಗ್ ಲಾಡ್, ಮತ್ತಿತರರು ಮಾತನಾಡಿದರು . ಪದ್ಮಶಾಲಿ ಸಮಾಜದ ಧರ್ಮಗುರು ತುಮ್ಮಿನ ಕಟ್ಟಿಯ ಪ್ರಭುಲಿಂಗ ಸ್ವಾಮೀಜಿ, ಕಿತ್ತಳೆ ಮಂಜುನಾಥ ಸ್ವಾಮೀಜಿ , ಕಂದ್ಲಗಟ್ಲ ಸ್ವಾಮೀಜಿ, ಪದ್ಮಶಾಲಿ ಸಮಾಜದ ರಾಷ್ಟ್ರಾಧ್ಯಕ್ಷ ಕೊಂಕತಿ ಕಾಳಪ್ಪ ಶೀಲ ಚೆನ್ನ ಬ್ರಹ್ಮಯ್ಯ, ಸಾಕ ವೆಂಕಟೇಶ್, ರುಕ್ಮಿಣಿ ಗಣೇಶ ಸಂಗ, ಜೆಡಿಎಸ್ ಜಿಲ್ಲಾಧ್ಯಕ್ಷ ಮೃತ್ಯುಂಜಯ ಬಾದಾಮಿ, ಬೂದಿ ಶಿವಕುಮಾರ್, ಬಾವಿಕಟ್ಟಿ ಶಿವಾನಂದ ಆರವ ಮಂಜುನಾಥ, ಗೊಂಗ ಜಯರಾಮಣ್ಣ, ಅಧ್ಯಕ್ಷ ಗೋರಂಟ್ಲಿ ಕೊಟ್ರೇಶ ಕಾರ್ಯದರ್ಶಿ ದೇವ ರೆಡ್ಡಿ ಪರಮೇಶ್ವರಪ್ಪ, ಖಜಾಂಚಿ ದೇವರೆಡ್ಡಿ ಪ್ರಕಾಶ್, ಕಾಸಲ ಪ್ರಕಾಶ ಮತ್ತಿತರರು ಕಾರ್ಯಕ್ರಮದಲ್ಲಿ ಬಾಗವಹಿಸಿದ್ದರು. ಶಿಕ್ಷಕ ದೇವರೆಡ್ಡಿ ಕಾರ್ತಿಕ್ ಸ್ವಾಗತಿಸಿ, ನಿರೂಪಿಸಿದರು.



ನಾಡಿನ ಸಂಸ್ಕೃತಿ ಉಳಿವಿಗೆ ಧಾರ್ಮಿಕ ಮಠಗಳ ಕೊಡುಗೆ ಅಪಾರ

ಹೂವಿನಹಡಗಲಿ: ದೇಶದ ಸಂಸ್ಕೃತಿ ಬೆಳವಣಿಗೆಯ ಉಳಿವಿಗಾಗಿ ಧಾರ್ಮಿಕ ಮಠಗಳ ಪಾತ್ರ ವಿಶೇಷ ಹಾಗೂ ಅಪಾರವಾದ ಕೊಡುಗೆ ನೀಡಿವೆ ಎಂದು ಕಾನಿಪ ಸಂಘದ ತಾಲೂಕು ಅಧ್ಯಕ್ಷ ಎಂಪಿಎಂ ಶಿವಪ್ರಕಾಶ್ ಹೇಳಿದರು.

ಅವರು ತಾಲೂಕಿನ ಮುದೇನೂರು ಗ್ರಾಮದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಮಹಾಂತೇಶ್ವರ ಮಠದಲ್ಲಿ ಬುಧವಾರ ಸಂಜೆ ಏರ್ಪಡಿಸಿದ್ದ ಜೀವನ ದರ್ಶನ ಧಾರ್ಮಿಕ ಪ್ರವಚನ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ಪ್ರವಚನ ಮಾತನಾಡಿದರು.

ಧಾರ್ಮಿಕ ಮಠಗಳು ಸತ್ಯ, ಅಹಿಂಸೆ, ಕರುಣೆ, ಸಮಾನತೆಯ ಮೌಲ್ಯಗಳನ್ನ ಭೋದಿಸಿ ಸಮಾಜದಲ್ಲಿ ಆತ್ಮೀಕತೆ ಬೆಳೆಸಿವೆ. 12ನೇ ಶತಮಾನದ ಬಸವಣ್ಣ, ಆಯ್ದಕ್ಕಿಲಕ್ಕಮ್ಮ ನವರ ಕಾಯಕ ದಾಸೋತ್ಸವನ್ನ ಸಾರುವ ಮೂಲಕ ಸಮಾಜದ ಸಮಾನತೆಯನ್ನು ಜನರ ಹೃದಯದಲ್ಲಿ ಬಿತ್ತಿದ್ದರು ಎಂದು ಹೇಳಿದರು.

ಅಂಗೂರು ಹಿರೇಮಠದ ಶಿವಯೋಗೇಶ್ವರ ಶಿವಾಚಾರ್ಯ ಸ್ವಾಮೀಜಿ, ಮನುಷ್ಯನ ಭಕ್ತಿ ಮನಸ್ಸನ್ನು ಶುದ್ಧಗೊಳಿಸಿ, ಸನ್ಮಾರ್ಗದ ಕಡೆಗೆ ನಡೆಸುವ ಒಂದು ದಿವ್ಯ ಶಕ್ತಿ. ಭಕ್ತಿ ಮಾನವರ ಮನಸ್ಸಿಗೆ ಶಾಂತಿ ನೆಮ್ಮದಿ ನೀಡುತ್ತದೆ. ದೇವರ ಮೇಲೆ ಇರುವ ನಂಬಿಕೆ ಮನುಷ್ಯನ ಒಳಗಿನ ಭಯವನ್ನುತೊಲಗಿಸಿ ಧೈರ್ಯವನ್ನು ಹೆಚ್ಚಿಸುತ್ತದೆ ಎಂದು ನುಡಿದರು.



ಮುದೇನೂರು ಮಠದ ಪೀಠಾಧಿಪತಿಗಳಾದ ಅಭಿನವ ಚನ್ನಬಸವ ಸ್ವಾಮೀಜಿ ಅಧ್ಯಕ್ಷತೆ ವಹಿಸಿದ್ದರು.

ಪತ್ರಕರ್ತರಾದ ಎಸ್.ಎಂ.ಬಸವರಾಜ, ದಯಾನಂದ ಎಂ., ಉಪನ್ಯಾಸಕ ಶಂಕರ್ ಬೆಟಗೇರಿ, ಸಂಗೀತ ಶಿಕ್ಷಕರಾದ ಯುವರಾಜ ಗೌಡ್ರು, ಎಂ.ಚಂದ್ರಪ್ಪ, ಪೂಜಾರ ಬಸವರಾಜ, ಸೇರಿದಂತೆ ಗ್ರಾಮಸ್ಥರು ಇದ್ದರು. ಭಕ್ತಿ ಸೇವೆ ಮಾಡಿದ ಭಕ್ತರಿಗೆ ಶ್ರೀಮಠದಿಂದ ಸನ್ಮಾನಿಸಲಾಯಿತು.

ಸ್ವಯಂಪ್ರೇರಿತ ರಕ್ತದಾನ ಶಿಬಿರ

ಗಾದಿಗನೂರು: ಹೊಸಪೇಟೆ ತಾಲೂಕು ಬೈಲುವದ್ದಿಗೇರಿ ಗ್ರಾಮದಲ್ಲಿ ಶ್ರೀಶರಣು ಸುಡುಗಾಡೆಪ್ಪ ತಾತನವರ 47ನೇ ರಥೋತ್ಸವ ಅಂಗವಾಗಿ ಬೈಲುವದ್ದಿಗೇರಿ ಗ್ರಾಪಂ, ಪ್ರಾಥಮಿಕ ಆರೋಗ್ಯ ಕೇಂದ್ರ ಗಾದಿಗನೂರು ಮತ್ತು ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಹೊಸಪೇಟೆ ಇವರ ಸಂಯುಕ್ತ ಆಶ್ರಯದಲ್ಲಿ ಸ್ವಯಂಪ್ರೇರಿತ ರಕ್ತದಾನ ಶಿಬಿರವನ್ನು ದೇವಸ್ಥಾನ ಆವರಣದಲ್ಲಿ ನಡೆಸಲಾಯಿತು.

ಡಾ.ದಿವ್ಯಶ್ರೀ ಎಚ್.ಎನ್. ಮಾತನಾಡಿ, ರಕ್ತದಾನ ಮಾಡುವುದರಿಂದ ಹೃದಯಘಾತದ ಸಂಭವ ಕಡಿಮೆ ಆಗುತ್ತದೆ. ರಕ್ತದಲ್ಲಿ ಕೊಲೆಸ್ಟ್ರಾಲ್ ಅಂಶ ಕಡಿಮೆ ಆಗುತ್ತದೆ. ಇತರರ ಜೀವ ಉಳಿಸಬಹುದು. ದೇಹದಲ್ಲಿ ಹೊಸ ರಕ್ತ ಉತ್ಪತ್ತಿಯನ್ನು ಉತ್ತೇಜಿಸುತ್ತದೆ. ದೇಹದಲ್ಲಿ ಹೊಸ ರಕ್ತ ಚಲನೆಯಿಂದ ಚುರುಕುತನ ನೆನಪಿನ ಶಕ್ತಿ ಹೆಚ್ಚಾಗುತ್ತದೆ. ರಕ್ತದಾನ ಮಾಡುವುದರಿಂದ ಯಾವುದೇ ಕೆಟ್ಟ ಪರಿಣಾಮಗಳಾಗುವುದಿಲ್ಲ. ಒಬ್ಬ ವ್ಯಕ್ತಿ ರಕ್ತದಾನ ಮಾಡುವುದರಿಂದ ನಾಲ್ಕು ಜೀವ ಉಳಿಸಬಹುದು ಎಂದು ತಿಳಿಸಿದರು. ಶಿಬಿರದಲ್ಲಿ 20 ಜನರು ರಕ್ತದಾನ ಮಾಡಿದರು.



ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡ್ಡಮನಿ, ಬ್ಲಡ್ ಬ್ಯಾಂಕ್ ಅಧಿಕಾರಿ ಜಗದೀಶ್, ರಾಜೀವ್ ಗಾಂಧಿ ಕೆ ಪಿ ಆರೋಗ್ಯ ನಿರೀಕ್ಷಣಾಧಿಕಾರಿ, ಸಮುದಾಯ ಆರೋಗ್ಯ ಅಧಿಕಾರಿ ತಿಮ್ಮಜ್ಜ, ವಿಮ್ಸ್ ಬ್ಲಡ್ ಬ್ಯಾಂಕ್ ಅಧಿಕಾರಿ ಸಂತೋಷ, ಬ್ಲಡ್ ಬ್ಯಾಂಕ್ ಸಿಬ್ಬಂದಿ ಹಾಗೂ ಆಶಾ ಕಾರ್ಯಕರ್ತೆಯರಿದ್ದರು.

ಹೋಟೆಲ್ ಮ್ಯಾನೇಜ್ಮೆಂಟ್ ಕೋರ್ಸ್ ಶೀಘ್ರ ಆರಂಭ: ಶಾಸಕ

ವಿಜಯನಗರ: ವಿಶ್ವವಿಖ್ಯಾತ ಹಂಪಿಗೆ ಪ್ರತಿನಿತ್ಯ ಸಾವಿರಾರು ಜನ ಪ್ರವಾಸಿಗರು ಆಗಮಿಸುವ ಹಿನ್ನೆಲೆಯಲ್ಲಿ ಹೋಟೆಲ್ ಮ್ಯಾನೇಜ್ಮೆಂಟ್‌ಗೆ ಉತ್ತಮ ಭವಿಷ್ಯವಿದ್ದು, ಶೀಘ್ರವೇ ಹೋಟೆಲ್ ಮ್ಯಾನೇಜ್ಮೆಂಟ್ ಕಾಲೇಜು ಸ್ಥಾಪಿಸಲಾಗುವುದು ಎಂದು ಶಾಸಕ ಎಚ್.ಆರ್.ಗವಿಯಪ್ಪ ಭರವಸೆ ನೀಡಿದರು.



ಹೊಸಪೇಟೆ ಜಂಬುನಾಥಹಳ್ಳಿ ರಸ್ತೆಯಲ್ಲಿ ಅಬ್ದುಲ್ ಕಲಾಂ ವಸತಿ ಶಾಲೆಯಲ್ಲಿ ಸಿಬ್ಬಂದಿಗಳ ವಸತಿ ಗೃಹಗಳ ನಿರ್ಮಾಣಕ್ಕೆ ಗುರುವಾರ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಮುಂದಿನ ಒಂದೂವರೆ ದಶಕದಲ್ಲಿ ಸಾವಿರಾರು ಹೋಟೆಲ್‌ಗಳು ತಲೆಎತ್ತಲಿದ್ದು, ಅದಕ್ಕಿಂತ ದುಪ್ಪಟ್ಟು ಸಂಖ್ಯೆಯಲ್ಲಿ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ. ಹೀಗಾಗಿ ಸಾಂಪ್ರದಾಯಿಕ ಪಠ್ಯಾಧಾರಿತ ಕೋರ್ಸ್‌ಗಳಿಗಿಂತ ಉದ್ಯೋಗ ಸೃಷ್ಟಿಸುವ ಕೌಶಲ್ಯ ಆಧಾರಿತ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ನೂತನ ಜಿಲ್ಲಾ ಕೇಂದ್ರ ಹೊಸಪೇಟೆಯಲ್ಲಿ 5-6 ಸಾವಿರ ಸರ್ಕಾರಿ ವಸತಿ ಗೃಹಗಳಿಗೆ ಬೇಡಿಕೆಯಿದೆ. ಈಗಾಗಲೇ 100 ಪೊಲೀಸ್ ವಸತಿ ಗೃಹಗಳು ಉದ್ಘಾಟನೆಗೆ ಸಿದ್ಧವಾಗಿದೆ. ಅದರಂತೆ ಪ್ರತೀ ವರ್ಷ 500-600 ವಸತಿ ಗೃಹಗಳು ನಿರ್ಮಾಣವಾದಲ್ಲಿ ಸರ್ಕಾರದ 67 ಇಲಾಖೆಗಳ ಎಲ್ಲ ನೌಕರರಿಗೆ ಕೆಲವೇ ವರ್ಷಗಳಲ್ಲಿ ಕ್ವಾರ್ಟರ್ಸ್ ದೊರೆಯಲಿದೆ. 10 ವರ್ಷಗಳಲ್ಲಿ ವಸತಿ ಗೃಹಗಳ ಸಮಸ್ಯೆ ಬಗೆಹರಿಯಲಿದೆ ಎಂದು ಹೇಳಿದರು.

ಅಗತ್ಯ ಸೌಲಭ್ಯ ಕಲ್ಪಿಸಲು ಒತ್ತು: ಪ್ರಸ್ತುತ ಅಬ್ದುಲ್ ಕಲಾಂ ವಸತಿ ಶಾಲೆಯಲ್ಲಿ 6 ರಿಂದ 12ನೇ ತರಗತಿವರೆಗೆ ಒಟ್ಟು 450 ಕ್ಕೂ ಅಧಿಕ ಮಕ್ಕಳಿಗೆ ವಸತಿಯುತ ವಿದ್ಯಾಭ್ಯಾಸ ಒದಗಿಸಲಾಗುತ್ತಿದೆ. ಇಲ್ಲಿನ ಮಕ್ಕಳ ಸುರಕ್ಷತೆ ದೃಷ್ಟಿಯಿಂದ ವಸತಿ ಶಾಲೆಯ ಆವರಣದಲ್ಲಿ ಹೈಮಾಸ್ಟ್ ದೀಪ ಮತ್ತು ಸಿಸಿಟಿವಿ ಅಳವಡಿಸಲು ಕ್ರಮವಹಿಸಲಾಗುವುದು. ವಸತಿ ಶಾಲೆಯ ಮಕ್ಕಳೊಂದಿಗೆ ಸಂವಾದ ನಡೆಸಿ, ಅಲ್ಲಿನ ಸಮಸ್ಯೆಗಳ ಬಗ್ಗೆ ಆಲಿಸಿದರು. ಈ ವೇಳೆ ಕುಡಿಯುವ ನೀರಿನ ಸಮಸ್ಯೆ ಇದ್ದು ಇದಕ್ಕೆ ಶಾಶ್ವತ ಪರಿಹಾರ ಕಲ್ಪಿಸುವಂತೆ ವಿದ್ಯಾರ್ಥಿಯೊಬ್ಬರು ಮನವಿ ಮಾಡಿದರು. ಹಾಗೆಯೇ ವಸತಿ ನಿಲಯಗಳಲ್ಲಿ ಶೌಚಾಲಯ ಹದಗೆಟ್ಟಿವೆ ಎಂದು ಹೇಳಿಕೊಂಡರು.

ಇದಕ್ಕೆ ಪ್ರತಿಕ್ರಿಯಿಸಿದ ಶಾಸಕ ಎಚ್.ಆರ್.ಗವಿಯಪ್ಪ, ತಕ್ಷಣವೇ ದುರಸ್ಥಿಗೊಳಿಸುವಂತೆ ನಿರ್ದೇಶನ ನೀಡಿದರು. ಹಾಗೆಯೇ 6 ರಿಂದ 12 ನೇ ತರಗತಿ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಪೂರ್ಣಗೊಂಡ ವಸತಿ ನಿಲಯ ಮತ್ತು ಭೋಧನಾ ಕೊಠಡಿಗಳನ್ನು ಬಳಸಿಕೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಶಾಸಕರು ಸೂಚನೆ ನೀಡಿದರು. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಜಾವೀದ್ ಖರಂಗಿ, ಪ್ರಾಂಶುಪಾಲ ಪರಶುರಾಮ್ ಸೇರಿದಂತೆ ವಸತಿಶಾಲೆ ಸಿಬ್ಬಂದಿ, ವಿದ್ಯಾರ್ಥಿಗಳು ಇದ್ದರು.

ಶಿವಾಜಿ ಹೋರಾಟ ಯುವ ಜನಾಂಗಕ್ಕೆ ಸ್ಫೂರ್ತಿ: ಡಿಸಿ

ಯಾದಗಿರಿ: ಛತ್ರಪತಿ ಶಿವಾಜಿ ಅವರ ಸ್ವರಾಜ್ಯದ ಹೋರಾಟ, ತ್ಯಾಗ, ಬಲಿದಾನವು ಯುವ ಜನಾಂಗಕ್ಕೆ ಸ್ಫೂರ್ತಿಯಾಗಿದೆ ಎಂದು ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ಹೇಳಿದರು.

ನಗರದ ಭವಾನಿ ಮಂದಿರದಲ್ಲಿ ಇಂದು ಛತ್ರಪತಿ ಶಿವಾಜಿ ಅವರ ಜಯಂತ್ಯುತ್ಸವ ಅಂಗವಾಗಿ, ಶಿವಾಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ಅರ್ಪಿಸಿ ಅವರು ಮಾತನಾಡಿ, ಶಿವಾಜಿ ಮಹಾರಾಜರು ಮರಾಠಿಗರಿಗೆ ದೈವಿ ಸ್ವರೂಪಿಯಾಗಿದ್ದಾರೆ. ಸ್ವರಾಜ್ಯಕ್ಕಾಗಿ ಅವರ ಹೋರಾಟ, ಪರಾಕ್ರಮ, ತ್ಯಾಗ ಬಲಿದಾನ ಯುವಪೀಳಿಗೆಗೆ ಸ್ಫೂರ್ತಿಯಾಗಿದೆ ಎಂದು ಹೇಳಿದರು. ಛತ್ರಪತಿ ಶಿವಾಜಿ ಅವರು ಎಲ್ಲ ಸಮಾಜಕ್ಕೆ ಗೌರವ ನೀಡಿದ್ದರು. ಅವರ ಸೇನೆಯಲ್ಲಿ ಮುಸ್ಲಿಮರು ಕೂಡ ಇದ್ದರು ಎಂದ ಅವರು, ಇಂದು ಈ ಮಹಾನಾಯಕನ ಜಯಂತಿಗೆ ಸರ್ಕಾರ ಅನುವು ಮಾಡಿಕೊಟ್ಟಿರುವುದು ಎಲ್ಲರಿಗೂ ಐತಿಹಾಸಿಕ ದಿನವಾಗಿದೆ ಎಂದರು. ಇಂತಹ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮರಾಠಾ ಸಮಾಜದವರೂ ಕೂಡ ಎಲ್ಲರೊಂದಿಗೆ ಬೆರೆತು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿ ಕೊಡುಗೆ ನೀಡಿ ಎಂದು ಸಲಹೆ ನೀಡಿದರು.



> ಛತ್ರಪತಿ ಶಿವಾಜಿ ಅವರ ಮೊಘಲ್ ದೊರೆ ಔರಂಗಜೇಬ್ ಜೊತೆಗಿನ ಸಂಘರ್ಷ, ಅಫ್ಘಾನಿಸ್ತಾನದಿಂದ ಪೇಶಾವರವರೆಗೆ ಮರಾಠಾ ಸಾಮ್ರಾಜ್ಯದ ವಿಸ್ತಾರ ನಮಗೆಲ್ಲರಿಗೆ ಗರ್ವದ ವಿಷಯ.
>
> ■ ಹರ್ಷಲ್ ಭೋಯರ್, ಜಿಲ್ಲಾಧಿಕಾರಿ

ಉಪನ್ಯಾಸ ನೀಡಿದ ಪಾರ್ವತಿ ಬುದೂರ ಅವರು, ತಾಯಿ ಜೀಜಾಬಾಯಿ ಅವರಿಂದ ಸಂಸ್ಕಾರ ಪಡೆದ ಶಿವಾಜಿ ಧೈರ್ಯ, ಸ್ಥೈರ್ಯ, ದೇಶಾಭಿಮಾನ, ಮಹಿಳೆಯರಿಗೆ ಗೌರವ ಗುಣ ಬೆಳೆಸಿಕೊಂಡಿದ್ದರು. ಗೇರಿಲ್ಲಾ ಯುದ್ಧ ನೀತಿಯ ಮೂಲಕ ಸ್ವಧರ್ಮ ರಕ್ಷಣೆ ಹಾಗೂ ಪರಕಿಯರಿಂದ ದಾಳಿಯನ್ನು ತಡೆದರು ಎಂದು ತಿಳಿಸಿದರು. ಅನ್ಯಧರ್ಮ, ಪರಸ್ತ್ರೀಯರ, ರೈತರ ಬಗ್ಗೆ ಗೌರವಾದರ ಹೊಂದಿದ್ದ ಶಿವಾಜಿ ಮೂರನೇ ಒಂದು ಭಾಗದಷ್ಟು ಮುಸ್ಲಿಂ ಸೈನಿಕರನ್ನು ಹೊಂದಿರುವುದು ವಿಶೇಷವಾಗಿತ್ತು. ದೇಶದ ಗಡಿ ರಕ್ಷಣೆ, ಸನಾತನ ಸಂಸ್ಕೃತಿ ರಕ್ಷಣೆ, ಸ್ವರಾಜ್ಯಕ್ಕಾಗಿ ಹೋರಾಟ, ದೇಶ, ನ್ಯಾಯಕ್ಕಾಗಿ ಅವರ ಹೋರಾಟ ಸ್ಮರಣೀಯ ವಾಗಿದೆ ಎಂದು ಹೇಳಿದರು. ಗಾಯತ್ರಿ ಧವಳೆ ಶಿವಾಜಿ ಕುರಿತು ಘೋಷವಾಕ್ಯ ಹೇಳಿದರು. ಮಹಿಳೆಯರಿಂದ ಶಿವಾಜಿ ಕುರಿತು ತೊಟ್ಟಿಲು ತೂಗುವ ಕಾರ್ಯಕ್ರಮ ನಡೆಯಿತು. ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಾಬುರಾವ್ ಕಾಡ್ಲೂರ್ ಕಾರ್ಯಕ್ರಮ ಉದ್ಘಾಟಿಸಿದರು.

ಎಸ್ಪಿ ಪೃಥ್ವಿಕ್ ಶಂಕರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಉತ್ತರಾದೇವಿ ಮಠಪತಿ, ಮರಾಠಾ ಸಮಾಜದ ಜಿಲ್ಲಾಧ್ಯಕ್ಷ ರಾಜಕುಮಾರ್ ಥವಳೆ, ದಿಲಿಪ್ ಜಾದವ್, ಗಣೇಶ್ ಬಾಪಕರ್ ಇತರರಿದ್ದರು.